*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕ ವಿಧಾನ ಪರಿಷತ್ತು

(158ನೇ ಮುಂದುವರೆದ ಅಧಿವೇಶನ)

ಸೋಮವಾರ, 16ನೇ ಮಾರ್ಚ್ 2026

# ವಿಷಯಾನುಕ್ರಮಣಿಕೆ (INDEX)


1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

1379– ಕಿದ್ವಾಯಿ ಸಂಸ್ಥೆಯ ಶಾಖೆಗಳನ್ನು ತುಮಕೂರು ಮತ್ತು ಮೈಸೂರಿನಲ್ಲಿ ಪ್ರಾರಂಭಿಸುವ ಬಗ್ಗೆ.

– ಡಾ॥ ಆರತಿ ಕೃಷ್ಣ

– ಡಾ॥ ಶರಣ ಪ್ರಕಾಶ್ ಆರ್ ಪಾಟೀಲ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)

1404 – ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯಲ್ಲಿರುವ ಉಪಕರಣಗಳ ಬಗ್ಗೆ.

– ಶ್ರೀ ಎಂ. ನಾಗರಾಜು

– ಡಾ॥ ಶರಣ ಪ್ರಕಾಶ್ ಆರ್ ಪಾಟೀಲ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

1418 – ಮಹಿಳಾ ಶಿಕ್ಷಕರಿಗೆ ಶಿಶುಪಾಲನಾ ರಜೆ ಮಂಜೂರಾತಿ ಬಗ್ಗೆ.

– ಶ್ರೀ ವೈ.ಎಂ. ಸತೀಶ್

– ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

1442– ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಕುರಿತು.

– ಶ್ರೀ ಮಂಜುನಾಥ ಭಂಡಾರಿ

– ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

1447– ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಸಮಯದಲ್ಲಿ ಮೌಲ್ಯ ಶಿಕ್ಷಣ ಬೋಧಿಸುತ್ತಿರುವ ಬಗ್ಗೆ.

– ಶ್ರೀ ಚಿದಾನಂದ ಎಂ.ಗೌಡ

– ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

1433– UUCMS ಯೋಜನೆಯ ಕುರಿತು.

– ಶ್ರೀ ರಮೇಶ್ ಬಾಬು

– ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು)

**1339– ಸರ್ಕಾರಿ ನೌಕರರಿಗೆ ನಿಗದಿಪಡಿಸಿರುವ ಕಾರ್ಯಭಾರ ಮತ್ತು ಕರ್ತವ್ಯದ ಅವಧಿಯ ಬಗ್ಗೆ.**

- ಶ್ರೀ ಎಸ್.ಎಲ್. ಭೋಜೇಗೌಡ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**1304 – ರಾಜ್ಯದಲ್ಲಿರುವ 108 ಆಂಬ್ಯುಲೆನ್ಸ್‌ಗಳ ಸಂಖ್ಯೆ ಕುರಿತು.**

- ಶ್ರೀ ಟಿ.ಎನ್.ಜವರಾಯಿಗೌಡ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**1422– ರಾಜ್ಯದ ಖಾಸಗಿ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳ ಕುರಿತು.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**1367– ಬಿ.ಇಡಿ ಕಾಲೇಜುಗಳ ಪ್ರವೇಶಾತಿ ಶುಲ್ಕ ಪರಿಷ್ಕರಿಸುವ ಕುರಿತು.**

- ಶ್ರೀ ಮಧು ಜಿ ಮಾದೇಗೌಡ
- ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು)

**1316– ರಾಷ್ಟ್ರ ಮಟ್ಟದಲ್ಲಿ ನೀಟ್ ಪರೀಕ್ಷೆ ನಡೆಸುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಡಾ॥ ಶರಣ ಪ್ರಕಾಶ್ ಆರ್ ಪಾಟೀಲ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**1334– ಧಾರವಾಡ ಹಾಗೂ ಹುಬ್ಬಳ್ಳಿ-ಸೆಂಟ್ರಲ್ ಕ್ಷೇತ್ರದಲ್ಲಿರುವ ವಿದ್ಯುತ್ ಟ್ರಾನ್ಸ್ಫಾರ್ಮರ್‌ಗಳ ಬಗ್ಗೆ.**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**1358– ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ ಪ್ರಸ್ತಾವನೆಯ ಕುರಿತು.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**1343– ಹಿಮ್ಸ್‌ನ ನಿರ್ದೇಶಕರ ಹುದ್ದೆಯನ್ನು ಖಾಯಂಗೊಳಸುವುದರ ಕುರಿತು.**

- ಶ್ರೀ ಸೂರಜ್ ರೇವಣ್ಣ
- ಡಾ॥ ಶರಣ ಪ್ರಕಾಶ್ ಆರ್ ಪಾಟೀಲ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

ಅ) ಕೊಪ್ಪಳ ಜಿಲ್ಲೆಯಲ್ಲಿ ಕಾರ್ಬನ್ ಮೋನಾಕ್ಸೈಡ್‌ನ್ನು ಬಿಡುಗಡೆ ಮಾಡುವ ಕಾರ್ಖಾನೆಗಳ ಮೇಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಶಿಸ್ತು ಕ್ರಮ ಜರುಗಿಸುವ ಕುರಿತು.
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

ಆ) ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದವರಿಗೆ ಮಾತ್ರ ಪ್ಯಾರಾಮೆಡಿಕಲ್‌ಗೆ ಪ್ರವೇಶ ಎಂಬ ಕೇಂದ್ರದ ಹೊಸ ನಿಯಮದಿಂದ ವೃತ್ತಿಪರ ಶಿಕ್ಷಣ ಪ್ರವೇಶಾತಿಯಲ್ಲಿ ಹೊಸ ಬಿಕ್ಕಟ್ಟು ಉಂಟಾಗಿರುವ ಕುರಿತು.
- ಶ್ರೀ ಐವನ್ ಡಿ'ಸೋಜಾ
- ಡಾ॥ ಶರಣ ಪ್ರಕಾಶ್ ಆರ್ ಪಾಟೀಲ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

ಇ) ಬೆಳಗಾವಿ ಜಿಲ್ಲೆಯಲ್ಲಿನ ಸಕ್ಕರೆ ಕಾರ್ಖಾನೆಗಳಿಂದ ಸುಮಾರು 1,554 ಕೋಟಿ ರೂಪಾಯಿಗಳಷ್ಟು ಕಬ್ಬು ಬಿಲ್ ಬಾಕಿಯಿರುವ ಕುರಿತು.
- ಶ್ರೀ ಸಿ.ಟಿ.ರವಿ
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

ಈ) ನಿಲಜಿ-ಸಾಂಬ್ರಾ ರಸ್ತೆ ಅಗಲೀಕರಣಕ್ಕೆ ಗ್ರಹಣ ಹಿಡಿದಿದ್ದು, ಅನುದಾನವಿದ್ದರೂ ಆಮೆಗತಿಯಲ್ಲಿ ನಡೆದಿರುವ ಕಾಮಗಾರಿಯ ಕುರಿತು.
- ಶ್ರೀ ಎಂ.ನಾಗರಾಜು
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

ಉ) ಅಸ್ತಿತ್ವದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಒನ್‌ಟೈಮ್ ವಿನಾಯಿತಿ ನೀಡುವುದರ ಜೊತೆಗೆ ಎಂ.ಎಸ್.ಎಂ.ಇ. ಕೈಗಾರಿಕೆಗಳಿಗೆ ಓ.ಸಿ.ಯಿಂದ ವಿನಾಯಿತಿ ನೀಡುವ ಕುರಿತು.
- ಶ್ರೀ ಟಿ.ಎನ್.ಜವರಾಯಿಗೌಡ
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

ಊ) 2022ರಲ್ಲಿ ನಡೆದಿರುವ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (ಜಿಪಿಎಸ್‌ಟಿ) ನೇಮಕಾತಿಯಲ್ಲಿ ಕೆಲವು ವಿವಾಹಿತ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿ, ಕರ್ನಾಟಕ ಆಡಳಿತ ನ್ಯಾಯಮಂಡಳಿ ನೀಡಿರುವ ಆದೇಶದಂತೆ ಕ್ರಮ ಕೈಗೊಳ್ಳುವ ಕುರಿತು.
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

ಋ) ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರದ ಟಿ.ಎಂ.ಎಸ್ ಆಡಳಿತಾಧಿಕಾರಿಯ ವಿರುದ್ಧ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿರುವ ಕುರಿತು.
- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

ಎ) ಬಿ.ಪಿ.ಎಲ್ ಕಾರ್ಡ್ ಪಡೆಯಲು ಇರುವ ಮಾನದಂಡಗಳನ್ನು ಕೂಡಲೇ ಪರಾಮರ್ಶಿಸಿ ಪ್ರಸ್ತುತ ಇರುವ ಆದಾಯ ಮಿತಿಯನ್ನು ಹೆಚ್ಚಿಸುವ ಕುರಿತು.
- ಶ್ರೀ ಪ್ರತಾಪ ಸಿಂಹ ನಾಯಕ್ ಕೆ.
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

ಏ) NET, SET/SLET, PhD., ಇಂತಹ ಮುಖ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗದ ಸುಮಾರು 4000ಕ್ಕೂ ಹೆಚ್ಚು ಅತಿಥಿ ಶಿಕ್ಷರ ಬದುಕು ಬೀದಿಗೆ ಬಂದಿರುವ ಕುರಿತು.
- ಶ್ರೀ ಎಸ್.ಎಲ್.ಭೋಜೇಗೌಡ
- ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

ಐ) ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವರ ವಿರುದ್ಧದ ಭ್ರಷ್ಟಾಚಾರ ಹಾಗೂ ಇನ್ನಿತರ ಆರೋಪಗಳ ಕುರಿತು.
- ಶ್ರೀ ಡಿ.ಎಸ್.ಅರುಣ್
- ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

3. ಅಭಿನಂದನಾ ಪ್ರಸ್ತಾವ

"ಭಾರತ ಕ್ರಿಕೆಟ್ ತಂಡವು ICC Men's T20 World Cup ಅನ್ನು ಗೆದ್ದಿರುವುದಕ್ಕೆ ಅಭಿನಂದನೆ ಸಲ್ಲಿಸುವ ಕುರಿತು."
- ಶ್ರೀ ಡಿ.ಎಸ್.ಅರುಣ್

4. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಬಗ್ಗೆ ಮತ್ತು ನಿಗದಿತ ಸಮಯಕ್ಕೆ ಸರ್ಕಾರದಿಂದ ಉತ್ತರಗಳು ಬಾರದಿರುವ ಕುರಿತು.
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)
- ಶ್ರೀ ಎಸ್.ಎಲ್. ಭೋಜೇಗೌಡ

5. ನಿಯಮ 330ರ ಮೇರೆಗೆ ಚರ್ಚೆ.

ಅ) ಕೊಪ್ಪಳ ನಗರದ ಹುಲಿಕೆರೆಯ ಮೂಲ ಪ್ರದೇಶ ಹಾಗೂ ಸುತ್ತಮುತ್ತಲಿನ ಬಫರ್ ಜೋನ್ ಪ್ರದೇಶದ ಅತಿಕ್ರಮಣ ತಡೆಗಟ್ಟಲು ಮರು ಅಳತೆ ಮಾಡಿಸಿ ನಿಖರ ಗಡಿ ಗುರುತಿಸುವುದು ಮತ್ತು ಅತಿಕ್ರಮಣ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಕುರಿತು.
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

ಆ) ರಾಜ್ಯ ಸರ್ಕಾರದ ವಿಶ್ವವಿದ್ಯಾಲಯಗಳು ಮೂಲಭೂತ ಸೌಕರ್ಯಗಳು ಹಾಗೂ ಪ್ರಾಧ್ಯಾಪಕರುಗಳ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶದ ಬಡ ಯುವಕ/ಯುವತಿಯರಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲವಾಗಿರುವ ಕುರಿತು.

- ಡಾ॥ ತಳವಾರ್ ಸಾಬಣ್ಣ
- ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)
- ಶ್ರೀ ಪುಟ್ಟಣ್ಣ
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

ಇ) ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ರಾಮಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲ ಕುಸಿತ ಹಾಗೂ ನೀರಿನಲ್ಲಿ ಫ್ಲೋರೈಡ್ ಅಂಶವು ಮಿತಿಮೀರಿರುವುದರಿಂದ, ಸಾರ್ವಜನಿಕರ ಆರೋಗ್ಯದ ಮೇಲೆ ಉಂಟಾಗುತ್ತಿರುವ ಗಂಭೀರ ಪರಿಣಾಮಗಳ ಕುರಿತು.

- ಶ್ರೀ ಶಿವಕುಮಾರ್ ಕೆ.
- ಡಾ॥ ಧನಂಜಯ ಸರ್ಜಿ
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

6. ಗಮನ ಸೆಳೆಯುವ ಸೂಚನೆಗಳು

ಅ) ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ 2006ರ ಪೂರ್ವದಲ್ಲಿ ನೇಮಕಗೊಂಡು ನಂತರ ಅನುದಾನಕ್ಕೆ ಒಳಪಟ್ಟಿರುವ ಹಾಗೂ 2006ರ ನಂತರ ನೇಮಕಗೊಂಡ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ಸಿಗದೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
- ಶ್ರೀ ಶಶೀಲ್ ಜಿ. ನಮೋಶಿ
- ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)
- ಶ್ರೀ ಎಸ್. ಎಲ್.ಭೋಜೇಗೌಡ
- ಶ್ರೀ ಪುಟ್ಟಣ್ಣ

7. ಸದನಕ್ಕೆ ಮಾಹಿತಿ ನೀಡದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ವಿರೋಧ ಪಕ್ಷಗಳ ಮಾನ್ಯ ಸದಸ್ಯರಿಂದ ಒತ್ತಾಯ.

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಿ.ಟಿ.ರವಿ
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

೮. ವಿತ್ತೀಯ ಕಾರ್ಯಕಲಾಪ

2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ.

- ಶ್ರೀ ಸಿ.ಟಿ.ರವಿ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಐವನ್ ಡಿ"ಸೋಜಾ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
- ಶ್ರೀ ರಮೇಶ್ ಬಾಬು

೯. ಪ್ರಕಟಣೆಗಳು

ಅ) ವಿಧಾನ ಸಭೆಯಿಂದ ಅಂಗೀಕೃತವಾಗಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು.

ಆ) ಸಹಕಾರಿ ರಂಗದ ಭೀಷ್ಮ ಎಂದೇ ಖ್ಯಾತರಾದ ಶ್ರೀ ಕೆ.ಎಚ್.ಪಾಟೀಲ್‌ರವರ 101ನೇ ಜನ್ಮ ಶತಮಾನೋತ್ಸವದ ಆಚರಣೆ ಕುರಿತು.

10. ವಿತ್ತೀಯ ಕಾರ್ಯಕಲಾಪ

2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ.

- ಡಾ॥ ಡಿ.ತಿಮ್ಮಯ್ಯ
- ಶ್ರೀ ಎ. ವಸಂತ ಕುಮಾರ್

--- --- --- ---

(386) 16-03-2026 11-00 KH/BNS

ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, 16ನೇ ಮಾರ್ಚ್ 2026

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

## 1. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1379**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ. ಆರತಿ ಕೃಷ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ನನ್ನ ಮನವಿಯೇನೆಂದರೆ, ಇದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದೇ ರೀತಿ ಶಿವಮೊಗ್ಗದಲ್ಲಿಯೂ ಕೂಡ ಪೆರಿಫೆರಲ್ ಕ್ಯಾನ್ಸರ್ ಕೇಂದ್ರದ ಕಟ್ಟಡದ ಕಾಮಗಾರಿ ನಡೆಯುತ್ತಿದೆ. ಇದನ್ನು ಶೀಘ್ರವಾಗಿ ಸಂಪೂರ್ಣಗೊಳಿಸಿ, ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ, ಹಾಸನ ಮತ್ತು ಅಕ್ಕ–ಪಕ್ಕ ಜಿಲ್ಲೆಗಳ ಕ್ಯಾನ್ಸರ್ ಪೀಡಿತ ರೋಗಿಗಳು ಬರುವುದಕ್ಕೆ ಅವಕಾಶ ಕಲ್ಪಿಸುವುದಕ್ಕೆ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಡಾ. ಶರಣಪ್ರಕಾಶ ಆರ್.ಪಾಟೀಲ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಈ ಪ್ರಶ್ನೆಯನ್ನು ಕೇಳಿದ್ದಾರೆ. ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಕ್ಯಾನ್ಸರ್ ಆಸ್ಪತ್ರೆಯ ಸ್ಥಾಪನೆ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದು, ಈಗಾಗಲೇ ನಾನು ಉತ್ತರದಲ್ಲಿ ತಿಳಿಸಿದ್ದೇನೆ. ಈಗಾಗಲೇ ಕಟ್ಟಡ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡು, ಉದ್ಘಾಟನೆ ಕೂಡ ಆಗಿದೆ. ಈಗ equipments ಗೆ tender ಕೂಡ ಕರೆಯಲಾಗಿದೆ. ಇದನ್ನು 3 ತಿಂಗಳೊಳಗಾಗಿ ಅತಿ ಶೀಘ್ರದಲ್ಲಿಯೇ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಮಾಡಲಾಗುತ್ತದೆ. ಏಕೆಂದರೆ, ಇದೆಲ್ಲಾ imported equipments ಇರುತ್ತದೆ. ಇದನ್ನು ಮಾಡುವುದಕ್ಕೆ 3 ತಿಂಗಳು ಬೇಕಾಗುತ್ತದೆ. ಈಗ sanctioned posts ಇದೆ. Recruitment ಗೂ ಕೂಡ ಈಗ call for ಮಾಡುತ್ತಿದ್ದೇವೆ. ಹಾಗಾಗಿ ಇದನ್ನು ಅತಿ ಶೀಘ್ರದಲ್ಲಿ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಹಾಗಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ ಇವತ್ತು ಶಿವಮೊಗ್ಗದಲ್ಲಿಯೂ ಕೂಡ ಕ್ಯಾನ್ಸರ್ ಆಸ್ಪತ್ರೆಯನ್ನು ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರಿಂದ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಆಸ್ಪತ್ರೆಯನ್ನು ಸ್ಥಾಪನೆ ಮಾಡುತ್ತೇವೆ ಎನ್ನುವಂತಹದ್ದು ಸಾರ್ವಜನಿಕವಾಗಿ ನಮ್ಮ commitment ಆಗಿದೆ. ಹಾಗಾಗಿ ಶಿವಮೊಗ್ಗದಲ್ಲಿಯೂ ಕೂಡ ಕೆಲಸ ನಡೆಯುತ್ತಿದೆ. ಆ ಸ್ಥಳ ಕೋರ್ಟ್ ವ್ಯಾಜ್ಯದಿಂದ ಸ್ವಲ್ಪಮಟ್ಟಿಗೆ ತಡವಾಗಿದೆ. ಈಗ ಅದು resolve ಆಗಿದ್ದು, ಕಟ್ಟಡ ಕೆಲಸ ನಡೆಯುತ್ತಿದೆ. ಅದನ್ನು ಅತಿ ಶೀಘ್ರದಲ್ಲಿ ಪೂರ್ತಿ ಮಾಡಿ, ಲೋಕಾರ್ಪಣೆ ಮಾಡುವಂತಹ ಕೆಲಸ ಮಾಡುತ್ತೇವೆ.

**ಡಾ. ಆರತಿ ಕೃಷ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಕೇಂದ್ರ ಸರ್ಕಾರ 14 ವರ್ಷದ ಕೆಳಗಿನ ಹೆಣ್ಣುಮಕ್ಕಳಿಗೆ cervical cancer ಗೆ ಒಂದು ವ್ಯಾಕ್ಸಿನ್ ಅನ್ನು introduce ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಗ್ರಾಮೀಣ ಮಹಿಳೆಯರಿಗೆ, ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ನಮ್ಮ ಸರ್ಕಾರದ ವತಿಯಿಂದ ಇದರ ಬಗ್ಗೆ ಜಾಹಿರಾತು ಅಥವಾ ಅಭಿಯಾನ ಮಾಡಬೇಕೆಂದು ನನ್ನ ಮನವಿಯಾಗಿದೆ.

**ಡಾ. ಶರಣಪ್ರಕಾಶ ಆರ್. ಪಾಟೀಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದು ಬಹಳ ಸೂಕ್ತವಾಗಿಯೂ ಇದೆ. ಈಗಾಗಲೇ ಆರೋಗ್ಯ ಇಲಾಖೆಯೂ ಕೂಡ ಇದರ ಬಗ್ಗೆ ಕ್ರಮ ಕೈಗೊಂಡಿದೆ. ಅವರು ಕೂಡ ಈ ವರ್ಷದಿಂದ 14 ರಿಂದ 15 ವರ್ಷದ ಹೈಸ್ಕೂಲ್ ಬಾಲಕಿಯರಿಗೆ ವ್ಯಾಕ್ಸಿನ್ ಕೊಡುವ ಬಗ್ಗೆ ಆರೋಗ್ಯ ಇಲಾಖೆಯೂ ಕೂಡ ಕಾರ್ಯಕ್ರಮವನ್ನು ಕೈಗೊಂಡಿದೆ. ಇದರ ಬಗ್ಗೆ ಹೆಚ್ಚು ವ್ಯಾಪಕವಾಗಿ awareness ತರುವಂತಹ ಪ್ರಯತ್ನವನ್ನು ನಮ್ಮ ಇಲಾಖೆಯಿಂದಲೂ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1418**

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಯಾವ ಸಚಿವರು?

**ಶ್ರೀ ವೈ.ಎಂ.ಸತೀಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು ಇಲ್ಲ.

**ಸಭಾಪತಿಯವರು:–** ಬೇರೆಯವರು ಇದ್ದಾರೆಯೇ? ಮಾನ್ಯ ಸದಸ್ಯರಾದ ವೈ.ಎಂ.ಸತೀಶ್‌ರವರೇ ಕುಳಿತುಕೊಳ್ಳಿ, ಮಾನ್ಯ ಸಚಿವರು ಬರಲಿ. ಈಗ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಮಂಜುನಾಥ್ ಭಂಡಾರಿರವರ ಪರವಾಗಿ ಮಾನ್ಯ ಐವನ್ ಡಿ'ಸೋಜಾರವರು . . .

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು . . .

**ಸಭಾಪತಿಯವರು:–** ಆ ಮಂತ್ರಿಗಳು ಇಲ್ಲವೇ? ಸರಿಯಪ್ಪ.

ಪ್ರಶ್ನೆ ಸಂಖ್ಯೆ: 1404
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿರುವುದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. 2023ನೇ ಸಾಲಿನಿಂದ ಇವತ್ತಿನವರೆಗೂ ಕೂಡ ಮಾನ್ಯ ದಿನೇಶ್ ಗುಂಡೂರಾವ್‌ರವರು ಮತ್ತು ಮಾನ್ಯ ಶರಣಪ್ರಕಾಶ ಆರ್.ಪಾಟೀಲರವರು ಅಧಿಕಾರ ವಹಿಸಿಕೊಂಡ ನಂತರ ಆರೋಗ್ಯ ಇಲಾಖೆಯಲ್ಲಿ ಬಹಳ ಪರಿವರ್ತನೆಯಾಗಿರುವುದನ್ನು ನಾನು ಸ್ವಾಗತ ಮಾಡುತ್ತೇನೆ ಮತ್ತು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ಬೆಳಗಾವಿ ಜಿಲ್ಲೆಯಲ್ಲಿ ಇರುವಂತಹ B.I.M.S. (Belgavi Institute of Medical Sciences) ವಿಚಾರಕ್ಕೆ ಬಂದಾಗ ಪ್ರತಿ ಬಾರಿ ಸದನದಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಅದನ್ನು ತಾವು ಕೂಡ ಗಮನಿಸಿದ್ದೀರಿ. ಏಕೆಂದರೆ, ಬೆಳಗಾವಿ ಜಿಲ್ಲೆಯಲ್ಲಿರುವಂತಹ B.I.M.S. ಆಸ್ಪತ್ರೆ ಎನ್ನುವಂತಹದ್ದು ಕೇವಲ ಬೆಳಗಾವಿ ಜಿಲ್ಲೆಗೆ ಸೀಮಿತವಾಗಿ 15 ತಾಲ್ಲೂಕುಗಳು, 18 Assembly Constituencies ಗೆ ಕೆಲಸ ಮಾಡುವಂತಹದ್ದು ಮಾತ್ರ ಅಲ್ಲ. ಅಕ್ಕ-ಪಕ್ಕದಲ್ಲಿರುವಂತಹ 2-3 ಜಿಲ್ಲೆಗಳಾದ ವಿಜಯಪುರ ಇರಬಹುದು, ಬಾಗಲಕೋಟೆ ಇರಬಹುದು. ಅಕ್ಕ-ಪಕ್ಕದಲ್ಲಿರುವಂತಹ ಜಿಲ್ಲೆಗಳ ಜೊತೆಗೆ ಪಕ್ಕದ ರಾಜ್ಯದಲ್ಲಿರುವಂತಹ ಕೊಲ್ಹಾಪುರದ ಜನರು ಸಹ ಇದರ ಸೌಕರ್ಯವನ್ನು ಪಡೆದುಕೊಳ್ಳುತ್ತಿರುವುದನ್ನು ನಾವು ನೋಡಿದ್ದೇವೆ. ಇಲ್ಲಿಗೆ 2,000 ಹೊರ ರೋಗಿಗಳು ಬಂದು, ಚಿಕಿತ್ಸೆಯನ್ನು ತೆಗೆದುಕೊಳ್ಳುತ್ತಿರುವುದನ್ನು ನಾವು ನೋಡಿದಾಗ, ಅದು ನಿಜವಾಗಿಯೂ ಕೂಡ ಪ್ರತಿಷ್ಠಿತ ಆಸ್ಪತ್ರೆ ಎಂದು ನನಗನಿಸುತ್ತದೆ. ಅಲ್ಲಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಉತ್ತಮ ವ್ಯಾಸಂಗ ಮಾಡುತ್ತಿರುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಈಗ ವಿಚಾರ ಬಂದಿರುವಂತಹದ್ದು ಏನೆಂದರೆ, ಅಲ್ಲಿನ ಕೆಲವು shortage of staff, may be because of administrative problems, ಒಳ ಮೀಸಲಾತಿ ಏನೇ ಇದ್ದರೂ, ಶೇಕಡಾ 40 ರಷ್ಟು ವೈದ್ಯರು, ಅಲ್ಲಿ ತುಂಬಾ shortage ಇರುವಂತಹದ್ದನ್ನು ನೋಡಿದ್ದೇವೆ. ಆದ್ದರಿಂದ, staff shortage ಇರುವಂತಹದ್ದನ್ನು ಯಾವಾಗ ಸರಿಪಡಿಸುತ್ತಾರೆ ಎನ್ನುವುದನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಇದರ ಜೊತೆಗೆ ಕೆಲವು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಬಂದಿರುವುದನ್ನು ನೋಡಿದಾಗ, ಅಲ್ಲಿ ಸುಮಾರು 20 ನಿಮಿಷಗಳ ಕಾಲ completely power stop ಆಗಿ, backup ಇಲ್ಲದೇ, ಹಲವಾರು ರೋಗಿಗಳು ನರಳಿರುವುದನ್ನು ನೋಡಿದ್ದೇವೆ. ಇದರ ಜೊತೆಗೆ solar grid ಕೂಡ ಕೆಲಸ ಮಾಡುತ್ತಿಲ್ಲ ಎಂದು ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ತಿಳಿಸಿದ್ದಾರೆ. ಇದರ ಜೊತೆಗೆ ಎ.ಎಂ.ಸಿ., ನಿರ್ವಹಣೆ ಮಾಡಿರುವುದರಲ್ಲಿ

ವಿಫಲರಾಗಿರುವಂತಹದ್ದು ಇದೆ. ಕೋಟ್ಯಾಂತರ ರೂಪಾಯಿಗಳ ಉಪಕರಣಗಳನ್ನು ಖರೀದಿ ಮಾಡಿರುವಂತಹ ಈ ಸಂದರ್ಭದಲ್ಲಿ ಹಲವಾರು ಉಪಕರಣಗಳಿಗೆ ಇವತ್ತು ಎ.ಎಂ.ಸಿ.,ಯನ್ನು ತೆಗೆದುಕೊಳ್ಳದೇ ಇರುವಂತಹದ್ದು ಆಗಿದೆ. ಇದರಿಂದ ಎಲ್ಲೋ ಒಂದು ಕಡೆ ನಿರ್ವಹಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ, ಇದು ಬಹಳ ಮುಖ್ಯವಾಗಿರುವಂತಹದ್ದು. ಸುಮಾರು ೮೦ ಲಕ್ಷ ಜನರಿಗೆ cater ಮಾಡುತ್ತಿರುವಂತಹ ಈ ಆಸ್ಪತ್ರೆಗೆ ಮಾನ್ಯ ಸಚಿವರ intervention required ಇದೆ. ಆ ಭಾಗದಲ್ಲಿ ಇದು ಬಹು ದೊಡ್ಡ ಜಿಲ್ಲೆಯಾಗಿರುವುದರಿಂದ ಮತ್ತು ಎರಡೂವರೆ Parliamentary Constituency ಜಿಲ್ಲೆಯಾಗಿರುವುದರಿಂದ, ದಯವಿಟ್ಟು ಕೇಳುವುದೇನೆಂದರೆ, ಈ shortage of staff ಅನ್ನು ಯಾವಾಗ ಸರಿ ಮಾಡುತ್ತಾರೆ? power supply ಅನ್ನು ಯಾವಾಗ ಸರಿ ಮಾಡುತ್ತಾರೆ? ಉಪಕರಣಗಳ ಎ.ಎಂ.ಸಿ.,ಯನ್ನು ಯಾವಾಗ ಸರಿ ಮಾಡುತ್ತಾರೆ? ಈಗಲೂ ಕೂಡ ಮೆಡಿಸಿನ್‌ಗೆ ಚೀಟಿ ಬರೆದು ಕೊಟ್ಟರೆ ಹೊರಗಡೆಯಿಂದ ತರುವಂತಹ ಪದ್ಧತಿ ನಡೆಯುತ್ತಿರುವಂತಹದ್ದು ಇದೆ. Blood bank ನಲ್ಲಿಯೂ ಸಮಸ್ಯೆ ಇರುವಂತಹದ್ದು. ಹಾಗಾಗಿ ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಿದ ಮೇಲೆ ನಾನು ಮುಂದಿನ ಪ್ರಶ್ನೆಗಳನ್ನು ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು. ಮಾನ್ಯ ಸಚಿವರೇ ಉತ್ತರವನ್ನು ಹೇಳಿ.

(ಮುಂದು)

(೩೮೭) ೧೬.೩.೨೦೨೬ ೧೧.೧೦ ಪಿಕೆ:ಬಿಎನ್‌ಎಸ್ (ಸಭಾಪತಿಗಳ ಉಪಸ್ಥಿತಿ)

**ಡಾ: ಶರಣ ಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸರ್ಕಾರ ಈಗಾಗಲೇ ಉತ್ತರ ಕೊಟ್ಟಿದೆ. ಅವರು, ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. 7 ಸಹ ಪ್ರಾಧ್ಯಾಪಕರು, 17 ಸಹಾಯಕ ಪ್ರಾಧ್ಯಾಪಕರು, 44 ಹಿರಿಯ ನಿವಾಸಿ ವೈದ್ಯರ ಹುದ್ದೆಗಳು ಖಾಲಿ ಇವೆ. ಇದನ್ನು ನಾವು ಅತಿಶೀಘ್ರದಲ್ಲಿ, ರೋಸ್ಟರ್ ಪ್ರಕಾರ call for ಮಾಡುತ್ತೇವೆ. ಇಷ್ಟು ದಿವಸ ಏನು ನಿರ್ಬಂಧ ಇತ್ತೋ ಈಗ ಅದನ್ನು ಸಡಿಲ ಮಾಡಲಾಗಿದೆ. ಎಲ್ಲಾ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು power suddenly black out ಆಗಿದ್ದರ ಬಗ್ಗೆ ಹೇಳಿದರು. ಅದಕ್ಕೆ ನಮಗೆ ಪರ್ಯಾಯ ಕೂಡ ಇದೆ. ಈ ರೀತಿ ಆಗಿರುವುದರ ಹಿಂದಿನ ಕಾರಣ ಏನಿದೆ ಅವುಗಳನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ. ಮತ್ತೆ, ನಿಷ್ಕ್ರಿಯೆ ಆಗಿರುವಂತಹ ಉಪಕರಣಗಳ ಮೌಲ್ಯ ಎಷ್ಟು ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿದೇವೆ. ಅದರ ಜೊತೆ A.M.C., C.M.C., ಏನಿವೆ ಅವು normal course ನಲ್ಲಿ ಆಗುತ್ತವೆ. ಇವತ್ತು ಯಾವ ಯಾವ ಉಪಕರಣಗಳಿಗೆ ಎ.ಎಂ.ಸಿ./ಸಿ.ಎಂ.ಸಿ. ಬೇಕಾಗಿದೆಯೋ ಅವುಗಳಿಗೆ ಮಾಡಿದ್ದೇವೆ. ಇನ್ನೂ ಕೆಲವೊಂದು ಉಪಕರಣಗಳಿಗೆ ಎ.ಎಂ.ಸಿ./ಸಿ.ಎಂ.ಸಿ. ಮಾಡಲಾಗಿದ್ದು ಅದರ ಪಟ್ಟಿಯನ್ನು ಬೇಕಾದರೆ ಒದಗಿಸಿ ಕೊಡುತ್ತೇನೆ.

ನಾವೇನು ಹೊಸದಾಗಿ ಉಪಕರಣಗಳನ್ನು ಖರೀದಿ ಮಾಡುತ್ತೇವೆಯೋ ಅವುಗಳಿಗೆ ವಾರಂಟಿ ಅವಧಿ ಇರುತ್ತದೆ. ಆ ವಾರಂಟಿ ಅವಧಿಯಲ್ಲಿ ಎಂ.ಎಂ.ಸಿ./ಸಿಎಂ.ಸಿ. ಮಾಡುವುದಿಲ್ಲ. ವಾರಂಟಿ ಅವಧಿ ಮುಗಿದ ಮೇಲೆ ಎಂ.ಎಂ.ಸಿ./ಸಿಎಂ.ಸಿ. ಮಾಡುವ ಪದ್ಧತಿ ಇದೆ. ಹಾಗಾಗಿ, ಇದನ್ನೂ ಕೂಡ ಆ ಸಂಸ್ಥೆಯಿಂದ ಮಾಡಲಾಗುತ್ತಿದೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಗಳೆ, ಪ್ರತಿಷ್ಠಿತ ಸರ್ಕಾರಿ ಆಸ್ಪತ್ರೆಗಳ ಮೇಲೆ ಬಡವರು ಮಧ್ಯಮ ವರ್ಗದವರು ಅವಲಂಬಿತರಾಗಿರುತ್ತಾರೆ. ಇಲ್ಲ shortage of staff ಎನ್ನುವುದು serious problem in health care ಆಗಿದೆ. ಕೊರತೆ ಇರುವುದಕ್ಕೋಸ್ಕರ ಕೆ.ಎಲ್.ಇ. ಸಂಸ್ಥೆಯವರು voluntarily ಆಗಿ ಮುಂದೆ ಬಂದು ಎಂ.ಓ.ಯು. ಮಾಡಿಕೊಂಡಿದ್ದಾರೆ. I appreciate them. ಅವರೂ ಕೂಡ free of cost ಸೇವೆ ಸಲ್ಲಿಸುತ್ತಿದ್ದಾರೆ. They have joined hands with us. ಆದರೆ ಇದು ಶಾಶ್ವತವಾದ ಪರಿಹಾರವಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಬಿಲ್ ಕಟ್ಟುವುದಕ್ಕಾಗುವುದಿಲ್ಲ ಎಂಬ ಹಿನ್ನಲೆಯಲ್ಲಿ ಜನ ಇಲ್ಲಿಗೆ ಬರುತ್ತಾರೆ. ಒಂದುವೇಳೆ ಇಲ್ಲಿನ ಕೇಸುಗಳನ್ನು ಅಲ್ಲಿಗೆ ರೆಫರ್ ಆಗಿದ್ದಾದರೆ, ಜನಗಳಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. C.T. Scan ಇರಬಹುದು,, M.R.I. ಇರಬಹುದು, ಅಲ್ಲಿರುವ ಬಹುಮುಖ್ಯವಾದ ಉಪಕರಣಗಳು ಕೆಲವು ಸಲ ಕೆಲಸ ಮಾಡುವುದಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. Public are not happy because still there is corruption in that particular administration. ಅದಕ್ಕೋಸ್ಕರ ಒಂದು local enquiry ಯನ್ನು ಮಾಡಿ. ಯಾವುದೇ ಕಾರಣಕ್ಕೂ ಆಸ್ಪತ್ರೆಗಳಲ್ಲಿ ಭ್ರಷ್ಟಾಚಾರ ಆಗಬಾರದು. ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಸರ್ಕಾರ ಯಾವಾಗಲೂ ಕಾಳಜಿಯಿಂದ ಮಾತನಾಡುತ್ತದೆ. ಗಡಿ ಭಾಗದ ಜಾಗದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೆಚ್ಚು ಮಾಡಬೇಕು. There is a demand. ಉತ್ತರದಲ್ಲಿ ಸಾವಿರ ಹೊರ ರೋಗಿಗಳು ಅಷ್ಟೇ ಬರುತ್ತಾರೆ ಎಂದು ಹೇಳಿದ್ದಾರೆ. ಆದರೆ, ಆಡಿಟ್ ವರದಿಯ ಪ್ರಕಾರ ಮತ್ತು ಸಾರ್ವಜನಿಕರ ಪ್ರಕಾರ ಎರಡು ಸಾವಿರ ಹೊರ ರೋಗಿಗಳು ಬರುತ್ತಾರೆ. We cannot depend on a private hospital to run a Government hospital. That shows the inability of the Government to run a super specialty hospital. ಹಾಗಾಗಿ ಮುಂದಕ್ಕೆ ಏನು ಮಾಡುತ್ತೀರಿ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಡಾ: ಶರಣ ಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಸಿಬ್ಬಂದಿಗಳ ಕೊರತೆ ಇಲ್ಲ. ನಮ್ಮ ಉತ್ತರದಲ್ಲಿ ತಿಳಿಸಿರುವಂತೆ, ವೃಂದ ಎ ಗೆ ಸಂಬಂಧಪಟ್ಟಂತೆ ಮಂಜೂರಾದ ಹುದ್ದೆಗಳು 306ರಲ್ಲಿ 238 ಜನ ಕಾರ್ಯನಿರತರಾಗಿದ್ದಾರೆ. 68 ಖಾಲಿ ಹುದ್ದೆಗಳು ಇವೆ. ಇವುಗಳಲ್ಲಿ 7 ಸಹ ಪ್ರಾಧ್ಯಾಪಕರು, 17 ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡುವುದಿದೆ. 44 ಹಿರಿಯ ನಿವಾಸಿ ವೈದ್ಯರ ಹುದ್ದೆಗಳನ್ನು rural service ನ ಅಡಿ fill up ಮಾಡುತ್ತೇವೆ. Recruitment ಮಾಡುವಾಗ ಅದನ್ನು compulsory rural service ನ ಅಡಿ ಮಾಡಬೇಕು ಎಂದು ಎಫ್.ಡಿ.ಯವರು ಹೇಳಿದ್ದಾರೆ. ಹಾಗಾಗಿ, ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇಲ್ಲ. ಮಾನ್ಯ ಸಭಾಪತಿಗಳೆ, super specialty hospital ಅನ್ನು ಹೊಸದಾಗಿ

ಪ್ರಾರಂಭ ಮಾಡಿದ್ದೇವೆ. ಅಲ್ಲಿಗೆ ನಾವು ಸೂಕ್ತ ಹುದ್ದೆಗಳಿಗೆ ನೇಮಕ ಮಾಡಿದ್ದೇವೆ. ಯಾವ ಯಾವ ವಿಭಾಗಗಳಲ್ಲಿ ಜನ ಬಂದಿಲ್ಲವೋ ಆ ವಿಭಾಗಗಳಲ್ಲಿ ಮಾತ್ರ ಕೆ.ಎಲ್.ಇ. ಸಂಸ್ಥೆಯ ಸಿಬ್ಬಂದಿಗಳು ಸೇವೆ ಮಾಡುತ್ತಾರೆ. We are not dependent on K.L.E. ಅವರಾಗಿಯೇ ಬಂದು, ನಿಮ್ಮ ಯಾವ ವಿಭಾಗದ ಹುದ್ದೆಗಳಿಗೆ ಸಂಬಂಧಪಟ್ಟಂತೆ ಸಿಬ್ಬಂದಿ ಇಲ್ಲವೋ ಅಂತಹ ಕಡೆ ನಾವು ಉಚಿತ ಸೇವೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ಜನರ ಅನುಕೂಲಕ್ಕಾಗಿ ಮಾಡುತ್ತಿದೆ. ಸರ್ಕಾರ ಯಾವುದೇ ಒಂದು ಆಸ್ಪತ್ರೆಯನ್ನು ಗಡಿ ಭಾಗದಲ್ಲಿ ಪ್ರಾರಂಭ ಮಾಡಿದಾಗ, super specialty hospital ಅನ್ನು Government sector ನಲ್ಲಿ ಪ್ರಾರಂಭ ಮಾಡಿದಾಗ ಆರಂಭದಲ್ಲಿ ಸ್ವಲ್ಪ ಸಮಸ್ಯೆ ಇರುತ್ತದೆ. ಏಕೆಂದರೆ, ಅದು standardize ಆಗುವುದಕ್ಕೆ strengthen ಆಗುವುದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. But, we have initiated now. ಹಾಗಾಗಿ ಈಗ ಅದು strengthen ಆಗುತ್ತಿದೆ. ಅಲ್ಲಿನ ಜನರಿಗೆ ಗುಣಮಟ್ಟದ ಚಿಕಿತ್ಸೆ ಸಿಗಬೇಕು ಎನ್ನುವುದೇ ನಮ್ಮ ಸದಾಶಯವಾಗಿದೆ. ಅದು ಈಡೇರುತ್ತಿದೆ. ಅಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರ ಆಗಿದೆ ಎನ್ನುವ ದೂರ ಬಂದಿಲ್ಲ. ದೂರು ಬಂದರೆ ಖಂಡಿತವಾಗಿ ನಾವು ತನಿಖೆ ಮಾಡುತ್ತೇವೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಗಳೆ, ಮಾನ್ಯ ಲೋಕಾಯುಕ್ತದವರು 2025ರ ಸೆಪ್ಟೆಂಬರ್ ತಿಂಗಳಲ್ಲಿ ಅಲ್ಲಿಗೆ ಹೋಗಿ inspection ಮಾಡಿದ್ದಾರೆ. ಅದರ ವರದಿಯನ್ನು ಸಲ್ಲಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಆಗ, ಅಲ್ಲಿ ಹಲವಾರು ನ್ಯೂನತೆಗಳು ಇದೆ ಎನ್ನುವ ವಿಚಾರಗಳು ಪತ್ರಿಕೆಗಳಲ್ಲಿ ಬಂತು ಮತ್ತು ಅದು ಆನ್‌ಲೈನ್‌ನಲ್ಲಿ ಕೂಡ ಇದೆ. ಔಷಧಿಗಳ ಕೊರತೆ ಮತ್ತು expired medicine ಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ, ಗೂಗಲ್‌ನಲ್ಲಿ ಸರ್ಚ್ ಮಾಡಿದರೆ ಗೊತ್ತಾಗುತ್ತದೆ. ಎಲ್ಲವೂ ಕೂಡ public domain ನಲ್ಲಿದೆ. ನಾನು ಎಲ್ಲಾ ದಾಖಲೆಗಳನ್ನು ತಂದು ಕೊಡುವುದಕ್ಕೆ, I am not handling the Ministry as such. Public domain ನಲ್ಲಿ ಇರುವಂಥ ವಿಚಾರಗಳನ್ನು ಹೇಳುತ್ತಿದ್ದೇನೆ. Shortage of medicine, expired medicine, shortage of staff ಇರುವಂಥದ್ದು, unutilized equipments ವಿಚಾರಗಳನ್ನು ಹೇಳುತ್ತಿದ್ದೇನೆ. ಇವೆಲ್ಲವೂ ಸಾರ್ವಜನಿಕರ ಉಪಯೋಗಕ್ಕೆ ಬಳಕೆ ಆಗಬೇಕು. ಮಾನ್ಯ ಸಭಾಪತಿಗಳೆ, ಇದು ದೊಡ್ಡ ವಿಚಾರವಾಗಿದೆ. ಈ ಕುರಿತು ಚರ್ಚೆ ಮಾಡಲು ಅರ್ಧಗಂಟೆ ನಿಯಮದಡಿ ಅವಕಾಶ ಕೊಟ್ಟರೆ ಇನ್ನೂ ವಿಸ್ತಾರವಾಗಿ ಹೇಳಬಹುದು. ಎರಡನೆಯದಾಗಿ, ಅಲ್ಲಿರತಕ್ಕಂತಹ ನಿರ್ದೇಶಕರ ಮೇಲೆ ಹಲವಾರು ದೂರುಗಳ ವಿವರಗಳನ್ನು ಕೊಡುತ್ತೇನೆ.

**ಡಾ: ಶರಣ ಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಹೇಳಿದರೆ ಅದಕ್ಕೆ ಉತ್ತರ ಕೊಡಬಹುದು. ನಮ್ಮಲ್ಲಿ ಯಾವುದೇ drug shortage ಇಲ್ಲ. ಏಕೆಂದರೆ, ನಾವು ಎಲ್ಲಾ ಸಂಸ್ಥೆಗಳಿಗೆ ಸ್ವತಂತ್ರವಾಗಿ ಟೆಂಡರ್ ಕರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಟಂಡರ್ ಕರೆದಿದ್ದಾರೆ. ಅಲ್ಲಿ ಯಾವುದೇ ಔಷಧಿಗಳ ಕೊರತೆ ಇಲ್ಲ. ನಮ್ಮ ಇಲಾಖೆಯಿಂದ ಯಾರಾದರೂ ಒಂದು ವೇಳೆ ಹೊರಗೆ prescribe ಮಾಡಿದರೆ

ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸುತ್ತೋಲೆ ಹೊರಡಿಸಿದ್ದೇವೆ. ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಪ್ರಕರಣದ ಬಗ್ಗೆ ಮಾಹಿತಿ ಕೊಟ್ಟರೆ ಆ ಕುರಿತು ಪರಿಶೀಲನೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆ ಸಂಖ್ಯೆ: 1418

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, maternity leave and child care leave for teachers ಬಗ್ಗೆ ನನ್ನ ಪ್ರಶ್ನೆ ಇದೆ. ನಾನು ಏಕೆ ಈ ಪ್ರಶ್ನೆ ಹಾಕಿದೆ ಎಂದರೆ, ನನಗೆ ಗೊತ್ತಿದ್ದ ಒಂದು ಕೇಸ್ ಇದಾಗಿದ್ದು, ಮಾನ್ಯ ಸಚಿವರಿಗೆ ತಿಳಿಸಿದಾಗ ಅವರೂ ಕೂಡ ಇದಕ್ಕೆ ಸ್ಪಂದನೆ ಮಾಡಿದರು. ಆದರೂ ಅದು ಈಡೇರಲಿಲ್ಲ. One mother after giving birth to the child which was unfortunately, premature child, ಅವರು 6 ತಿಂಗಳು ಮಾತೃತ್ವ ರಜೆಯನ್ನು ಮುಗಿಸಿ, ಎಲಬುರ್ಗಾ ತಾಲ್ಲೂಕಿನ ಸಂಬಂಧಪಟ್ಟ ಬಿ.ಇ.ಓ.ಗೆ ರಜೆಯನ್ನು ವಿಸ್ತರಣೆ ಮಾಡಬೇಕೆಂದು ಕೋರುತ್ತಾರೆ. ಆದರೆ ಅವರು child care leave ಅನ್ನು ರಿಜೆಕ್ಟ್ ಮಾಡುತ್ತಾರೆ ಮತ್ತು ಒಂದು ಷೋಕಾಸ್ ನೋಟಿಸ್ ಕೊಡುತ್ತಾರೆ. ಮಾನ್ಯ ಸಭಾಪತಿಗಳೆ, ಈಗ ನಾವು ಮನುಷತ್ವವನ್ನು ಕಳೆದುಕೊಂಡಿದ್ದೇವೆ. He may be acting as per the letter of the law. But, it is against the spirit of the law. A young mother who has a baby which is not even six months old, ಅವರಿಗೆ, ಒತ್ತಡ ಹಾಕಿ `you come back to work' ಎಂದು ಹೇಳುವ ಬದಲು temporarily ಯಾರನ್ನಾದರೂ hire ಮಾಡಬಹುದಲ್ಲವೇ? When he knows that the lady has availed maternity leave and she is eligible for child care leave for another six months, ಹೀಗಿರುವಾಗಲೂ ಈ ರೀತಿಯಾಗಿದೆ. ನಾವಿರುವವರೆಲ್ಲರೂ parents, either fathers or mothers. When a woman is pregnant, ಆ ಸಮಯದಲ್ಲಿ ಮತ್ತು till the child attains the age of three years or five years, ಅಲ್ಲಿಯವರೆಗೆ ಆ ತಾಯಿಯ ಆರೋಗ್ಯ, it directly impacts the child or in upbringing of the child. ನಾನು ಅದರ ಬಗ್ಗೆ ಒಂದು ಸಲಹೆ ಕೊಡಬೇಕು ಎಂದಿದ್ದೆ. ಆದರೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲೇ ಅದನ್ನು ತಿಳಿಸಿದ್ದಾರೆ ಎಂದು ನನಗೆ ಬಹಳ ಖುಷಿಯಾಯಿತು. ಉತ್ತರದಲ್ಲಿ, ಮಗು ಹುಟ್ಟಿದ ಮೇಲೆ ಆ ಶಿಕ್ಷಕರಿಗೆ 5 ವರ್ಷದವರೆಗೆ, ಅವರು ಎಲ್ಲಿ ಪೋಸ್ಟಿಂಗ್ ಕೇಳುತ್ತಾರೋ ಅಲ್ಲಿಗೆ ವರ್ಗಾವಣೆ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಇದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇನೆ. ಒಬ್ಬ ಮಹಿಳಾ ಶಿಕ್ಷಕಿಯ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿದ್ದೀರಿ ಎಂದು ನಾನು ಅಭಿನಂದನೆ ಸಲ್ಲಿಸುತ್ತೇನೆ. ನನ್ನದು ಇನ್ನೊಂದು ಉಪಪ್ರಶ್ನೆ ಇದೆ. Whether it is applicable to temporary teachers or not?

(ಮುಂದು)

(388) 16-3-2026 11.20 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ಮಧು ಬಂಗಾರಪ್ಪ (ಮುಂದು):-**

ಮಾನ್ಯ ಸದಸ್ಯರು ಈ ವಿಚಾರವನ್ನು ತೆಗೆದುಕೊಂಡು ಒಬ್ಬ ಹೆಣ್ಣುಮಗಳಿಗೆ ಈ ರೀತಿ ತೊಂದರೆಯಾಗಿದೆ ದಯವಿಟ್ಟು ಅವರನ್ನು ವರ್ಗಾವಣೆ ಮಾಡಿ, ಇಲ್ಲದಿದ್ದರೆ ಡೆಪ್ಯುಟೇಶನ್ ಮಾಡಿ ಎಂದು ಹೇಳಿದ್ದಾರೆ. ಎಲ್ಲಾ ಶಿಕ್ಷಕರುಗಳು ಕೌನ್ಸಿಲಿಂಗ್‌ನಲ್ಲೇ ವರ್ಗಾವಣೆಯನ್ನು ಮಾಡಿಕೊಳ್ಳಬೇಕು ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಾನು ಮೊದಲ ಸಲ ಬಂದಾಗ ಸ್ವಲ್ಪ ಒತ್ತಡದ ಮೇಲೆ ನಾವು ಡೆಪ್ಯುಟೇಶನ್ ಎಲ್ಲಾ ಮಾಡಿದ್ದೆವು. ಆದರೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಸದಸ್ಯರು ಏಕೆ ನೇಮಕಾತಿಯನ್ನು ಮಾಡುತ್ತಿಲ್ಲ ಎಂದು ಸದನದಲ್ಲಿ ಚರ್ಚೆಯನ್ನು ಮಾಡುತ್ತಿದ್ದಾರೆ. ಒಂದು ಕಡೆ ಶಿಕ್ಷಕರುಗಳ ಕೊರತೆ, ಮತ್ತೊಂದು ಕಡೆ ಡೆಪ್ಯುಟೇಶನ್ ಮಾಡಿ ಎಂದು ಸದಸ್ಯರು ಕೇಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಪ್ರಾಮಾಣಿಕ ಪ್ರಕರಣವಿದ್ದರೆ ಮಾಡುತ್ತೇವೆಂದು ಹೇಳಿದ್ದರು. ಕೆಲವರು ಕೈ-ಕಾಲು ಸರಿಯಿಲ್ಲ ಎಂದು ಸುಳ್ಳು ಕೂಡ ಹೇಳಿಕೊಂಡು ಬಂದಿದ್ದಾರೆ. ಅದಕ್ಕೆ ನಾನೇನು ಮಾಡಿದ್ದೇನೆಂದರೆ, ನಮಗೆ ಮೊದಲೇ ಶಿಕ್ಷಕರ ಕೊರತೆ ಇದೆ, ನಾನು ಇದನ್ನು ಮಾಡುತ್ತಾ ಕುಳಿತುಕೊಂಡರೆ ಕಷ್ಟವಾಗುತ್ತದೆಂದು ಡೆಪ್ಯುಟೇಶನ್ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅವಕಾಶ ಕೊಡಲಿಲ್ಲ. ಈ ವರ್ಷ ನಾವು ಎಲ್ಲೂ ಕೂಡ ಡೆಪ್ಯುಟೇಶನ್ ಮಾಡಲಿಲ್ಲ. ಆದರೆ, ಅವರು ಹೇಳಿದ ಹಾಗೆ ಮಾನವೀಯತೆ ಮೇಲೆ ನಾವು ಮಾಡಬೇಕಾಗುತ್ತದೆ. ಏಕೆಂದರೆ, ಕೆಲವು ಸಲ ಇಂತಹ ವಿಚಾರಗಳಲ್ಲಿ ತಾಯಿ ಒಂದು ಮಗುವಿಗೆ ಜನ್ಮ ಕೊಡುತ್ತಾರೆ, ಅವರಿಗೆ ನಾವು ಸಹಕಾರ ಕೊಡುವುದು, ಕರುಣೆಯಿಲ್ಲದಿದ್ದರೆ ತಪ್ಪಾಗುತ್ತದೆಂದು ಅದಕ್ಕೆ ನಾನು ಉತ್ತರದೊಳಗೆ ಮಾನ್ಯ ಸದಸ್ಯರಿಗೆ ಎಲ್ಲಾ ಕೊಟ್ಟಿದ್ದೇನೆ. ನೋಡಿ ಈ ರೀತಿಯೆಲ್ಲಾ ಆಗುವುದಿಲ್ಲ, ಕೆಲವು ಸಲ genuine cases ಗಳಿರುತ್ತವೆ ಎಂದು ನಾನು ಇದನ್ನೆಲ್ಲಾ ಯೋಚನೆ ಮಾಡಿ ಇಲಾಖೆಯವರಿಗೆ ಹೇಳಿದೆ. ಕೌನ್ಸಿಲಿಂಗ್ ಮಾಡುವುದೇ ಒಳ್ಳೆಯದು, ಆದರೆ ಅನಿವಾರ್ಯ ಸಂದರ್ಭ ಇದ್ದಾಗ ಅದಕ್ಕೆ ನಾನು ಏನು ಮಾಡಿದ್ದೇನೆಂದರೆ, Maternity Leave ಗೆ ಹೋಗಬೇಕೆಂದರೆ ಅವರಿಗೆ 15 ದಿವಸದೊಳಗೆ ನಾವು ಕೊಡಲೇಬೇಕಾಗುತ್ತದೆ. ಅದನ್ನು ನಾವು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕಡ್ಡಾಯವಾಗಿ ಇನ್ನು ಮೇಲೆ ಹೆಣ್ಣುಮಕ್ಕಳಿಗೆ ರೂಲ್ಸ್ ಅನ್ನೇ ತರುತ್ತಿದ್ದೇವೆ. ಈಗ ತಾನೇ ಮದುವೆಯಾಗಿರುತ್ತಾರೆ, ಅವರಿಗೆಲ್ಲಾ ಸಂಸಾರ ಪ್ರಾರಂಭವಾಗುತ್ತದೆ. ಹೆಚ್ಚುವರಿ ಜೀವಗಳು ಅವರ ಸಂಸಾರಕ್ಕೆ ಸೇರುತ್ತಾರೆ. ಅವೆಲ್ಲವನ್ನು ನಾವು ಪರಿಗಣಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಬೆಳಗಾವಿಯಲ್ಲೂ ಕೊಟ್ಟಿದ್ದಾರೆ, ಇಲ್ಲೂ ಕೊಟ್ಟಿದ್ದಾರೆ. ಅವರು ಕೊಟ್ಟಾಗಲೆಲ್ಲಾ ನನಗೆ ಕಾನೂನಿನ ತೊಡಕು ಇರುತ್ತಿತ್ತು. ಆದರೆ, ಮಾನವೀಯತೆ ಸರ್ಕಾರದಲ್ಲಿ ಇಲ್ಲದಿದ್ದರೆ ತಪ್ಪಾಗುತ್ತದೆ. ಅದರ ಜೊತೆಗೆ ಒಂದು small correction ಇದೆ ಅದನ್ನು bracket ನಲ್ಲಿ ಹಾಕಬೇಕಾಗಿತ್ತು. 5 ವರ್ಷ ಕೌನ್ಸಿಲಿಂಗ್ ಇರುವುದರಿಂದ ಎಲ್ಲಿ ಬೇಕೋ ಅಲ್ಲಿ ನಾನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಕೌನ್ಸಿಲಿಂಗ್‌ನಲ್ಲೇ ಅವರಿಗೆ ಕ್ಯಾಟಗರಿಯನ್ನು ಕೊಟ್ಟುಬಿಡುತ್ತೇವೆ. ಅವರಿಗೆಲ್ಲಾ ಮೊದಲ ಆದ್ಯತೆ ಕೊಡಲಾಗುತ್ತದೆ. ಅವರು ಎಲ್ಲಿ ಹೋಗಬೇಕು ಅಲ್ಲಿ 5 ವರ್ಷ ಇರುವಂತಹ ವ್ಯವಸ್ಥೆಯನ್ನು ನಾವು ಕೊಡುತ್ತೇವೆ.

ಏಕೆಂದರೆ, ಇವೆಲ್ಲದಕ್ಕೂ ಸಹ counselling ನಲ್ಲಿ ಆಗುತ್ತದೆ. I cannot transfer anyone. ಅದರಲ್ಲಿ bracket ಹಾಕಬೇಕಾಗಿತ್ತು. It is understood that any transfer of teachers is done under counselling. ಈ ಸಲ ಹೊಸದಾಗಿ ಮಾಡಿದ್ದೇವೆ. ಯಾವುದಾದರೂ ಶಿಕ್ಷರಿಗೆ ಅನಿವಾರ್ಯವಾದಂತಹ ಸಂದರ್ಭದಲ್ಲಿ ನಾವು ಸ್ಪಂದನೆ ಮಾಡಬೇಕಾಗುತ್ತದೆ. ಮುಂದಿನ ವರ್ಷದಿಂದ ಅವರು ರಜೆಗೆ ಹೋದಾಗ ಅತಿಥಿ ಶಿಕ್ಷಕರನ್ನು ನೂರಕ್ಕೆ ನೂರು ಕೊಟ್ಟೇ ಕೊಡುತ್ತೇವೆ. ಈಗಾಗಲೇ ನಾನು ಇಲಾಖೆಯ ಜೊತೆ ಮಾತನಾಡಿದ್ದೇನೆ. Automatically, we have to give the guest lecturers. ಅಲ್ಲಿ ಮತ್ತೆ ಮುಂದಿನ ಮಕ್ಕಳಿಗೆ ಏಕೆಂದರೆ, ಅವರು ಮಕ್ಕಳೇ, ಅವರಿಗೆ ಶಿಕ್ಷಣಕ್ಕೆ ತೊಂದರೆಯಾಗಬಾರದು ಎಂದು ನಾವು ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಅತಿಥಿ ಶಿಕ್ಷಕರುಗಳನ್ನು ಕೊಟ್ಟೇ ಕೊಡುತ್ತೇವೆ. ನಾವೆಲ್ಲಾ ಹಿರಿಯರ ಜೊತೆ ಮಾತನಾಡಬೇಕಾದರೆ ಜನರಲ್ ಆಗಿ ಚರ್ಚೆ ಮಾಡಿದ್ದೇವೆ. ನೂರಕ್ಕೆ ನೂರು ಅನುಷ್ಠಾನ ಮಾಡುತ್ತೇವೆ. ಇಂತಹ ಪ್ರಕರಣಗಳಿಗೆ ಮಾತ್ರ ಅತಿಥಿ ಶಿಕ್ಷಕರ ವೇತನ ಏನು ಇರುತ್ತದೆ ಅದನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಕೈ-ಕಾಲು ಸರಿಯಿಲ್ಲ ಎಂದು ಮೆಡಿಕಲ್ ರಿಪೋರ್ಟ್ ತಂದು ಅವರು ರಜೆ ಹಾಕಿದಾಗ ಬೇರೆ ಅತಿಥಿ ಶಿಕ್ಷಕರನ್ನು ಕೊಡುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಅವರೇ ಕೆಲವರು ಅತಿಥಿ ಶಿಕ್ಷಕರನ್ನು ಹಾಕಿಬಿಡುತ್ತಾರೆ. ಆ ರೀತಿ ತೊಂದರೆಯಾಗಬಾರದು. ತೊಂದರೆಯಾಗದ ರೀತಿಯಲ್ಲಿ ಅತಿಥಿ ಶಿಕ್ಷಕರನ್ನು ಈ ಕ್ಯಾಟಗರಿಗೆ ಕೊಟ್ಟೇ ಕೊಡುತ್ತೇವೆ.

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಭಾಪತಿಯವರೇ ಒಂದು ಸಣ್ಣ ಸ್ಪಷ್ಟೀಕರಣವನ್ನು ಕೇಳುತ್ತೇನೆ. ಪಾಲಿಸಿಯನ್ನು ಬದಲಾವಣೆ ಮಾಡುತ್ತಿದ್ದಾರೆ. ಈ ವರ್ಷ ಏಪ್ರಿಲ್-ಮೇ ಬರುತ್ತದೆಯಲ್ಲಾ ಆಗ ಕೌನ್ಸಿಲಿಂಗ್ ಪ್ರಾರಂಭ ಮಾಡುತ್ತಾರೆಯೇ?

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಯಾವಾಗಲೂ ಕೂಡ ಯಾವಾಗ ಬೇಕು ಆಗ ಮಾಡುತ್ತಿದ್ದೆವು. ನಮ್ಮ ಅನುಕೂಲಕ್ಕೆ ನಾವು ಮಾಡಿಕೊಳ್ಳುತ್ತಿದ್ದೆವು. ಆದರೆ ಈ ಸಲ ಪರೀಕ್ಷೆಗಳು ಆದ ತಕ್ಷಣ before 1st June or 31st May. ಅಂದರೆ ಮೇ-ಜೂನ್‌ನಲ್ಲಿ ಶಾಲೆ ಪ್ರಾರಂಭವಾಗುವುದರೊಳಗೆ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಮೂಲಕ ಪೂರ್ಣವಾಗಿ ಮುಗಿಸಿ ಬಿಡುತ್ತೇವೆ. ಇವೆಲ್ಲದರ ಬಗ್ಗೆ ಗೊತ್ತಾಗುತ್ತದೆ. Automatically, ನಾವು ಕೊಡುತ್ತೇವೆ. ಆದರೆ maternity leave ಅನ್ನು ಆ ವರ್ಷದೊಳಗೆ ಯಾವಾಗಲಾದರೂ ಕೇಳಬಹುದು. ಅದಕ್ಕೆ ನಾವು ಅತಿಥಿ ಶಿಕ್ಷಕರುಗಳನ್ನು ಕೊಡುತ್ತೇವೆ.

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವೈಯಕ್ತಿಕವಾಗಿ ಅಲ್ಲ, ಅವರು ಮುಂದೆ ಅಲ್ಲಿ ಹುದ್ದೆ ಇಲ್ಲ ಎಂದು ಹೇಳಬಹುದು. ತಾಯಿಗೆ ಬೆಂಬಲದ ವ್ಯವಸ್ಥೆ ಬೇಕು. ಮಗುವಿಗೆ ಐದು ವರ್ಷಗಳಾಗುವವರೆಗೆ ಅವರ ತವರು ಮನೆಯಲ್ಲೋ, ಗಂಡನ ಮನೆಯ ಜಾಗಕ್ಕೆ ಅವರು ವರ್ಗಾವಣೆಯನ್ನು ಕೇಳುತ್ತಾರೆ. ಏಕೆಂದರೆ, ಮಕ್ಕಳನ್ನು ಬೆಳೆಸುವುದಕ್ಕೆ ಅವರಿಗೆ ಬೆಂಬಲದ ವ್ಯವಸ್ಥೆ ಇರುತ್ತದೆ. Vacancy ಗಳು ಇಲ್ಲ

ಎಂದು ಹಾರೈಕೆ ಇಲ್ಲದಂತಾಗಬಾರದು. Vacancy ಇಲ್ಲ ಎಂದರೆ ಯಾರಾದರೂಬ್ಬ male teacher ಅನ್ನು ವರ್ಗಾವಣೆ ಮಾಡಿ ಇವರಿಗೆ ಆದ್ಯತೆ ಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಕೌನ್ಸಿಲಿಂಗ್ ರೂಲ್ಸ್ ಇದೆ ಅದನ್ನು ನಾನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆ ತರಹದಲ್ಲಿ ನಾವು ವಿಚಾರ ಮಾಡುತ್ತೇವೆ. But, it might be a little difficult. ಆದರೆ, ಅನುಕೂಲವಾಗುವ ರೀತಿಯಲ್ಲಿ ಮಾಡುತ್ತೇವೆ. ಕೌನ್ಸಲಿಂಗ್ ಇರುವುದರಿಂದ ನಮ್ಮ complete system collapse ಆಗಿಬಿಡುತ್ತದೆ. ಈಗ ನಾನು ಉತ್ತರ ಕೊಟ್ಟಿದ್ದೇನಲ್ಲಾ ಅದೇ ರೀತಿ ಏನಾದರೂ ಸಹಕಾರ ಬೇಕೆಂದರೆ ನಾನು ಇಲಾಖೆಯವರ ಜೊತೆ ಮಾತನಾಡಿಕೊಂಡು ಸಹಕಾರ ಮಾಡುವುದಕ್ಕಾದರೆ ನಾವು ಮುಂದಿನ ಹೆಜ್ಜೆ ಇಡುತ್ತೇವೆ.

**ಪ್ರಶ್ನೆ ಸಂಖ್ಯೆ: 1442**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) (ಶ್ರೀ ಮಂಜುನಾಥ ಭಂಡಾರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಕ್ಷೇತ್ರದ ನೀಲಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುದಾನಿತ ಶಾಲೆಯನ್ನು ಮುಚ್ಚುತ್ತೇವೆಂದು ಅದರ ಸಂಚಾಲಕರು ಬಿ.ಇ.ಓ. (Block Education Officer) ರವರಿಗೆ 2025 ರಲ್ಲಿ ಪತ್ರವನ್ನು ಬರೆದಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಆ ಶಾಲೆಯಲ್ಲಿದ್ದಂತಹ ಸರ್ಕಾರದಿಂದ ನೇಮಕಗೊಂಡಿರುವಂಥ ಎಲ್ಲಾ ಶಿಕ್ಷಕರು ನಿವೃತ್ತಿಯಾಗಿದ್ದಾರೆ. ಹಾಗಾಗಿ ನನಗೆ ಶಾಲೆಯನ್ನು ನಡೆಸಲು ಆಗುವುದಿಲ್ಲ ಎಂದು 2025 ರಲ್ಲಿ ಬಿ.ಇ.ಓ.ರವರಿಗೆ ಪತ್ರವನ್ನು ಬರೆದಿದ್ದಾರೆ. ಸುಮಾರು 91 ವಿದ್ಯಾರ್ಥಿಗಳು ಶಾಲೆಯಲ್ಲಿ ಓದುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ ಇರುವ ಊರಿನಲ್ಲಿರುವ ಶಾಲೆ. ಐದು ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಶಾಲೆಯಾಗಲಿ, ಅನುದಾನಿತ ಶಾಲೆಯಾಗಲಿ ಇರುವುದಿಲ್ಲ. ಹಾಗಾಗಿ ಈ 91 ವಿದ್ಯಾರ್ಥಿಗಳಿಗೆ ಶಾಲೆ ನಡೆಸುವುದಕ್ಕಾಗುವುದಿಲ್ಲ ಎಂದು ಪತ್ರ ಬರೆದು ಒಂದು ವರ್ಷವಾದರೂ ಕೂಡ ಇದುವರೆವಿಗೂ ಇಲಾಖೆಯಿಂದ ಯಾವುದೇ ಉತ್ತರ ಇಲ್ಲ. ಈಗ ಸಚಿವರ ಉತ್ತರದಲ್ಲಿ ಏನಿದೆ ಎಂದರೆ, ಗ್ರಾಮ ಪಂಚಾಯಿತಿಯವರು ಸೇರಿ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ದಿನಾಂಕ 10-03-2026 ರಂದು ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. Knowing is not doing; doing is doing. ನನಗೆ ಗೊತ್ತಿದೆ, ನೋಡಿದ್ದೇನೆ ಎಂದರೆ ಅದು ಆಗುವುದಿಲ್ಲ. Doing is doing, ಮಾಡುತ್ತೇವೆಂದು ಹೇಳಬಹುದಲ್ಲವೇ? ದಿನಾಂಕ 10-03-2026 ರಲ್ಲಿ ಮೊನ್ನೆ ಪ್ರಸ್ತಾವನೆ ಬಂದಿದೆ. ಈ ಶಾಲೆಯ ಸಂಚಾಲಕರಾದ ಶ್ರೀ ಕೀರ್ತಿಶೇಷರವರು, ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯವರು 2024 ರಲ್ಲಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. 91 ಮಕ್ಕಳ ಭವಿಷ್ಯವಿದೆ. ಶಿಕ್ಷಕರುಗಳನ್ನು ಕೊಡುವುದಕ್ಕೆ ಅವರಿಂದ ಆಗುವುದಿಲ್ಲ. ಕೊನೆ ಪಕ್ಷ ಶಾಲೆಯನ್ನು ಮುಚ್ಚುತ್ತೇವೆ ಎಂದಾಗ ಬದಲಿ ವ್ಯವಸ್ಥೆಯನ್ನು ಮಾಡುವುದಕ್ಕೆ ತೀರ್ಮಾನ ಮಾಡುತ್ತೇನೆ ಎಂದು ಹೇಳುವ ಬದಲು ನಾನು ಪ್ರಸ್ತಾವನೆ ಸ್ವೀಕಾರ ಮಾಡಿದ್ದೇನೆ, ನಾನು ನೋಡಿದ್ದೇನೆ, knowing is not doing; doing is doing. ಅವರು ಮಾಡುತ್ತಾರೆಂದರೆ ಮಾಡುತ್ತೇನೆ ಎಂದು ಹೇಳಲಿ, ಮಾಡುವುದಿಲ್ಲವೆಂದರೆ ಮಾಡುವುದಿಲ್ಲ, ಮಕ್ಕಳನ್ನು ಇನ್ನು ಎಲ್ಲಾದರೂ ಕೊಂಡೊಯ್ಯಬಹುದು ಎಂದು ಅವರು ಹೇಳಬೇಕು. ಹಾಗಾಗಿ ಮಾನ್ಯ ಸಚಿವರು ಕೊಟ್ಟಿರುವ ಉತ್ತರ ನನಗೆ ಸಮಾಧಾನಕರವಾಗಿಲ್ಲ. ಮಾನ್ಯ ಮಂಜುನಾಥ ಭಂಡಾರಿಯವರು ಬಹಳ ಕಾಳಜಿಯಿಂದ ಇದನ್ನು ಕೇಳಿದ್ದಾರೆ. ಏಕೆಂದರೆ, 5 ಕಿ.ಮೀ. ವ್ಯಾಪ್ತಿಯಲ್ಲಿ ಒಂದೂ ಶಾಲೆಯೂ ಇಲ್ಲ, ವಿದ್ಯಾರ್ಥಿಗಳಿಗೆ ಬೇರೆ ಅವಕಾಶಗಳಿಲ್ಲ. ಸರ್ಕಾರಿ ಶಾಲೆಗಳಿಲ್ಲ, 5 ಕಿ.ಮೀ. ವ್ಯಾಪ್ತಿಯಲ್ಲಿ ಶಾಲೆ ಇಲ್ಲ ಎಂದು ಬಿ.ಇ.ಓ.ರವರು ವರದಿಯನ್ನು ಕೊಟ್ಟಿದ್ದಾರೆ. ಈ ಸದನದಲ್ಲಿ ಮಾನ್ಯ ಸಚಿವರು ಶಿಕ್ಷಕರುಗಳನ್ನು ಕೊಡುತ್ತೇನೆ ಅಥವಾ ನಾನು ಅಲ್ಲಿ ಬೇರೆ ಶಾಲೆಯನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿದರೆ ನನಗೆ

ಸಂತೋಷವಾಗಬಹುದು. ಮಾನ್ಯ ಸಚಿವರು ವಿದ್ಯಾರ್ಥಿಗಳಿಗೆ ಸರಿಯಾದ ಸಂದೇಶವನ್ನು ಕೊಡಬೇಕೆಂದು ನಾನು ಕೇಳಬಯಸುತ್ತಿದ್ದೇನೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಯಾವಾಗಲೂ ಅನುದಾನಿತ ಶಾಲೆ ಇದ್ದಾಗ ಸುತ್ತಮುತ್ತ ಕನಿಷ್ಠ 5 ಕಿ.ಮೀ. ವ್ಯಾಪ್ತಿಯಲ್ಲಿ ಈಗ ಹೊಸದಾಗಿ ಯಾವುದೇ ಶಾಲೆಯನ್ನು ಪ್ರಾರಂಭ ಮಾಡುವುದಿಲ್ಲ. ಏಕೆಂದರೆ, ನಾವು ಮಾಡಿದ ತಕ್ಷಣ ಅವರಿಗೆ effect ಆಗುತ್ತದೆಂದು. ಈಗ ಅವರೇ ನಾವು ನಡೆಸುವುದಕ್ಕಾಗುತ್ತಿಲ್ಲ, surrender ಮಾಡುತ್ತೇವೆ ಎಂದು ಹೇಳಿದಾಗ, 92 ಮಕ್ಕಳ ಶಿಕ್ಷಣಕ್ಕೆ ಕಷ್ಟವಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇವತ್ತೇ ನಾನು ಅಧಿಕಾರಿಗಳಿಗೆ ಹೇಳಿ, ಯಾರು ಮಕ್ಕಳಿದ್ದಾರೆ ಅವರಿಗೆ ಯಾವ ರೀತಿಯ ಶಿಕ್ಷಣವನ್ನು ನಾವು ಕೊಡಲು ಆಗುವುದಿಲ್ಲ ಎಂದು ಅವರೇನಾದರೂ ಶಾಲೆಯನ್ನು ಮುಚ್ಚಿದರೆ, ನಾವೇನು ಕೊಡಬೇಕು ಎನ್ನುವುದಿಲ್ಲ. ಏಕೆಂದರೆ, no child will be left out. ಅದು ಸಾಧ್ಯವೇ ಇಲ್ಲ. ಅವರು 5 ಕಿ.ಮೀ. ವ್ಯಾಪ್ತಿಯಲ್ಲಿ ಅಲ್ಲ, ಹೊಸದಾಗಿ ನಮ್ಮ ಕಾರ್ಯಕ್ರಮದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ಕೊಡುವುದರಿಂದ, mostly ಅಲ್ಲಿ ಎಲ್ಲೋ ಕೊಟ್ಟಿರುತ್ತೇವೆ. ಬಸ್ ವ್ಯವಸ್ಥೆಯನ್ನು ನಾವು ಉಚಿತವಾಗಿ ಕೊಡುತ್ತಿದ್ದೇವೆ. ನಾನು ಇಲಾಖೆಯವರ ಜೊತೆ ಇವತ್ತೇ ಮಾತನಾಡಿ ಅವರಿಗೆ ನಿರ್ದೇಶನವನ್ನು ಕೊಡುತ್ತೇನೆ. ಮಾನ್ಯ ಮಂಜುನಾಥ ಭಂಡಾರಿಯವರಿಗೆ ಕಾಳಜಿ ಇದೆ. ಯಾವುದೇ ಕಾರಣಕ್ಕೂ ಮಕ್ಕಳು ಶಿಕ್ಷಣದಲ್ಲಿ ವಂಚಿತರಾಗುವುದಕ್ಕೆ ಬಿಡುವುದಿಲ್ಲ.

**ಸಭಾಪತಿಯವರು:-** ಅವರ assets and liabilities ಕೊಟ್ಟರೆ ಹಾಗೂ ಕಟ್ಟಡ ಕೊಟ್ಟರೆ ಸರ್ಕಾರ ತೆಗೆದುಕೊಳ್ಳಲಿ. ಈ ರೀತಿ provision ಮಾಡಲು ಆಗುತ್ತದೆಯೇ ನೋಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದು ಸರಿಯಿದೆ. ಅವರ ಪತ್ರದಲ್ಲಿ ಇದೆ. 2027 ರವರೆಗೆ ನನ್ನ ಶಾಲೆಯನ್ನು ನಡೆಸುವುದಕ್ಕೆ ನಿಮಗೆ ಉಚಿತವಾಗಿ ಕೊಡುತ್ತೇನೆ ಎಂದು ಹೇಳಿದ್ದಾರೆ. ಅದಕ್ಕೆ ಪ್ರತಿಯಾಗಿ ನಮಗೇನು ಕೊಡುವುದು ಬೇಡ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಹಾಗಾದರೆ ಆ ಶಾಲೆಯನ್ನು ತೆಗೆದುಕೊಳ್ಳಿ. ಈ ರೀತಿ provision ನೋಡಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಅನುದಾನಿತ ಶಾಲೆಗಳಲ್ಲಿ ಸರ್ಕಾರದ ಪಾತ್ರ ಇದೆ. ಆದರೆ, ಅನುದಾನ ರಹಿತ ಶಾಲೆಗಳಲ್ಲಿ ಸರ್ಕಾರದ ಪಾತ್ರ ಏನು ಇರುವುದಿಲ್ಲ. ಕಟ್ಟಡ ಕೊಡುವುದಕ್ಕೆ ಬರುವುದಿಲ್ಲ.

(ಮುಂದು)

(389) 16/03/2026 11:30 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಸದನಕ್ಕೆ ಮತ್ತು ಆ ಮಕ್ಕಳಿಗೆ ಇಷ್ಟು ಗ್ಯಾರಂಟಿಯನ್ನು ನೀಡುತ್ತೇನೆ. ಅವರು ಶಿಕ್ಷಣದಿಂದ ಏನು ವಂಚಿತರಾಗಿದ್ದಾರೆ...

**ಸಭಾಪತಿಯವರು:-** ಈ ವಿಷಯದಲ್ಲಿ ವಿಚಾರ ಮಾಡಿ ಒಂದು ತೀರ್ಮಾನವನ್ನು ಮಾಡಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಅವರುಗಳು ಶಾಲೆಗೆ ಹೋಗುವ ವ್ಯವಸ್ಥೆಯನ್ನು ನೂರಕ್ಕೆ ನೂರರಷ್ಟು ನಾವು ನಮ್ಮ ಇಲಾಖೆಯಿಂದ ವ್ಯವಸ್ಥೆ ಮಾಡುತ್ತೇವೆ. ಅನುದಾನಿತ ಶಾಲೆ, ಅನುದಾನ ರಹಿತ ಶಾಲೆ ಹಾಗೂ ಸರ್ಕಾರಿ ಶಾಲೆ ಇವುಗಳೆಲ್ಲವೂ ವಿಸ್ತಾರವಾಗಿ ಎಲ್ಲಾ ಕಡೆಗಳಲ್ಲಿ ಇರುವುದರಿಂದ, ಯಾವುದೇ ರೀತಿಯ ಕ್ಲ್ಯಾಷ್ ಆಗಬಾರದು. ಆದರೆ, ನಾವು ತೆಗೆದುಕೊಳ್ಳುವ ನಿರ್ಧಾರದಲ್ಲಿ ಈ ಮಕ್ಕಳಿಗೆ ವಂಚನೆಯಾಗದೇ ಇರುವ ರೀತಿಯಲ್ಲಿ ನಾವು ಮಾಡೋಣ. ಅಲ್ಲಿ ಹತ್ತಿರದಲ್ಲಿಯೇ ಕೆ.ಪಿ.ಎಸ್. ಶಾಲೆ ಇರಬಹುದೆಂದು ನಾನು ಭಾವಿಸುತ್ತೇನೆ. ಒಂದು ವೇಳೆ ಇಲ್ಲದಿದ್ದರೆ, ಕೆ.ಪಿ.ಎಸ್. ಶಾಲೆಯನ್ನು ನಾವು ಅಲ್ಲಿ ಶುರು ಮಾಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ (ಶ್ರೀ ಮಂಜುನಾಥ ಭಂಡಾರಿರವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಇಲಾಖೆಯ ಬಿ.ಇ.ಓ.ರವರು ನೀಡಿರುವ ವರದಿಯಲ್ಲಿಯೇ "ಅಲ್ಲಿ 5 ಕಿಲೋ ಮೀಟರ್‌ನಲ್ಲಿ ಯಾವುದೇ ಶಾಲೆ ಇಲ್ಲ; ಇದನ್ನು ಸರ್ಕಾರಿ ಶಾಲೆ ಮಾಡಬಹುದು" ಎಂಬುದಾಗಿ ಇದೆ. "2027ನೇ ಸಾಲಿನವರೆಗೆ ನೀವೇ ಶಾಲೆ ನಡೆಸಿ, ಶಾಲೆಯನ್ನು ಫ್ರೀ ಆಗಿ ಕೊಡುತ್ತೇನೆ" ಎಂಬುದಾಗಿ ಸದರಿ ಶಾಲೆಯ ಮಾಲೀಕರೆ ಬರೆದು ಕೊಟ್ಟಿದ್ದಾರೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ನೀವು ಹೇಳುವುದು ಬಹಳ ಸರಿಯಾಗಿದೆ. ಕೆ.ಪಿ.ಎಸ್. ಶಾಲೆ ಅಲ್ಲಿ ಇದ್ದರೆ, ನಾನೇ ಉಚಿತವಾಗಿ ಬಸ್ಸಿನ ವ್ಯವಸ್ಥೆಯನ್ನು ನೀಡುತ್ತೇನೆ. ಐದು-ಆರು ಕಿಲೋ ಮೀಟರ್‌ಗಳಿದ್ದರೂ ಸಹ ಮಕ್ಕಳನ್ನು ನಾನೇ ಕರೆದುಕೊಂಡು ಬರುತ್ತೇನೆ; ಇದಕ್ಕಾಗಿ ಏಕೆ ತಲೆಯನ್ನು ಕೆಡಿಸಿಕೊಳ್ಳುತ್ತಾರೆ? ಅದನ್ನು ನಾನು ಮಾಡುತ್ತೇನೆ. ಈಗಷ್ಟೇ ಸದಸ್ಯರು ಸಮಸ್ಯೆಯನ್ನು ಹೇಳಿದ್ದಾರೆ. ಆ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದೇ ಇರುವ ರೀತಿಯಲ್ಲಿ ನಮ್ಮ ಸರ್ಕಾರ ಅವರಿಗೆ ಸಹಕಾರ ಮಾಡುವಂತೆ ನಾನು ನೋಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ನನಗೆ ಎಲ್ಲಿಯೂ ಸಮಾಧಾನವಾಗಲಿಲ್ಲ. ಈಗ ಸರ್ಕಾರ....

**ಸಭಾಪತಿಯವರು:-** ಸಾಕು; ನಾನು ಹೇಳಿದ್ದೇನೆ, ಅವರು ಮಾಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅಲ್ಲಿ ಶಾಲೆಯನ್ನು ಪ್ರಾರಂಭ ಮಾಡುತ್ತೇನೆ ಎಂದು ಹೇಳುವುದಕ್ಕೆ ಏನು? ಅಲ್ಲಿನ 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬೇರೆ ಶಾಲೆಗಳಿಲ್ಲ. ಆದರೆ, ಅಲ್ಲಿನ ಮಾಲೀಕರು ಅದನ್ನು ನಡೆಸಲು ಕೊಡುವುದಾಗಿ ಹೇಳುತ್ತಾರೆ. ಆದರೆ, ಅದನ್ನು ನಡೆಸುತ್ತೇವೆ ಎಂದು ಸರ್ಕಾರಕ್ಕೆ ಹೇಳುವುದಕ್ಕೆ ತೊಂದರೆ ಏನು? ಅದು ಕನ್ನಡ ಮಾಧ್ಯಮದ ಶಾಲೆಯಾಗಿದೆ. ಆಂಗ್ಲ ಮಾಧ್ಯಮ ಮಾಡಿ ಎಂದು ನಾನು ಹೇಳುವುದಿಲ್ಲ.

**ಸಭಾಪತಿಯವರೆ:-** ಸಚಿವರೇ ಇದರ ಬಗ್ಗೆ ಪರಿಶೀಲನೆ ಮಾಡಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಪರಿಶೀಲನೆ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಸಚಿವರು ಪರಿಶೀಲನೆ ಮಾಡುತ್ತೇನೆ ಎಂದರೆ, ಇದು ಹೋಯಿತು ಎಂದರ್ಥ. Knowing is not doing; doing is doing.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಪರಿಶೀಲನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1447**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದೈಹಿಕ ಶಿಕ್ಷಕರ ಕುರಿತಂತೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ದಿನಾಂಕ 19/02/2026 ಉದಯವಾಣಿ ಪತ್ರಿಕೆಯಲ್ಲಿ ಶಾಲೆಗಳಲ್ಲಿ ಈಗ ದೈಹಿಕ ಶಿಕ್ಷಣಕ್ಕೆ ಕೊಕ್ಕೆ, ದೈಹಿಕ ಶಿಕ್ಷಣಕ್ಕೆ ಮೀಸಲಾದ ಅವಧಿಯಲ್ಲಿ ಮೌಲ್ಯ ಶಿಕ್ಷಣವನ್ನು ಬೋಧಿಸಲು ಸರ್ಕಾರ ತಯಾರಿ ನಡೆಸಿದೆ ಎನ್ನುವ ವರದಿಯು ಪ್ರಕಟಗೊಂಡಿದೆ. ಅದೇ ಪತ್ರಿಕಾ ವರದಿಯಲ್ಲಿ, "ರಾಜ್ಯದಲ್ಲಿ ಸದ್ಯ ವಿಧಾನ ಪರಿಷತ್ತಿನ ಸಭಾಪತಿಯಾಗಿರುವ ಶ್ರೀ ಬಸವರಾಜ ಹೊರಟ್ಟಿರವರು ಶಿಕ್ಷಣ ಸಚಿವರಾಗಿದ್ದಾಗ, 2007ನೇ ಇಸ್ವಿಯಲ್ಲಿ ದೈಹಿಕ ಶಿಕ್ಷಣವನ್ನು 7ನೇ ವಿಷಯವಾಗಿ 6-9 ನೇ ತರಗತಿವರೆಗೆ ಪಠ್ಯದಲ್ಲಿ ಬೋಧಿಸುವಂತೆ ಪರಿಚಯಿಸಲಾಗಿತ್ತು" ಎಂದು ವರದಿಯಾಗಿದೆ. ಆದರೆ, ಈ ಸರ್ಕಾರ ಈಗ ಕ್ರಮ ಕೈಗೊಂಡಿರುವುದು ಆ ದೈಹಿಕ ಶಿಕ್ಷಣದ ಅವಧಿ ಏನಿತ್ತು, ವಾರಕ್ಕೆ 4 ಪೀರಿಯಡ್ ಇತ್ತು. ಇದನ್ನು ಕಡಿಮೆ ಮಾಡಿ, ಇದೇ ಅವಧಿಯಲ್ಲಿಯೇ ಮೌಲ್ಯ ಶಿಕ್ಷಣವನ್ನು ಬೋಧಿಸುವುದು ಎಂಬುದಾಗಿ ಇರುವುದು ಒಂದು ವಿಷಯವಾಗಿದೆ. ರಾಜ್ಯದಲ್ಲಿ ಒಟ್ಟು 42,000 ಪ್ರಾಥಮಿಕ ಶಾಲೆಗಳಿದ್ದು, ಅದರಲ್ಲಿ ಕೇವಲ 6,700 ಶಾಲೆಗಳಿಗೆ ದೈಹಿಕ ಶಿಕ್ಷಕರ ಹುದ್ದೆಗಳು ಮಂಜೂರಾಗಿವೆ. ಅದರಲ್ಲಿ 3,410 ಶಾಲೆಗಳಲ್ಲಿ ಮಾತ್ರವೇ ಶಿಕ್ಷಕರಿದ್ದಾರೆ. 3,361 ಶಾಲೆಗಳಲ್ಲಿ ಹುದ್ದೆ ಖಾಲಿ ಇದೆ. 5,223 ಪ್ರೌಢ ಶಾಲೆಗಳಲ್ಲಿ 1,841 ಹುದ್ದೆ ಖಾಲಿ ಇದೆ. ಹೀಗಾಗಿ ಸರ್ಕಾರದ ಉದ್ದೇಶ ಏನಾಗಿದೆ ಎಂದರೆ, ದೈಹಿಕ ಶಿಕ್ಷಣದ ಅಗತ್ಯ ಇಲ್ಲ ಎಂದು ಏನಾದರೂ ಸರ್ಕಾರವು ಭಾವಿಸಿದೆಯೇ? ನಮಗೆ, ನಿಮಗೆ ಎಲ್ಲರಿಗೂ ಗೊತ್ತಿರುವ ರೀತಿ, `A sound mind in a sound body' ಎನ್ನುವಂತೆ ಯಾವ ಶರೀರ ಸದೃಢವಾಗಿ ಇರುತ್ತದೆಯೋ, ಆ ಶರೀರದಲ್ಲಿ ಮನಸ್ಸು ಕೂಡ ಸದೃಢವಾಗಿ ಇರುತ್ತದೆ. ಮಾನ್ಯ ಸಭಾಪತಿಗಳನ್ನು ನೋಡಿದರೆ ಇದು ನಮಗೆ ಗೊತ್ತಾಗುತ್ತದೆ. 42,000 ಶಾಲೆಗಳಿಗೂ ಸಹ ದೈಹಿಕ ಶಿಕ್ಷಕರನ್ನು ನೇಮಿಸಬೇಕಾಗುತ್ತದೆ. ಹುದ್ದೆಗಳನ್ನು ಭರ್ತಿ ಮಾಡುವ ಆಲೋಚನೆ ಏನಾದರೂ ಇದೆಯೇ ಎಂದು ಕೇಳಿದರೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಾತ್ರ ನಾವು ಅದನ್ನು ಈಗ ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ; ಮುಂದಿನ ದಿನಗಳಲ್ಲಿ ಬೇರೆ ಶಾಲೆಗಳಿಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಸರ್ಕಾರವು ಉತ್ತರಿಸಿದೆ. ಹೀಗಾಗಿ ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಮುಂದಿನ ಉಪ ಪ್ರಶ್ನೆಯನ್ನು ನಂತರದಲ್ಲಿ ಕೇಳುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ನಾವು ಬುಕ್ ಅನ್ನು ಕಡಿಮೆ ಮಾಡಿದ್ದೇವೆ ಅಂದರೆ, ನಾವು ಬುಕ್ ಅನ್ನು ತೆಗೆದು ಬಿಟ್ಟಿದ್ದೇವೆ ಎನ್ನುವ ವಿಚಾರದ ಹಿನ್ನೆಲೆಯಲ್ಲಿ ಸದಸ್ಯರು ಪ್ರಶ್ನೆಯಲ್ಲಿ ಕೇಳಿದ್ದಾರೆ. ನಾವು ಬುಕ್ ಅನ್ನು ತೆಗೆಯುವುದಕ್ಕೆ ಹೋಗುವುದಿಲ್ಲ. ಇದೇ ಸದನದಲ್ಲಿ ನಾವು ನೀತಿ ವಿಜ್ಞಾನವನ್ನು ತಮ್ಮ ...

**ಸಭಾಪತಿಯವರು:-** ಮಾನ್ಯ ಸಚಿವರೇ Moral Education ಅನ್ನು ಇಲ್ಲಿ ಏಕೆ ತೆಗೆದುಕೊಂಡು ಬರುತ್ತೀರಿ? ದೈಹಿಕ ಶಿಕ್ಷಣದ ಪೀರಿಯಡ್‌ಗಳು ಇರುತ್ತವೆ. Moral Education ಬೇರೆ ಪೀರಿಯಡ್ ಹಾಕಿ. ಈ ರೀತಿ ದೈಹಿಕ ಶಿಕ್ಷಣದ ಪೀರಿಯಡ್ ಅನ್ನು ಕಡಿತ ಮಾಡುವುದು ಸರಿಯಲ್ಲ. It is not correct.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಪೀರಿಯಡ್ ಅನ್ನು ಕಡಿಮೆ ಮಾಡಿಲ್ಲ. ಇದರ ಬಗ್ಗೆ ನನಗೆ ಗೊತ್ತಿದೆ. ನೀತಿ ವಿಜ್ಞಾನದ ಬಗ್ಗೆ ನಾವು ಬುಕ್ ಅನ್ನು ಮಾಡುತ್ತಿದ್ದೇವೆ. ಅದನ್ನು ನಾವು ತೆಗೆದಿಲ್ಲ. ಇದರ ಜೊತೆಗೆ ವಾರದಲ್ಲಿನ ನಾಲ್ಕು ತಾಸು ಕಡಿಮೆ ಮಾಡಲಾಗಿದೆ ಎಂದು ಸದಸ್ಯರು ಹೇಳಿದ್ದಾರೆ. ಆದರೆ, ಅದನ್ನು ನಾವು ಕಡಿಮೆ ಮಾಡಿಲ್ಲ. ನಾಲ್ಕು ತಾಸನ್ನು ನಾವು ಕೊಡುತ್ತಿದ್ದೇವೆ. ನೀತಿ ವಿಜ್ಞಾನವನ್ನು ಎಷ್ಟು ತಾಸಿಗೆ ಮಾಡಬೇಕು ಎಂದರೆ, mostly ನನ್ನ ಪ್ರಕಾರ, 40 ತಾಸನ್ನು ನೀತಿ ವಿಜ್ಞಾನಕ್ಕೂ ಕೊಡಬೇಕು. ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ನೀತಿ ವಿಜ್ಞಾನ ವಿಷಯವು ಹೊಸದಾಗಿ ಬರುವುದರಿಂದ, ಇದಕ್ಕೆ ಎಷ್ಟು ಪೀರಿಯಡ್ ಅನ್ನು ನಿಗದಿಪಡಿಸಬೇಕು ಎನ್ನುವುದರ ಬಗ್ಗೆ ನಾನು ಇಲಾಖೆಯವರಿಂದ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ದೈಹಿಕ ಶಿಕ್ಷಣಕ್ಕೆ ನಾಲ್ಕು ತಾಸು ಏನು ಇದೆ, ಅದು ಇರುತ್ತದೆ; ಇದನ್ನು ಯಾವುದೇ ಕಾರಣಕ್ಕೂ ನಾವು ರದ್ದುಗೊಳಿಸುವುದಿಲ್ಲ. ಇದು ಕಡ್ಡಾಯವಾಗಿ ಇದ್ದೇ ಇರುತ್ತದೆ. ಇನ್ನು ನೇಮಕಾತಿಗೆ ಸಂಬಂಧಿಸಿದಂತೆ, ನಾನು ಹೇಳುವುದು ಏನೆಂದರೆ, ಇದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ರಾಜ್ಯದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳಂದ ಏನು ತೊಂದರೆಯಾಗಿದೆ ಹೀಗಾಗಿ ನೇಮಕಾತಿ ಪ್ರಕ್ರಿಯೆ ಆದ ತಕ್ಷಣ ದೈಹಿಕ ಶಿಕ್ಷಕರನ್ನೂ ನೇಮಕ ಮಾಡಲಾಗುವುದು. ಈಗ 15,000 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನನಗೆ ಕೊಟ್ಟಿದ್ದಾರೆ. ಇದರಲ್ಲಿ ಅತೀ ಹೆಚ್ಚಾಗಿ ನಾವು ದೈಹಿಕ ಶಿಕ್ಷಕರನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೆ, ಸರ್ಕಾರದ ಉದ್ದೇಶ ಏನಿದೆ ಎನ್ನುವುದರ ಬಗ್ಗೆ 'ಉದಯವಾಣಿ' ಪತ್ರಿಕೆಯಲ್ಲಿ ವರದಿಯಾಗಿದೆ. ಹಾಗಾದರೆ, ಮಾಹಿತಿಯ ಆಧಾರವಿಲ್ಲದೆ ಇರುವುದನ್ನು ಪತ್ರಿಕೆಯವರು ವರದಿ ಮಾಡಿದರೇ?

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, mostly ಮಾಡಿರಬೇಕು. ನಾಲ್ಕು ತಾಸುಗಳಷ್ಟು ನಾವು ಮಾಡುತ್ತಿದ್ದೇವೆ ಎಂದು ನಾನೇ ಹೇಳುತ್ತಿದ್ದೇನೆ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೆ, ನನ್ನ ಸಲಹೆ ಏನೆಂದರೆ, ದೈಹಿಕ ಶಿಕ್ಷಣದ ನಾಲ್ಕು ಪೀರಿಯಡ್ ಏನಿದೆ, ಅದನ್ನು ಐದು ಪೀರಿಯಡ್ ಅನ್ನಾಗಿ ಮಾಡಬೇಕು. ಏಕೆಂದರೆ, ಈಗ ದೈಹಿಕ ಶಿಕ್ಷಣದ ಜೊತೆ ಯೋಗ ಕೂಡ ಸೇರಿಕೊಳ್ಳುತ್ತದೆ. ಹೀಗಾಗಿ ಸರ್ಕಾರ ಇದನ್ನು ನಾಲ್ಕು ಪೀರಿಯಡ್ ಬದಲಾಗಿ ಐದು ಪೀರಿಯಡ್ ಮಾಡಬೇಕಾಗುತ್ತದೆ. ಇದರ ಜೊತೆಯಲ್ಲಿ, ಈಗ ಶನಿವಾರದಂದು ಅರ್ಧ ದಿನ ಶಾಲೆಯನ್ನು ಮಾಡಲಾಗುತ್ತಿದೆ. ಈ ಮೊದಲು ಮಾಸ್ ಪಿ.ಟಿ. ಎಂಬುದಾಗಿ ಇತ್ತು. ನನಗೆ ಇರುವ ಮಾಹಿತಿಯಂತೆ ಈಗ ಶಾಲೆಗಳಲ್ಲಿ ಇದು ಇಲ್ಲ. ಇದರ ಬಗ್ಗೆಯೂ ಸಹ ಸಚಿವರು ಬೆಳಕನ್ನು ಚೆಲ್ಲಬೇಕು. ನಾವುಗಳೆಲ್ಲಾ ಈ ಹಿಂದೆ ವಿದ್ಯಾರ್ಥಿಗಳಾಗಿದ್ದಾಗ, ಪ್ರತಿ

ಶನಿವಾರದಂದು ನಾವುಗಳು ಬಿಳಿ ಸಮವಸ್ತ್ರವನ್ನು ಧರಿಸಿಕೊಂಡು ಶಾಲೆಗೆ ಹೋಗುತ್ತಿದ್ದೆವು. ಶನಿವಾರದಂದು ಒಂದು-ಒಂದೂವರೆ ಗಂಟೆಗಳ ಕಾಲ ಪಾಠಕ್ಕಿಂತ ಹೆಚ್ಚಾಗಿ ಮಾಸ್ ಪಿ.ಟಿ.ಯಲ್ಲಿಯೇ ನಾವು ನಮ್ಮನ್ನು ತೊಡಗಿಸಿಕೊಳ್ಳುತ್ತಿದ್ದೆವು. ಈಗ ಆ ಮಾಸ್ ಪಿ.ಟಿ. ಇಲ್ಲ ಎನ್ನುವುದು ನನಗೆ ಬಂದ ಮಾಹಿತಿಯಾಗಿದೆ. ಈಗ ಯಾವ ಶಾಲೆಗಳಲ್ಲೂ ಸಹ ಮಾಸ್ ಪಿ.ಟಿ. ಇಲ್ಲ.

**ಸಭಾಪತಿಯವರು:-** ಶ್ರೀ ಚಿದಾನಂದ ರವರೇ ಈ ಬಗ್ಗೆ ನೀವು ಅರ್ಧ ಗಂಟೆ ಅವಧಿಯ ಚರ್ಚೆಗೆ ಮನವಿಯನ್ನು ಬರೆದುಕೊಡಿ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೆ, ಬರೆದು ಕೊಡುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಈಗ ಐದು ತಾಸು ಮಾಡುವುದರ ಬಗ್ಗೆ ನಾನು ಬೇರೆ ಸದಸ್ಯರೊಂದಿಗೂ ಸಹ ಚರ್ಚಿಸುತ್ತೇನೆ. ಏಕೆಂದರೆ ಕಲಿಕೆ....

**ಸಭಾಪತಿಯವರು:-** ನಾನು ಇಲಾಖೆಯ ಸಚಿವನಾಗಿದ್ದಾಗ ಪ್ರೋಫೆಸರ್ ಶ್ರೀ ಎಲ್.ಆರ್.ವೈದ್ಯನಾಥನ್ ಸಮಿತಿಯ ವರದಿಯನ್ನು ಸರ್ಕಾರವು ಒಪ್ಪಿಕೊಂಡಿತ್ತು. ಇದಕ್ಕಾಗಿ 9 ಕೋಟಿ ರೂಪಾಯಿಗಳ ಅನುದಾನವನ್ನೂ ಸಹ ಬಿಡುಗಡೆ ಮಾಡಿತ್ತು. ಸದಸ್ಯರು ಇದರ ಬಗ್ಗೆ ಮನವಿಯನ್ನು ಬರದುಕೊಟ್ಟರೆ, ಅರ್ಧ ಗಂಟೆ ಅವಧಿಯ ಚರ್ಚೆಗೆ ನಾನು ಮಾಡಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 1433**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚೆ ನಾನು ಒಂದು ಮನವಿಯನ್ನು ಮಾಡುತ್ತೇನೆ. ಇಂದು ಸದನ ಪ್ರಾರಂಭವಾಗುತ್ತಿದ್ದಂತೆ ತಮ್ಮ ಬಲಭಾಗದಲ್ಲಿ ಮೊದಲನೆ ಸಲ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದಾರೆ. ಇವರಿಗೆ ಈ ಸದನದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತಂದಿದ್ದಾರೆ. ಬಹುತೇಕವಾಗಿ ಇಂತಹ ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಲ್ಲಿ ಇಡೀ ಭಾರತದಲ್ಲಿಯೇ ನಮ್ಮ ರಾಜ್ಯವು ಮೊದಲ ರಾಜ್ಯವಾಗಿದೆ. ಉನ್ನತ ಶಿಕ್ಷಣ ಇಲಾಖೆಯ ರಾಜ್ಯ ಯೋಜನಾ ನಿರ್ವಹಣಾ ಘಟಕ ಇದು U.U.C.M.S. (Unified University and College Management System) ಇದರಡಿ ಜಾರಿಗೆ ತಂದಿದ್ದಾರೆ. ಅವರು ಕೊಟ್ಟಿರುವ ಮಾಹಿತಿಯನ್ನು ಇ-ಆಡಳಿತ ಘಟಕ ರಚಿಸಿ, ಸಮನ್ವಯತೆ ಸಾಧಿಸಲು ನಿಯಮಿತವಾಗಿ ಸಭೆ, ತರಬೇತಿಗಳನ್ನು ನಡೆಸಲಾಗುತ್ತಿದೆ ಎಂಬುದಾಗಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಇಲ್ಲಿ Affiliation, Admission, Academics and Class Monitoring, Examination, Research and Development, Asset Management, Finance, Student Support. ಈ ಮಾಡ್ಯೂಲ್‌ಗಳ ಸಹಾಯದಿಂದ ಸರ್ಕಾರದ Common Calendar of Event ಅನ್ವಯ ಸದರಿ ಚಟುವಟಿಕೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

(ಮುಂದು)

(390)16-03-2026/11.40/bkp-md (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಮೇಶ್ ಬಾಬು(ಮುಂದು)**

ಇದರ ಬಗ್ಗೆ ಏನು ರಚನೆ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಇಲ್ಲಿಯವರೆಗೆ ಕೆಲಸ ಆಗುತ್ತಿಲ್ಲ. ಒಂದೊಂದು ಯುನಿವರ್ಸಿಟಿ ಒಂದೊಂದು Calendar of Education System ಅನ್ನು ಇಟ್ಟುಕೊಂಡಿದ್ದಾರೆ. ಬೆಳಗಾವಿಯಲ್ಲಿ ಅವರು Calendar of Education System ಬೇರೆ ಇದ್ದರೆ, ಬೆಂಗಳೂರು ಯುನಿವರ್ಸಿಟಿಯದ್ದು ಬೇರೆ ಇರುತ್ತದೆ. ಧಾರವಾಡ ಯುನಿವರ್ಸಿಟಿಯದ್ದು ಬೇರೆ ಇರುತ್ತದೆ. ಮೈಸೂರು ಯುನಿವರ್ಸಿಟಿಯದ್ದು ಬೇರೆ ಇರುತ್ತದೆ. Academic year ಪ್ರಾರಂಭ ಮಾಡುವಂತಹದ್ದನ್ನು ಬೇರೆ ಬೇರೆ ಮಾಡುತ್ತಾರೆ. Fee structure ಬೇರೆ ಬೇರೆ ಇರುತ್ತದೆ. Examination result ಒಂದೇ ಬಾರಿ ಬರುವುದಿಲ್ಲ. ಹಾಗಾಗಿ, ಮಾನ್ಯ ಸಚಿವರು ಇದನ್ನೆಲ್ಲಾ ಮಾಡಿರುವಂತಹ ವ್ಯವಸ್ಥೆ ಚನ್ನಾಗಿರುತ್ತದೆ. ಉದ್ದೇಶ

ಚೆನ್ನಾಗಿದೆ, ಒಳ್ಳೆಯ ಉದ್ದೇಶದಿಂದ ಮಾಡಿರುವುದು ಇಡೀ ದೇಶದಲ್ಲಿ ಮೊದಲನೆ ಬಾರಿ ಪ್ರಯೋಗವನ್ನು ಮಾಡಿದ್ದಾರೆ. ಇದುವರೆವಿಗೂ ನೀವು ಏನು 33 ಯುನಿವರ್ಸಿಗಳು ಎಂದು ಏನು ಹೇಳುತ್ತಿದ್ದೀರಿ, ಅದು ಒಂದು umbrella ಅಡಿಯಲ್ಲಿ ಬಂದಿರುವುದಿಲ್ಲ. ಉದ್ದೇಶ ಚೆನ್ನಾಗಿದೆ. So far it is not implemented. ಇದನ್ನು ದಯಮಾಡಿ, ಇದರ ಜಾರಿಗೆ ಅವರು ಹೆಚ್ಚು ಆದ್ಯತೆಯನ್ನು ಕೊಟ್ಟಿರುವುದಿಲ್ಲ. ಆದ್ಯತೆಯನ್ನು ಕೊಡಬೇಕು. ಮತ್ತೊಂದು ನೀವು ಈಗ ಏನು ಈ ಸಮಿತಿ ಅಡಿಯಲ್ಲಿ ಉಪ ಸಮಿತಿಗಳನ್ನು ಮಾಡಿದ್ದೀರಿ. ಅದರ ಬಗ್ಗೆ ವಿಶೇಷವಾಗಿ ನನ್ನ ಮನವಿ ಇರುವಂತಹದ್ದು ಏನೆಂದರೆ ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಸದಸ್ಯರಿಗೂ ಸಹ ಆ ಒಂದು ಸಮಿತಿಯಲ್ಲಿ ಅವಕಾಶ ಕೊಡಬೇಕು. ಅಕಾಡೆಮಿಕ್ ಬದಲಾವಣೆಯಾಗವಂತಹ ಸಂದರ್ಭದಲ್ಲಿ ಕನಿಷ್ಠ ಪಕ್ಷ ಇಬ್ಬರಿಬ್ಬರು ಸದಸ್ಯರು ಇದ್ದರೆ, ಏನೇನು ಮಾಡಬಹುದು, ನಿಯಮಾವಳಿ ಏನಿದೆ, ಯಾವ ರೀತಿಯಲ್ಲಿ ಮಾಡಬಹುದು, effective implementation ಹೇಗೆ ಮಾಡಬಹುದೆಂದು we can suggest them. ಹಾಗಾಗಿ, ನಾನು ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ತಾವು ಈಗ ಏನು ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಆ ಸಮಿತಿಯೊಳಗಡೆ Academicians ಜೊತೆಯಲ್ಲಿ ಇಬ್ಬರು ವಿಧಾನ ಸಭಾ ಸದಸ್ಯರನ್ನು ಹಾಗೂ ಇಬ್ಬರು ವಿಧಾನ ಪರಿಷತ್ತಿನ ಸದಸ್ಯರನ್ನು accommodate ಮಾಡಬೇಕೆಂದು ಹೇಳಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ವಿಚಾರದಲ್ಲಿ ಈಗಾಗಲೇ 2023ರಲ್ಲಿ ಈ ಒಂದು Uniform Academic Calendar ಮಾಡುವುದರ ಕಡೆ ನಾವು ಅದಕ್ಕೆ ಈಗಾಗಲೇ ಗಮನಕೊಟ್ಟು, ಬರೀ Uniform Academic Calendar ಒಂದೇ ಅಲ್ಲ, ನಮ್ಮ ಇತರೆ ಪರೀಕ್ಷೆಗಳು ಯಾವ ಸಂದರ್ಭದಲ್ಲಿ ಆಗಬೇಕು? ಎಷ್ಟು ದಿನದೊಳಗೆ affiliation ಆಗಬೇಕು ಎನ್ನುವುದು ಇದು ತಮಗೆ ಗೊತ್ತಿದೆ. Affiliation process ಕೂಡ ಪ್ರಾರಂಭವಾದರೆ, ಸುಮಾರು ವಿಶ್ವವಿದ್ಯಾಲಯಗಳು ಹೋಗಿ inspection ಮಾಡಿ ವರದಿ ಕೊಡುವಂತಹದ್ದೆಲ್ಲವೂ ಬಹಳ ದೊಡ್ಡ ಪ್ರಕ್ರಿಯೆ. ಇವೆಲ್ಲವನ್ನೂ ನಾವು ಕೋವಿಡ್ ಸಂದರ್ಭದಲ್ಲಿ ಬೇರೆ ಕಾರಣಾಂತರಗಳಿಂದ ಒಂದೊಂದು ವಿಶ್ವವಿದ್ಯಾಲಯದಲ್ಲಿ ಒಂದೊಂದು ಸಂದರ್ಭದಲ್ಲಿ ಪ್ರವೇಶಾತಿ ಆಗುತ್ತಿತ್ತು. ಪರೀಕ್ಷೆಗಳು ಆಗುತ್ತಿತ್ತು. ನಮಗೆ ಎಲ್ಲಾ ರೀತಿಯ ಗೊಂದಲಕ್ಕೆ ಅವಕಾಶವಾಗುತ್ತಿತ್ತು. ಉದಾಹರಣೆಗೆ ಅತಿಥಿ ಉಪನ್ಯಾಸಕರ ನೇಮಕಾತಿ ಮತ್ತು ವರ್ಗಾವಣೆ ವಿಚಾರ ಇರಬಹುದು. ಇವೆಲ್ಲವೂ ವಿಚಾರಗಳು ಕೂಡ ಗೊಂದಲವಾಗುತ್ತಿತ್ತು. ಒಂದೊಂದು ವಿಶ್ವವಿದ್ಯಾಲಯದಲ್ಲಿ Academic Calendar ಪ್ರಾರಂಭವಾಗಿರುತ್ತಿತ್ತು, ಕೆಲವು ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆಯೇ ಪ್ರಾರಂಭವಾಗಿರಲಿಲ್ಲ. ನಾವು ಒಂದು ಅಥವಾ ಒಂದೂವರೆ ತಿಂಗಳ ಕಾಲ ಕೆಲವು ಕಡೆ ಬೋಧನೆಗೆ ತೊಂದರೆಯಾಗುತ್ತಿತ್ತು. ನಾವು centralized counseling ಮಾಡುವುದರಿಂದ, ನಂತರ ತಡವಾಗಿ ಪ್ರಾರಂಭವಾಗುವಂತಹ ವಿಶ್ವವಿದ್ಯಾಲಯಗಳಲ್ಲಿ ಆ ಒಂದು ಪಠ್ಯ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರು ಕಾಯುವಂತಹ ಪರಿಸ್ಥಿತಿಯಾಗುತ್ತಿತ್ತು. ಇವೆಲ್ಲವುಗಳ ಗೊಂದಲಗಳನ್ನು

ನಿವಾರಿಸಬೇಕೆಂದು ಹೇಳಿ ಮೂರು ವರ್ಷದಿಂದ ಹಂತ ಹಂತವಾಗಿ ಈಗಾಗಲೇ ಮುಂದಿನ ಐದು ವರ್ಷಗಳವರೆಗೆ Calendar of Events ಮಾಡಿಬಿಟ್ಟಿದ್ದೇವೆ. ಈಗಾಗಲೇ ಎರಡು ವರ್ಷಗಳಿಂದ practice ಮಾಡಿದ್ದೇವೆ. ಈಗ ಐದು ವರ್ಷಕ್ಕೊಮ್ಮೆ Calendar of Events ಹಾಕಿದ್ದೇವೆ. ಗರಿಷ್ಠ ಎಂದರೆ ಹತ್ತು-ಹದಿನೈದು ದಿವಸಗಳ ವ್ಯತ್ಯಾಸವಷ್ಟೆ. ಅದರ ಮೇಲೆ ಯಾವುದೇ ವಿಶ್ವವಿದ್ಯಾಲಯದಲ್ಲಿ Academic Calendar ವ್ಯತ್ಯಾಸವಾಗುವಂತಹದ್ದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅದರಿಂದ ಎಲ್ಲಾ ಸುಧಾರಣೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. U.U.C.M.S. (Unified University and College Management System) ನಲ್ಲಿ ಕೂಡ ಅಷ್ಟೆ ನಾವು ಈಗ ಸದ್ಯಕ್ಕೆ ನಮ್ಮ ವಿಶ್ವವಿದ್ಯಾಲಯಗಳ ವ್ಯಾಪ್ತಿ ಇದೆ. ಈಗ U.U.C.M.S. - 2.0 ಎಂದು ನಾವು ಪ್ರಾರಂಭ ಮಾಡುತ್ತಿದ್ದೇವೆ. ಅದರಲ್ಲಿ ಖಾಸಗಿ ವಿಶ್ವವಿದ್ಯಾಲಯ ಮತ್ತು Deemed-to-be Universities ಅದನ್ನು ಒಳಗೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದರಿಂದ ಇವೆಲ್ಲಾ ಸುಧಾರಣೆಗಳನ್ನು ಮತ್ತು ಈ ಒಂದು ವಿಷಯಗಳಲ್ಲಿ ಗೊಂದಲಗಳು ಬರುತ್ತಿತ್ತು. ನಿರಂತರವಾಗಿ ಅಲ್ಲಿ ಇರುವಂತಹ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ನಾವು ಇದಕ್ಕೆ Coordinators ನೇಮಕ ಮಾಡಿಕೊಂಡು, ಗ್ರಾಮೀಣ ಪ್ರದೇಶಗಳಲ್ಲಿ ನಿರಂತರವಾಗಿ ಪ್ರತಿ ತಿಂಗಳು fee payment, ಮತ್ತೊಂದು ಇವೆಲ್ಲಾ ಸಮಸ್ಯೆಗಳು ಉದ್ಭವವಾಗುತ್ತದೆ. ಎಲ್ಲವನ್ನೂ ನಾವು ಪರಿಹಾರ ಮಾಡಿಕೊಂಡು ಆಗ್ಗಿಂದಾಗ್ಗೆ ಬಗೆಹರಿಸಿಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೇ, ಈಗಾಗಲೇ ನಾವು ಪಠ್ಯಗಳ ಬದಲಾವಣೆ ವಿಚಾರದಲ್ಲಿ ಮೊನ್ನೆ ಗೌರವಾನ್ವಿತ ರಾಜ್ಯಪಾಲರ ಸಮ್ಮುಖದಲ್ಲಿ 32 ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ ಮಾಡಿದ್ದೇವೆ. ಅಲ್ಲಿ ನಾವು ಪಟ್ಟಿಗಳಲ್ಲಿ ಬದಲಾವಣೆ ತರಬೇಕು. ಕೆಲವು convocation procedures ನಲ್ಲಿ ಬದಲಾವಣೆ ತರಬೇಕೆಂಬುದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಒಂದು ವಿಶೇಷವಾಗಿರುವ ವಿಚಾರವೇನೆಂದರೆ, ಕೇಂದ್ರ ಸರ್ಕಾರದ Staff Selection Commission ನಿಂದ ಏನು ಆಯ್ಕೆ ನಡೆಯುತ್ತದೆ? ಆ ವಿಚಾರದಲ್ಲಿ ನಮ್ಮ ಪದವೀಧರ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿಲ್ಲ ಎಂಬುದರ ಬಗ್ಗೆ ನಾನು ಗಮನಿಸಿದ್ದೇನೆ. ಆ ವಿಚಾರದಲ್ಲಿ ನಾವು ಚರ್ಚೆ ಮಾಡಿ, ಮುಂದೆ ನಮ್ಮ ಪಟ್ಟಿಗಳ curriculum ನಲ್ಲಿ Staff Selection Commission ಗೆ ಸಂಬಂಧಪಟ್ಟಂತೆ ಏನೊಂದು syllabus ಇದೆ. ಅದರ ಜೋಡಣೆ ಏಕೆ ಮಾಡಬಾರದು ಎಂಬುದಕ್ಕೆ ಒಂದು ಉಪ ಸಮಿತಿ ಮಾಡುವುದಕ್ಕೆ ಒಂದು ತೀರ್ಮಾನವಾಗಿದೆ. ಅದರಿಂದ, ನಿರಂತರವಾಗಿ ಇವೆಲ್ಲದಕ್ಕೆ ಬದಲಾವಣೆಯನ್ನು ತರುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಹೇಳಿದ್ದಾರೆ. ಅದನ್ನು ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ಪರಿಶೀಲನೆ ಮಾಡೋಣ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮೂವತ್ತು Government Universityಗಳು ಇದರ ವ್ಯಾಪ್ತಿಗೆ ಬರುತ್ತವೆ. ಸುಮಾರು 12 ಲಕ್ಷ ವಿದ್ಯಾರ್ಥಿಗಳು ಈ ವ್ಯಾಪ್ತಿಗೆ ಬರುತ್ತದೆ. ಇದರ purpose ಚೆನ್ನಾಗಿದೆ. ಇಡೀ ದೇಶದಲ್ಲಿ ಇದು ಮೊದಲನೇ ಪ್ರಯೋಗವಾಗಿದೆ. Private Universities, Deemed Universities ನಲ್ಲಿ ಸುಮಾರು ಎಂಟು ಲಕ್ಷ ವಿದ್ಯಾರ್ಥಿಗಳು ಇದರಿಂದ ಆಚೆ ಇದ್ದಾರೆ. ಅವರನ್ನು ಸಹ ಇದರ ವ್ಯಾಪ್ತಿಗೆ ತಂದರೆ, ಇನ್ನೂ effective ಆಗುತ್ತದೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. There should be a single education system all over Karnataka. ಈಗ ಒಂದೊಂದು Private Universities ಬೇರೆಯಾಗುವುದು, Deemed Universities ಬೇರೆ ಆಗುವುದು, ಸರ್ಕಾರಿ ಬೇರೆ ಆಗುವುದು, ಇದು ಆಗಬಾರದು. ಆ ಕಾರಣಕ್ಕೆ ಇದೊಂದನ್ನು ಪರಿಗಣಿಸಬೇಕೆಂದು ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಡಾ॥ ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ್ದೇನೆ. ನಮ್ಮ U.U.C.M.S. - 2.0 ನಲ್ಲಿ ಅದನ್ನು ಪರಿಗಣಿಸುತ್ತಿದ್ದೇನೆ. ಅದನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶವಿದೆ. ಖಂಡಿತವಾಗಿಯೂ ನಾವು ಅದನ್ನು ಜಾರಿ ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1339**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ನನ್ನದೊಂದು ಮನವಿ ಇದೆ. ಇದರ ಬಗ್ಗೆ ಸುಮಾರು ಬಾರಿ ಚರ್ಚೆ ಮಾಡಿದ್ದೇವೆ. ಇದನ್ನು ಚರ್ಚೆ ಮಾಡಲು ಒಂದು ಸಭೆ ಕರೆದರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ದೊಡ್ಡ ಮಟ್ಟಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಮುಂದಿನ ವಾರ ಇದರ ಬಗ್ಗೆ ಚರ್ಚೆ ಮಾಡಿದರೆ, ನಾನು ಕೊಟ್ಟಿರುವ ಉತ್ತರದಲ್ಲಿ ಮಾನ್ಯ ಸದಸ್ಯರುಗಳು ಹೇಳಿದರೆ, ಕೆಲವು ಅಧಿಕಾರಿ ವರ್ಗದಿಂದ ಕೆಲವು ನಾವು ಸರ್ಕಾರದಿಂದ ಹೇಳಿಕೊಳ್ಳಬಹುದು. ಅವರು ಕೊಟ್ಟಿರುವಂತಹದ್ದಕ್ಕೆ ಒಳ್ಳೆಯ ನಿರ್ದೇಶನ ತೆಗೆದುಕೊಂಡು ಅದನ್ನು ಕಾನೂನುಬದ್ಧವಾಗಿ ಚೆನ್ನಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾನು ಈ ತರಹ ಹೇಳುತ್ತೇನೆ ಎಂದು ವೈಯಕ್ತಿಕವಾಗಿ ಅವರಿಗೆ ಮನವಿ ಮಾಡಿದ್ದೇನೆ. ಅವರು ಆಯಿತು ಎಂದು ಹೇಳಿದರು. ಇದನ್ನು ಚರ್ಚೆಗೆ ಹಾಕಿದರೆ ನನಗೆ ಸಹಾಯವಾಗುತ್ತದೆ. ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅದರ ಮೇಲೆ ಏನಾದರೂ ಇದ್ದರೆ ಮಾಡಬಹುದು. ಆದರೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಾನು ಮನವಿ ಮಾಡುತ್ತಿದ್ದೇನೆ. ಅವರು ಆಯಿತು ಎಂದರು.

**ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಮಾನ್ಯ ಸಚಿವರ ಮುಂದೆ ಏನು ಹೇಳಿದ್ದೀರಾ ಎಂಬ ಬಗ್ಗೆ ನನ್ನ ಮುಂದೆ ತಾವು ಸತ್ಯ ಹೇಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ನನ್ನನ್ನು ಮಾತನಾಡುವುದಕ್ಕೆ ಬಿಡುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ ತಾವು ನನ್ನ ಮುಂದೆ ಸತ್ಯ ಹೇಳಿ. ಇದೆಲ್ಲ ನನಗೆ ಬೇಡ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ನನ್ನ ಮೇಲೆ ಯಾವಾಗಲೂ ಗದ ಪ್ರಹಾರ ಮಾಡುತ್ತೀರಿ. ಮಾನ್ಯ ಸಚಿವರು ಹೇಳಿದರು. ನಾನು ಅದಕ್ಕೆ ಪೂರಕವಾಗಿ ಜೊತೆಯಲ್ಲಿದ್ದೇನೆ. ಈ ಪ್ರಶ್ನೆಯನ್ನು ಏತಕ್ಕೆ ಕೇಳಿದೆ ಎಂಬ ಬಗ್ಗೆ ನನಗೆ ವಿಷಯ ತಲೆ ಬಿಸಿಯಾಗುತ್ತಿದೆ. ಈ ಪ್ರಶ್ನೆಯನ್ನು ಕೇಳಿದ ಮೇಲೆ ನನಗೆ ಗೊತ್ತಿರುವ ಉತ್ತರ ಕೂಡ ಮರೆತು ಹೋಗಿಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಮಾನ್ಯ ಸಚಿವರೇ ಹೇಳಿದಾಗೇ ತಾವು ಮಾಡಿಬಿಡಿ. ಇಲ್ಲಿ ಚರ್ಚೆ ಮಾಡುವ ಬದಲಿ ಒಂದು ಸಭೆ ಮಾಡಿಬಿಟ್ಟರೆ

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿದೆ.

**ಸಭಾಪತಿಯವರು:-** ಆಯಿತು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. ನಾಲ್ಕೈದು ಎಲ್ಲಿಯವರೆಗೆ ಅ. ಆ. ಇ. ಈ. ಉ. ಊ....

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಮಾನ್ಯ ಸಚಿವರ ಹತ್ತಿರ ಮಾತನಾಡಿ. ಇಲ್ಲಿ ಏತಕ್ಕೆ ನಾಟಕ ಮಾಡುತ್ತೀರಾ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ ಆಯಿತು ತೊಂದರೆಯಿಲ್ಲ.

**ಸಭಾಪತಿಯವರು:-** ಇದಕ್ಕೆ ಒಂದು ಸಭೆ ಮಾಡುವುದಕ್ಕೆ ಸಮಯ ಕೊಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ ನಾವು ಕೂಡ ಇದರಲ್ಲಿ ಭಾಗಿಯಾಗಬೇಕು.

**ಸಭಾಪತಿಯವರು:-** ನನ್ನ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ತಾವು 'ಊ' ಎಂದರೆ ಊಟದ ಜೊತೆಗೆ ಒಂದು ಸಭೆ ಮಾಡೋಣ. ಯಾವುದೇ ತೊಂದರೆಯಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರೇ, ಆಯಿತು ತೊಂದರೆಯಲ್ಲ.

**ಸಭಾಪತಿಯವರು:-** ಆಯಿತು ಬಿಡಿ ನಾನು ಹೇಳುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಆದರೆ ನಮ್ಮ ಅಧಿಕಾರಿಗಳು ಬಹಳ ಮೇಧಾವಿಗಳದ್ದಾರೆ. ಅವರು ಎಲ್ಲರಿಗಿಂತ ತುಂಬಾ ತಿಳುವಳಿಯುಳ್ಳವರಿದ್ದಾರೆ. ಅವರು ಉತ್ತರ ಕೊಡಬೇಕಾದರೆ, ಈ ರೀತಿ ಉತ್ತರ...

**ಸಭಾಪತಿಯವರು:-** ಇವತ್ತು ನನ್ನ ಮಾತಿನ ಮೇಲೆ ಅಧಿಕಾರಿಗಳ ಅದೃಷ್ಟವಿಲ್ಲ. ಆಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆ ಸಂಖ್ಯೆ 1304

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಟಿ.ಎನ್. ಜವರಾಯಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿರುವ 108 ಅಂಬ್ಯಲೆನ್ಸ್‌ಗಳಲ್ಲಿ ಪ್ರಥಮ ಚಿಕಿತ್ಸೆ ಇಲ್ಲ, ಯಾವುದೇ ಮೂಲ ಸೌಕರ್ಯಗಳಲ್ಲ. ಎರಡನೆಯದಾಗಿ, ಅನೇಕ ಅಂಬ್ಯುಲೆನ್ಸ್‌ಗಳಲ್ಲಿ ವೈದ್ಯಕೀಯ ಪ್ರಥಮ ಚಿಕಿತ್ಸೆ ನೀಡುವ ಸಿಬ್ಬಂದಿಗಳು ಇರುವುದಿಲ್ಲ. ಗ್ರಾಮೀಣ ಜನರಿಗೆ Golden Hour ನಲ್ಲಿ ಲಭ್ಯವಾಗದ ಅಂಬ್ಯಲೆನ್ಸ್‌ಗಳು ಸರ್ಕಾರ ಎರಡ್ಮೂರು ಪಂಚಾಯಿತಿ ಕೇಂದ್ರಗಳಲ್ಲಿ ಒಂದು ಅಂಬುಲೆನ್ಸ್ ಸೇವೆಯನ್ನು ಗ್ರಾಮೀಣ ಭಾಗದ ಜನರಿಗೆ ಒದಗಿಸದೇ ಇರುವುದರ ಬಗ್ಗೆ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಸಕಾಲಕ್ಕೆ ಅಂಬುಲೆನ್ಸ್‌ಗಳು ದೊರಕದೇ ಪ್ರತಿ ವರ್ಷ ಸಾವು-ನೋವುಗಳು ಸಂಖ್ಯೆಗಳು ರೋಗಿಗಳ ಔಷಧಿಯ ಕೊರತೆಯಿಂದ ಸರ್ಕಾರದ ಚಿಕಿತ್ಸೆ ಖಾಲಿಯಾಗಿರುವ ವೈದ್ಯ ಸಿಬ್ಬಂದಿಗಳನ್ನು ಒದಗಿಸುವ ಬಗ್ಗೆ ಕೂಡಲೇ ಸರ್ಕಾರ ಕ್ರಮ ವಹಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾದರೂ ನೇರವಾಗಿ ಉಗ್ರಾಣದಿಂದ ಔಷಧಿಗಳನ್ನು ಖರೀದಿಸಲು ಅವಕಾಶ ಕೊಡಬೇಕು. ಎಲ್ಲಾ ಹಂತಗಳ ಬಗ್ಗೆ ಸರ್ಕಾರ ತುರ್ತು ಗಮನ ಹರಿಸಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಶರಣಪ್ರಕಾಶ್ ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇನೆ. ಇದರಲ್ಲಿ ಮಾನ್ಯ ಸದಸ್ಯರು ಕೆಲವೊಂದು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ.

(ಮುಂದು)

**(391) 16.03.2026 11.50 ಎಸ್‌ವಿ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಡಾ: ಶರಣಪ್ರಕಾಶ್ ಆರ್. ಪಾಟೀಲ್ (ಮುಂದು):-**

ಮೊದಲನೆಯದಾಗಿ Advanced Life Support Ambulance ಗಳ ಕೊರತೆಯಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಮಾನದಂಡ ಏನಿದೆಯೆಂದರೆ ಪ್ರತಿ 5 ಲಕ್ಷಕ್ಕೆ ಒಂದು Advanced Life Support ಹೊಂದಿರುವಂಥ ಆಂಬ್ಯುಲೆನ್ಸ್ ಇರಬೇಕು. ಪ್ರತಿ 1 ಲಕ್ಷ ಜನಸಂಖ್ಯೆಗೆ 1 Minimum Life Support ಹೊಂದಿರುವಂಥ ಆಂಬ್ಯುಲೆನ್ಸ್ ಅನ್ನು ಹೊಂದಿರಬೇಕು ಎಂದು ಇದೆ. ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಮಾನದಂಡಕ್ಕಿಂತಲೂ ಹೆಚ್ಚು ಆಂಬ್ಯುಲೆನ್ಸ್‌ಗಳನ್ನು ಹೊಂದಿದ್ದೇವೆ. ಇತ್ತೀಚೆಗೆ 262 ಹೊಸ ಆಂಬ್ಯುಲೆನ್ಸ್‌ಗಳನ್ನು ಖರೀದಿ ಮಾಡಲಾಗಿದೆ. ಸದ್ಯಕ್ಕೆ ನಾವು ಸದಸ್ಯರಿಗೆ ಕೊಟ್ಟಿರುವ ಮಾಹಿತಿಯ ಪ್ರಕಾರ 1715 ಆಂಬ್ಯುಲೆನ್ಸ್‌ಗಳಿವೆ. "108 - ಆರೋಗ್ಯ ಕವಚ" ಆಂಬ್ಯುಲೆನ್ಸ್‌ಗಳು 715 ಇವೆ. C.H.C (Community

Health Centre) and P.H.C (Primary Health Centre) ಮಟ್ಟದಲ್ಲಿ ಹಾಗೂ ಸರ್ಕಾರವೇ ನಿರ್ವಹಣೆ ಮಾಡುವ ಆಂಬ್ಯುಲೆನ್ಸ್‌ಗಳು 1000 ಇವೆ.

ಕೇಂದ್ರ ಸರ್ಕಾರದ ಮಾನದಂಡಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಆಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಮಾನ್ಯ ಸದಸ್ಯರು ಹೇಳಿರುವುದೇನೆಂದರೆ ಕೆಲವೊಂದು ಆಂಬ್ಯುಲೆನ್ಸ್‌ಗಳಲ್ಲಿ ಸಿಬ್ಬಂದಿ ಕೊರತೆಯಿದೆ. ಅದನ್ನು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ 108 ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳನ್ನು ಸದ್ಯಕ್ಕೆ EMRI – Green Health Services ಎನ್ನುವ ಸಂಸ್ಥೆಯು 2008ರಿಂದಲೂ ನಿರ್ವಹಣೆ ಮಾಡುತ್ತಿದೆ. ಇದು centralized control ನಲ್ಲಿದೆ. 715 ಆಂಬ್ಯುಲೆನ್ಸ್‌ಗಳಿಗೆ centralized control ಇದೆ. 1,000 ಆಂಬ್ಯುಲೆನ್ಸ್‌ಗಳು ಸ್ಥಳೀಯವಾಗಿ ಅಲ್ಲಿನ ವೈದ್ಯರ ಕಂಟ್ರೋಲ್‌ನಲ್ಲಿದೆ. ಅತಿ ಶೀಘ್ರದಲ್ಲಿ ಇವತ್ತು ಇಲಾಖೆಯೇ ಇದನ್ನು ಸಂಪೂರ್ಣವಾಗಿ ವಹಿಸಿಕೊಂಡು 112 ಸಾಫ್ಟ್‌ವೇರ್ ಅಳವಡಿಸಿಕೊಂಡು 1715 ಆಂಬ್ಯುಲೆನ್ಸ್‌ಗಳನ್ನು centralized ಆಗಿ ಸರ್ಕಾರದಿಂದ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುತ್ತಿದ್ದೇವೆ. ಇನ್ನು ಮೂರು ತಿಂಗಳನಲ್ಲಿ ಇದನ್ನು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. ಹಾಗಾಗಿ ಮಾನ್ಯ ಸದಸ್ಯರು ಕೇಳಿರುವ ಕಳಕಳಿ ಏನೆಂದರೆ ಗ್ರಾಮೀಣ ಭಾಗದ ಜನರಿಗೆ ಆಂಬ್ಯುಲೆನ್ಸ್ ಸೇವೆಗಳು ಸರಳವಾಗಿ ಸಿಗಬೇಕು. ಕೊರತೆಯಾಗಬಾರದು ಎನ್ನುವ ಅವರ ಸದಾಶಯವೇನಿದೆ, ಅದರಂತೆ ಸರ್ಕಾರ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಟಿ.ಎನ್.ಜವರಾಯಿ ಗೌಡ:-** ಮಾನ್ಯ ಸಭಾಪತಿಯವರೆ, ಗ್ರಾಮೀಣ ಭಾಗದಲ್ಲಿ ಆಂಬ್ಯುಲೆನ್ಸ್‌ಗಳ ಸೇವೆ ಸಮರ್ಪಕವಾಗಿದೆಯೇ ಎನ್ನುವುದಕ್ಕೆ ಇದೆ, ಒಂದು ಲಕ್ಷ ಜನರಿಗೆ ಒಂದು ಆಂಬ್ಯುಲೆನ್ಸ್ ಲಭ್ಯವಿದೆ. ಇನ್ನೂ 820 ಆಂಬ್ಯುಲೆನ್ಸ್‌ಗಳ ಕೊರತೆಯಿದೆ ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಈಗಾಗಲೇ ಕೇಂದ್ರದ ಮಾನದಂಡಗಳಿಗಿಂತ ಹೆಚ್ಚಿಗೆ 895 ಹೆಚ್ಚು ಇದೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ? ಒಂದು ಕಡೆ 820 ಕೊರತೆ ಎನ್ನುತ್ತಾರೆ. ಇನ್ನೊಂದು ಕಡೆ 895 ಮಾನದಂಡಕ್ಕಿಂತ ಹೆಚ್ಚು ಇದೆ ಎಂದು ಹೇಳುತ್ತಾರೆ. ಇದರಲ್ಲಿ ಸರಿ ಯಾವುದು ಎಂದು ಮಾನ್ಯ ಸಚಿವರು ಸ್ಪಷ್ಟ ಪಡಿಸಬೇಕು.

**ಡಾ: ಶರಣ ಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾವು ಕೇಂದ್ರ ಸರ್ಕಾರದ ಮಾನದಂಡದ ಪ್ರಕಾರ excess ನಲ್ಲಿದ್ದೇವೆ. ಈಗಾಗಲೇ ನಾನು ಹೇಳಿದ ಹಾಗೆ 1,715 ಆಂಬುಲೆನ್ಸ್‌ಗಳಿವೆ. ಕೊರತೆಯಿದೆ ಎಂದು ನಾವು ಉತ್ತರದಲ್ಲಿ ಎಲ್ಲಿಯೂ ಕೊಟ್ಟಿಲ್ಲ. ಮಾನ್ಯ ಸದಸ್ಯರು ಗಮನಿಸಬೇಕು. ನಮ್ಮ ಉತ್ತರದಲ್ಲಿ ಎಲ್ಲಿಯೂ ಆಂಬ್ಯುಲೆನ್ಸ್ ಕೊರತೆ ಇದೆಯೆಂದು ನಾವಂತೂ ಕೊಟ್ಟಿರುವುದಿಲ್ಲ.

**ಶ್ರೀ ಟಿ.ಎನ್.ಜವರಾಯಿ ಗೌಡ:-** (ಆ) ಪ್ರಶ್ನೆಗೆ ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಸುಮಾರು 820 ಆಂಬ್ಯುಲೆನ್ಸ್‌ಗಳ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದ್ದೀರಿ.

**ಡಾ: ಶರಣ ಪ್ರಕಾಶ್ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಆ ವಾಕ್ಯವನ್ನು ಸರಿಯಾಗಿ ಓದಿಕೊಂಡರೆ "ಮಾನದಂಡಗಳಿಗಿಂತ 895 ಆಂಬ್ಯುಲೆನ್ಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಚರಣೆಯಲ್ಲಿದ್ದು" ಎಂದು ಹೇಳಿದೆ.

**ಶ್ರೀ ಟಿ.ಎನ್.ಜವರಾಯಿ ಗೌಡ:-** ಮಾನ್ಯ ಸಚಿವರೆ, (ಆ) ಪ್ರಶ್ನೆಗೆ ನೀಡಿರುವ ಉತ್ತರದ ಮೊದಲನೆಯ ವಾಕ್ಯದಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪ್ರತಿ 5 ಲಕ್ಷ ಜನಸಂಖ್ಯೆಗೆ ಒಂದು ಎ.ಎಲ್.ಎಸ್ ಹಾಗೂ ಪ್ರತಿ 1 ಲಕ್ಷ ಜನ ಸಂಖ್ಯೆಗೆ ಒಂದು ಬಿ.ಎಲ್.ಎಸ್ ಆಂಬ್ಯುಲೆನ್ಸ್‌ಗಳನ್ನು ನಿಯೋಜನೆ ಮಾಡಬೇಕಾಗಿರುತ್ತದೆ. ಇದರನ್ವಯ ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಸುಮಾರು 820 ಆಂಬ್ಯುಲೆನ್ಸ್‌ಗಳ ಅವಶ್ಯಕತೆ ಇರುತ್ತದೆ ಎಂದು ಹೇಳಿದೆ.

**ಡಾ: ಶರಣಪ್ರಕಾಶ್ ಆರ್. ಪಾಟೀಲ್:-** 820 ನಮಗೆ ಬೇಕಾಗಿರುತ್ತದೆ. ಆದರೆ ನಾವು 1715 ಆಂಬ್ಯುಲೆನ್ಸ್‌ಗಳನ್ನು ಹೊಂದಿದ್ದೇವೆ. ಅದು ಕೊರತೆಯಲ್ಲ. ಅಂದರೆ ಕೇಂದ್ರ ಸರ್ಕಾರದ ಮಾನದಂಡದ ಪ್ರಕಾರ ನಮಗೆ 820 ಆಂಬ್ಯುಲೆನ್ಸ್ ಇರಬೇಕು. ಆದರೆ ನಮ್ಮ ಹತ್ತಿರ 1715 ಇವೆಯೆಂದು ಹೇಳುತ್ತಿದ್ದೇವೆ. ಮಾನ್ಯ ಸದಸ್ಯರು ತಪ್ಪಾಗಿ ಗ್ರಹಿಕೆ ಮಾಡಿಕೊಂಡಿದ್ದಾರೆ. ನಮಗೆ ಅವಶ್ಯಕತೆ ಇರುವುದು 820 ಎಂದು ಹೇಳಿದ್ದೇವೆ. ಈಗಾಗಲೇ ನಾವು 1,715 ಆಂಬ್ಯುಲೆನ್ಸ್‌ಗಳನ್ನು ಹೊಂದಿದ್ದೇವೆ. We exceed the limits prescribed by the Government of India.

**ಪ್ರಶ್ನೆ ಸಂಖ್ಯೆ 1422**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿ ಕಾಂಪೋಸಿಟ್ ಡಿಗ್ರಿ ಕಾಲೇಜುಗಳಿದ್ದವು. ಅಂದರೆ ಸಂಯುಕ್ತ ಪದವಿ ಕಾಲೇಜುಗಳು. ಆ ಕಾಲೇಜುಗಳಿಂದ ಪಿ.ಯು. ಕಾಲೇಜುಗಳು ಬೇರ್ಪಡೆಗೊಂಡಿವೆ. ಬೇರ್ಪಟ್ಟ ನಂತರ ಹಲವಾರು ಸಮಸ್ಯೆಗಳು ಸೃಷ್ಟಿಯಾಗಿವೆ. ಪ್ರಮುಖವಾಗಿ ಹೇಳಬೇಕಾದುದೇನೆಂದರೆ ಮಂಜೂರಾದ ಹುದ್ದೆಗಳು ನಿವೃತ್ತಿಯಾದರೂ ಕೂಡ ಅವುಗಳನ್ನು ತುಂಬಲಿಕ್ಕೆ ಅನುಮತಿ ಕೊಡುತ್ತಿಲ್ಲ. ಅದರ ಆದೇಶದ ಪ್ರತಿಯನ್ನು ನಿಮಗೆ ಕೊಡುತ್ತೇನೆ.

ಎರಡನೆಯದಾಗಿ bifurcate ಆದ ಮೇಲೆ ಅಲ್ಲಿ ಹುದ್ದೆಗಳನ್ನು ಸೃಜಿಸಬೇಕಾಗಿತ್ತು. ಅದನ್ನು ಸೃಜನೆ ಮಾಡಿಲ್ಲ. ಉದಾಹರಣೆಗೆ ಒಂದು ಕಾಂಪೋಸಿಟ್ ಡಿಗ್ರಿ ಕಾಲೇಜಿನಲ್ಲಿ 25 ಹುದ್ದೆಗಳಿದ್ದವು. Bifurcate ಆದ ಸಮಯದಲ್ಲಿ 20 ಹುದ್ದೆಗಳನ್ನಿಟ್ಟುಕೊಂಡು ಕೇವಲ 5 ಹುದ್ದೆಗಳನ್ನು ಮಾತ್ರ ಪಿ.ಯು. ಕಾಲೇಜಿಗೆ ಕೊಟ್ಟರು. ನಿವೃತ್ತಿಯಾದ ಹುದ್ದೆಗಳನ್ನು ತುಂಬಲು ಅನುಮತಿ ಕೊಡುತ್ತಿಲ್ಲ. ವಿಷಯ ಬೋಧನೆ ಮಾಡಲಿಕ್ಕೆ 10 ವಿಷಯ ಕೊಟ್ಟಿದ್ದರು. ಇನ್ನೈದು ಸೃಜನೆ ಮಾಡಬೇಕಿತ್ತು, ಮಾಡಲಿಲ್ಲ. ಇವೆರಡು ಪ್ರಮುಖವಾದಂಥ ಪ್ರಶ್ನೆಗಳು. ನಾನು ಮೊದಲಿಗೆ ಹೇಳಬೇಕಾದುದೇನೆಂದರೆ sanctioned posts ಗಳಿಗೆ ಉತ್ತರ ಕೊಟ್ಟಿದ್ದಾರೆ. ಒಟ್ಟು bifurcated colleges 156. ಅದರಲ್ಲಿ ಹಸ್ತಾಂತರಗೊಂಡಂಥ ಹುದ್ದೆಗಳು 664. ಕಾರ್ಯ ನಿರ್ವಹಿಸುತ್ತಿರುವುದು 334. ಖಾಲಿ ಇರುವ ಹುದ್ದೆಗಳು 277. ಈ ಹುದ್ದೆಯನ್ನು ತುಂಬಲಿಕ್ಕೆ ಏಕೆ ಅನುಮತಿ ಕೊಡುತ್ತಿಲ್ಲ? Ban ಮಾಡಿದ್ದಾರೆ. ನಾನು ಓದುತ್ತೇನೆ.

**ಸಭಾಪತಿಯವರು:-** ಬೇಡ, ಓದಬೇಡಿ.

**ಶ್ರೀ ಎಸ್.ವ್ಹಿ. ಸಂಕನೂರ:-** 2017 ರಿಂದ 2020ರವರೆಗೆ ಅನುಮತಿಯನ್ನು ಕೊಟ್ಟಿರಿ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಎಲ್ಲಾ ಡಿಗ್ರಿ ಕಾಲೇಜುಗಳು ಮತ್ತು bifurcated ಪಿ.ಯು. ಕಾಲೇಜುಗಳಲ್ಲಿ ಇನ್ನು 272 ಹುದ್ದೆಗಳಿದ್ದು, ಅವುಗಳಿಗೆ ಏಕೆ ಅನುಮತಿ ಕೊಡುತ್ತಿಲ್ಲ? ಇಲಾಖೆಯ ನಿರ್ದೇಶಕರಾಗಿ ಹಿಂದೆ ಶ್ರೀಮತಿ ಸಿಂಧು ರೂಪೇಶ್ ಅವರು ಇದ್ದರು. ಅವರು ಒಂದು ಆದೇಶವನ್ನು ಹೊರಡಿಸಿದ್ದರು. 2015ರಿಂದ 2020ರ ಒಳಗೆ ನಿವೃತ್ತಿಯಾದಂಥ ಹುದ್ದೆಗಳನ್ನು bifurcated ಪಿ.ಯು.ಕಾಲೇಜುಗಳಿಗೆ ಕೊಡುವುದಿಲ್ಲ. ದಿನಾಂಕ 16.07.2024ಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಅದರಲ್ಲಿ ನಿರ್ಬಂಧ ಮಾಡಲಾಗಿದೆ. ಅದು ತಪ್ಪಾಗಿದೆ. ಅದನ್ನು ತಿದ್ದುಪಡಿ ಮಾಡಬೇಕು.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು 270 ಹುದ್ದೆಗಳನ್ನು ಭರ್ತಿ ಮಾಡಿ ಎಂದು ಕೇಳುತ್ತಿದ್ದು, ಇದನ್ನು workload ಗೆ connected ಆದಮೇಲೆ ನಾವು ಚರ್ಚೆ ಮಾಡಬೇಕು. ಈಗ ನಾನು ಹೋಗಿ ಅಧಿಕಾರಿಗಳ ಜೊತೆ ಮಾತನಾಡಿದೆ. ಮಾನ್ಯ

ಭೋಜೇಗೌಡರ ಏನು ಕೇಳಿದ್ದಾರೆ, ಅದರ ಮೇಲೆಯೂ ಚರ್ಚೆ ಮಾಡಬೇಕು. Bifurcation ಆದ ಮೇಲೆ workload ಎಲ್ಲವನ್ನೂ ಚರ್ಚೆ ಮಾಡಬೇಕು. ಮಾನ್ಯ ಭೋಜೇಗೌಡ್ ಪ್ರಶ್ನೆ ಮತ್ತು ಇದನ್ನು ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ. Workload ಅನ್ನು ನಾವು ಕೊಡಲೇಬೇಕು. ಅದು ತಮಗೂ ಗೊತ್ತಿದೆ. ಅನುದಾನಿತ ಶಾಲೆಗೆ ಕಳುಹಿಸಬೇಕೆಂದರೆ ಅವರು ಕೂಡ accept ಮಾಡುವುದಿಲ್ಲ. ನೀವೇ ಹೇಳಿದ್ದೀರಿ compulsory ಅವರನ್ನು ಬೇರೆ ಕಡೆ ಕಳುಹಿಸುವುದಕ್ಕೆ ಹುದ್ದೆಗಳನ್ನು ಮಾಡಿ ಎಂದು. ಇದೆಲ್ಲವನ್ನೂ ಕ್ರೋಢೀಕರಿಸಿ ನಾನು ಕೂಡ ಇದನ್ನು ಪರಿಶೀಲನೆ ಮಾಡುವುದಕ್ಕೆ ಹೇಳುತ್ತೇನೆ. ಸರ್ಕಾರದ ಮಟ್ಟದಲ್ಲಿ ನಾನು ಪರಿಶೀಲನೆ ಮಾಡಬೇಕಾಗುತ್ತದೆ. ಅರ್ಧ ಗಂಟೆಯ ಚರ್ಚೆಗೆ ಏನು ತೆಗೆದುಕೊಳ್ಳಬೇಕೆಂದಿದ್ದೇವೆ ಅದರ ಜೊತೆಗೆ ಇದರ ಮೂಲಕ ಕೂಡ ಉತ್ತರ ಕೊಡುವುದಕ್ಕೆ ನಾನು ಯಾವ ರೀತಿ ಸಹಕಾರ ಮಾಡಬಹುದೋ ನೋಡುತ್ತೇನೆ. ಆದರೆ bifurcation ಆದ ಮೇಲೆ workload ಮೇಲೆಯೇ ಮಾಡಬೇಕು.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೆ, ನೀವು ಈ ಸುತ್ತೋಲೆಯಲ್ಲಿ bifurcated ಪಿ.ಯು. ಕಾಲೇಜುಗಳಿಗೆ ಅನುಮತಿ ಕೊಡುವುದಿಲ್ಲ ಎಂದು ಏನು ಬರೆದಿದ್ದೀರಿ ಅದು ತಪ್ಪಾಗಿದ್ದು, ಅದನ್ನು ತಿದ್ದುಪಡಿ ಮಾಡಿ ಆದೇಶ ಹೊರಡಿಸಿ. ನಾನು ನಿಮಗೆ ಕಾಪಿ ಕೊಡುತ್ತೇನೆ. Workload ಇದ್ದದ್ದನ್ನು ಕೊಡಿ. Bifurcated ಪಿ.ಯು. ಕಾಲೇಜುಗಳಿಗೆ ನೀವು ಸಂಪೂರ್ಣ ban ಮಾಡಿದ್ದೀರಿ. ಸರ್ಕಾರವೇ ಹೊರಡಿಸಿರುವಂಥ ಸುತ್ತೋಲೆಯ ಪ್ರತಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಅದೇನು ಸುತ್ತೋಲೆ ಹೊರಡಿಸಿದ್ದಾರೆ, ಅದನ್ನು ನೋಡಿಕೊಂಡು ಮುಂದಿನ ಬಾರಿ ಚರ್ಚೆ ಇರುವಂಥ ಸಂದರ್ಭದಲ್ಲಿ ಇದಕ್ಕೆ ಉತ್ತರ ಕೊಡುತ್ತೇನೆ. ಅದನ್ನು ನಾನು ನೋಡುತ್ತೇನೆ. ಈಗ ನನ್ನ ಗಮನಕ್ಕೆ ಬಂದಿಲ್ಲ. ಈಗ ಮಾನ್ಯ ಸದಸ್ಯರು ಕೊಡುತ್ತಿದ್ದಾರೆ.

**(ಮುಂದು)**

**(392) 16.03.2026/12.00/ಎಂವಿ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಏನು ಸುತ್ತೋಲೆಯನ್ನು ಕಳುಹಿಸಿದ್ದಾರೆ, ಅದನ್ನು ನೋಡಿಕೊಂಡು, ಮುಂದೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದಕ್ಕೆ ಉತ್ತರವನ್ನು ನೀಡುತ್ತೇನೆ. ನಾನು ಆ ಸುತ್ತೋಲೆಯನ್ನು ನೋಡುತ್ತೇನೆ. ಅದು ಈಗ ನನ್ನ ಗಮನಕ್ಕೆ ಬಂದಿಲ್ಲ. ಈಗ ಮಾನ್ಯ ಸದಸ್ಯರು ಅದನ್ನು ನೀಡುತ್ತಿದ್ದಾರೆ. ಅದರ ಬಗ್ಗ ಚರ್ಚೆ ಮಾಡಿ, ಇದರ ಜೊತೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ workload ಇದ್ದರೆ ಕೊಡುತ್ತಾರೆಯೆ? ಅದರ ಬಗ್ಗೆ ಭರವಸೆಯನ್ನಾದರೂ ನೀಡಲಿ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅಲ್ಲಿ workload ಇದ್ದರೆ ಕೊಡಬೇಕಾಗುತ್ತದೆ. ಅದನ್ನು ಪರಿಶೀಲನೆ ಮಾಡಿ, ಮಾಡೋಣ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗ ಅದನ್ನು ಮತ್ತೆ ಪರಿಶೀಲಿಸುವುದು ಏಕೆ? ಅವರು ಅದನ್ನು ಕೊಡುತ್ತೇನೆಂದು ಹೇಳಬಿಡಲಿ. ಮಾನ್ಯ ಸಚಿವರು ಎಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈಗ ನಿವೃತ್ತಿಯಾಗಿರುವಂಥದ್ದಕ್ಕೆ 2015-2020ರವರೆಗೆ 5 ವರ್ಷದವರೆಗೆ ಅನುಮತಿಯನ್ನು ನೀಡಿದ್ದಾರೆ. ಇದನ್ನು ಸಹ ಅದೇ ರೀತಿ ನೀಡಲಿ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥದ್ದು ನಿಜ. ಏಕೆಂದರೆ, division ಆದ ಮೇಲೆ ಅನುದಾನಿತ ಶಾಲೆಗಳನ್ನು ಅನುದಾನಿತ ಕಾಲೇಜುಗಳೆಂದು ನೋಡಬೇಕಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತೆ ಅದನ್ನು ಮಾಡುವಂತಹ ಪ್ರಯತ್ನವನ್ನು ಸಹ ಮಾಡೋಣ. ಅದರ ಬಗ್ಗೆ ಚರ್ಚೆ ಮಾಡಿ, ಮಾಡೋಣ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗ ನನ್ನ ಎರಡನೆ ಪ್ರಶ್ನೆ ಏನೆಂದರೆ, ಅವರು ಹುದ್ದೆಗಳನ್ನು ಮಂಜೂರು ಮಾಡಬೇಕಾಗಿತ್ತು. ನಾನು ಹೇಳಿದಂತೆ composite ಕಾಲೇಜ್‌ನಲ್ಲಿ ಸುಮಾರು 25 ಹುದ್ದೆಗಳು ಇದ್ದವು. ಅದರಲ್ಲಿ ಕೇವಲ 5 ಹುದ್ದೆಗಳನ್ನು ನೀಡಿದ್ದಾರೆ. ಬೋಧನೆ ಮಾಡುವುದಕ್ಕೆ 10 ವಿಷಯಗಳನ್ನು ನೀಡಿದ್ದಾರೆ. ಆದರೆ, ಇನ್ನು 5 ಹುದ್ದೆಗಳನ್ನು ಸೃಜನೆ ಮಾಡಬೇಕಾಗಿತ್ತು. ಈಗ ಸುಮಾರು 20 ವರ್ಷವಾಗಿದೆ. ನಮ್ಮ ಪಕ್ಷದ ಸರ್ಕಾರ ಇರಬಹುದು ಅಥವಾ ಅವರ ಪಕ್ಷದ ಸರ್ಕಾರ ಇರಬಹುದು. ಆದರೆ, ಈ ನಡುವೆ ಆ ಹುದ್ದೆಗಳ ಸೃಜನೆಯಾಗಿಲ್ಲ.

**ಸಭಾಪತಿಯವರು:-** ತಾವು ಏನು ಚರ್ಚೆ ಮಾಡುತ್ತಿದ್ದೀರಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈಗ 'ಪ್ರಜಾವಾಣಿ' ಮತ್ತು 'ವಿಜಯವಾಣಿ' ದಿನಪತ್ರಿಕೆಯಲ್ಲಿ ಬರೆದಿದ್ದಾರೆ. ಇವುಗಳು ಶತಮಾನ ಕಂಡಂತಹ ಶಾಲಾ ಕಾಲೇಜುಗಳಾಗಿವೆ. ಶಿಕ್ಷಣ ಇಲಾಖೆಯಲ್ಲಿ appointment ಗೆ 1986ರಲ್ಲಿ ban ಬಂತು. Ban on recruitment due to economy measures ಪೂರ್ವದಲ್ಲಿ. ಇವುಗಳು ಶತಮಾನ ಕಂಡಿವೆ. ಇವುಗಳು ಆಗಲೇ ಸೃಷ್ಟಿಯಾಗಬೇಕಾಗಿತ್ತು. ಆದರೆ, ಸೃಷ್ಟಿಯಾಗಿಲ್ಲ. ಈಗ ಮಾನ್ಯ ಸಚಿವರು ಇದು ಪರಿಶೀಲನೆಯ ಹಂತದಲ್ಲಿದೆ ಎಂದು ಇದೆ. ಈಗ ಆ ಡಿಗ್ರಿ ಕಾಲೇಜುಗಳಿಗೆ ಕೊಡಲಿಲ್ಲವೆಂದರೆ, ಅದು ಏನು bifurcated P.U. college ಗಳಿವೆ ಅವುಗಳು ಮುಚ್ಚಿ ಹೋಗುತ್ತವೆ. ದಯವಿಟ್ಟು ಇದನ್ನು ಮಾನವೀಯ ದೃಷ್ಟಿಯಿಂದ ಪರಿಶೀಲನೆಯ ಹಂತದಲ್ಲಿ ಎಂದು ಹೇಳುವುದು ಬೇಡ.

**ಸಭಾಪತಿಯವರು:-** ತಾವು ಅದಕ್ಕೆ ಏನು ಮಾಡಬೇಕೆಂದು ಹೇಳಿ. ಭಾಷಣ ಮಾಡಬೇಡಿ. ಇದು Question Hour. ಈಗಾಗಲೇ ಆರು ನಿಮಿಷವಾಗಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಅವುಗಳನ್ನು ಸೃಜನೆ ಮಾಡಿಕೊಡಬೇಕೆಂದು ಒತ್ತಾಯಿಸುತ್ತೇನೆ. ಇಲ್ಲವಾದರೆ ಆ ಕಾಲೇಜುಗಳು ಮುಚ್ಚಿ ಹೋಗುತ್ತವೆ. ಈಗ 'ವಿಜಯ ಕರ್ನಾಟಕ' ಮತ್ತು 'ಪ್ರಜಾವಾಣಿ' ದಿನಪತ್ರಿಕೆಗಳಲ್ಲಿ ಬರೆದಿದ್ದಾರೆ. ಇದು ಇಷ್ಟು ಗಂಭೀರತೆಯಿಂದ ಕೂಡಿದೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಇದನ್ನು ಒಂದೇ ಬಾರಿಗೆ ಹೇಳುವುದಕ್ಕೆ ಆಗುವುದಿಲ್ಲ. ಈಗ ನಾನು ಹೇಳುವುದೇನೆಂದರೆ, workload ನೋಡಿಕೊಂಡು ಅವರಿಗೆ ತೊಂದರೆಯಾಗದಂತಹ ರೀತಿಯಲ್ಲಿ ಪರಿಶೀಲನೆ ಮಾಡಿ, ನಾನು ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ. ಇದು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರಿಗೂ ಸಹ ಗೊತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗ ಕೊನೆಯದಾಗಿ, composite ಕಾಲೇಜ್‌ನಲ್ಲಿ ಏನು P.U.C bifurcate ಆಗಿವೆ. ಈ bifurcate ಆದನಂತರ ಯಾವುದಾದರೂ ಸಮಸ್ಯೆಗಳು ಸೃಷ್ಟಿಯಾದರೆ, P.U. Director ಆ ಕಾಲೇಜಿನ Principal ರವರ ಜೊತೆಯಲ್ಲಿ ಸಭೆ ಮಾಡಬೇಕೆಂದು ಅವರದೇ ಸುತ್ತೋಲೆ ಇದೆ. ಇದರ ಪ್ರಕಾರ ಅವರು ಒಂದು ಸಭೆಯನ್ನು ಮಾಡುವುದಕ್ಕೆ ಹೇಳಲಿ. ಅವರೇ ಈ ಸುತೋಲೆಯನ್ನು ಹೊರಡಿಸಿದ್ದಾರೆ. ಈಗ bifurcate ಮಾಡುವ ಮುಂಚೆ, bifurcate ಆದನಂತರ P.U. ಕಾಲೇಜ್ ಒಳಗೆ ಏನಾದರೂ ಸಮಸ್ಯೆಗಳು ಸೃಷ್ಟಿಯಾದರೆ, P.U. Director ರವರು ಕಾಲೇಜಿನ ಎಲ್ಲಾ Principal ಗಳನ್ನು ಕರೆದು ಸಭೆ ಮಾಡಬೇಕೆಂದು ಇದೆ. ದಯವಿಟ್ಟು ಇದನ್ನು ಮಾಡಲಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಕೇಳಿಕೊಂಡಿದ್ದಾರೆ, ಅದನ್ನು ಇಲಾಖೆಯವರಿಗೆ ಕೂಡ ಹೇಳುತ್ತೇನೆ. ಅವರನ್ನು ಕರೆದು ಸಭೆ ಮಾಡುವುದಕ್ಕೆ ಏನು ತಪ್ಪಿಲ್ಲ. ನಾವು ಅವರ ಕುಂದುಕೊರತೆಗಳನ್ನು ಸಹ ಕೇಳಬೇಕಾಗುತ್ತದೆ. ನಾವು ಅದನ್ನು ಕೇಳಿಕೊಂಡು, ಈಗ ಚರ್ಚೆಗೆ ಏನು ಸಮಯ ಕೊಡುತ್ತೇವೆ. ಆ ಸಂದರ್ಭದಲ್ಲಿ ಉತ್ತರ ಕೊಡುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 1367**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಸಮರ್ಪಕವಾದ ಉತ್ತರವನ್ನು ನೀಡಿಲ್ಲ. ಇವತ್ತು ರಾಜ್ಯದಲ್ಲಿ ಸುಮಾರು 400 B.Ed., ಕಾಲೇಜುಗಳಿವೆ. ಇರುವಂತಹ 400 B.Ed., ಕಾಲೇಜುಗಳಲ್ಲಿ, ಕೇವಲ 9 ಸರ್ಕಾರಿ ಕಾಲೇಜುಗಳಿವೆ. ಉಳಿದವುಗಳು ಅನುದಾನ ಮತ್ತು ಅನುದಾನರಹಿತ ಕಾಲೇಜುಗಳಿವೆ. 2000ನೇ ಇಸವಿಯಲ್ಲಿ ಈ ಕಾಲೇಜುಗಳ fees ಅನ್ನು ಪರಿಷ್ಕರಣೆ ಮಾಡಿರುವುದು. ಈಗಾಗಲೇ ಸುಮಾರು 26 ವರ್ಷವಾಗಿದೆ. ಇದರ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಗಮನಹರಿಸಿಲ್ಲವೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕಳೆದ ವರ್ಷ ಶುಲ್ಕ ಪರಿಷ್ಕರಣೆ ಮಾಡುವುದಕ್ಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಒಳಗೊಂಡಂತೆ ಸುಮಾರು ಆರು ಜನ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಈಗಾಗಲೇ ಅವರು ಒಂದು ಸಭೆಯನ್ನು ಸಹ ಮಾಡಿದ್ದಾರೆ. ಈಗ ಮಾನ್ಯ ಸದಸ್ಯರು ಹೇಳುತ್ತಿರುವಂಥದ್ದು ವಾಸ್ತವಿಕವಾಗಿದೆ. ಬೇರೆ ರಾಜ್ಯಗಳಲ್ಲೂ ಕೂಡ ಶುಲ್ಕ ಸ್ವಲ್ಪ ಜಾಸ್ತಿ ಇರುವಂಥದ್ದು ಇದೆ. ಖಂಡಿತವಾಗಿ ಇದನ್ನು ಆದಷ್ಟು ತ್ವರಿತವಾಗಿ ಈ ಒಂದು ಶೈಕ್ಷಣಿಕ ವರ್ಷದಲ್ಲಿಯೇ ಬೇಗ ಸಮಿತಿಯ ವರದಿಯನ್ನು ಪಡೆದುಕೊಂಡು ಶುಲ್ಕವನ್ನು ಪರಿಷ್ಕರಣೆ ಮಾಡುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಮಧು ಜಿ. ಮಾದೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಬೇರೆ ಬೇರೆ ಕೋರ್ಸ್‌ಗಳಾದ ಇಂಜಿನಿಯರಿಂಗ್ ಕಾಲೇಜ್ ಮತ್ತು ಮೆಡಿಕಲ್ ಕಾಲೇಜ್‌ಗಳಿಗೆ ಪ್ರತಿವರ್ಷ ಶೇಕಡಾ 10ರಷ್ಟು ಶುಲ್ಕ ಹೆಚ್ಚಿಗೆ ಮಾಡಿಕೊಂಡು ಬರುತ್ತಿದ್ದಾರೆ. ಆದರೆ, B.Ed., ಕಾಲೇಜುಗಳಿಗೆ ಕಳೆದ 26 ವರ್ಷಗಳಿಂದ ಶುಲ್ಕ ಪರಿಷ್ಕರಣೆ ಮಾಡಿಲ್ಲ. ಇದನ್ನು ಅತೀ ಶೀಘ್ರದಲ್ಲಿಯೇ ಮಾಡಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಇವತ್ತಿನ ಕಾಲದ ರೀತಿಗೆ ತಕ್ಕಂತೆ ಶುಲ್ಕವನ್ನು ಪರಿಷ್ಕರಣೆ ಮಾಡಬೇಕು. ಏಕೆಂದರೆ, ಸುಮಾರು ವರ್ಷಗಳ ಅಂತರ ಇರುವುದರಿಂದ, ಸಮಿತಿಯವರು ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಯೋಚನೆ ಮಾಡಿ ವರದಿ ನೀಡುತ್ತಾರೆ.

**ಶ್ರೀ ಮಧು ಜಿ. ಮಾದೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿಯೇ ಮಾಡಬೇಕು.

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ಒಂದು ಶೈಕ್ಷಣಿಕ ವರ್ಷದಲ್ಲಿಯೇ ಅದನ್ನು ಅನುಷ್ಠಾನ ಮಾಡುವಂತಹ ಕೆಲಸ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1316**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2024-25ನೇ ಸಾಲಿನಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೆ. ನೀಟ್ ಪರೀಕ್ಷೆಯಿಂದ ರಾಜ್ಯ ಸರ್ಕಾರಕ್ಕೆ ವಿನಾಯಿತಿ ನೀಡಬೇಕು. ಮತ್ತೆ ರಾಜ್ಯದಲ್ಲಿ ಯಾರು ಕಟ್ಟಕಡೆಯ ವಿದ್ಯಾರ್ಥಿಗಳು ಇದ್ದಾರೆ. ಅಂದರೆ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಿಂದ ಎಣಿಸಿದಷ್ಟು ಸುಲಭದಲ್ಲಿ ಸೀಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೂ ನೀಟ್‌ಗೆ ಸಂಬಂಧಪಟ್ಟಂತೆ ತರಬೇತಿ ಇಲ್ಲ. ಹಾಗಾಗಿ, ಇದನ್ನು ರಾಜ್ಯ ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು. ಈ ಹಿಂದೆ ಮಾಜಿ ಮುಖ್ಯಮಂತ್ರಿಗಳಾದಂತಹ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಸಿ.ಇ.ಟಿ.ಯನ್ನು ಜಾರಿಗೆ ತಂದಿದ್ದರು. ಅದರಲ್ಲಿ academic marks ಮತ್ತು ಶೇಕಡಾ 50ರಷ್ಟು ಅವರ ಪರೀಕ್ಷೆಯ ಅಂಕಗಳನ್ನು ಸೇರಿಸಿಕೊಂಡು, ಅವರಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಸೀಟ್‌ಗಳನ್ನು ನೀಡಲಾಗುತ್ತಿತ್ತು. ನಾನು ಈ ರೀತಿಯಲ್ಲಿ ಕೊಡಬೇಕೆಂದು ಕೇಳಿದ್ದೆ. ಮತ್ತೆ ರಾಜ್ಯ ಸರ್ಕಾರದಿಂದ ಒಂದು resolution ಅನ್ನು ಕೂಡ ಮಾಡಲಾಗಿತ್ತು. ಅಂದರೆ, ನಮಗೆ ಇದರಿಂದ, exempt ಮಾಡಬೇಕೆಂದು ಕೇಳಲಾಗಿತ್ತು. ಈಗ ನನಗೆ ಗೊತ್ತಿರುವ ಹಾಗೆ ಅದನ್ನು ಇನ್ನು ಜಾರಿಗೆ ತಂದಿಲ್ಲ. ಇದನ್ನು ತರದೇ ಇರುವಂತಹ ಉದ್ದೇಶ ಇರುವಂಥದ್ದು, ಅದು ಮಾನ್ಯ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರವಾಗಿದೆ. ಮತ್ತೆ ಅದಕ್ಕೆ Act ಇದೆ ಎಂದು ಹೇಳುವಂತಹ ವಿಚಾರಗಳು. ಆದರೆ, ನನ್ನ ಮುಂದೆ ಇರುವಂತಹ ಪ್ರಶ್ನೆ ಏನೆಂದರೆ, ಇವತ್ತು ನೀಟ್ ಪರೀಕ್ಷೆ ಎಂದರೆ, ಪಿ.ಯು.ಸಿ ಪರೀಕ್ಷೆಯಲ್ಲಿ ಪಾಸ್ ಆದರೆ ಸಾಕು, ಅವರು ನೀಟ್‌ನಲ್ಲಿ ಉತ್ತಮ ಅಂಕಗಳನ್ನು ತೆಗೆದರೆ, ನೇರವಾಗಿ ಸೀಟ್ ಸಿಗುತ್ತದೆ. ನನಗೆ ಕೆಲವು ದೃಷ್ಟಾಂತಗಳಿವೆ. ಈಗ ಪಿ.ಯು.ಸಿ ಯಲ್ಲಿ ಫೇಲ್ ಆದರೆ ನೀಟ್‌ನಲ್ಲಿ rank ಬಂದಂತಹ ಅನೇಕ ಉದಾಹರಣೆಗಳು ನಡೆಯುತ್ತಿವೆ. ಇವತ್ತು ದೇಶಾದ್ಯಂತ ಸೀಟ್ ಮಾಫಿಯಾ ನಡೆಯುತ್ತಿದೆ. ಅದು failure ಆಗುತ್ತಾ ಇದೆ. ಮತ್ತೆ paper leakage ಆಗುತ್ತಿದೆ. ಇದರಿಂದ ಗ್ರಾಮೀಣ ಭಾಗದವರು ವೈದ್ಯಕೀಯ ಸೀಟ್‌ಗಳಿಗೆ ಹೋಗುವುದಕ್ಕೆ ಕಷ್ಟವಾಗುತ್ತಿದೆ ಎಂದು ಹೇಳುವಂಥದ್ದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ನಾನು ಒಂದು ಪ್ರಶ್ನೆ ಕೇಳಿದ್ದೆ. ನನ್ನ ಪ್ರಶ್ನೆಗೆ ನೀಡಿರುವ ಉತ್ತರವೇಂದರೆ, ನೀಟ್ ಪರೀಕ್ಷೆಯ ಮೂಲಕ ರಾಜ್ಯದ ವಿದ್ಯಾರ್ಥಿಗಳಿಗೆ ಕಡಿಮೆ ಸೀಟ್‌ಗಳು ದೊರೆಯುತ್ತಿರುವ ಬಗ್ಗೆ ಸರ್ಕಾರಕ್ಕೆ ಏನಾದರೂ ದೂರು ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ಮಾತ್ರ ನೀಟ್ ಪರೀಕ್ಷೆಯು ಅರ್ಹವಾಗಿದ್ದು, ರಾಜ್ಯದ ವಿದ್ಯಾರ್ಥಿಗಳಿಗೆ ಕಡಿಮೆ ಸೀಟ್ ದೊರೆಯುತ್ತಿರುವ ಬಗ್ಗೆ ಯಾವುದೇ ದೂರು ನಿಜವಿರುವುದಿಲ್ಲ. ಈಗ ನಿಜವಿರುವುದಿಲ್ಲವೆಂದರೆ, ಅದರ ಅಂಕಿ-ಅಂಶಗಳನ್ನು ನೀಡಬೇಕಲ್ಲವೇ? ಈಗ ಯಾವ ಅಂಕಿ-ಅಂಶಗಳ ಪ್ರಕಾರ ಸೀಟ್ ಕಡಿಮೆಯಾಗಿಲ್ಲ, ಅದು ಹೇಗೆ ಜಾಸ್ತಿಯಾಯಿತು ಎಂದು ಮಾಹಿತಿಯನ್ನು

ಕೊಡಬೇಕು. ಈಗ ಗ್ರಾಮೀಣ ಭಾಗದ ಬಗ್ಗೆ ಹೇಳುವುದಾದರೆ, ಈಗ ರಾಜ್ಯದ ಸಿಟಿಯಲ್ಲಿ ಇರುವಂತಹವರಿಗೆ ಪಿ.ಯು.ಸಿ.ಗೆ ೩೦,೦೦೦/- ರೂಪಾಯಿಗಳು. ಆದರೆ, ನೀಟ್ ತರಬೇತಿ ತೆಗೆದುಕೊಳ್ಳುವುದಕ್ಕೆ ೩,೦೦,೦೦೦/- ರೂಪಾಯಿಗಳು ಬೇಕು. ಇದು ಗ್ರಾಮಾಂತರ ಭಾಗದಲ್ಲಿ ಸಾಧ್ಯವಿದೆಯೇ? ಗ್ರಾಮಾಂತರ ಭಾಗದಲ್ಲಿ ವಿಜ್ಞಾನದಲ್ಲಿ ಪಿ.ಸಿ.ಎಂ.ಬಿ. ಓದಿದಂತಹವರಿಗೆ ಇವತ್ತು ನೀಟ್‌ನಲ್ಲಿ ಸೀಟ್ ಪಡೆಯುವುದೆಂದರೆ, ಅದು ಕಬ್ಬಿಣದ ಕಡಲೆ. ಅದು ಸಾಧ್ಯವೇ ಇಲ್ಲ. ಹಾಗಾಗಿ, ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಗೆ ತರಬೇತಿ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಲೇಬೇಕು. ಅದನ್ನು ಮಾಡಲಿಲ್ಲವೆಂದರೆ, ನಾವು ನಮ್ಮ ಮಕ್ಕಳಿಗೆ ಬರುವಂತಹ ಅವರ ಭವಿಷ್ಯದ ಮೇಲೆ ಎಲ್ಲೋ ಒಂದು ಕಡೆ ತೊಂದರೆ ಮಾಡಿದಂತೆ ಅರ್ಥವಾಗುತ್ತದೆ. ಹಾಗಾಗಿ, ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ತಾವು ಉತ್ತರ ನೀಡಿ.

**ಡಾ: ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರ ಕಳಕಳ ಅರ್ಥವಾಗುತ್ತದೆ. ಅವರ ಮೂಲ ಪ್ರಶ್ನೆ ಏನೆಂದರೆ, ನೀಟ್ ವ್ಯವಸ್ಥೆ ಬಂದಿರುವುದರಿಂದ, ಸೀಟ್‌ಗಳ ಸಂಖ್ಯೆ ಕಡಿಮೆಯಾಗಿದೆಯೇ ಎನ್ನುವುದಾಗಿದೆ. ಅದಕ್ಕೆ ಬಹಳ ಸ್ಪಷ್ಟವಾಗಿ ಉತ್ತರ ನೀಡಿದ್ದೇನೆ. ನೀಟ್ ಅಳವಡಿಸಿಕೊಂಡಿರುವುದರಿಂದ ನಮ್ಮ ಸೀಟ್‌ಗಳು ಕಡಿಮೆಯಾಗಿಲ್ಲ. ಸೀಟ್‌ಗಳು ಏಕೆ ಕಡಿಮೆಯಾಗಿಲ್ಲವೆಂದರೆ, ಈಗ ಸರ್ಕಾರಿ ಕಾಲೇಜುಗಳಲ್ಲಿ ಇರುವಂತಹ ಸೀಟ್‌ಗಳು ಆಗಿರಬಹುದು ಅಥವಾ ಖಾಸಗಿ ಕಾಲೇಜುಗಳ ಸೀಟ್‌ಗಳು ಆಗಿರಬಹುದು, ಅವುಗಳ ಸೀಟ್‌ಗಳ ಸಂಖ್ಯೆ same ಇದೆ. ನಾವು ಏನು All India Quota ದಲ್ಲಿ ಶೇಕಡಾ 15ರಷ್ಟನ್ನು ಕೊಡುತ್ತೇವೆ. ಅಂದರೆ, ಸರ್ಕಾರಿ ಕಾಲೇಜುಗಳಲ್ಲಿ ಶೇಕಡಾ 15ರಷ್ಟು All India Quota ಎಂದು ಕೊಡುತ್ತೇವೆ. ಅದರಲ್ಲಿ ಶೇಕಡಾ ೮೫ರಷ್ಟು ರಾಜ್ಯದ ಮಕ್ಕಳಿಗೆ ಮೀಸಲಿದೆ. ಅದರಲ್ಲಿ ಯಾವುದೂ ಸಹ ಕಡಿಮೆಯಾಗುವುದಕ್ಕೆ ಸಾಧ್ಯವೇ ಇಲ್ಲ ಮತ್ತು provision ಸಹ ಇಲ್ಲ. ಆಮೇಲೆ ಖಾಸಗಿ ಕಾಲೇಜುಗಳಲ್ಲೂ ಕೂಡ ಒಡಂಬಡಿಕೆ ಇದೆ. ಅದು ಏನೆಂದರೆ, non-minority college ಗಳು ಇದ್ದರೆ, ಶೇಕಡಾ ೪೦ರಷ್ಟು ಸೀಟ್‌ಗಳನ್ನು ರಾಜ್ಯದವರಿಗೆ ಕೊಡುತ್ತಾರೆ. ಅದು ನಮ್ಮ ರಾಜ್ಯದ ಮಕ್ಕಳಿಗೆ ಸೀಮಿತವಾಗಿದೆ. ಇನ್ನುಳಿದ ಶೇಕಡಾ ೪೦ರಷ್ಟು ಸೀಟ್‌ಗಳನ್ನು All India category ಇರುತ್ತದೆ. ಅದರಲ್ಲಿ All India ಪರೀಕ್ಷೆಯಲ್ಲಿ participate ಮಾಡಿ, ಎಲ್ಲಾ ಮಕ್ಕಳು ಆ ಸೀಟ್‌ಗಳನ್ನು ಪಡೆದುಕೊಳ್ಳಬಹುದು. ಇನ್ನುಳಿದ ಶೇಕಡಾ ೨೦ರಷ್ಟು N.R.I Management Quota ಇರುತ್ತದೆ. ಈ ರೀತಿಯ ಒಡಂಬಡಿಕೆ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದರಲ್ಲಿ ಏನೂ ಬದಲಾವಣೆ ಇಲ್ಲ. ಹಾಗಾಗಿ, ನಮಗೆ ಸೀಟ್‌ಗಳ ಸಂಖ್ಯೆ ಕಡಿಮೆಯಾಗುತ್ತಿಲ್ಲ. ನಮ್ಮ ರಾಜ್ಯಕ್ಕೆ ಏನು ಸೀಟ್‌ಗಳು ಸಿಗಬೇಕು ಅದು ನಮಗೆ ಸಿಗುತ್ತಿದೆ. ಅದು ಅಲ್ಲದೇ ಇವತ್ತು ಕೇಂದ್ರ ಸರ್ಕಾರ ಕೂಡ M.C.C (Medical Counselling Committee) ಕೌನ್ಸಿಲಿಂಗ್ ಮಾಡುತ್ತಿದ್ದಾರೆ. ಅವರು

ಯಾವ ಸೀಟ್‌ಗಳಿಗೆ ಕೌನ್ಸಿಲಿಂಗ್ ಮಾಡುತ್ತಾರೆಂದರೆ, All India seats ಏನಿದೆ ಅದಕ್ಕೆ ಅವರು ಕೌನ್ಸಿಲಿಂಗ್ ಮಾಡುತ್ತಾರೆ. ಅದರ ಜೊತೆಗೆ Deemed University ನಲ್ಲಿ ಇರತಕ್ಕಂತಹ ಎಲ್ಲಾ ಸೀಟ್‌ಗಳನ್ನು ರಾಷ್ಟ್ರ ಮಟ್ಟದಲ್ಲಿ M.C.C ಮುಖಾಂತರ ಕೌನ್ಸಿಲಿಂಗ್ ಆಗುತ್ತದೆ. ರಾಜ್ಯಮಟ್ಟದಲ್ಲಿ ಇರತಕ್ಕಂತಹ ಸೀಟ್‌ಗಳು ಆಯಾ ರಾಜ್ಯ ಸರ್ಕಾರಗಳ ಜವಾಬ್ದಾರಿಗೆ ನೀಡಲಾಗಿದೆ. ಅದಕ್ಕೆ ರಾಜ್ಯ ಸರ್ಕಾರವೇ ಕೌನ್ಸಿಲಿಂಗ್ ಮಾಡುತ್ತದೆ. ಬೇರೆ ಯಾರೂ private seat ಗಳನ್ನು ತೆಗೆದುಕೊಳ್ಳುವಂತಿಲ್ಲ.

(ಮುಂದು)

(393) 16.03.2026 12.10 LL-AK (ಉಪ ಸಭಾಪತಿಯವರ ಉಪಸ್ಥಿತಿ)

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು eligibility ಗೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಕೇಳಿದಂತಹ ಉಪಪ್ರಶ್ನೆಯನ್ನು ನಾನು ಮಾನ್ಯ ಸಚಿವರಿಗೆ ನೆನಪು ಮಾಡಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಡಾ॥ ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮೂಲ ಪ್ರಶ್ನೆಗೆ ನಾನು ಈ ಉತ್ತರವನ್ನು ನೀಡಿರುತ್ತೇನೆ. ಅಂದರೆ, ಯಾವುದೇ ಸೀಟು ಕಡಿಮೆಯಾಗುತ್ತಿಲ್ಲ ಎನ್ನುವುದು ಬಹಳ ಸ್ಪಷ್ಟವಾಗಿದೆ ಎಂಬುದಕ್ಕೆ ನಾನು ಉದಾಹರಣೆ ಸಹಿತ ಉತ್ತರ ನೀಡಿರುತ್ತೇನೆ. ಹಾಗಾಗಿ, ಸೀಟು ಕಡಿಮೆ ಆಗುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎರಡನೆಯದಾಗಿ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನಾನುಕೂಲವಾಗುತ್ತದೆ ಎಂದು ಹೇಳಿರುತ್ತಾರೆ. ಖಂಡಿತವಾಗಿಯೂ ಹೌದು. ಏಕೆಂದರೆ, ಯಾವುದೇ ಒಂದು ಹೊಸ ಸಿಸ್ಟಮ್‌ಗೆ ಸರ್ಕಾರ ಬಂದಾಗ, ಬಹಳ glaring ಆಗಿರುವಂತಹದ್ದು ಏನೆಂದರೆ, ನಗರ ಪ್ರದೇಶಗಳಲ್ಲಿ ಇರುವಂತಹ ವಿದ್ಯಾರ್ಥಿಗಳಿಗೆ; ನಗರ ಪ್ರದೇಶಗಳಲ್ಲಿ ಇರುವಂತಹ ಕ್ವಾಲಿಟಿ ಇನ್ಸ್ಟಿಟ್ಯೂಷನ್‌ಗಳಿಗೆ; ನಗರ ಪ್ರದೇಶಗಳಲ್ಲಿ ಇರುವಂತಹ ಅವರ ಎಕ್ಸಪೋಷರ್‌ಗೆ; ನಗರ ಪ್ರದೇಶಗಳಲ್ಲಿ ಇರುವಂತಹ ವ್ಯವಸ್ಥೆಗೆ, ಸ್ವಾಭಾವಿಕವಾಗಿ ಅಲ್ಲಿರುವಂತಹ ವಿದ್ಯಾರ್ಥಿಗಳಿಗೆ ಅನುಕೂಲ ಇದ್ದೇ ಇರುತ್ತದೆ. Because, they are getting better training. ಆದರೆ, ಗ್ರಾಮೀಣ ಪ್ರದೇಶದಲ್ಲಿರುವಂತಹ ಮಕ್ಕಳಿಗೆ ಇದು ಅನಾನುಕೂಲವಾಗುವಂಥದ್ದು ನಿಜ. ಹಾಗಾಗಿ, ಈಗಾಗಲೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯವರು ಸಹ, ಕಳೆದ ಎರಡು ವರ್ಷಗಳಿಂದ ಸುಮಾರು 25,000 ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡುತ್ತಿದ್ದಾರೆ. ಅದಕ್ಕಾಗಿಯೇ, ಈ ಹಿಂದಿನಿಂದಲೂ ಕೂಡ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನಾನುಕೂಲ ಇದೆ ಎನ್ನುವ ಉದ್ದೇಶದಿಂದಲೇ, ಶೇಕಡ 15 ರಷ್ಟು horizontal reservation ಕೊಡುತ್ತಿದ್ದೇವೆ. ಅಂದರೆ, ಶೇಕಡ 15 ರಷ್ಟು horizontal reservation ಎಲ್ಲಾ ಕೆಟಗರಿಗಳಲ್ಲಿ

ಇದೆ. ಅದು, ಸಾಮಾನ್ಯ ಕೆಟಗರಿ ಅಥವಾ ಮೀಸಲಾತಿಯಲ್ಲಿಯೂ ಸಹ ಶೇಕಡ 15 ರಷ್ಟು horizontal reservation ಕೊಡುತ್ತಿದ್ದೇವೆ. ಆದರೆ, ಇದು ಸಮರ್ಪಕವಾಗಿ ಇದೆಯೋ ಅಥವಾ ಇಲ್ಲವೋ ಎಂಬುದಕ್ಕೆ ನಾನು ಮತ್ತು ಉನ್ನತ ಶಿಕ್ಷಣ ಇಲಾಖೆಯ ಸಚಿವರ ಜೊತೆ ಪರಿಶೀಲನೆ ಮಾಡುತ್ತಿದ್ದೇವೆ. ಏಕೆಂದರೆ, ಕೆ.ಇ.ಎ. (ಕರ್ನಾಟಕ ಪರೀಕ್ಷಾ ಪ್ರಾಧಿಕಾರ) ಅವರ ಅಧೀನದಲ್ಲಿ ಬರುತ್ತದೆ. ಹಾಗಾಗಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯಲ್ಲಿ ಇನ್ನು ಹೆಚ್ಚಿನ ತರಬೇತಿಯನ್ನು ಕೊಡುವುದಕ್ಕೆ ನಾನು ಮತ್ತು ಉನ್ನತ ಶಿಕ್ಷಣ ಸಚಿವರು ಚರ್ಚೆ ಮಾಡಿ, ಏನು ಮಾಡಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಹಾಗಾಗಿ, ಇವೊತ್ತಿನ ದಿವಸ ನೀಟ್ ಪರೀಕ್ಷೆಯನ್ನು ವಾಪಸ್ಸು ಪಡೆಯುವಂತಹ ಪ್ರಶ್ನೆಯೇ ಇರುವುದಿಲ್ಲ. Because, there is a Supreme Court judgment and it is also conducted by an Act of Parliament now. ಹಾಗಾಗಿ, ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಈ ಹಿಂದೆ ನಿರ್ಣಯ ಮಾಡಿದ್ದು ನಿಜ. ಏಕೆಂದರೆ, ನಾವು ಏನು ಹೇಳಿದ್ದೇವೆಂದರೆ, "We can do it better. The State Government should be allowed to conduct their own examination and do it." ಏಕೆಂದರೆ, ಇದರಲ್ಲಿ ಬಹಳಷ್ಟು ಗೊಂದಲಗಳಾಗುತ್ತಿತ್ತು. ಹಾಗಾಗಿ, ನಾವು ಸಿ.ಇ.ಟಿ. ಪರೀಕ್ಷೆಯನ್ನು ಏತಕ್ಕೆ ಬೇಡ ಎಂದು ಹೇಳುತ್ತೇವೆಂದರೆ, we had welcomed N.E.E.T. initially. But, now we want to migrate back. because there is a lot of wrong things happening. ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ ಎನ್ನುವ ಹಿನ್ನೆಲೆಯಲ್ಲಿ, ಸಿ.ಇ.ಟಿ. ಯನ್ನು ವಿತ್‌ಡ್ರಾ ಮಾಡಿ, ನಮ್ಮ ರಾಜ್ಯಗಳಿಗೆ ಕೊಡಿ ಎಂದು ಕೇಳಿದ್ದೆವು. ಆದರೆ, ಅದು ಆಗಿರುವುದಿಲ್ಲ. ಹಾಗಾಗಿ, ಈಗ ನಾವು ನೀಟ್ ಪರೀಕ್ಷೆಯನ್ನೇ ಮುಂದುವರೆಸುತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ನೀಟ್ ತರಬೇತಿ ಕೊಡುವುದನ್ನು ಯಾವಾಗಿನಿಂದ ಪ್ರಾರಂಭ ಮಾಡುತ್ತಾರೆಂಬುದನ್ನು ತಿಳಿಸಲಿ.

**ಉಪ ಸಭಾಪತಿಯವರು:-** ನೀಟ್ ಪರೀಕ್ಷೆಯನ್ನು ನಾವು ಕ್ಲೋಸ್ ಮಾಡಿಲ್ಲವೆಂದು ಮಾನ್ಯ ಸಚಿವರು ಹೇಳಿದ ಮೇಲೆ, ಪುನಃ ಅದನ್ನು ಯಾವಾಗಿನಿಂದ ಪ್ರಾರಂಭ ಮಾಡುತ್ತೀರೆಂದು ಕೇಳಿದರೆ ಏನರ್ಥ?

**ಶ್ರೀ ಶರಣಪ್ರಕಾಶ್ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ನಾನು ಉನ್ನತ ಶಿಕ್ಷಣ ಇಲಾಖೆಯ ಸಚಿವರ ಜೊತೆ ಚರ್ಚೆ ಮಾಡಿ, ಅತೀ ಶೀಘ್ರವಾಗಿ ಅದನ್ನು ಪ್ರಾರಂಭ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಕಿಶೋರ್ ಕುಮಾರ್ ಪುತ್ತೂರುರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು 15 ದಿನಗಳ ಕಾಲಾವಕಾಶ ಕೋರಿರುತ್ತಾರೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ನಾನು ನನ್ನ ಮಾತನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಕಿಶೋರ್ ಕುಮಾರ್ ಪುತ್ತೂರುರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು 15 ದಿನಗಳ ಕಾಲಾವಕಾಶ ಕೇಳಿದ ನಂತರ, ನಾವು ಅವರಿಗೆ ಆದಷ್ಟು ಬೇಗ ಕೊಡಿ ಎಂದು ಹೇಳಬಹುದೇ ವಿನಃ, ಬೇರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕಿಶೋರ್ ಕುಮಾರ್ ಪುತ್ತೂರು:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನ ಮುಂದಿನ 15 ದಿನ ಎಲ್ಲಿ ನಡೆಯುತ್ತದೆ?

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಈ ಸದನ ಮುಗಿಯುವದರೊಳಗೆ ಉತ್ತರ ಕೊಡಿಸುವಂತಹ ಕೆಲಸ ಮಾಡಬೇಕು.

**ಶ್ರೀ ಕಿಶೋರ್ ಕುಮಾರ್ ಪುತ್ತೂರು:-** ಮಾನ್ಯ ಸಭಾಪತಿಯವರೇ, ಚಳಿಗಾಲದ ಅಧಿವೇಶನದಲ್ಲಿ...

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನನ್ನ ನಿವೇದನೆ ದಿನೇ ದಿನೇ ಅರಣ್ಯರೋಧನವಾಗುತ್ತಿದೆ. ಈ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದಂತಹ 7 ಜನ ಸಚಿವರ ಪಟ್ಟಿಯಲ್ಲಿ, ಕೇವಲ ಒಬ್ಬರು ಸಚಿವರು ಮಾತ್ರ ಈ ಸದನದಲ್ಲಿ ಹಾಜರಿದ್ದಾರೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರು:-** ಮಾನ್ಯ ಸಭಾಪತಿಯವರೇ, ಚಳಿಗಾಲದ ಅಧಿವೇಶನದಲ್ಲಿ ಜಲಜೀವನ್ ಮಿಷನ್ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗಿತ್ತು. ಆದರೆ, ಮಾತನಾಡುವುದಕ್ಕೆ ಆಗಲಿಲ್ಲ.

**ಉಪ ಸಭಾಪತಿಯವರು:-** ಆಯಿತು, ಪ್ರಶ್ನೋತ್ತರ ಅವಧಿ ಮುಕ್ತಾಯವಾದ ನಂತರ ಮಾನ್ಯ ಸಭಾನಾಯಕರ ಬಳಿ ಈ ಬಗ್ಗೆ ಕೇಳೋಣ. ಈಗ ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ, 8 ಜನ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕೆಂದು ಪಟ್ಟಿ ಮಾಡಿರುತ್ತೀರಿ. ಆದರೆ, ಅವರು ಈಗ ಸದನದಲ್ಲಿ ಹಾಜರಿರುವುದಿಲ್ಲ. ಈ ರೀತಿ ಮಾಡುವುದಾದರೆ, ಅವರ ಹೆಸರುಗಳನ್ನು ಪಟ್ಟಿಯಲ್ಲಿ ಏತಕ್ಕೆ ಹಾಕುತ್ತೀರಿ? ಈ ಬಗ್ಗೆ ಪ್ರತಿದಿನ ಪ್ರಶ್ನೆ ಕೇಳುತ್ತಿದ್ದರೂ ಸಹ, ನಿಯಮ ಪಾಲನೆಯಾಗುತ್ತಿರುವುದಿಲ್ಲ. ನಮ್ಮ ಸಚಿವರೇ ನಿಯಮ ಪಾಲನೆ ಮಾಡದೇ ಇದ್ದರೆ ಬೇರೆ ಯಾರು ಪಾಲನೆ ಮಾಡುತ್ತಾರೆ?

**ಉಪ ಸಭಾಪತಿಯವರು:-** ಆಯಿತು, ದಯಮಾಡಿ ಈಗ ತಾವು ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ತಾವು ಪೀಠದಿಂದ ಹೇಳಬೇಕು.

**ಉಪ ಸಭಾಪತಿಯವರು:-** ಮಾನ್ಯ ಕಿಶೋರ್ ಕುಮಾರ್ ಪುತ್ತೂರುರವರೇ, ಈ ಸದನ ಮುಗಿಯುವುದರೊಳಗೆ ತಮ್ಮ ಪ್ರಶ್ನೆಗೆ ಉತ್ತರ ನೀಡುವುದಕ್ಕೆ ತಿಳಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕಿಶೋರ್ ಕುಮಾರ್ ಪುತ್ತೂರು:–** ಮಾನ್ಯ ಸಭಾಪತಿಯವರೇ, ಇದು ಜ್ವಲಂತ ಸಮಸ್ಯೆಯಾಗಿದ್ದು, ಚುಕ್ಕೆ ಗುರುತಿನ ಪ್ರಶ್ನೆಯಾದರೂ ಸಹ, ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ.

**ಉಪ ಸಭಾಪತಿಯವರು:–** ಆಯಿತು, ದಯಮಾಡಿ ಈಗ ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ: 1334**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ನಾವು ಇತ್ತೀಚೆಗೆ ನಮ್ಮ ಹುಬ್ಬಳ್ಳಿ-ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ವಿದ್ಯುತ್ ವ್ಯತ್ಯಯಗಳನ್ನು ಕಾಣುತ್ತಿದ್ದೇವೆ. ಅದು ನಮ್ಮ ಕಛೇರಿ ಇರಬಹುದು, ಮನೆಗಳಲ್ಲಿ ಇರಬಹುದು ಅಥವಾ ಕೈಗಾರಿಕೆಗಳಲ್ಲಿ ಇರಬಹುದು ಅಲ್ಲಿ ವಿದ್ಯುತ್ ಹೋಗುವುದು ಹೇಗೆ ಗೊತ್ತಾಗುತ್ತದೆ ಎಂದರೆ, ಅಲ್ಲಿ ಜನರೇಟರ್‌ಗಳು ಆನ್ ಆಗುತ್ತವೆ. ಆಗ ವಿದ್ಯುತ್ ಹೋಗಿದೆ ಎಂಬುದು ನಮಗೆ ಗೊತ್ತಾಗುತ್ತದೆ. ಪ್ರತಿ ದಿನ ಸುಮಾರು 10-15 ಬಾರಿ ವಿದ್ಯುತ್ ಹೋಗುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರ ಭಾಗದಲ್ಲಿ ಜನರೇಟರ್ ಇದೆ. ಆದರೆ, ನಮ್ಮ ಕಥೆ ಏನು?

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರ ಭಾಗದಲ್ಲಿ ಜನರೇಟರ್ ಇಲ್ಲವೇ? ಅಥವಾ, ಅವರು ಇನ್ನು ದೊಡ್ಡದು ಏನೋ ತಂದಿರಬಹುದು ಅಥವಾ ಇಂಪೋರ್ಟೆಡ್ ಆಗಿರುವಂತಹ ಇನ್‌ವರ್ಟರ್ ತಂದಿರಬಹುದು. ಆದರೆ, ನಮ್ಮ ಊರಿನಲ್ಲಿ ಇನ್ನೂ ಜನರೇಟರ್ ಸಂಸ್ಕೃತಿಯೇ ಇದೆ.

**ಉಪ ಸಭಾಪತಿಯವರು:-** ಆಯಿತು, ತಾವು ಉಪ ಪ್ರಶ್ನೆ ಕೇಳಿ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಸಾಕಷ್ಟು ಟ್ರಾನ್ಸ್‌ಫಾರ್ಮರ್‌ಗಳು ಇವೆ ಎಂದು ಉತ್ತರ ನೀಡಿರುತ್ತಾರೆ. ಅಲ್ಲದೇ, "ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿಗೊಳಿಸಿ ತ್ವರಿತವಾಗಿ ಮರು ಬಳಕೆಗೆ ಅನುಕೂಲವಾಗುವಂತೆ, ಪರಿವರ್ತಕ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ" ಎಂದು ಉತ್ತರ ನೀಡಿರುತ್ತಾರೆ. ಜೊತೆಗೆ, ಹೊಸ ಹೊಸ ವಿದ್ಯುತ್ ಪರಿವರ್ತಕಗಳ ಅಳವಡಿಕೆಗೆ ಸರ್ಕಾರ ಕ್ರಮ ತೆಗೆದುಕೊಂಡಿದ್ದು, ಯಾವ ಯಾವ ಯೋಜನೆಯಡಿ ಕೊಟ್ಟಿದ್ದಾರೆಂಬ ಬಗ್ಗೆಯೂ ಸಹ ಉತ್ತರ ನೀಡಿದ್ದಾರೆ. ಆದರೆ, ಇವೆಲ್ಲವೂ ಆಗುತ್ತಿದೆಯೋ ಅಥವಾ ಹಾಗೆ ಸುಮ್ಮನೆ ಉತ್ತರ ನೀಡಿದ್ದಾರೋ ನನಗೆ ಗೊತ್ತಿಲ್ಲ. ಏಕೆಂದರೆ, ನಮ್ಮ ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ವಿದ್ಯುತ್ ವ್ಯತ್ಯಯ ಆಗುತ್ತಿದೆ. ಇದರ ಜೊತೆಗೆ, ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ, underground ಕೇಬಲ್ ವರ್ಕ್, ಅದು ಹೆಚ್.ಟಿ. ಇರಬಹುದು ಅಥವಾ ಎಲ್.ಟಿ. ಇರಬಹುದು, ಅವು ಆಗಬೇಕಾಗಿದ್ದು, ಇದುವರೆವಿಗೂ ಆಗಿರುವುದಿಲ್ಲ. ಕೆಲವು ಕಾಲೋನಿಗಳಲ್ಲಿ ಕಳೆದ ಮೂರು-ನಾಲ್ಕು ವರ್ಷಗಳ ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, underground ಕೇಬಲ್ ವರ್ಕ್‌ಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಕೈಗೊಂಡಿದ್ದೆವು. ಆದರೆ, ಇತ್ತೀಚೆಗೆ ಅಂದರೆ, ಕಳೆದ ಎರಡು ವರ್ಷಗಳಿಂದಲೂ ಸಹ ನಾನು ನೋಡುತ್ತಿದ್ದು, ಯಾವುದೇ ಹೊಸ ವಿದ್ಯುತ್ ಲೈನ್ underground ಕೇಬಲ್ ವರ್ಕ್‌ಗಳು ನಡೆಯುತ್ತಿರುವುದಿಲ್ಲ. ಅದು ಹೈ-ಟೆನ್ಷನ್ ಇರಬಹುದು ಅಥವಾ ಲೋ-ಟೆನ್ಷನ್ ಇರಬಹುದು. ಯಾವುದೂ ನಡೆಯುತ್ತಿರುವುದಿಲ್ಲ. ಹಾಗಾಗಿ, ಆ ವ್ಯವಸ್ಥೆಯನ್ನು ಆದಷ್ಟು ಬೇಗ

ಪೂರ್ಣಗೊಳಸಬೇಕು. ನಮ್ಮ ಹುಬ್ಬಳ್ಳಿ ನಗರ ಹೊರವಲಯದಲ್ಲಿ ಹೊಸದಾಗಿ ನಿರ್ಮಾಣಗೊಂಡಂತಹ ಬಡಾವಣೆಗಳಲ್ಲಿ ವಿದ್ಯುತ್ ಲೈನ್ ಅಂಕ್ ಲೈನ್ ಮಾಡಬೇಕಾಗಿದ್ದು, ಅದನ್ನು ಇದುವರೆವಿಗೂ ಮಾಡಿರುವುದಿಲ್ಲ. ಅದಕ್ಕೆ ಒಂದು ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇನೆ. ಇದರ ಜೊತೆಗೆ, ಸುಮಾರು 30-40 ವರ್ಷಗಳಿಂದ ಹುಬ್ಬಳ್ಳಿ-ಧಾರವಾಡ ಜಿಲ್ಲೆಯಲ್ಲಿ R.M.G. ಮತ್ತು Fitter-Filler Box ಗಳಿದ್ದು, ಅವುಗಳು ಬಹಳಷ್ಟು ಹಾಳಾಗಿರುತ್ತವೆ. ಈ ಪ್ರಶ್ನೆ ಕೇಳುವುದಕ್ಕೆ ಮೊದಲೇ ನಾನು ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡಿರುತ್ತೇನೆ. ಹಾಗಾಗಿ, ಇವುಗಳನ್ನು ದುರಸ್ತಿಗೊಳಿಸುವುದಕ್ಕೆ ಸರ್ಕಾರ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೋರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅತೀ ಮುಖ್ಯವಾಗಿ ಕೇಳಿರುವುದೇನೆಂದರೆ...

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಇಂಧನ ಸಚಿವರು ಆಗಲೇ ಸದನದಲ್ಲಿ ಹಾಜರಿದ್ದರು. ಆದರೆ, ನನ್ನ ಪ್ರಶ್ನೆಗೆ ಮಾನ್ಯ ಸಭಾನಾಯಕರಿಗೆ ಉತ್ತರ ನೀಡುವುದಕ್ಕೆ ಗೊತ್ತಾಗುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಪ್ರದೀಪ್ ಶೆಟ್ಟರ್‌ರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಭಾನಾಯಕರು ಈಗ ಉತ್ತರ ನೀಡುತ್ತಾರೆ. ಅವರು ನೀಡಿದ ಉತ್ತರ ತಮಗೆ ತೃಪ್ತಿಕರವಾಗದೇ ಇದ್ದರೆ, ಮಾನ್ಯ ಇಂಧನ ಸಚಿವರು ಸದನಕ್ಕೆ ಬಂದ ನಂತರ, ತಮಗೆ ಮತ್ತೊಮ್ಮೆ ಅವಕಾಶ ನೀಡೋಣ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಧಾರವಾಡ ಜಿಲ್ಲೆ ಮತ್ತು ಹುಬ್ಬಳ್ಳಿ ಕ್ಷೇತ್ರದಲ್ಲಿ ಇರತಕ್ಕಂತಹ ಪರಿವರ್ತಕಗಳ ಸಂಖ್ಯೆ ಎಷ್ಟು ಮತ್ತು ರಿಪೇರಿಯಲ್ಲಿರುವಂತಹ ಸಂಖ್ಯೆ ಎಷ್ಟು ಹಾಗೂ ಅವುಗಳನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ನಿಗದಿಪಡಿಸಿರುವ ಮೊತ್ತವೆಷ್ಟು ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ವಿವರವಾದಂತಹ ಉತ್ತರವನ್ನು ಕೊಟ್ಟಿದ್ದೇವೆ. ಇದರ ಜೊತೆಗೆ, ಕಳೆದ ಸರ್ಕಾರ ಹಾಗೂ ನಮ್ಮ ಸರ್ಕಾರದ ಅವಧಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಖರೀದಿಗಾಗಿ ಎಸ್ಕಾಂಗಳ ಎಸ್.ಆರ್. ದರ ಪಟ್ಟಿಯಲ್ಲಿ ನಿಗದಿಪಡಿಸಿರುವ ಮೊತ್ತದ ವಿವರಗಳನ್ನು ಕೇಳಿದ್ದು, ಅದಕ್ಕೆ ಸಹ ನಾವು ಉತ್ತರ ನೀಡಿರುತ್ತೇವೆ. ಇಡೀ ದೇಶದಲ್ಲಿಯೇ ಭಾರತ ಸರ್ಕಾರದಿಂದ ಅಪ್ರೂವ್ ಆಗಿರತಕ್ಕಂತಹ I.E.E.M.A. (Indian Electrical & Electronics Manufacturers' Association) ಎಂಬ ಒಂದು ಖಾಸಗಿ ಸಂಸ್ಥೆ ಇದೆ. ಪ್ರತಿ ತಿಂಗಳು ಮೆಟೀರಿಯಲ್ ರೇಟ್ ಹೆಚ್ಚು ಕಡಿಮೆ ಆದಾಗ, ಅದನ್ನು ಅವರು ಪ್ರಕಟಣೆ ಮಾಡುತ್ತಾರೆ. ಅದರ ಆಧಾರದ ಮೇರೆಗೆ, ಇಡೀ ರಾಷ್ಟ್ರದಲ್ಲಿ ಈ I.E.E.M.A. ಕೊಟ್ಟಿರುವಂತಹ ಕಂಡೀಷನ್‌ಗಳಿಗೆ ಒಳಪಡಿಸಿ, ರೇಟ್ ಏನು ಹೆಚ್ಚು ಕಡಿಮೆ ಆಗುತ್ತದೆ. ಅದನ್ನು ಸಹ ಉತ್ತರದಲ್ಲಿ ತಿಳಿಸಿರುತ್ತಾರೆ. ಇದನ್ನು ಬಿಟ್ಟು ಹುಬ್ಬಳ್ಳಿ ಕ್ಷೇತ್ರದ ಬಗ್ಗೆ ಹಾಗೂ underground ಕೇಬಲ್‌ಗಳ ಬಗ್ಗೆ ಮಾನ್ಯ ಸದಸ್ಯರು ಏನು ಮಾತನಾಡಿದ್ದಾರೆ, ಅವೆಲ್ಲವನ್ನೂ ಸಹ ಮಾನ್ಯ ಸಚಿವರ ಗಮನಕ್ಕೆ ತಂದು, ಏನೆಲ್ಲಾ ಸರಿಪಡಿಸಬೇಕು, ಅದನ್ನು

ಸರಿಪಡಿಸುವುದಕ್ಕೆ ಸಂಬಂಧಪಟ್ಟಿರುವಂತಹ ಅಧಿಕಾರಿಗಳು ಸಹ ಮಾನ್ಯ ಸದಸ್ಯರ ಬಳಿ ಇರುವ ಮಾಹಿತಿಯನ್ನು ಪಡೆದು, ಅದನ್ನು ಸರಿಪಡಿಸುವಂತಹ ಪ್ರಯತ್ನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1358**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2024-25ನೇ ಸಾಲಿನ ಕಾರ್ಯನಿರ್ವಹಣ ಪರಿಶೀಲನೆಗೆ ಅರ್ಜಿ ಹಾಕಿದ್ದೇವೆಂದು ತಿಳಿಸಲಾಗಿದೆ. ಈ ಪರಿಷ್ಕರಣೆಯಿಂದ ಸಾಮಾನ್ಯ ಗ್ರಾಹಕರ ಮೇಲೆ ಪ್ರತಿ ಯೂನಿಟ್‌ಗೆ ಸರಾಸರಿ ಎಷ್ಟು ಹೊರೆ ಬೀಳಬಹುದು ಎಂದು ಅಂದಾಜಿಸಲಾಗಿದೆ. ಎರಡನೆಯದಾಗಿ, ಬೆಸ್ಕಾಂ ರೂ.2,802.80 ಕೋಟಿ ನಷ್ಟದಿಂದ ನಡೆಸಿದ್ದೀರಿ. ಇದಕ್ಕೆ ಕಾರಣವೇನು? ಹಾಗೂ ಇದನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೇನೆ. ಕರ್ನಾಟಕ ವಿದ್ಯುಚ್ಛಕ್ತಿ ಆಯೋಗವು ತನ್ನ ಗ್ರಾಹಕರಿಂದ ರೂ.9.54 ಪೈಸೆ ಸರಾಸರಿ ದರವನ್ನು ಪ್ರತಿ ಯೂನಿಟ್‌ಗೆ ವಸೂಲು ಮಾಡಲು ತಿಳಿಸಿದ್ದರೆ, ಬೆಸ್ಕಾಂ ರೂ.8.59 ಪೈಸೆಯನ್ನು ಪಡೆದಿರುತ್ತಾರೆ. ಈ ವೆಚ್ಚವನ್ನು ಭರಿಸಲು ಗ್ರಾಹಕರ ಮೇಲೆ ಹೊರೆ ಹಾಕದೇ, ರೂ.1,678 ಕೋಟಿ ಹೊರೆ ಸರಿದೂಗಿಸಲು ಸರ್ಕಾರದಿಂದ ಯಾವುದಾದರೂ ಗ್ರಾಂಟ್ ನೀಡಿ, ಆಗಿರುವಂತಹ ನಷ್ಟವನ್ನು ತಪ್ಪಿಸಲು ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ ಎಂದು ಕೇಳುತ್ತೇನೆ. ಇದರ ಜೊತೆಗೆ, ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಎಲ್ಲಾ ಮಧ್ಯಮ ಕೈಗಾರಿಕೆಗಳಿಗೆ ರೂ.0.20 ಪೈಸೆ ಪ್ರತಿ ಯೂನಿಟ್‌ಗೆ ರಿಯಾಯ್ತಿ ನೀಡುತ್ತೇವೆಂದು ತಿಳಿಸಿರುತ್ತಾರೆ. ಇದನ್ನು ರಾಜ್ಯದ ಎಲ್ಲಾ ಮಧ್ಯಮ ಕೈಗಾರಿಕೆಗಳಿಗೆ ವಿಸ್ತರಿಸುವುದಕ್ಕೆ ಅವಕಾಶವಿದೆಯೇ?

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲನೆಯದಾಗಿ ಕೇಳಿರುವ ಪ್ರಶ್ನೆ ಏನೆಂದರೆ, ಮುಂದಿನ ಏಪ್ರಿಲ್ 1 ರಿಂದ ವಿದ್ಯುತ್ ದರ ಹೆಚ್ಚಿಸಲಿಕ್ಕೆ ಎಸ್ಕಾಂಗಳಿಂದ ಸರ್ಕಾರದ ಅನುಮೋದನೆ ಕೋರಲಾಗಿದೆಯೇ ಎಂದು ಕೇಳಿದ್ದಾರೆ. ಆ ರೀತಿಯಾದಂತಹ ಯಾವುದೇ ಪ್ರಸ್ತಾವನೆಗಳು ಯಾವುದೇ ಎಸ್ಕಾಂಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಹೋಗಿರುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

(ಮುಂದು)

(394) 16.03.2026 ವೈಎಲ್-ಆರ್‌ಎನ್ 12.20 (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು (ಮುಂದು):-**

ಏನೇ ಮಾಡಬೇಕೆಂದರೂ 120 ದಿನಗಳ ಮೊದಲೇ ಆರ್ಥಿಕ ವರ್ಷ ಪ್ರಾರಂಭಕ್ಕೂ ಮುನ್ನಾ ಬೇಡಿಕೆಯನ್ನಿಡಬೇಕಾಗಿದ್ದು, ಆ ರೀತಿ ಮಾಡಿಲ್ಲ. ಪ್ರತಿ ವರ್ಷ ಎಸ್ಟಿಮೇಟ್ ಮಾಡುವುದೇನಿದೆ, ಅದರಲ್ಲಿ ಎಷ್ಟು ಖರ್ಚಾಗುತ್ತದೆ, ಎಷ್ಟು reach ಆಗಿದ್ದೇವೆ ಎಂಬುದರಲ್ಲಿ 2024-25ನೇ ಸಾಲಿನಲ್ಲಿ ಸ್ವಲ್ಪ ಕೊರತೆಯಾಗಿದ್ದು, ಆ ಕೊರತೆಯನ್ನು ಯಾವ ರೀತಿ ನಿಭಾಯಿಸಬೇಕೆಂಬುದರ ಬಗ್ಗೆ ಕೆ.ಇ.ಆರ್.ಸಿ. (ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ) ರಲ್ಲಿ ಅಪ್ಲಿಕೇಶನ್ ಇವೆ. ಸದರಿಯವರು ಅದನ್ನು ಯಾವ ರೀತಿ ಸರಿಪಡಿಸಲು ನಿರ್ದೇಶನ ನೀಡುತ್ತಾರೆ, ಅದರ ಪ್ರಕಾರ ವಿದ್ಯುತ್ ಸರಬರಾಜು ಕಂಪನಿಗಳನ್ನು ನಿಭಾಯಿಸಬೇಕಾಗುತ್ತದೆ. ಒಟ್ಟು ರೂ.4,516 ಕೋಟಿ ಆದಾಯ

ಕೊರತೆ ಏನಿದೆ, ಅದು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಂದ ಆಗಿದ್ದು, ಬೆಸ್ಕಾಂ ವಿದ್ಯುತ್ ಕಂಪನಿಯಲ್ಲಿಯೇ 2,802.80 ಕೋಟಿಗಳಷ್ಟು ಅಂದರೆ, ಶೇಕಡ 50 ರಷ್ಟು ಬೆಸ್ಕಾಂನಲ್ಲಿಯೇ ಆದಾಯದ ಕೊರತೆ ಉಂಟಾಗಿದೆ. ಇದಕ್ಕೆ ಕಾರಣವೇನೆಂದರೆ, 2024-25ನೇ ಸಾಲಿನಲ್ಲಿ ಪ್ರತಿ ಯೂನಿಟ್‌ಗೆ ಸರಾಸರಿ ದರ ರೂ.9.54 ಪೈಸೆಯಾಗಿದ್ದು, ಗ್ರಾಹಕರಿಂದ ರಿಕವರಿ ಆಗಿರುವುದು ರೂ.8.59 ಪೈಸೆ ಮಾತ್ರ. ಇದರಿಂದಾಗಿ ಯೂನಿಟ್‌ಗೆ ಸುಮಾರು 1 ರೂಪಾಯಿ ನಷ್ಟವಾಗಿದ್ದು, ರೂ.1,678 ಕೋಟಿ ಕಡಿಮೆ ಆದಾಯ ಸಂಗ್ರಹವಾಗಿರುತ್ತದೆ. ಹಾಗೆಯೇ ಬೇರೆ ಬೇರೆ ಕಾರಣಗಳ ಬಗ್ಗೆ ಸಹ ಉತ್ತರದಲ್ಲಿ ತಿಳಿಸಿದ್ದು, ರೂ.27,895 ಕೋಟಿಗಳ ವಿದ್ಯುತ್ ಖರೀದಿ ಮಾಡಿದ್ದು, ಇದರಿಂದಾಗಿ ರೂ.706 ಕೋಟಿಗಳಷ್ಟು ವಿದ್ಯುತ್ ಖರೀದಿ ವೆಚ್ಚವು ಅಧಿಕವಾಗಿದೆ. ಯಾವ್ಯಾವ ಕಾರಣದಿಂದಾಗಿ ಆದಾಯ ನಷ್ಟವಾಗಿದೆ ಎಂಬುದನ್ನು ಉತ್ತರದಲ್ಲಿ ತಿಳಿಸಲಾಗಿದ್ದು, ಇಡೀ ರಾಜ್ಯದಲ್ಲಿ ಬೆಸ್ಕಾಂನಲ್ಲಿಯೇ ಶೇಕಡ 50 ರಷ್ಟು ಅಂದರೆ, ರೂ.2,802.80 ಕೋಟಿ ಆದಾಯ ನಷ್ಟವಾಗಲು ಕಾರಣವಾಗಿದೆ. ಕೆ.ಇ.ಆರ್.ಸಿ. (ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ) ರವರು ಈ ಕೊರತೆಯನ್ನು ಸರಿಪಡಿಸಲು 3 ಪೈಸೆ, 5 ಪೈಸೆ ಏರಿಕೆ ಮಾಡುತ್ತಾರೆಯೇ, ಬಿಡುತ್ತಾರೆಯೇ, ಯಾವ ರೀತಿ ಸರಿಪಡಿಸಲು ನಿರ್ದೇಶನ ನೀಡುತ್ತಾರೆ, ಅದರ ಆಧಾರದ ಮೇಲೆ ವಿದ್ಯುತ್ ಸರಬರಾಜು ಕಂಪನಿಗಳು ನಡೆದುಕೊಳ್ಳಬೇಕಾಗುತ್ತದೆ.

ಹಾಗೆಯೇ ಮಾನ್ಯ ಸದಸ್ಯರು ಸ್ಥಿರ ಶುಲ್ಕವನ್ನು (fixed charges) ರೂ.10 ರಿಂದ ರೂ.20 ಗಳಿಗೆ ಏರಿಕೆ ಮಾಡಬೇಕೆಂದು ಉದ್ದೇಶಿಸಲಾಗಿದೆಯೇ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಆ ರೀತಿ ಯಾವುದೇ ಪ್ರಸ್ತಾವನೆ ಇಲ್ಲವೆಂದು ಹೇಳಬಯಸುತ್ತೇನೆ. ಹಾಗೆಯೇ ಬೆಲೆ ಏರಿಕೆಯಿಂದ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ ಎನ್ನುವಂಥ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದು, ಗೃಹಜ್ಯೋತಿ ಯೋಜನೆ ಮೂಲಕ 1.65 ಕೋಟಿ ಗೃಹ ಬಳಕೆ ಸ್ಥಾವರಗಳ ವಿದ್ಯುತ್ ಬಿಲ್ಲನ್ನು ಸರ್ಕಾರದಿಂದ ರೂ.25,076 ಕೋಟಿ ಭರಿಸುತ್ತಿದ್ದು, ಸಾಮಾನ್ಯ ಜನರಿಗೆ ಯಾವುದೇ ಸಮಸ್ಯೆ ಉದ್ಭವಿಸುವುದಿಲ್ಲ. ಜೊತೆಗೆ ದಿನಾಂಕ: 25.09.2024 ರ ಸರ್ಕಾರಿ ಆದೇಶದನ್ವಯ ನೇಕಾರರ ವಿದ್ಯುತ್ ಸ್ಥಾವರಗಳಿಗೆ 10.01 ಹೆಚ್.ಪಿ. ಯಿಂದ 20 ಹೆಚ್.ಪಿ.ವರೆಗೆ ವಿದ್ಯುತ್ ಬಳಕೆಯ ಪ್ರತಿ ಯೂನಿಟ್‌ಗೆ 3.25 ಪೈಸೆ ರಿಯಾಯಿತಿ ಕೊಡಲಾಗುತ್ತಿದೆ. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಕೈಗಾರಿಕೆಗಳಿಗೆ 20 ಪೈಸೆ ಪ್ರತಿ ಯೂನಿಟ್‌ಗೆ ರಿಯಾಯಿತಿ ನೀಡಲಾಗಿದೆ. ಸೋಲಾರ್ ರೂಫ್‌ಟಾಪ್ ಅಳವಡಿಸುವ ಗೃಹ ಬಳಕೆ ಸ್ಥಾವರಗಳಿಗೆ ಪ್ರತಿ ಕಿಲೋ ವ್ಯಾಟ್‌ಗೆ ರೂ.25 ನಿಗದಿತ ಶುಲ್ಕದ ರಿಯಾಯಿತಿ ಕೊಟ್ಟಿರುವ ಬಗ್ಗೆ ಸಹ ಉತ್ತರದಲ್ಲಿ ತಿಳಿಸಲಾಗಿದೆ.

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ ರೂ.20 ಪೈಸೆ ರಿಯಾಯಿತಿ ಕೊಡುತ್ತೇವೆ ಎಂದು ತಿಳಿಸಲಾಗಿದ್ದು, ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯವರಿಗೆ ರಿಯಾಯಿತಿ ಕೊಡುತ್ತಾರೆಯೇ ಎಂದು ಕೇಳಬಯಸುತ್ತೇನೆ. ಹಾಗೆಯೇ ಆಯೋಗವು ರೂ.27,190 ಕೋಟಿಗಳ ವಿದ್ಯುತ್ ಖರೀದಿ ವೆಚ್ಚವನ್ನು ನಿಗದಿಪಡಿಸಿದ್ದು, ಅದಕ್ಕೆ ಕೆ.ಇ.ಆರ್. ಸಿ.(ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ)ರವರು ಒಪ್ಪಿಗೆ ನೀಡಿದ್ದು, ಬೆವಿಕಂ ರೂ.27,895 ಕೋಟಿಗಳ

ವಿದ್ಯುತ್ ಖರೀದಿ ಮಾಡಿರುತ್ತದೆ ಮತ್ತು ರೂ.706 ಕೋಟಿಗಳಷ್ಟು ಅವ್ಯವಹಾರವಾಗಿದೆ ಎನ್ನುವಂಥ ವರದಿ ನೀಡಿದ್ದಾರೆ. ಇದಕ್ಕೆ ಯಾವ ರೀತಿ ಕ್ರಮಕೈಗೊಳ್ಳಲಾಗುವುದು?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬೆವಿಕಂ ರೂ.27,895 ಕೋಟಿಗಳ ವಿದ್ಯುತ್ ಖರೀದಿ ಮಾಡಿದ್ದು, ಯಾವ ರೀತಿ ದರವನ್ನು ನಿಗದಿಪಡಿಸಲಾಗಿದೆ, ಅದರನ್ವಯ ಇಡೀ ದೇಶದಲ್ಲಿಯೇ ಯಾವ್ಯಾವ ರಾಜ್ಯಗಳು ವಿದ್ಯುತ್ ಖರೀದಿ ಮಾಡಿರುತ್ತಾರೆ, ಅದೇ ಆಧಾರದ ಮೇಲೆ ನಮ್ಮ ರಾಜ್ಯದವರು ವಿದ್ಯುತ್ ಖರೀದಿ ಮಾಡಿರುತ್ತಾರೆ. ಹಾಗೆಯೇ ರೂ.706 ಕೋಟಿ ನಷ್ಟವಾಗಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಏತಕ್ಕಾಗಿ ರೂ.2,802.80 ಕೋಟಿಗಳಷ್ಟು ಬೆಸ್ಕಾಂ ವಿದ್ಯುತ್ ಕಂಪನಿಯಲ್ಲಿ ವ್ಯಾತ್ಯಾಸವಾಗಿದೆ ಎಂಬುದರ ಸಲುವಾಗಿ ರೂ.1,678 ಕೋಟಿ ಕಡಿಮೆ ಆದಾಯ ಸಂಗ್ರಹವಾಗಿರುವ ಬಗ್ಗೆ ಮತ್ತು ರೂ.706 ಕೋಟಿಗಳಷ್ಟು ವಿದ್ಯುತ್ ಖರೀದಿ ನಷ್ಟವಾಗಿರುವ ಬಗ್ಗೆ ಮತ್ತು ಬೇರೆ ಬೇರೆ ಕಾರಣಗಳಿಂದಾಗಿ ನಷ್ಟವಾಗಿದೆ ಎಂಬುದನ್ನು ಉತ್ತರದಲ್ಲಿ ತಿಳಿಸಲಾಗಿದೆ. ಹಾಗೆಯೇ ಗ್ರಾಮ ಪಂಚಾಯಿತಿ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿರತಕ್ಕಂಥ ಎಲ್ಲಾ ಪಂಚಾಯಿತಿಗಳಿಗೂ ರಿಯಾಯಿತಿ ನೀಡಲಾಗುವುದು.

ಪ್ರಶ್ನೆ ಸಂಖ್ಯೆ 1343
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಖಾಯಂ ನಿರ್ದೇಶಕರ ನೇಮಕಾತಿ ವಿಚಾರವಾಗಿ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಈ ಉತ್ತರವನ್ನು ಮಾನ್ಯ ಸಚಿವರಿಗೆ ಯಾರು ಕೊಟ್ಟಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟನೆ ಬೇಕು. ಏಕೆಂದರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ ಖಾಯಂ ನಿರ್ದೇಶಕರನ್ನು 6 ತಿಂಗಳೊಳಗಾಗಿ ನೇಮಕಾತಿ ಮಾಡುವ ಬಗ್ಗೆ ನಿರ್ದಿಷ್ಟ ನಿಯಮ ಇರುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಅವರೇ ಸಚಿವರಾದ ಸಂದರ್ಭದಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2023ರ ಬೈಲಾ ಪ್ರಕಾರ Method of recruitment and minimum qualifications for appointment: ರನ್ವಯ ಸೆಕ್ಷನ್ (ಇ)ರಡಿಯಲ್ಲಿ: "Appointment in case of in-charge arrangement: An appointment on in charge basis shall be as per the minimum eligibility criteria prescribed for that post for a maximum period of six months only" ಎಂದು ತಿಳಿಸಿದೆ. ಈಗಾಗಲೇ ನೇಮಕ ಮಾಡಿರುವಂಥ ಪ್ರಭಾರ ನಿರ್ದೇಶಕರು ಏನಿದ್ದಾರೆ, ಈಗಾಗಲೇ ಎರಡು ವರ್ಷಗಳು ದಾಟಿವೆ. ಇದರ ಬಗ್ಗೆ ನಾಲ್ಕು ಬಾರಿ renewal ಮಾಡಿದ್ದು, ಇದರ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ತಮ್ಮ ಮೂಲಕ ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಈಗಾಗಲೇ ಸುಮಾರು 5 ರಿಂದ 6 ಮಂದಿ ಸೀನಿಯರ್ ಪ್ರೋಫೆಸರ್‌ಗಳಿದ್ದು, ಅವರೆಲ್ಲರಿಗೂ ಅನ್ಯಾಯವಾಗುತ್ತಿದೆ. ಅತೀ ಶೀಘ್ರದಲ್ಲಿಯೇ ಖಾಯಂ ನಿರ್ದೇಶಕರನ್ನು ನೇಮಕ ಮಾಡಿದರೆ, ಒಳ್ಳೆಯದು. Irrespective of party, opinion or whatever it is.. ನಮ್ಮ ಉದ್ದೇಶವೇನೆಂದರೆ, ಸಂಸ್ಥೆಯ ಅಭಿವೃದ್ಧಿಯಾಗಲೀ. ಇತ್ತೀಚೆಗೆ Finance Secretariat ಯಿಂದ ಅಧಿಕಾರಿಗಳು ತಪಾಸನೆಗೆ ಬಂದ ಸಂದರ್ಭದಲ್ಲಿ AB-ArK (Ayushman Bharat-Arogya Karnataka) ನಲ್ಲಿ ಸುಮಾರು 24 ಕೋಟಿ ಬಾಕಿ ಇದೆ. ಅದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೂ ಬಳಕೆ ಮಾಡಿಲ್ಲ, ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತೆರೆದಿಲ್ಲ ಹಾಗೂ ಸಂಸ್ಥೆಯ further development ಕೂಡ ಸದುಪಯೋಗ ಮಾಡಿಲ್ಲ ಷರಾ ವಿಧಿಸಲಾಗಿದೆ. ಹಾಗಾಗಿ, ನಾನು ಹೇಳುವುದೇನೆಂದರೆ, ಖಾಯಂ ನಿರ್ದೇಶಕರನ್ನು ನೇಮಕ ಮಾಡುವ ದೃಷ್ಟಿಯಿಂದ ನೋಡುವುದಾದರೆ, ಅವರಿಗೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಸಂಸ್ಥೆಯೂ ಸಹ ಇನ್ನೂ progressive ಆಗಿ ಬೆಳೆಯುವಂಥ ಅವಕಾಶ ದೊರೆತಂತಾಗುತ್ತದೆ.

**ಡಾ॥ ಶರಣಪ್ರಕಾಶ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಚಾರ ಸರಿ ಇದೆ. ಏಕೆಂದರೆ,' ಖಾಯಂ ನಿರ್ದೇಶಕರನ್ನು 6 ತಿಂಗಳೊಳಗಾಗಿ ನೇಮಕಾತಿ ಮಾಡುವ ಬಗ್ಗೆ ನಿರ್ದಿಷ್ಟ ನಿಯಮ

ಇರುವುದಿಲ್ಲ' ಎಂದು ಏನಿದೆ, ಅದು ತಪ್ಪಾಗಿದ್ದು, ಸರಿಪಡಿಸಲಾಗುವುದು. ಆದಾದ ನಂತರ ಸ್ಪಷ್ಟವಾಗಿ ಉತ್ತರದಲ್ಲಿ ತಿಳಿಸಲಾಗಿದ್ದು, ಖಾಯಂ ಆಗಿ ನಿರ್ದೇಶಕರನ್ನು ನೇಮಕ ಮಾಡಲು ಸಿ ಅಂಡ್ ಆರ್ ನಿಯಮವನ್ನು ತಿದ್ದುಪಡಿ ಮಾಡಲಾಗಿದೆ. ಏತಕ್ಕಾಗಿ ಖಾಯಂ ನಿರ್ದೇಶಕರ ನೇಮಕಾತಿಯಲ್ಲಿ ವಿಲಂಬವಾಗಿದೆ ಎಂದರೆ, ಸಿ ಅಂಡ್ ಆರ್ ರೂಲ್ಸ್ ಬೈಲಾದಲ್ಲಿ ಬದಲಾವಣೆ ಮಾಡಿ, common rules and common bye-laws ಜಾರಿಗೆ ತರಲಾಗುತ್ತಿದೆ. ಇದೆಲ್ಲವೂ ಈಗಾಗಲೇ ಪ್ರಕ್ರಿಯೆಯಲ್ಲಿದ್ದು, ಆರ್ಥಿಕ ಇಲಾಖೆಗೆ ತಾತ್ವಿಕ ಅಂದರೆ, in principle ಅನುಮೋದನೆ ನೀಡಲಾಗಿದೆ. ಎಲ್ಲಾ ಸಂಸ್ಥೆಗಳಗೂ ಸಂಬಂಧಿಸಿದಂತೆ ಕಡತದ ಮೂಲಕ ಅನುಮೋದನೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದು, ಆರ್ಥಿಕ ಇಲಾಖೆಯಲ್ಲಿರುವ ಕಡತ 15 ದಿವಸಗಳೊಳಗಾಗಿ ಕ್ಲಿಯರ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಕಡತ ಬಂದ ತಕ್ಷಣ ಖಾಯಂ ಆಗಿರುವ ನಿರ್ದೇಶಕರನ್ನು call for ಮಾಡಿ, 100% ನೇಮಕಾತಿ ಮಾಡಲಾಗುವುದು. ಅದರಲ್ಲಿ ಯಾವುದೇ ಪ್ರಶ್ನೆ ಇರುವುದಿಲ್ಲ. ಅಲ್ಲಿಯ ಮಾನ್ಯ ಶಾಸಕರು ಮತ್ತು in charge Minister ರವರು ಸದರಿ ವಿಚಾರವಾಗಿ ಪ್ರಸ್ತಾಪ ಮಾಡಿದ್ದು, ಈಗಾಗಲೇ ಸುಮಾರು ರೂ.24 ಕೋಟಿಗಳು ಬಾಕಿ ಇದ್ದು, ಸೂಪರ್ ಸ್ಪೆಷಲಿಟಿ ಆಸ್ಪತ್ರೆ ಬಹಳಷ್ಟು ದಿವಸಗಳಿಂದ ಅರ್ಧಕ್ಕೆ ಸ್ಥಗಿತಗೊಂಡಿದೆ; ಸದ್ಯಕ್ಕೆ ರೂ.18 ಕೋಟಿಗಳಿಗೆ ಟೆಂಡರ್ ಕರೆಯಲಾಗಿದ್ದು, ಆ ಕಾರ್ಯವನ್ನೂ ಪೂರ್ಣಗೊಳಿಸಲಾಗುವುದು. ಜೊತೆಗೆ equipment ಗೆ ಟೆಂಡರ್ ಕರೆಯಲಾಗಿದ್ದು, ಅದನ್ನು super specialty ಆಗಿ operationalize ಮಾಡುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಡೆಯುತ್ತಿದ್ದು, ಅದಕ್ಕಾಗಿ ಆ ಹಣವನ್ನು ಉಪಯೋಗಿಸಬಹುದು.

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ನಿರ್ದಿಷ್ಟ ಕಾಲಾವಧಿ ಬಗ್ಗೆ ತಿಳಿಸಬೇಕು.

**ಡಾ॥ ಶರಣ ಪ್ರಕಾಶ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಿ ಅಂಡ್ ಆರ್ ರೂಲ್ಸ್ ಬದಲಾವಣೆಯಾಗಿ ಬಂದ ಮೇಲೆ ತಕ್ಷಣವೇ ಸುಮಾರು 3 ತಿಂಗಳೊಳಗಾಗಿ call for ಮಾಡುತ್ತೇವೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 16ನೇ ಮಾರ್ಚ್ 2026, ಸಮೂಹ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 140 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರವನ್ನು ಲಗತ್ತಿಸಲಾಗಿದೆ)**

## 2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ವಿಷಯ:- ಕೊಪ್ಪಳ ಜಿಲ್ಲೆಯಲ್ಲಿ ಕಾರ್ಬನ್ ಮೋನಾಕ್ಸೈಡ್‌ನ್ನು ಬಿಡುಗಡೆ ಮಾಡುವ ಕಾರ್ಖಾನೆಗಳ ಮೇಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಶಿಸ್ತು ಕ್ರಮ ಜರುಗಿಸುವ ಕುರಿತು.**

*****

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊಪ್ಪಳ ಭಾಗದಲ್ಲಿ ಕಾರ್ಖಾನೆಗಳನ್ನು ತಂದು ಕ್ಯಾನ್ಸರ್ ಬರುವಂತಹ ವ್ಯವಸ್ಥೆ ಮಾಡಿ, ಕ್ಯಾನ್ಸರ್ ಆಸ್ಪತ್ರೆ ತೆರೆಯುವಂತಹದ್ದು ಬಹಳ ವಿಪರ್ಯಾಸ. ಕ್ಯಾನ್ಸರ್ ಬರದಹಾಗೆ ನೋಡಿಕೊಳ್ಳಬೇಕು ಎನ್ನುವ ಹಾಗಿದ್ದರೆ ಮೊದಲು ಇಂತಹ ಕಾರ್ಖಾನೆಗಳು ಬರದಂತೆ ನೋಡಿಕೊಳ್ಳಬೇಕಾಗಿತ್ತು ಎಂದು ಮಾಜಿ ಮುಖ್ಯಮಂತ್ರಿಯವರು, ಸಂಸದರಾದ ಬಸವರಾಜ ಬೊಮ್ಮಾಯಿಯವರು ಹೇಳಿದ್ದಾರೆ.

ಒಂದೇ ಕಡೆ 69ಕ್ಕೂ ಹೆಚ್ಚು ಕಾರ್ಖಾನೆಗಳು ಬಂದರೆ ಒಟ್ಟಾರೆ ಡೆನ್ಸಿಟಿ ಎಷ್ಟಾಗುತ್ತದೆ? ಸುತ್ತಮುತ್ತಲಿನ ಪರಿಸರದಲ್ಲಿ ವಾಯುಮಾಲಿನ್ಯ ಎಷ್ಟಾಗುತ್ತದೆ? ಎಂಬುದರ ಬಗ್ಗೆ ಪರಿಶೀಲನೆ ಮಾಡದೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಕ್ಲಿಯರೆನ್ಸ್ ಏಕೆ ಕೊಟ್ಟಿತು ಎಂದು ಪ್ರಶ್ನಿಸಿದರು.

ಕೆಲವು ಕಂಪನಿಯಲ್ಲಿ ಸಲ್ಫ್ಯೂರಿಕ್ ಆಸಿಡ್ (Sulphuric Acid) ಬಳಸಿ Single Super Phosphate (SSP) ಗೊಬ್ಬರ ತಯಾರಿಸಲಾಗುತ್ತದೆ. ಗೊಬ್ಬರ ತಯಾರಿಕೆ ಪ್ರಕ್ರಿಯೆಯ ವೇಳೆ ಅತಿಯಾದ ದುರ್ವಾಸನೆ (ರಾಸಾಯನಿಕ ವಾಸನೆ) ಹೊರಬರುತ್ತಿದೆ. ಇದರಿಂದ ಸುತ್ತಮುತ್ತಲಿನ ಗ್ರಾಮಗಳಾದ ಕುಣಿಕೇರಿ, ಕುಣಿಕೇರಿ ತಾಂಡಾ ಮತ್ತು ಇತರೆ ಗ್ರಾಮಗಳ ನಿವಾಸಿಗಳಿಗೆ ತೀವ್ರ ತೊಂದರೆ ಉಂಟಾಗುತ್ತಿದೆ.

ಕಂಪನಿಯಿಂದ ಹೊರಬರುವ ರಾಸಾಯನಿಕ ಕಣಗಳು ಸುತ್ತಮುತ್ತಲಿನ ಕೃಷಿ ಜಮೀನಿನ ಬೆಳೆಗಳ ಮೇಲೆ ಬೀಳುತ್ತಿವೆ. ಇದರಿಂದ ಬೆಳೆಗಳು ಸುಟ್ಟು ಹಾನಿಗೊಳಗಾಗುತ್ತಿದೆ ಎಂದು ರೈತರು ದೂರಿದ್ದಾರೆ. ಇದರ ಪರಿಣಾಮವಾಗಿ ಸ್ಥಳೀಯ ರೈತರಿಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ.

'ಭದ್ರಶ್ರೀ ಸ್ಟೀಲ್ ಅಂಡ್ ಪವರ್ ಲಿಮಿಟೆಡ್' ಎಂಬ ಸ್ಪಾಂಜ್ ಐರನ್ ಉತ್ಪಾದನಾ ಕಂಪನಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಕ್ರಿಯೆ ನಡೆಯುತ್ತಿದೆ. ಕಂಪನಿಯ ಉತ್ಪಾದನಾ ಸಾಮರ್ಥ್ಯವನ್ನು 1,45,000 TPA (ಟನ್ ಪ್ರತಿ ವರ್ಷ)ಕ್ಕೆ ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಉನ್ನತೀಕರಣದ ಪ್ರಕ್ರಿಯೆಗೆ ಸ್ಥಳೀಯ ನಿವಾಸಿಗಳು ಹಾಗೂ ರೈತರಿಂದ ವಿರೋಧ ವ್ಯಕ್ತವಾಗುತ್ತಿದೆ.

ಸ್ಥಳೀಯರ ವಿರೋಧದ ನಡುವೆಯೂ ಕಂಪನಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಮುಂದಾಗಿರುವುದು ಸ್ಥಳೀಯರಲ್ಲಿ ಆತಂಕ ಉಂಟುಮಾಡಿದೆ.

ಈ ಕಂಪನಿಯು ಕೊಪ್ಪಳ ನಗರದಿಂದ ಸುಮಾರು 2-3 ಕಿಲೋ ಮೀಟರ್ ದೂರದಲ್ಲಿದೆ. ಹೊರಬರುವ ರಾಸಾಯನಿಕಗಳಿಂದ ಜನರ ಆರೋಗ್ಯದ ಮೇಲೂ ಹಾನಿಕಾರಕ ಪರಿಣಾಮ ಬೀರಿದೆ.

ಇದರಿಂದ ಅಲ್ಲಿ ವಾಸಿಸುತ್ತಿರುವ ಗ್ರಾಮಗಳಲ್ಲಿನ ಜನರಿಗೆ ಹೃದಯ ಸಂಬಂಧಿ ಕಾಯಿಲೆಗಳು, ಕಿಡ್ನಿ ಫೇಲ್ಯೂರ್ ಹಾಗೂ ಕ್ಯಾನ್ಸರ್ ನಂತಹ ಮಾರಕ ಕಾಯಿಲೆಗಳಿಗೆ ತುತ್ತಾಗಿದ್ದಾರೆ.

ಕಾರ್ಬನ್ ಮೋನಾಕ್ಸೈಡನ್ನು ಹೊರಗಡೆ ಚೆಲ್ಲುವಂತಹ ಕಾರ್ಖಾನೆಗಳನ್ನು ಎರಡು ಸಾವಿರ ಎಕರೆ ಪ್ರದೇಶದಲ್ಲಿ ಒಂದು ಕಡೆ ಮಾಡಿದ್ದರೆ ಹಾಗೂ ಯಾವ ಕಾರ್ಖಾನೆಗಳು `ಲಿಮಿಟ್ ಮೀರಿ ಕಾರ್ಬನ್ ಮೋನಾಕ್ರೈಡನ್ನು ಹೊರ ಸೂಸುತ್ತವೋ ಅವುಗಳನ್ನು ಬಂದ್ ಮಾಡಿದಾಗ ಪರಿಹಾರ ಸಿಗಲಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈ ನಿಟ್ಟಿನಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

(395) 16.03.2026/12.30/ ಎಸ್‌ಕೆ.ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಆ) ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದವರಿಗೆ ಮಾತ್ರ ಪ್ಯಾರಾಮೆಡಿಕಲ್‌ಗೆ ಪ್ರವೇಶ ಎಂಬ ಕೇಂದ್ರದ ಹೊಸ ನಿಯಮದಿಂದ ವೃತ್ತಿಪರ ಶಿಕ್ಷಣ ಪ್ರವೇಶಾತಿಯಲ್ಲಿ ಹೊಸ ಬಿಕ್ಕಟ್ಟು ಉಂಟಾಗಿರುವ ಕುರಿತು.**

- - - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯದಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಕಮಿಷನ್ ಫಾರ್ ಅಲೈಡ್ ಹೆಲ್ತ್‌ಕೇರ್ ಪ್ರೊಫೆಷನ್ ಹೊರಡಿಸಿರುವ ನೂತನ ಸುತ್ತೋಲೆಯು ಪ್ಯಾರಾ ಮೆಡಿಕಲ್ ಕೋರ್ಸ್ ಸೇರಬಯಸುವ ವಿದ್ಯಾರ್ಥಿಗಳು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಇವರೆಗೂ ಎಸ್.ಎಸ್.ಎಲ್.ಸಿ., ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ ಇನ್ನೂ ಮುಂದೆ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ. ಕೇಂದ್ರ ಆಯೋಗವು ಜನವರಿ 9ರಂದು ಯು.ಜಿ.ಸಿ.ಗೆ ಪತ್ರ ಬರೆದು, ದೇಶಾದ್ಯಂತ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿಗೆ ಇನ್ನು ಮುಂದೆ ಪ್ರವೇಶ ಪಡೆಯಲು ಪಿ.ಯು.ಸಿ. ವಿಜ್ಞಾನ ಪೂರೈಸಿರುವುದನ್ನು ಕಡ್ಡಾಯ ಮಾಡಲಾಗಿದೆ. ಈ ನೂತನ ನಿಯಮವನ್ನು 2026-27ನೇ ಸಾಲಿನಿಂದ ಜಾರಿಗೆ ತರಲು ಎಲ್ಲ ರಾಜ್ಯಗಳಿಗೆ ಸೂಚನೆ ನೀಡಿರುವುದು ವಿದ್ಯಾರ್ಥಿಗಳ ಪಾಲಿಗೆ ದುರದುಷ್ಟಕರ ಸಂಗತಿಯಾಗಿದೆ.

ರಾಜ್ಯದಲ್ಲಿ ಪ್ರಸ್ತುತ 32 ಸರ್ಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ ಒಟ್ಟು 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿದ್ದು, ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ. ಸಾಮಾನ್ಯವಾಗಿ ಗ್ರಾಮೀಣ, ಬಡ ಕುಟುಂಬದ ವಿದ್ಯಾರ್ಥಿಗಳು ಶೀಘ್ರ ಉದ್ಯೋಗ ಪಡೆಯುವ ಹಂಬಲದಿಂದ ಎಸ್.ಎಸ್.ಎಲ್.ಸಿ., ನಂತರ ಈ ಕೋರ್ಸ್ ಆಯ್ಕೆ ಮಾಡಿಕೊಂಡು, ಪ್ರತಿ ವರ್ಷ ರಾಜ್ಯದಲ್ಲಿ 15,000 ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದರು. ಈಗ ಪಿ.ಯು.ಸಿ. ವಿಜ್ಞಾನ ಕಡ್ಡಾಯದಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಆದುದರಿಂದ ಕೇಂದ್ರ ಸರ್ಕಾರದ ಈ ದಿಢೀರ್ ನಿರ್ಧಾರವನ್ನು ಕೈಬಿಡುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿರುವ ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಸದನದ ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಮಾನ ವೈದ್ಯಕೀಯ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ॥ ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರ ನಿಜವಾಗಿಯೂ ಕಳಕಳಯಾಗಿರುವ ವಿಷಯವಾಗಿದೆ. ನಮ್ಮ ರಾಜ್ಯದಲ್ಲಿ ಈ ಹಿಂದಿನಿಂದಲೂ ಸುಮಾರು 640 ಕಾಲೇಜುಗಳಲ್ಲಿ ಪ್ಯಾರಾಮೆಡಿಕಲ್ ಕೋರ್ಸ್‌ಗಳನ್ನು ನಡೆಸುತ್ತಿದ್ದೇವೆ. ಇದರಿಂದ ಗ್ರಾಮೀಣ ಭಾಗದ ಸಾವಿರಾರು ಬಡ ಮಕ್ಕಳು ವಿಶೇಷವಾಗಿ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಹೋಗುವಂತಹದ್ದು ನಿಜವಾಗಿರುವ ವಿಷಯವಾಗಿದೆ. ಇತ್ತೀಚಿನ ದಿನಗಳಲ್ಲಿ National Commission for Allied and Health care Profession is a regulatory body for all the allied sciences. It is a recent Act of Parliament. ಅವರು ಅದರ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿದ್ದಾರೆ To improve the quality of the allied sciences, the graduates who have coming out ಅವರು ಕಡ್ಡಾಯವಾಗಿ ಪಿ.ಯು.ಸಿ., ಮಾಡಿರಬೇಕೆಂಬ ನಿಯಮವನ್ನು ಇವತ್ತು ಜಾರಿಗೆ ತಂದಿದ್ದಾರೆ. ಅದರಿಂದ ಖಂಡಿತವಾಗಿಯೂ ಪ್ಯಾರಾಮೆಡಿಕಲ್ ಕೋರ್ಸ್‌ಗಳ ಕಾಲೇಜುಗಳು ಮುಚ್ಚುವಂತಹ ಪರಿಸ್ಥಿತಿ ಕೂಡ ಇದೆ. ಅದನ್ನು ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಅದೊಂದೇ ಇಲ್ಲ, ಅವರು ಇನ್ನೂ ಮುಂದೆ ಹೆಜ್ಜೆ ಹೋಗಿ ಏನು ಹೇಳಿದ್ದಾರೆಂದರೆ, in future all the diploma courses should be closed and they should be upgraded to degree courses ಎಂದು ಕೂಡ ನಿರ್ದೇಶನವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರ ಕಳಕಳಿಯ ಬಗ್ಗೆ ನನಗೆ ಅರ್ಥವಾಗುತ್ತಿದೆ. ಇದರಿಂದ ಪ್ಯಾರಾಮೆಡಿಕಲ್ ಕಾಲೇಜುಗಳಿಗೆ ಹೋಗುವಂತಹ ಬಹಳಷ್ಟು ಗ್ರಾಮೀಣ ಬಡ ಮಕ್ಕಳಿಗೆ ಒಂದು ವೇಳೆ ಎಸ್.ಎಸ್.ಎಲ್.ಸಿ., ಯಿಂದ ಪಿ.ಯು.ಸಿ. ಮಾಡಿದರೆ, ಈ ಕೋರ್ಸುಗಳಿಗೆ ಬರುವ ಸಾಧ್ಯತೆ ಕಡಿಮೆಯಾಗುತ್ತದೆ. ಈ ಪ್ಯಾರಾ ಮೆಡಿಕಲ್ ಕೋರ್ಸುಗಳು ದೊಡ್ಡ ಸಂಖ್ಯೆಯಲ್ಲಿರುವಂತಹ ಕಾಲೇಜುಗಳನ್ನು ನೋಡಿದರೆ, ನಾವು ಏಕಾಏಕಿ ಬಂದ್ ಮಾಡಿ, upgrade ಮಾಡುವುದು ಕೂಡ ಅವರಿಗೆ ಕಷ್ಟವಾಗಬಹುದು. ಹಾಗಾಗಿ, Central Commission ಏನಿದೆ, regulatory body ಆದಂತಹ the National Commission for Allied and Health care Professions ನ ಅಧ್ಯಕ್ಷರ ಹತ್ತಿರ ಈ ರೀತಿ ಮಾಡಿದರೆ ಮಕ್ಕಳಿಗೆ ತೊಂದರೆಯಾಗುತ್ತದೆ. ಕಾಲೇಜುಗಳನ್ನು ತಕ್ಷಣಕ್ಕೆ ಕಾಲೇಜುಗಳನ್ನು ಮುಚ್ಚುವುದರಿಂದ, ಅವರಿಗೆ sustainability ಕೂಡ ಸಮಸ್ಯೆಯಾಗುತ್ತದೆ ಎಂದು ನಾವು ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಮಾತನಾಡಿದ್ದೇನೆ. ಅವರು ಅದರ ಬಗ್ಗೆ ಒಪ್ಪಿಕೊಂಡಿಲ್ಲ. ಪಿ.ಯು.ಸಿ. ಬೇಡ, ಎಸ್.ಎಸ್.ಎಲ್.ಸಿ. ಮಾಡಿ ಎಂದು ನಾವು ಹೇಳಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡೋಣ. ಇದೊಂದೇ ರಾಜ್ಯಕ್ಕೆ ಅಲ್ಲ. ಇಡೀ ದೇಶಕ್ಕೆ ಮಾಡಿರುವಂತಹ ನಿಯಮವಾಗಿದೆ. ಹಾಗಾಗಿ ಇದನ್ನು ಸಡಿಲಿಕೆ ಮಾಡುವುದಕ್ಕೆ ಹಲವು ರಾಜ್ಯಗಳ ಅಭಿಪ್ರಾಯವನ್ನು ತೆಗೆದುಕೊಂಡು ಒಂದು ಸಭೆಯನ್ನು ಮಾಡೋಣ ಎಂದು ಹೇಳಿದ್ದಾರೆ. ನಾನು ಅವರ ಜೊತೆ ಚರ್ಚೆ ಮಾಡಿ, ಇದನ್ನು ಸಡಿಲೀಕರಣ ಮಾಡುವುದಕ್ಕೆ ಪ್ರಯತ್ನ

ಮಾಡಬಹುದು. ಏಕೆಂದರೆ, ಇದು ನಮ್ಮ ಕೈಯಲ್ಲಿ ಇಲ್ಲ. Because, regulatory body is Government of India.

**ಇ) ವಿಷಯ:- ಬೆಳಗಾವಿ ಜಿಲ್ಲೆಯಲ್ಲಿನ ಸಕ್ಕರೆ ಕಾರ್ಖಾನೆಗಳಿಂದ ಸುಮಾರು 1,554 ಕೋಟಿ ರೂಪಾಯಿಗಳಷ್ಟು ಕಬ್ಬು ಬಿಲ್ ಬಾಕಿಯಿರುವ ಕುರಿತು.**

\- - - - - -

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಉತ್ತರ ಕರ್ನಾಟಕದ ಕೃಷಿ ಆರ್ಥಿಕತೆಯ ಪ್ರಮುಖ ಆಧಾರವಾಗಿರುವ ಕಬ್ಬು ಬೆಳೆ ಮತ್ತೊಮ್ಮೆ ಚರ್ಚೆಯ ಕೇಂದ್ರವಾಗಿದೆ. ಕಬ್ಬಿನ ಹಣ ಇನ್ನೂ ಸಂಪೂರ್ಣವಾಗಿ ಪಾವತಿಯಾಗದೇ ಉಳಿದಿರುವುದು ಇದೀಗ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

2025-26ರ ಸಕ್ಕರೆ ಹಂಗಾಮಿನ ಬಳಿಕವೂ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 1,554 ಕೋಟಿ ರೂಪಾಯಿಗಳು ಕಬ್ಬಿನ ಬಾಕಿ ಬಿಲ್ ಉಳಿದಿರುವುದು ಅಂಕಿ-ಅಂಶಗಳಿಂದ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ರೈತರು ಬೆಳಗಾವಿಯ ನಿಜಲಿಂಗಪ್ಪ ಸಕ್ಕರೆ ಕಾರ್ಖಾನೆ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಿ ತಮ್ಮ ಆಕ್ರೋಶ ಹೊರಹಾಕಿದರು.

ಬಾಕಿ ಹಣ ತಕ್ಷಣ ಪಾವತಿಯಾಗದಿದ್ದರೆ ರಾಜ್ಯವ್ಯಾಪಿ ಹೋರಾಟ ಆರಂಭಿಸುವ ಎಚ್ಚರಿಕೆಯನ್ನು ರೈತ ಮುಖಂಡರು ನೀಡಿದ್ದಾರೆ. ಕಬ್ಬು ನುರಿದು, ಸಕ್ಕರೆ ಉತ್ಪಾದನೆ ಹೆಚ್ಚಾದರೂ, ಆ ಕಬ್ಬಿನ ಮೂಲವಾದ ರೈತನಿಗೆ ಹಣ ಸಮಯಕ್ಕೆ ಸಿಗದಿದ್ದರೆ, ಕೃಷಿ ವ್ಯವಸ್ಥೆಯ ಸಮತೋಲನವೇ ಕುಸಿಯುವ ಸಾಧ್ಯತೆ ಇದೆ. ಆದ್ದರಿಂದ ಕಬ್ಬಿನ ಬಾಕಿ ಬಿಲ್ ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಹಿಡಿಯುವುದು ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳ ಮುಂದೆ ಇರುವ ಅತ್ಯಂತ ತುರ್ತು ಜವಾಬ್ದಾರಿಯಾಗಿದೆ. ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಈ) ವಿಷಯ:- ನಿಲಜಿ-ಸಾಂಬ್ರಾ ರಸ್ತೆ ಅಗಲೀಕರಣಕ್ಕೆ ಗ್ರಹಣ ಹಿಡಿದಿದ್ದು, ಅನುದಾನವಿದ್ದರೂ ಆಮೆಗತಿಯಲ್ಲಿ ನಡೆದಿರುವ ಕಾಮಗಾರಿಯ ಕುರಿತು.**

- - - - -

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ: 07.03.2026 ರಂದು "ನಿಲಜಿ-ಸಾಂಬ್ರಾ ರಸ್ತೆ ಅಗಲೀಕರಣಕ್ಕೆ ಗ್ರಹಣ: ಅನುದಾನವಿದ್ದರೂ ಆಮೆಗತಿಯಲ್ಲಿ ಕಾಮಗಾರಿ" ಎಂದು ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. ಬೆಳಗಾವಿಯ ಪ್ರಮುಖ ಸಂಪರ್ಕ ರಸ್ತೆಗಳಲ್ಲಿ ಒಂದಾದ ನಿಲಜಿ-ಸಾಂಬ್ರಾ ರಸ್ತೆ ಅಗಲೀಕರಣ ಯೋಜನೆಗೆ ಅನುದಾನ ಬಿಡುಗಡೆಯಾಗಿ ಎರಡು ವರ್ಷಗಳೇ ಕಳೆದಿದ್ದರೂ, ಕಾಮಗಾರಿ ಮಾತ್ರ ಇನ್ನೂ ಹಳ್ಳ ಹಿಡಿದಿದೆ. ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ವಿಳಂಬ ನೀತಿಯಿಂದಾಗಿ ಐದು ಕಿ.ಮೀ. ಉದ್ದದ ಈ ರಸ್ತೆ ಅದ್ವಾನವಾಗಿದ್ದು, ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತಾಗಿದೆ.

ಬೆಳಗಾವಿಯಿಂದ ನಿಲಜಿವರೆಗಿನ ದ್ವಿಪಥ ರಸ್ತೆ ಕಾಮಗಾರಿ ಪೂರ್ಣಗೊಂಡು ಎರಡು ವರ್ಷಗಳಾಗಿವೆ. ಆದರೆ, ಅಲ್ಲಿಂದ ಮುಂದೆ ಸಾಂಬ್ರಾ ವಿಮಾನ ನಿಲ್ದಾಣದವರೆಗಿನ ಸುಮಾರು 5 ಕಿ.ಮೀ. ರಸ್ತೆಯ ಅಗಲೀಕರಣ ಕಾಮಗಾರಿ ಮಾತ್ರ ಹಳ್ಳ ಹಿಡಿದಿದೆ. ಈ ರಸ್ತೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಮತ್ತು ಸಮೀಕ್ಷೆ ಈಗಾಗಲೇ ಮುಗಿದಿದೆ. ಸಂತ್ರಸ್ತ ರೈತರಿಗೆ ಪರಿಹಾರ ನೀಡಲು ಸುಮಾರು 7 ಕೋಟಿ ರೂಪಾಯಿ ಅನುದಾನವೂ ಮಂಜೂರಾಗಿದೆ. ಆದರೆ, ಈವರೆಗೆ ರಸ್ತೆಗೆ ಒಂದು ಗುದ್ದಲಿ ಪೂಜೆಯೂ ನಡೆದಿಲ್ಲ ಎಂಬುದು ಸ್ಥಳೀಯರ ಆರೋಪ. ಈ ಹಿಂದೆ 'ಕೆ-ಶಿಪ್' ಯೋಜನೆಯಡಿ ಇದೇ ಮಾರ್ಗದಲ್ಲಿ ಬಸ್ ನಿಲ್ದಾಣಗಳು, ಫುಟ್‌ಪಾತ್‌ಗಳು ಹಾಗೂ ಚರಂಡಿಗಳನ್ನು ನಿರ್ಮಿಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡಲಾಗಿತ್ತು. ಈಗ ರಸ್ತೆ ಅಗಲೀಕರಣಕ್ಕಾಗಿ ಈ ಹಳೆಯ ನಿರ್ಮಾಣಗಳನ್ನು ತೆರವುಗೊಳಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಸರಿಯಾದ ದೂರದೃಷ್ಟಿ ಇಲ್ಲದ ಯೋಜನೆಗಳಿಂದಾಗಿ ಸರ್ಕಾರದ ಹಣ ಪೋಲಾಗುತ್ತಿದೆ ಎಂಬ ಟೀಕೆಗಳು ವ್ಯಕ್ತವಾಗುತ್ತಿವೆ. ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸದರಿ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಓಡಾಡುತ್ತಿದ್ದು, ಅತೀ ಶೀಘ್ರವಾಗಿ ಈ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಮತ್ತು ಕೈಗೊಳ್ಳುವ ಯೋಜನೆಗಳಲ್ಲಿ ಸರ್ಕಾರ/ಇಲಾಖೆಯ ಹಣ ಪೋಲಾಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

(396)16.03.2026 12.40 TCH-VK (ಉಪ ಸಭಾಪತಿಯವರ ಉಪಸ್ಥಿತಿ)

**ಉ) ವಿಷಯ:- ಅಸ್ತಿತ್ವದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಒನ್‌ಟೈಮ್ ವಿನಾಯಿತಿ ನೀಡುವುದರ ಜೊತೆಗೆ ಎಂ.ಎಸ್.ಎಂ.ಇ ಕೈಗಾರಿಕೆಗಳಿಗೆ ಓ.ಸಿ.ಯಿಂದ ವಿನಾಯಿತಿ ನೀಡುವ ಕುರಿತು.**

------

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಮಾಣ ಹಂತದಲ್ಲಿರುವ ಅಥವಾ ಪೂರ್ಣಗೊಂಡಿರುವ ಕಟ್ಟಡಗಳಿಗೆ ವಾಸಯೋಗ್ಯ ಪ್ರಮಾಣ ಪತ್ರದ ಸ್ಪಷ್ಟತೆ ನೀಡಬೇಕೆಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘವು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಮಾಡಿರುವ ಬಗ್ಗೆ ದಿನಾಂಕ 12.03.2026ರಂದು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ವರದಿಯಾಗಿದೆ. ಕಷ್ಟಪಟ್ಟು ಮನೆ ಕಟ್ಟಿಕೊಳ್ಳುವುದಕ್ಕೆ ಮುಂದಾಗಿರುವ ಜನರಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ನಾನಾ ರೀತಿಯ ಷರತ್ತು, ನಿಯಮಗಳನ್ನು ಹೇರುವ ಮೂಲಕ ಸಾರ್ವಜನಿಕರ ಜೀವ ಹಿಂಡುವ ಕೆಲಸ ಮಾಡುತ್ತಿದೆ. ಸರ್ಕಾರ ಓ.ಸಿ/ಸಿ.ಸಿ ನೀಡುವ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ನೀಡದೇ ಜನರನ್ನು ಸುಲಿಗೆ ಮಾಡುತ್ತಿದೆ. ಸುಪ್ರೀಂ ಕೋರ್ಟ್‌ನ ಆದೇಶದನ್ವಯ 2025ರ ಏಪ್ರಿಲ್‌ನಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಹಾಗೂ ನಿರ್ಮಾಣ ಹಂತದಲ್ಲಿರುವ ಹಾಗೂ ಪೂರ್ಣಗೊಂಡಿರುವ ಕಟ್ಟಡಗಳಿಗೆ ಓ.ಸಿ ಅಥವಾ ವಾಸಯೋಗ್ಯ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರ ಕೂಡಲೇ ಮಾರ್ಗಸೂಚಿಗಳನ್ನು ನೀಡಬೇಕು ಹಾಗೂ ಅಸ್ತಿತ್ವದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಒನ್‌ಟೈಮ್ ವಿನಾಯಿತಿ ನೀಡುವುದರ ಜೊತೆಗೆ ಎಂ.ಎಸ್.ಎಂ.ಇ ಕೈಗಾರಿಕೆಗಳಿಗೆ ಓ.ಸಿ.ಯಿಂದ ವಿನಾಯಿತಿ ನೀಡಬೇಕೆಂದು ಸರ್ಕಾರಕ್ಕೆ ಶೂನ್ಯವೇಳೆಯಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಊ) ವಿಷಯ:- 2022ರಲ್ಲಿ ನಡೆದಿರುವ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (ಜಿಪಿಎಸ್‌ಟಿ) ನೇಮಕಾತಿಯಲ್ಲಿ ಕೆಲವು ವಿವಾಹಿತ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿ, ಕರ್ನಾಟಕ ಆಡಳಿತ ನ್ಯಾಯಮಂಡಳಿ ನೀಡಿರುವ ಆದೇಶದಂತೆ ಕ್ರಮ ಕೈಗೊಳ್ಳುವ ಕುರಿತು.**

\- - - - - -

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಡಿಯಲ್ಲಿ ದಿನಾಂಕ 21.03.2022ರ ಅಧಿಸೂಚನೆಯನ್ವಯ ನಡೆದಿರುವ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (ಜಿ.ಪಿ.ಎಸ್.ಟಿ) ನೇಮಕಾತಿ ಪ್ರಕ್ರಿಯೆಯಲ್ಲಿ ಕೆಲವು ವಿವಾಹಿತ ಮಹಿಳಾ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯಕ್ಕಾಗಿ ತಮ್ಮ ತಂದೆಯ ಆದಾಯದ ಆಧಾರದ ಮೇಲೆ form-F ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದರು. ಆದರೆ ಇಲಾಖೆಯು ಅವರ ಹೆಸರುಗಳನ್ನು ದಿನಾಂಕ 19.10.2023 ಮತ್ತು 02.11.2023ರಂದು ಪ್ರಕಟಿಸಿದ್ದು, ಕೌನ್ಸಿಲಿಂಗ್ ಅರ್ಹತಾ ಪಟ್ಟಿಯಲ್ಲಿ ಸೇರಿಸಿರಲಿಲ್ಲ. ಇದರಿಂದಾಗಿ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ದಾಖಲಿಸಿದ್ದರು. (ಅರ್ಜಿ ಸಂಖ್ಯೆ. 20807-20808/2025) ಈ ಪ್ರಕರಣವನ್ನು ಪರಿಶೀಲಿಸಿದ ನ್ಯಾಯಮಂಡಳಿಯು, ನೇಮಕಾತಿ ಅಧಿಸೂಚನೆಯಲ್ಲಿ form-F ಪ್ರಮಾಣ ಪತ್ರವನ್ನು ಸಲ್ಲಿಸುವುದನ್ನು ಮಾತ್ರ ಹೇಳಲಾಗಿದೆ ಮತ್ತು ವಿವಾಹಿತ ಮಹಿಳೆಯರು ಪತಿಯ ಆದಾಯ ಪ್ರಮಾಣ ಪತ್ರವೇ ಸಲ್ಲಿಸಬೇಕು. ಎಂಬ ಸ್ಪಷ್ಟ ನಿಯಮ ಇಲ್ಲ ಎಂದು ಗಮನಿಸಿದೆ. ಅಲ್ಲದೇ ಜಾತಿಯು ಜನ್ಮದಿಂದ ನಿರ್ಧಾರವಾಗುತ್ತದೆ ಮತ್ತು Creamy layer" ನಿರ್ಧಾರಕ್ಕೆ ಪೋಷಕರ ಆದಾಯವೇ ಪ್ರಮುಖ ಎಂಬ ಉನ್ನತ ನ್ಯಾಯಾಲಯಗಳ ಸ್ಥಾಪಿತ ಕಾನೂನು ತತ್ವವನ್ನು ಉಲ್ಲೇಖಿಸಿ, ಇಲಾಖೆಯು ಅರ್ಭರ್ಥಿಗಳನ್ನು ಪಟ್ಟಿಯಿಂದ ಹೊರತುಪಡಿಸಿದ ಕ್ರಮ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ದಿನಾಂಕ 27.02.2026ರಂದು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿರುವ ಆದೇಶದಂತೆ ದಿನಾಂಕ 19.10.2023 ಮತ್ತು 02.11.2023 ರಂದು ಪ್ರಕಟಿಸಿರುವ ಕೌನ್ಸಿಲಿಂಗ್ ಅರ್ಹತಾ ಪಟ್ಟಿಯನ್ನು ರದ್ದುಗೊಳಿಸಿ ಪುನಃ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಪ್ರಸ್ತುತ ನೀಡಿರುವ ಆದೇಶದಂತೆ 2 ತಿಂಗಳೊಳಗಾಗಿ ಪ್ರಕ್ರಿಯೆಯನ್ನು ಮುಗಿಸುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತದೆ.

ಆದ್ದರಿಂದ ಈ ಬಗ್ಗೆ ಮಾನ್ಯ ನ್ಯಾಯಮಂಡಳಿಯು ನೀಡಿದ ಆದೇಶವನ್ನು ನಿಗದಿತ ಅವಧಿಯೊಳಗಾಗಿ ಅನುಷ್ಠಾನಗೊಳಿಸುವಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗುವುದು.

**ಖ) ವಿಷಯ:- ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರದ ಟಿ.ಎಂ.ಎಸ್. ಆಡಳಿತಾಧಿಕಾರಿಯ ವಿರುದ್ಧ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿರುವ ಕುರಿತು.**

- - - - -

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಟಿ.ಎಂ.ಎಸ್ ಆಡಳಿತಾಧಿಕಾರಿಯ ವಿರುದ್ಧ ಯಲ್ಲಾಪುರದ ಟಿ.ಎಂ.ಎಸ್ ಉಳಿಸಿ ಹೋರಾಟ ಸಮಿತಿಯಿಂದ ಪಟ್ಟಣದ ಅಂಬೇಡ್ಕರ್ ಸರ್ಕಲ್ ಬಳಿ ಸುಮಾರು 2 ಗಂಟೆಗಳ ಕಾಲ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. "ಸ್ಥಳಕ್ಕೆ ಆಗಮಿಸಿದ ಸಹಕಾರಿ ಇಲಾಖೆಯ ಉಪನಿಬಂಧಕರು ಪ್ರತಿಭಟನಾಕಾರರ ಅಹವಾಲು ಸ್ವೀಕರಿಸಿ ಆಡಳಿತಾಧಿಕಾರಿ ವರ್ಗಾವಣೆಗೆ ಕ್ರಮಕೈಗೊಳ್ಳುವ ಭರವಸೆ ನೀಡಿದಾಗ ಪ್ರತಿಭಟನೆ ಹಿಂಪಡೆಯಲಾಗಿತ್ತು ಎಂದು ಪತ್ರಿಕೆ ಉಲ್ಲೇಖಿಸಿರುತ್ತದೆ. ವರ್ಗಾವಣೆಗೆ ಕ್ರಮ ಕೈಗೊಳ್ಳದಿದ್ದರೆ ಮಾರ್ಚ್ 13 ರಿಂದ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಮತ್ತು ಇದರಿಂದ ಮುಂದೆ ಆಗುವ ಅನಾಹುತಕ್ಕೆ ಅಧಿಕಾರಿಗಳೇ ಹೊಣೆಯಾಗಬೇಕಾಗುತ್ತದೆ " ಎಂದು ಪ್ರತಿಭಟನಾಕಾರರು ಎಚ್ಚರಿಸಿದ್ದರು. ಆದರೆ, ಇದುವರೆಗೆ ಆಡಳಿತ ಅಧಿಕಾರಿಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಇದ್ದ ಕಾರಣ ಸದರಿ ಅಧಿಕಾರಿಯ ವಿರುದ್ಧ ಉಪವಾಸ ಸತ್ಯಾಗ್ರಹವನ್ನು ಸ್ಥಳೀಯ ರೈತರು ಹಮ್ಮಿಕೊಂಡಿದ್ದಾರೆ ಎಂದು ಪತ್ರಿಕೆಯಲ್ಲಿ ಉಲ್ಲೇಖಿಸಿರುತ್ತದೆ. ಆದ್ದರಿಂದ ಮಾನ್ಯ ಸಹಕಾರ ಇಲಾಖೆ ಸಚಿವರು ಸದರಿ ಆಡಳಿತಾಧಿಕಾರಿಯ ವಿರುದ್ಧ ಕ್ರಮಕೈಗೊಳ್ಳಬೇಕೆಂಬ ರೈತರ ಮಹತ್ವದ ಬೇಡಿಕೆಯನ್ನು ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ:- ಬಿ.ಪಿ.ಎಲ್ ಕಾರ್ಡ್ ಪಡೆಯಲು ಇರುವ ಮಾನದಂಡಗಳನ್ನು ಕೂಡಲೇ ಪರಾಮರ್ಶಿಸಿ ಪ್ರಸ್ತುತ ಇರುವ ಆದಾಯ ಮಿತಿಯನ್ನು ಹೆಚ್ಚಿಸುವ ಕುರಿತು.**

- - - - -

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಕೆಳಕಂಡ ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು" ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು. ಬಿ.ಪಿ.ಎಲ್ ಪಡಿತರ ಚೀಟಿ ವಿತರಿಸಲು ಈಗಲೂ ವಾರ್ಷಿಕ 1.20 ಲಕ್ಷ ರೂ. ಆದಾಯವನ್ನು ಮಾನದಂಡವಾಗಿ ಅನುಸರಿಸುತ್ತಿರುವುದು ಸರಿಯಲ್ಲ. ಬಿ.ಪಿ.ಎಲ್ ಕಾರ್ಡ್ ಪಡೆಯಲು ಈಗಲೂ ಕೂಡ 9 ವರ್ಷಗಳ ಹಳೆಯ ಮಾನದಂಡವನ್ನೇ ಬಳಸಲಾಗುತ್ತಿದೆ. ಆದ್ದರಿಂದ, ಮಾನದಂಡ ಬದಲಿಸುವ ತುರ್ತು ಅಗತ್ಯವಿದ್ದು, ನಿಜವಾದ ಫಲಾನುಭವಿಗಳಿಗೆ ಸವಲತ್ತು ತಲುಪಬೇಕಿದೆ. ಯಾವುದೇ ಯೋಜನೆಗಳ ಮಾನದಂಡವಾಗಲೀ ಕಾಲಕಾಲಕ್ಕೆ ಅದನ್ನು ಪರಾಮರ್ಶಿಸಿ ಸೂಕ್ತ ಮಾರ್ಪಾಟು ಮಾಡುವುದು ಅತ್ಯಗತ್ಯ. ಬಿ.ಪಿ.ಎಲ್ ಕಾರ್ಡ್ ವಿಷಯದಲ್ಲಿ ಸಾಕಷ್ಟು ಗೊಂದಲಗಳಿದ್ದು, ಸೂಕ್ತ ನಿಯಮಗಳನ್ನು ರೂಪಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಜೀವನ ವೆಚ್ಚ ಸತತವಾಗಿ ಹೆಚ್ಚುತ್ತಲೇ ಸಾಗಿದೆ. ಈಗಿನ ಬೆಲೆ ಏರಿಕೆಯ ಕಾಲದಲ್ಲಿ ವಾರ್ಷಿಕ ರೂ. 1.20 ಲಕ್ಷ ಆದಾಯ ಎನ್ನುವುದು ತೀರಾ ಕಡಿಮೆ. ಸಾಮಾನ್ಯ ಕೂಲಿ ಕಾರ್ಮಿಕರ ದಿನದ ಕೂಲಿ ರೂ. 500-600ಗಳಿದ್ದರೂ ಅವರ ವಾರ್ಷಿಕ ಆದಾಯ ಈ ಮಿತಿಯನ್ನು ಮೀರುತ್ತದೆ. ಇದರಿಂದ ನಿಜವಾದ ಬಡವರಿಗೂ ಬಿ.ಪಿ.ಎಲ್ ಕಾರ್ಡ್ ಸಿಗುತ್ತಿಲ್ಲ. ಹಾಗಾಗಿಯೇ. ಬಿ.ಪಿ.ಎಲ್ ಕಾರ್ಡ್ ಪಡೆಯಲು ಇರುವ ಆದಾಯ ಮಿತಿಯನ್ನುರೂ. 1.20 ಲಕ್ಷದಿಂದ ಕನಿಷ್ಠ ರೂ.3 ಲಕ್ಷಕ್ಕೆ ಹೆಚ್ಚಿಗೆ ಮಾಡಬೇಕೆಂಬ ಆಗ್ರಹ ಸೂಕ್ತವಾಗಿದೆ.

ಇತ್ತೀಚೆಗೆ ಸರ್ಕಾರವು ಐ.ಟಿ. ಪಾವತಿದಾರರು, ಸರ್ಕಾರಿ ನೌಕರರು ಮತ್ತು 7.5 ಎಕರೆಗಿಂತ ಹೆಚ್ಚು ಜಮೀನು ಇರುವವರ ಕಾರ್ಡ್‌ಗಳನ್ನು ರದ್ದುಗೊಳಿಸುವ ಪ್ರಕ್ರಿಯೆ ಆರಂಭಿಸಿದೆ. ಆದರೆ ಈ ಪ್ರಕ್ರಿಯೆಯಲ್ಲಿ ತಾಂತ್ರಿಕ ದೋಷಗಳಿಂದಾಗಿ ಬಡವರ ಕಾರ್ಡ್‌ಗಳು ಸಹ ಅಕಾರಣದಿಂದ ರದ್ದಾಗುತ್ತಿವೆ ಎಂಬ ಆರೋಪವಿದ್ದು, ಬಡವರಿಗೆ ಅನ್ಯಾಯವಾಗದಂತೆ ಪಾರದರ್ಶಕ ಪ್ರಕ್ರಿಯೆ ನಡೆಸಬೇಕು. ಸರ್ಕಾರ ಈಗಾಗಲೇ 12 ಲಕ್ಷಕ್ಕೂ ಹೆಚ್ಚು ಕಾರ್ಡ್‌ಗಳನ್ನು 'ಅನರ್ಹ' ಎಂದು ಗುರುತಿಸಿದೆ. ಈ ಪೈಕಿ ಈಗಾಗಲೇ ಲಕ್ಷಾಂತರ ಕಾರ್ಡ್‌ಗಳನ್ನು ಎ.ಪಿ.ಎಲ್ ಆಗಿ ಪರಿವರ್ತಿಸಲಾಗಿದೆ ಅಥವಾ ರದ್ದುಗೊಳಿಸಲಾಗಿದೆ. ಹೊಸ ಬಿ.ಪಿ.ಎಲ್ ಕಾರ್ಡ್‌ಗಾಗಿ 3.22 ಲಕ್ಷಕ್ಕೂ ಅಧಿಕ ಅರ್ಜಿಗಳು ವಿಲೇವಾರಿಗೆ ಇನ್ನೂ ಬಾಕಿ ಇವೆ. ಆದುದರಿಂದ, ಬಿ.ಪಿ.ಎಲ್ ಕಾರ್ಡ್ ಪಡೆಯಲು ಇರುವ ಮಾನದಂಡಗಳನ್ನು ಕೂಡಲೇ ಪರಾಮರ್ಶಿಸಿ, ಪ್ರಸ್ತುತ ಇರುವ ಆದಾಯ ಮಿತಿಯನ್ನು ವಾಸ್ತವ ನೆಲೆಗಟ್ಟಿನ

ಆಧಾರದಲ್ಲಿ ಗಣನೀಯವಾಗಿ ಹೆಚ್ಚಿಗೆ ಮಾಡುವುದು. ಬಡವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗದಂತೆ ಪಾರದರ್ಶಕ ಪ್ರಕ್ರಿಯೆ ನಡೆಸುವುದು ಹಾಗೂ ಹೊಸ ಬಿ.ಪಿ.ಎಲ್ ಕಾರ್ಡ್‌ಗಾಗಿ ಬಾಕಿ ಇರುವ 3.22 ಲಕ್ಷಕ್ಕೂ ಅಧಿಕ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಗತ್ಯ ಹಾಗೂ ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(397)16.3.2026/12.50/ಎಂ.ಎಂ-ವಿ.ಕೆ (ಉಪಸಭಾಪತಿಯವರ ಉಪಸ್ಥಿತಿ)

**ಐ)ವಿಷಯ: NET, SET/SLET, PhD., ಇಂತಹ ಮುಖ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗದ ಸುಮಾರು 4000ಕ್ಕೂ ಹೆಚ್ಚು ಅತಿಥಿ ಶಿಕ್ಷರ ಬದುಕು ಬೀದಿಗೆ ಬಂದಿರುವ ಕುರಿತು.**

- - - - -

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಸುಮಾರು 6000 ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು 10, 15, 20 ವರ್ಷಗಳಿಂದಲೂ ಕಾರ್ಯ ನಿರ್ವಹಿಸಿ ಉತ್ತಮ ಅನುಭವ ಹೊಂದಿದ್ದರೂ ಇಂದು ಅವರು ಮತ್ತು ಅವರ ಕುಟುಂಬಗಳು ಬೀದಿಗೆ ಬರುವ ಪರಿಸ್ಥಿತಿ ಎದುರಾಗಿದೆ. ಇದು ನಿಜಕ್ಕೂ ವಿಷಾದನೀಯ ಸಂಗತಿಯಾಗಿದೆ ಎಂದು ದಿನಾಂಕ.16.03.2026 ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿದ್ದು, ಸದರಿ ಶಿಕ್ಷಕರುಗಳು ಇಲ್ಲಿಯವರೆಗೂ ಕಡಿಮೆ ವೇತನದಲ್ಲಿಯೇ ಸೇವೆ ಸಲ್ಲಿಸಿ ಪ್ರಸ್ತುತ ಯು.ಜಿ.ಸಿ ಮಾನದಂಡಗಳ ಹಿನ್ನಲೆಯಲ್ಲಿ ಕೆಲಸವಿಲ್ಲದೇ ಕೈಯಲ್ಲಿ ಹಣವೂ ಇಲ್ಲದೇ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟಸಾಧ್ಯವಾಗಿದ್ದು, ಇನ್ನು ಮುಂದಾದರೂ ಸರ್ಕಾರದಿಂದ ಏನಾದರೂ ಸಹಾಯ ಸಿಗುವ ಆಶಾವಾದದಲ್ಲಿ ದಿನ ಕಳೆಯುತ್ತಿದ್ದಾರೆ.

ರಾಜ್ಯದ ಸುಮಾರು 430 ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಹಿಂದಿನ ಸರ್ಕಾರದ ಅವಧಿಯಲ್ಲಿ NET, SET/SLET, PhD., ಅಂತಹ ಮುಖ್ಯ ಪರೀಕ್ಷೆಗಳನ್ನು ಮಾಡಿಕೊಂಡು ಹೆಚ್ಚಿನ ವಿದ್ಯೆಯನ್ನು ಪಡೆಯುವಂತೆ ಆದೇಶ ಮಾಡಿದ್ದು, ಸದರಿ ಸಮಯದಲ್ಲಿ ಹಳೆಯ ಪಠ್ಯಕ್ರಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರಿಗೆ ಈಗಿನ ಪಠ್ಯಕ್ರಮಕ್ಕೆ ಹೊಂದಾಣಿಕೆ ಆಗದ ಕಾರಣ ಹೆಚ್ಚಿನ ಅಭ್ಯಾಸದಿಂದ ವಂಚಿತರಾಗಿ ಇಂದು ಯು.ಜಿ.ಸಿ ಮಾನದಂಡದ ಆದೇಶದಂತೆ ಕೆಲಸದಿಂದ ತೆಗೆಯಲಾಯಿತು. ಇದರಲ್ಲಿ ಕೆಲವರು ಕಾನೂನು ಹೋರಾಟ ಮಾಡಿ ಯು.ಜಿ.ಸಿ ಅರ್ಹತೆ ಪಡೆದ ಸುಮಾರು 2000 ಅತಿಥಿ ಉಪನ್ಯಾಸಕರನ್ನು ಮರಳಿ ತೆಗೆದುಕೊಂಡು ಉಳಿದ ಶಿಕ್ಷಕರನ್ನು ಕೈಬಿಡಲಾಯಿತು. ಇದರಿಂದ ಅವರ ಪರಿಸ್ಥಿತಿ ಅತಂತ್ರವಾಗಿ ಅವರ ಕುಟುಂಬ ನಿರ್ವಹಣೆ, ಆರೋಗ್ಯ, ಮಕ್ಕಳ ವಿದ್ಯಾಭ್ಯಾಸ ಇವುಗಳ ಮೇಲೆ ದುಷ್ಪರಿಣಾಮ ಉಂಟಾಗಿದೆ. ಇದರ ಬಗ್ಗೆ ಅತಿಥಿ ಉಪನ್ಯಾಸಕರುಗಳು ಹೋರಾಟ ಮಾಡಿ ಹಲವು ಬಾರಿ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು ಸೇರಿದಂತೆ ಹಲವು ಸಚಿವರನ್ನು ಭೇಟಿ ಮಾಡಿದರೂ ಇಲ್ಲಿಯವರೆಗೂ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಕಾರಣ ಸದರಿ ಅಂಶಗಳ ಕಾರಣ ಅತಿಥಿ ಉಪನ್ಯಾಸಕರುಗಳಿಗೆ ಸರ್ಕಾರವು ಬೇರೆ ವ್ಯವಸ್ಥೆ ಮಾಡಲಿ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಭೋಜೇಗೌಡರು ಹೇಳಿರುವಂತಹ ವಿಚಾರವನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿದೆ. ಆದರೆ ನ್ಯಾಯಾಲಯದಲ್ಲಿ ಹಲವಾರು ಸಮಸ್ಯೆಗಳಿದ್ದುದರಿಂದ ನ್ಯಾಯಾಲಯ ನಮಗೆ ಬರೀ ಯು.ಜಿ.ಸಿ. ಮಾನ್ಯತೆ

ಇರುವಂತಹರನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಒಂದು ತೀರ್ಪನ್ನು ಕೊಟ್ಟಿದ್ದರ ಮೇರೆಗೆ ನಾವು ಮೊದಲನೇ ಸುತ್ತಿನಲ್ಲಿ ಕೌನ್ಸಿಲಿಂಗ್ ಮಾಡಿದ್ದರಲ್ಲಿ 10,355 ಜನರಿಗೆ ಅವಕಾಶ ಮಾಡಿಕೊಟ್ಟಿದ್ದೆವು. ಅದರಲ್ಲಿ ಆಯ್ಕೆಯಾದವರು 7,796 ಅಭ್ಯರ್ಥಿಗಳು. ಇದರಲ್ಲಿ ಅವರು ಕೆಲಸಕ್ಕೆ ರಿಪೋರ್ಟ್ ಆದವರ ಸಂಖ್ಯೆ 6,914. ಮೊದಲನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಪ್ರಾರಂಭ ಮಾಡುವಂಥದ್ದು. ನಂತರ ಎರಡನೇ ಸುತ್ತಿನ ಕೌನ್ಸಿಲಿಂಗ್ ಮಾಡಿದಾಗ 2,399 ಜನ ಅರ್ಹತೆ ಇರುವಂಥವರು ಭಾಗವಹಿಸಿದ್ದರು. ಯು.ಜಿ.ಸಿ. ಮಾನದಂಡಗಳ ಅಡಿಯಲ್ಲಿ ಅರ್ಹತೆ ಇಲ್ಲದೇ ಇರುವಂಥವರು 2,073 ಜನರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿದ್ದರು. ಇದರಲ್ಲಿ ಅರ್ಹತೆ ಇರುವಂಥವರಲ್ಲಿ 1,142 ಜನರನ್ನು ಆಯ್ಕೆ ಮಾಡಿಕೊಂಡು, 1,363 ಜನ ಅರ್ಹತೆ ಇಲ್ಲದೇ ಇರುವಂಥವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಅರ್ಹತೆ ಇರುವಂತಹ 935 ಜನರು ರಿಪೋರ್ಟ್ ಆದಂತಹವರು, ಆದರೆ ಅರ್ಹತೆ ಇಲ್ಲದೇ ಇರುವ 1,217 ಜನರು ಆಯ್ಕೆಯಾಗಿದ್ದು ರಿಪೋರ್ಟ್ ಆಗಿದ್ದರು. ಇದರ ಮಧ್ಯೆ ನ್ಯಾಯಾಲಯ ಬಹಳ ಸ್ಪಷ್ಟವಾಗಿ ಅರ್ಹತೆ ಇಲ್ಲದಿದ್ದವರು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಎಷ್ಟು ಬೇಡಿಕೆ ಇದೆ ಅಂದರೆ ಸುಮಾರು 10,335 ಜನರು ಇವರು ನ್ಯಾಯಾಲಯದ ಮುಂದೆ ಬಂದು ಅನುಮತಿ ಪಡೆಯಬೇಕು ಎಂದು ಹೇಳಿದೆ. ಅದೇ ರೀತಿ ನಾವು ಎರಡನೇ ಸುತ್ತಿನ ಕೌನ್ಸಿಲಿಂಗ್ ಮಾಡಿ ಯಾರು ಅರ್ಹರಿದ್ದರು ಅವರಿಗೆ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟೆವು. ಯಾರು ಅನರ್ಹರು ಯು.ಜಿ.ಸಿ. ಮಾನದಂಡಗಳನ್ನು ಪೂರೈಸಿಲ್ಲ ಅವರಿಗೆ reporting order ಕೊಡಲಿಲ್ಲ. ಏಕೆಂದರೆ ಕೋರ್ಟ್ ಆದೇಶ ಬರಬೇಕಾಗಿತ್ತು. ಸುಮಾರು ಜನರು ಕೋರ್ಟ್ ಮುಂದೆ ಹೋಗಿ ಅರ್ಹತೆ ಇಲ್ಲದೇ ಇರುವಂಥವರನ್ನು ಈ ಸೆಮಿಸ್ಟರ್‌ಗೆ ಮಾತ್ರ, ಈ ಅವಧಿಗೆ ಮಾತ್ರ ತೆಗೆದುಕೊಳ್ಳಬಹುದು ಎಂದು ಅನುಮತಿ ಕೊಟ್ಟಿತು. ಆಗ 1217 ಜನರು ರಿಪೋರ್ಟ್ ಆಗಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಮೂರನೇ ಸುತ್ತಿನಲ್ಲಿ not qualified candidates ತೆಗೆದುಕೊಳ್ಳಲಿಲ್ಲ. ಮೂರನೇ ಹಂತದಲ್ಲಿ 1136 ಜನ ಅರ್ಹರನ್ನು ಕೌನ್ಸಿಲಿಂಗ್‌ಗೆ ಕರೆದಾಗ 485 ಜನರು ಭಾಗವಹಿಸಿದ್ದರು. ಅದರಲ್ಲಿ 359 ಜನರು ರಿಪೋರ್ಟ್ ಆಗಿದ್ದಾರೆ. 4ನೇ ಹಂತದ ಕೌನ್ಸಿಲಿಂಗನ್ನು ಮಾಡಿದಾಗ 849 ಜನ ಅರ್ಹರು ಭಾಗವಹಿಸಿದ್ದರು. ಅದರಲ್ಲಿ 259 ಜನರನ್ನು ಆಯ್ಕೆ ಮಾಡಿಕೊಂಡರು. ಏಕೆಂದರೆ, ಯಾವ ಕಾಲೇಜು ಖಾಲಿ ಇರುತ್ತದೆ, ಯಾವ ವಿಷಯಗಳು ಇವೆಲ್ಲಾ ಅಲ್ಲಿ ಬರುತ್ತದೆ. 259ರಲ್ಲಿ ಬರೀ 33 ಅರ್ಹ ಅಭ್ಯರ್ಥಿಗಳು ರಿಪೋರ್ಟ್ ಆಗಿದ್ದಾರೆ. ಈಗ qualification ಇಲ್ಲದೇ ಇರುವಂಥವರು ಎಂದು ಯು.ಜಿ.ಸಿ. ಮಾನದಂಡಗಳೆಂದು ಹೇಳಿ 1,392 ಜನಕ್ಕೆ ನಾವು ಕೌನ್ಸಿಲಿಂಗ್‌ಗೆ ಕರೆದಿದ್ದೆವು. ಅದರಲ್ಲಿ 476 ಜನರು ಆಯ್ಕೆಯಾಗಿದ್ದರು. 84 ಜನರು ಈಗಾಗಲೇ ವರದಿ ಮಾಡಿಕೊಂಡಿದ್ದಾರೆ, ಇನ್ನೂ ರಿಪೋರ್ಟಿಂಗ್ ನಡೆಯುತ್ತಿದೆ. ನಮಗೆ ಇಲ್ಲಿ ಸ್ಪಷ್ಟತೆ ಇಲ್ಲ. ಈ ವಿಚಾರದಲ್ಲಿ ಸರ್ಕಾರ ಬಹಳ ಗಂಭೀರವಾಗಿ ಮತ್ತು ಮಾನವೀಯತೆಯ ದೃಷ್ಟಿಯಲ್ಲಿ ಇದನ್ನು ಪರಿಗಣಿಸಿದ್ದೇವೆ. ಇದು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಸಂಪುಟದ ಎಲ್ಲರಿಗೂ ಗಮನದಲ್ಲಿದೆ. ಶಾಸಕರು ಮತ್ತು ತಾವುಗಳು ಎಲ್ಲರೂ ಇದರ ಬಗ್ಗೆ ಕೇಳಿದ್ದೀರಿ. ಖಂಡಿತವಾಗಿಯೂ ನಾವಿದನ್ನು ಬಹಳ ಸಹಾನುಭೂತಿಯಿಂದ ಇವರಿಗೆ ಯಾರು ಹೊರಗೆ ಉಳಿಯುತ್ತಾರೆ ಸುಮಾರು ವರ್ಷಗಳ ಸೇವೆಯನ್ನು ಮಾಡಿರುವಂಥವರು ಕೆಲವರು 1 ರಿಂದ 5

ವರ್ಷದೊಳಗಿದ್ದಾರೆ, ಇನ್ನು ಕೆಲವರು 5 ವರ್ಷಕ್ಕಿಂತ ಮೇಲ್ಪಟ್ಟು 18–20 ವರ್ಷ ಸೇವೆ ಸಲ್ಲಿಸಿರುವಂಥವರಿದ್ದಾರೆ. ಇವರಿಗೆ ಒಂದು ಪರಿಹಾರ ಕಂಡು ಹಿಡಿಯಬೇಕೆಂದು ಇಲಾಖೆಯಲ್ಲಿ ಮತ್ತು ಸರ್ಕಾರದಲ್ಲಿ ಚರ್ಚೆ ಮಾಡಿ, ಮಾನ್ಯ ಕಾನೂನು ಸಚಿವರು ಕೂಡ ಅವರ ಸಲಹೆ ಸೂಚನೆಗಳನ್ನು ಕೊಟ್ಟು ನಾವೆಲ್ಲಾ ಪ್ರಯತ್ನ ಮಾಡಿದ್ದೇವೆ. ಈಗ ನಮಗೆ ಕೋರ್ಟ್‌ನಿಂದ ಸ್ಪಷ್ಟತೆ ಇಲ್ಲ. ಪ್ರತಿ ಸೆಮಿಸ್ಟರ್‌ಗೂ ನಾವು ಅವರ ಹತ್ತಿರ ಹೋಗಿ ಅನುಮತಿ ತೆಗೆದುಕೊಂಡು, ನಾವು ಕ್ವಾಲಿಫಿಕೇಷನ್ ಇಲ್ಲದೇ ಇರುವಂಥವರನ್ನು ತೆಗೆದುಕೊಳ್ಳಬೇಕೆಂದಾಗ ನಿಖರವಾಗಿ ಎಷ್ಟು ಜನ 5 ವರ್ಷಕ್ಕಿಂತ ಮೇಲ್ಪಟ್ಟವರಾಗಿರಬಹುದು ಅಥವಾ ಇದನ್ನು ಯಾವ ರೀತಿ ಮಾಡಬೇಕು, ಎಷ್ಟು ಜನ ಉಳಿಯುತ್ತಾರೆ ಅವರಿಗೆ ಯಾವ ರೀತಿ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಸ್ಪಷ್ಟತೆ ಇಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಗಳಾಗುತ್ತದೆ, ಅಂತಿಮ ತೀರ್ಮಾನವನ್ನು ನಾನು ಪ್ರಕಟ ಮಾಡುವುದಕ್ಕಾಗುತ್ತದೆ. ಏಕೆಂದರೆ, ನ್ಯಾಯಾಲಯದಲ್ಲಿ ಇದರ ಸ್ಪಷ್ಟತೆ ಇಲ್ಲದೇ ಇರುವುದರಿಂದ ಈ ಶೈಕ್ಷಣಿಕ ವರ್ಷದಲ್ಲಿ ನಮಗೆ ಸ್ವಲ್ಪ ಗೊಂದಲ ಇರುವುದರಿಂದ ಮುಂದಿನ ಶೈಕ್ಷಣಿಕ ವರ್ಷಕ್ಕೆ ಯಾರು ಸುಮಾರು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ ಅವರಿಗೆ ಸೂಕ್ತವಾದಂತಹ ಒಂದು ಪರಿಹಾರವನ್ನು ಕಂಡುಕೊಳ್ಳುವಂತಹ ಪ್ರಯತ್ನದಲ್ಲಿದ್ದೇವೆ. ಅದು ಅಂತಿಮ ಹಂತದಲ್ಲಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಚಿವರೆ, 2026ರ academic year ನಿಂದ ಮಾಡಿ.

**ಡಾ: ಎಂ.ಸಿ. ಸುಧಾಕರ್:–** ಖಂಡಿತವಾಗಿಯೂ 2026ರಿಂದ ಅವರಿಗೆ ನ್ಯಾಯ ಒದಗಿಸುವ ಫಾರ್ಮುಲಾ ಒಂದನ್ನು ತೀರ್ಮಾನವನ್ನು ಮಾಡಿದ್ದೇವೆ. ಅದನ್ನು ಆ ವರ್ಷಕ್ಕೆ ಅನ್ವಯವಾಗುವಂತೆ ಮಾಡುತ್ತೇವೆ.

**ಐ) ವಿಷಯ: ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವರ ವಿರುದ್ಧದ ಭ್ರಷ್ಟಾಚಾರ ಹಾಗೂ ಇನ್ನಿತರ ಆರೋಪಗಳ ಕುರಿತು.**

- - - - -

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ತರುತ್ತಿರುವ ಅತ್ಯಂತ ಗಂಭೀರವಾದ ವಿಷಯದ ಬಗ್ಗೆ ದಿನಾಂಕ: 28.2.2026ರ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ವಿ.ವಿ. ಆರೋಪಿತ ಕುಲಸಚಿವರಿಗೆ ಸರಕಾರದ ರಕ್ಷೆ? ಶಿರೋನಾಮೆಯಡಿ ವರದಿ ಪ್ರಕಟವಾಗಿರುತ್ತದೆ.

ಶಿವಮೊಗ್ಗ ವಿಶ್ವವಿದ್ಯಾಲಯದ ಹಾಲಿ ಕುಲಸಚಿವರ ವಿರುದ್ಧ ಭ್ರಷ್ಟಾಚಾರ ಹಾಗೂ ಇನ್ನಿತರ ಕರ್ತವ್ಯ ಲೋಪದಂತಹ ಗಂಭೀರ ಆರೋಪಗಳು ಕೇಳಿ ಬಂದಿವೆ. ಅಲ್ಲದೆ, ಕುಲಸಚಿವರು ಮತ್ತು ಕುಲಪತಿಗಳ ನಡುವೆ ಹೊಂದಾಣಿಕೆ ಇಲ್ಲವಾಗಿದ್ದು, ಇದರಿಂದ ವಿಶ್ವವಿದ್ಯಾಲಯದ ಘನತೆಗೆ ಕೀರ್ತಿಗೆ ಧಕ್ಕೆ ಸಂಭವಿಸಬಹುದಾದ ವಾತಾವರಣ ನಿರ್ಮಾಣವಾಗುತ್ತಿದೆ.

ಸರ್ಕಾರ ಇಂತಹ ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ, ವಿಶ್ವವಿದ್ಯಾಲಯದ ಘನತೆಯನ್ನು ಉಳಿಸಲು ಕೂಡಲೇ ಮಧ್ಯ ಪ್ರವೇಶಿಸಬೇಕು. ಶೈಕ್ಷಣಿಕ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ವಿಶ್ವವಿದ್ಯಾಲಯದ ಘನತೆಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಹಲವಾರು ದೂರುಗಳು ಮತ್ತು ಕರ್ತವ್ಯ ಲೋಪಗಳ ಬಗ್ಗೆ ನಮಗೂ ಕೂಡ ಬಹಳಷ್ಟು ದೂರುಗಳು ಬಂದಿವೆ. ಈಗಾಗಲೇ ಅವರನ್ನು ಅಲ್ಲಿಂದ ಡಿ.ಪಿ.ಎ.ಆರ್. ಗೆ ವರ್ಗಾವಣೆ ಮಾಡಬೇಕೆಂದು, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ. ಈಗ ಅಲ್ಲಿ ಬೇರೆ ಬೇರೆ ರೀತಿಯ ಬಹಳಷ್ಟು ಆರೋಪಗಳಿವೆ. ಅದು ಉಚಿತವಾಗಿ ಇಲ್ಲದೇ ಇರುವುದರಿಂದ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸರ್ಕಾರ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತದೆ.

## ೩. ಅಭಿನಂದನಾ ಪ್ರಸ್ತಾವ

**ವಿಷಯ:- ಭಾರತ ಕ್ರಿಕೆಟ್ ತಂಡವು ICC Men's T2೦ World Cup ಅನ್ನು ಗೆದ್ದಿರುವುದಕ್ಕೆ ಅಭಿನಂದನೆ ಸಲ್ಲಿಸುವ ಕುರಿತು.**

- - - - -

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇತ್ತೀಚೆಗೆ ಕಳೆದ ವಾರವೇ ನಾನು ಇದನ್ನು ಪ್ರಸ್ತಾಪಿಸುವುದಕ್ಕೆ ಪ್ರಯತ್ನ ಮಾಡಿದೆ ಆದರೆ ಆಗಲಿಲ್ಲ. ದಿನಾಂಕ: ೮-೩-೨೦೨೬ರಂದು ಭಾರತ ತಂಡವು ICC Men's T2೦ World Cup ಅನ್ನು ಗೆದ್ದಿದೆ. ಮೊದಲನೆಯದಾಗಿ ಭಾರತ ತಂಡವನ್ನು ವಿಶೇಷವಾಗಿ ಅಭಿನಂದನೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕ್ರಿಕೆಟ್ ಎನ್ನುವಂಥದ್ದು ನಮ್ಮ ಭಾವನಾತ್ಮಕ ಕ್ರೀಡೆಯಾಗಿದೆ. ಹಾಗಾಗಿ ಇದಕ್ಕೆ ಪ್ರೋತ್ಸಾಹ ನೀಡುತ್ತಿರುವಂತಹ ಅಂದರೆ ಮಹಿಳಾ ಕ್ರಿಕೆಟ್ ಕೂಡ ಅತ್ಯಂತ ಅದ್ಭುತವಾಗಿ ಬೆಳೆಯುತ್ತಿದೆ. ಆ ನಿಟ್ಟಿನಲ್ಲಿ ಬಿ.ಸಿ.ಸಿ.ಐ ಮತ್ತು ಐ.ಸಿ.ಸಿ. ಗೂ ವಿಶೇಷವಾಗಿ ಶ್ರೀ ಜಯ್ ಶಾ ಅವರಿಗೆ ಹೃತ್ಪೂರ್ವಕವಾದಂತಹ ಅಭಿನಂದನೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸದನದಿಂದ ನಮ್ಮ ಭಾರತ ತಂಡಕ್ಕೆ ಅಭಿನಂದನೆಯನ್ನು ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

(೩೯೮) ೧೬-೦೩-೨೦೨೬ ೧-೦೦ KH/BNS (ಉಪ ಸಭಾಪತಿಯವರ ಉಪಸ್ಥಿತಿ)

**ಉಪ ಸಭಾಪತಿಯವರು:-** ಭಾರತ ಕ್ರಿಕೆಟ್ ತಂಡವು ದೇಶಕ್ಕೆ ಕೀರ್ತಿ ಮತ್ತು ಹೆಮ್ಮೆಯನ್ನು ತಂದಿದೆ. ಹಾಗಾಗಿ ಅವರಿಗೆ ನಮ್ಮ ಸದನದ ವತಿಯಿಂದ ಅಭಿನಂದನೆಗಳನ್ನು ಹಾಗೂ ಗೌರವಗಳನ್ನು ಸೂಚಿಸುವಂತಹ ಕೆಲಸವನ್ನು ಮಾಡಿ ಅವರಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡೋಣ.

ಈಗ ನಿಯಮ ೩೩೦ರ ಅಡಿಯಲ್ಲಿನ ವಿಷಯಗಳನ್ನು ತೆಗೆದುಕೊಳ್ಳೋಣ.

## 4. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಬಗ್ಗೆ ಹಾಗೂ ನಿಗದಿತ ಸಮಯಕ್ಕೆ ಸರ್ಕಾರದಿಂದ ಉತ್ತರಗಳು ಬಾರದಿರುವ ಕುರಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತು ಕಡ್ಡಾಯವಾಗಿ 7 ಮಾನ್ಯ ಸಚಿವರು ಉಪಸ್ಥಿತರಿದ್ದು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಆಗಲೇ ಕೇಳಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸದಸ್ಯರೇ, ಇಲ್ಲ, ತಾವು ಸಂಪೂರ್ಣ ಮಾಡಲಿಲ್ಲ. ಅದಕ್ಕೆ ಉತ್ತರವೂ ಬರುವುದಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, . . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ 7 ಮಾನ್ಯ ಸಚಿವರು ಕಡ್ಡಾಯವಾಗಿ ಹಾಜರಿರಬೇಕಾಗಿರುವವರು. ಇವತ್ತು ಸದನದಲ್ಲಿ ಎಷ್ಟು ಮಾನ್ಯ ಸಚಿವರು ಇದ್ದಾರೆ ನೋಡಿ. ಈ ರೀತಿ ಇದ್ದರೆ ಕಡ್ಡಾಯ ಏಕೆ ಮಾಡುತ್ತೀರಿ? ಕಡ್ಡಾಯ ಎನ್ನುವ ಪದಕ್ಕೆ ಏನು ಬೆಲೆಯೇ ಇಲ್ಲ. ಎರಡನೆಯದು, ಉತ್ತರಗಳನ್ನು ಆಗಿಂದಾಗ್ಗೆ ಕೊಡಬೇಕು. ನಾನು ಬಹಳ ಗಮನಿಸುತ್ತಿದ್ದೇವೆ. ಮಾನ್ಯ ಸದಸ್ಯರಾದ ಎಸ್.ಎಲ್. ಭೋಜೇಗೌಡರವರು ಮೊನ್ನೆಯೂ ಕೂಡ ಇವತ್ತಿನವರೆಗೆ ಸರಿಯಾದ ಉತ್ತರಗಳು ಬರುವುದಿಲ್ಲ ಎಂದು ಪ್ರಶ್ನೆ ಮಾಡಿದರು. ಇಲ್ಲದಿದ್ದರೆ, ಅವರ ಮೇಲಾದರೂ ಕ್ರಮ ಜರುಗಿಸಿ. ನಾನು ಇನ್ನೊಂದು ಅಂಶವನ್ನು ಗಮನಿಸುತ್ತಿದ್ದೇನೆ. ಮಾನ್ಯ ಸದಸ್ಯರಾದ ಕಿಶೋರ್ ಕುಮಾರ್ ಪುತ್ತೂರ್ ರವರು ಯಾವಾಗ ಪ್ರಶ್ನೆ ಕೇಳಿದರೂ ಉತ್ತರ ಬರುವುದಿಲ್ಲ. ಇಲ್ಲದಿದ್ದರೆ, ಅವರನ್ನು ಸಸ್ಪೆಂಡ್ ಮಾಡಬೇಕು. ಏಕೆಂದರೆ, ಅವರು ಉತ್ತರ ಕೊಡಲಾಗದಂತಹ ಪ್ರಶ್ನೆಗಳನ್ನು ಕೇಳುವುದು ಸರಿಯೇ? ಆದ್ದರಿಂದ, ಅವರನ್ನು ಸಸ್ಪೆಂಡ್ ಮಾಡಬೇಕು. ಉತ್ತರ ಕೊಡಲಾಗದಂತಹ ಪ್ರಶ್ನೆಗಳನ್ನು ಕೇಳುವುದು ಎಷ್ಟು ಸರಿ? ಈಗ ಕೆಳಮನೆಯಲ್ಲಿ ಉತ್ತರ ಕೊಟ್ಟಿಲ್ಲ ಎಂದು ಮಾನ್ಯ ಸಭಾಧ್ಯಕ್ಷರು ಈಗಾಗಲೇ adjourn ಮಾಡಿ ಹೋಗಿದ್ದಾರೆ. ಈಗ ತಾವು ಏನು ಕ್ರಮ ಜರುಗಿಸುತ್ತೀರಿ ಎಂದು ಹೇಳಿ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಪ್ರತಿ ದಿವಸ ಇದೇ ರೀತಿಯಾದರೆ ಸದನಕ್ಕೆ ಗೌರವ ಬರುವುದಿಲ್ಲ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದನ್ನು ಕೇಳಲೇಬೇಕು. ಇದನ್ನು ಸರಿಪಡಿಸಬೇಕು. ಇದು ಹೊಸದಾಗಿ ಬಂದಿರುವಂತಹ ಪದ್ಧತಿ ಅಲ್ಲ. ಪ್ರತಿ ಬಾರಿ ಕೆಳಮನೆಯಲ್ಲಿ ಇರಬಹುದು, ಮೇಲ್ಮನೆಯಲ್ಲಿ ಇರಬಹುದು. ಇದು ಸತತವಾಗಿ ನಡೆಯುತ್ತಿದೆ. ಇದನ್ನು ಎಲ್ಲರೂ ಕೂಡಿ ಸರಿ ಮಾಡಬೇಕಾಗಿದೆ. ಇವತ್ತು ಅವರು ಆಪಾದನೆ ಮಾಡಿರುವಂತಹದ್ದನ್ನು ನಾವು ಕೇಳುವಂತಹ ಸ್ಥಾನದಲ್ಲಿ ಇದ್ದೇವೆ. ತಪ್ಪೇನಿಲ್ಲ ಅವರು ಕೇಳಿದ್ದಾರೆ. ಮಾನ್ಯ ಎಸ್.ಎಲ್. ಭೋಜೇಗೌಡರವರು ಕೇಳಿರುವ ಹಾಗೆ... ನಾವು ಸರಿಪಡಿಸಬೇಕೆಂದು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ಹೌದು, ಇದನ್ನು ಸರಿಪಡಿಸಬೇಕು. ಆಪಾದನೆಗಳು . . . ನಾವು ಹಿಂದಿನದ್ದನ್ನು ಕೋಟ್ ಮಾಡುತ್ತಾ ಹೋಗಬಾರದು. ನಾವು ಹೊಸ ಹೊಸದ್ದನ್ನು ಹುಟ್ಟು ಹಾಕಬೇಕಲ್ಲವೇ? ಹಳೆಯದ್ದು ಮಾಡಿದರು, ಅದು ಮಾಡಿದರು ಎಂದು ಹೇಳುವುದು ಸರಿಯಲ್ಲ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಈಗ ಎಲ್ಲಾ ವಿವರಗಳನ್ನು ತೆಗೆದುಕೊಂಡಿದ್ದೇವೆ. ಮುಖ್ಯ ಕಾರ್ಯದರ್ಶಿಯವರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಹಳೆಯದ್ದರಲ್ಲಿ 89 ರಿಪ್ಲೈಗಳು ಬರಬೇಕಾಗಿದೆ. ಈಗ ನಡೆಯುತ್ತಿರುವ ಸದನಕ್ಕೆ ಸಂಬಂಧಿಸಿದಂತೆ, 161 ರಿಪ್ಲೈಗಳು ಬರಬೇಕು. ಯಾರಾದರೂ ಮಾಡಲಿಲ್ಲವೆಂದರೆ, ಸಂಪೂರ್ಣವಾದ ಮಾಹಿತಿಯನ್ನು ತೆಗೆದುಕೊಂಡು ಛೇರ್‌ಮನ್‌ರವರಿಗೆ ಹೇಳಿ ಬಂದಿದ್ದೇನೆ. ಇದನ್ನು ಮುಖ್ಯ ಕಾರ್ಯದರ್ಶಿಯವರ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಆದಷ್ಟು ಶೀಘ್ರವಾಗಿ ಇದನ್ನು ಸರಿಪಡಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಹೇಳಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸಭಾನಾಯಕರು ಸಮರ್ಥರಿದ್ದಾರೆ. ಸರ್ಕಾರ ಕೂಡ ಸಮರ್ಥವಾಗಿದೆ. ಅಧಿಕಾರಿಗಳು, it is the bounden duty of all the officers. They are aware of all these questions, 15 days earlier. ಇವತ್ತು ತಾವು ಈ ಉತ್ತರವನ್ನು ಕೊಡಬೇಕಾದರೆ . . . ನೋಡಿ, ನನ್ನ ಹತ್ತಿರ ಪ್ರತಿ ಇದೆ. ಸುಮಾರು 140 ಪ್ರಶ್ನೆಗಳು ಇವತ್ತಿನದ್ದು ಇದೆ. 40 ಪ್ರಶ್ನೆಗಳಿಗೆ ಲಿಖಿತ ಉತ್ತರ ಬಂದಿದೆ. ಇವತ್ತಿನದ್ದೇ 100 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಮೊನ್ನೆಯ ದಿವಸ 203 ಪ್ರಶ್ನೆಗಳು ಇತ್ತು. ಅದರಲ್ಲಿ ಏನೋ ಉತ್ತರ ಕೊಟ್ಟಿದ್ದೇವೆ ಎಂದು ಹೇಳಿದರು. What is the duty of the officers? ಉತ್ತರ ಕೊಡಲಾಗದಂತಹ ಪ್ರಶ್ನೆಗಳನ್ನು ನಾವು ಕೇಳಿದ್ದೇವೆಯೇ?

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇಲ್ಲಿ ಇರುವಂತಹ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದೇ ಮೂಲಭೂತ ಪ್ರಶ್ನೆಯಾಗಿದೆ. ಅವರು ಏಕೆ ಉತ್ತರಗಳನ್ನು ಕೊಡುತ್ತಿಲ್ಲ. ಇದಕ್ಕೆ ಏನು ಕಾರಣ? ಉದಾಹರಣೆಗೆ, ಮಾನ್ಯ ಕಿಶೋರ್ ಕುಮಾರ್ ಪುತ್ತೂರ್ ರವರು ಮಾತನಾಡಿದಾಗ ಇದು 3ನೇ ಬಾರಿ ಈ ರೀತಿ ಆಗಿದೆ. ನಾನು ಪೀಠದಲ್ಲಿ ಕುಳಿತಿರುವಾಗ 2 ಬಾರಿ ಈ ರೀತಿ ಆಗಿದೆ. 3 ಬಾರಿಯೂ ಅವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ. ಇದು ಸರಿ ಎಂದು ನನಗನಿಸುತ್ತಿಲ್ಲ. ಕೂಡಲೇ ಉತ್ತರವನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿ. ಅಧಿಕಾರಿಗಳಿಗೆ ತಾಕೀತು ಮಾಡಿ. ತಕ್ಷಣವೇ ಉತ್ತರವನ್ನು ಏಕೆ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹದ್ದು ಸರಿ ಇದೆ. ಇದರ ಬಗ್ಗೆ ಈಗಾಗಲೇ ಕ್ರಮ ತಗೆದುಕೊಳ್ಳುತ್ತೇವೆ. ಈಗಾಗಲೇ ಅಧಿಕಾರಿಗಳು ಯಾರ್ಯಾರು ಇದ್ದಾರೆ, ಅವರು ಸಮಯಕ್ಕೆ ಕಳುಹಿಸದೇ ಇರುವ ಬಗ್ಗೆ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದಿದ್ದೇನೆ. ಇದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ.

**ಉಪ ಸಭಾಪತಿಯವರು:-** ಆಯಿತು.

## ೫. ನಿಯಮ ೩೩೦ರ ಮೇರೆಗೆ ಚರ್ಚೆ

**ಅ) ವಿಷಯ: ಕೊಪ್ಪಳ ನಗರದ ಹುಲಿಕೆರೆಯ ಮೂಲ ಪ್ರದೇಶ ಹಾಗೂ ಸುತ್ತಮುತ್ತಲಿನ ಬಫರ್ ಜೋನ್ ಪ್ರದೇಶದ ಅತಿಕ್ರಮಣ ತಡೆಗಟ್ಟಲು ಮರು ಅಳತೆ ಮಾಡಿಸಿ ನಿಖರ ಗಡಿ ಗುರುತಿಸುವುದು ಮತ್ತು ಅತಿಕ್ರಮಣ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಕುರಿತು.**

\- - - - - -

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಕಳೆದ ಒಂದು ವಾರದಿಂದ ಈ ಪ್ರಶ್ನೆಗೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಇವತ್ತಿನ ದಿನ ಅವಕಾಶ ಸಿಕ್ಕಿದೆ. ನಿಜವಾಗಿಯೂ ಈ ಪ್ರಶ್ನೆ ಬರುತ್ತದೋ, ಇಲ್ಲವೋ ಎನ್ನುವಷ್ಟರ ಮಟ್ಟಿಗೆ ನನಗೆ ಅನುಮಾನ ವ್ಯಕ್ತವಾಗಿತ್ತು. ಇವತ್ತು ನನಗೆ ಒಂದು ಅವಕಾಶ ಸಿಕ್ಕಿದೆ. ನಮ್ಮ ಭಾಗದ ಪ್ರಶ್ನೆ ಎತ್ತುವುದಕ್ಕೆ ನನಗೆ ಬಹಳ ಖುಷಿಯಾಗುತ್ತಿದೆ. ಕೊಪ್ಪಳ ನಗರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಹಾಗೂ ಧಾರ್ಮಿಕ ಪ್ರಾಮುಖ್ಯತೆಯುಳ್ಳ ಹುಲಿಕೆರೆಯ ಮೂಲ ಪ್ರದೇಶ ಹಾಗೂ ಅದರ ಸುತ್ತಮುತ್ತಲಿನ ಬಫರ್ ಜೋನ್ ಪ್ರದೇಶವನ್ನು ಕೆಲವರು ಅತಿಕ್ರಮಣ ಮಾಡಿ, ಸರ್ಕಾರದ ಅನುಮತಿ ಇಲ್ಲದೆ ಕೆರೆಯ ಕೆಲವು ಭಾಗಗಳ ಭೂ-ಸ್ವರೂಪ ಬದಲಾವಣೆ ಮಾಡಿ ವೈಯಕ್ತಿಕ ಉಪಯೋಗಕ್ಕೆ ಬಳಸಲಾಗುತ್ತಿದೆ. ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಪರಿಸರ ಸಂರಕ್ಷಣೆಯ ಹಿನ್ನೆಲೆಯಲ್ಲಿ ಹುಲಿಕೆರೆಯ ಸಂಪೂರ್ಣ ಪ್ರದೇಶವನ್ನು ತಕ್ಷಣವೇ ಸರ್ವೆ ಇಲಾಖೆಯಿಂದ ಮರು ಅಳತೆ ಮಾಡಿಸಿ ನಿಖರ ಗಡಿ ಗುರುತಿಸುವ ಕಾರ್ಯ ಕೈಗೊಳ್ಳುವುದು. ಅತಿಕ್ರಮಣಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಸಂಬಂಧಿಸಿದವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸುವುದು. ಕೆರೆಯ ಮೂಲ ಸ್ವರೂಪ ಮತ್ತು ಸ್ವಾಭಾವಿಕ ನೀರು ಹರಿವು ಮಾರ್ಗಗಳನ್ನು ಸಂರಕ್ಷಿಸುವ ಉದ್ದೇಶದಿಂದ ಶಾಶ್ವತ ಸಂರಕ್ಷಣಾ ಯೋಜನೆ ರೂಪಿಸುವ ವಿಚಾರವಾಗಿ ಮಾನ್ಯ ಸಚಿವರಲ್ಲಿ ಸ್ಪಷ್ಟನೆಯನ್ನು ಕೇಳಬಯಸುತ್ತೇನೆ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಹೇಮಲತಾ ನಾಯಕ್ ರವರು ಪ್ರಶ್ನೆಯನ್ನು ಕೇಳಿದ್ದಾರೆ. ಕೊಪ್ಪಳದ ಮುಖ್ಯ ನಗರದಲ್ಲಿ ಒಂದು ಐತಿಹಾಸಿಕ ಕೆರೆಯಾಗಿದ್ದು, ಇದು ಸುಮಾರು 65 ಎಕರೆಯಲ್ಲಿ ಇದೆ. ಅಲ್ಲಿ illegal encroachment ಅನ್ನು ಸುಮಾರು ಜನರು ಮಾಡಿದ್ದಾರೆ ಮತ್ತು ಅಲ್ಲಿ ಎರಡು ರಸ್ತೆಗಳನ್ನು ಕೂಡ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದರ ಬಗ್ಗೆ ತಕ್ಷಣವೇ ಸರ್ವೆ ಮಾಡಿ, ಅಲ್ಲಿ ಯಾರ್ಯಾರು encroachment ಮಾಡಿದ್ದಾರೆ. ಅವರ ಮೇಲೆ immediately, seriously we will take action ಮತ್ತು ಆ ರೀತಿ ಏನೇ ಇದ್ದರೂ remove ಮಾಡುವಂತಹ ಕೆಲಸ ಮಾಡುತ್ತೇನೆ ಎಂದು ತಮಗೆ ಹೇಳುತ್ತೇನೆ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು

ಕೇಳಿದ್ದಾರೆ. ಅಲ್ಲಿ ಒಂದು ಐತಿಹಾಸಿಕ ಕೆರೆ ಇದ್ದು, ಅದು ನಗರದ ಹೃದಯ ಭಾಗದಲ್ಲಿ ಇದೆ. ಅದನ್ನು ಅಭಿವೃದ್ಧಿಪಡಿಸಿದರೆ ಸಾರ್ವಜನಿಕರಿಗೆ ಮತ್ತು ಟೂರಿಸ್ಟ್ ರವರಿಗೆ ಒಳ್ಳೆಯದು ಆಗುತ್ತದೆ ಎಂದು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಅವರ ಸಲಹೆಯ ಪ್ರಕಾರ ನಾನು ತಕ್ಷಣವೇ ಒಂದು ಪತ್ರವನ್ನು ಬರೆದು, ಡಿ.ಪಿ.ಆರ್., ಮಾಡಿ estimate ಅನ್ನು ಕಳುಹಿಸಬೇಕೆಂದು ಅಲ್ಲಿನ ಡಿ.ಸಿ., ಮತ್ತು ಕಮಿಷನರ್‌ಗೆ ಪತ್ರವನ್ನು ಬರೆಯುತ್ತೇನೆ. ಮತ್ತೆ ಯಾವುದಾದರೂ ಸಲಹೆ ಇದ್ದರೆ ಹೇಳಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಲ್ಪ-ಸ್ವಲ್ಪ ಮಾಹಿತಿ ಬಂದಿದೆ. ನಾನು ಕೆರೆಯ ಬಗ್ಗೆ ಮತ್ತು ಆ ಕೆರೆ ಎಲ್ಲಿದೆ ಎನ್ನುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೊಡುತ್ತೇನೆ. ಮಾನ್ಯ ಸಚಿವರಿಗೆ ಇದರ ಬಗ್ಗೆ ಮಾಹಿತಿ ಇಲ್ಲ. ತಿರುಳ್ಗನ್ನಡ ನಾಡು, ಕೊಪಣಚಲ ಎಂದರೆ ಈಗಿನ ಕೊಪ್ಪಳವು ಸುತ್ತಮುತ್ತಲ ಗುಡ್ಡಗಾಡು ಪ್ರದೇಶದಿಂದ ತುಂಬಿರುವ ಗುಡ್ಡ ಬೆಟ್ಟಗಳ ನಡುವಿನ ತಗ್ಗು ಪ್ರದೇಶ ಕಾಣಿಸುತ್ತದೆ. ಬಯಲು ಸೀಮೆಯಾಗಿರುವಂತಹ ಈ ಕೊಪ್ಪಳವು ನೀರಿಗಾಗಿ ಎಲ್ಲಾ ಕಾಲಕ್ಕೂ ಸಮಸ್ಯೆಯನ್ನು ಎದುರಿಸಿದ ನೆಲವಿದು. ಡಾಲ್ಮನ್ ಕಾಲಘಟ್ಟದ ಕುರುಹುಗಳು ಬೆಟ್ಟ-ಗುಡ್ಡಗಳಲ್ಲಿ ಇದೆ. ಇದು ಈ ಒಂದು ಕೆರೆಯ ಹಿಂಭಾಗದಲ್ಲಿ ಬರುತ್ತದೆ. ಇದು ತುಂಬಾ ಐತಿಹಾಸಿಕವಾಗಿರುವಂತಹದ್ದು. ಸಾವಿರಾರು ಕಾಲದ ಇತಿಹಾಸ ಇರುವಂತಹ ಒಂದು ಕೆರೆ. ಆ ಕೆರೆಯ ಭಾಗದಲ್ಲಿ ನಾಗರಿಕತೆ ಬೆಳೆದಂತೆಲ್ಲಾ ಅಲ್ಲಿ ದಂಡೆ ಎನ್ನುವಂತಹದ್ದು ವಿಸ್ತಾರವಾಗಿ ಬಂದಿರುವಂತಹದ್ದು. ಅಲ್ಲಿನ ಹಳೆಯ ಕಾಲದ ಬಹಳಷ್ಟು ಜನರು ಈ ಕೆರೆಯ ಬಗ್ಗೆ ಹೇಳುತ್ತಾರೆ. ಈ ಕೆರೆ ತುಂಬಾ ಪುರಾತನ ಕಾಲದ್ದಾಗಿದೆ. ಇವತ್ತಿನ ದಿನ 60 ರಿಂದ 70 ವರ್ಷಗಳಷ್ಟು ವಯಸ್ಸಾಗಿರುವಂತಹ ಯಜಮಾನರು ನಿಜವಾಗಿಯೂ ಹುಲಿಕೆರೆ ಎನ್ನುವಂತಹದ್ದು ಬಹಳ ಐತಿಹಾಸಿಕವಾಗಿರುವಂತಹದ್ದು ಎಂದು ಹೇಳುತ್ತಾರೆ. ಈ ಕೆರೆಯನ್ನು ಈ ರೀತಿ ಧ್ವಂಸ ಮಾಡುತ್ತಿರುವುದರಿಂದ ಉಳಿಸಬೇಕೆನ್ನುವುದೂ ಇದೆ. ಈ ಒಂದು ಕೆರೆಯ ಬಗ್ಗೆ ಹೇಳಬೇಕೆಂದರೆ, ಹಿಂದೆ ಒಂದು ಕಾಲದಲ್ಲಿ ಈ ಕೆರೆ ಬಹಳ ಅಡವಿಯಲ್ಲಿರುವಂತಹದ್ದು. ಇದು ಕೊಪ್ಪಳ ನಡುವೆ ಇಲ್ಲ. ಊರ ಹೊರಗಡೆ ಇದೆ. ಸುತ್ತಲೂ ಗುಡ್ಡ, ಮೇಲೆ ಕೋಟೆ ಇದೆ. ಕೋಟೆಯ ಕೆಳಭಾಗದಲ್ಲಿ ಸವಿಸ್ತಾರವಾಗಿರುವಂತಹ ಕೆರೆ ಇದು. ಆ ಕೆರೆ ಹೇಗಿದೆ ಎಂದರೆ, ನಿಜವಾಗಿಯೂ ಹಳೆಯ ಕಾಲದಂತೆಯೇ ಇದೆ. ಇವತ್ತು ಶಿವರಾತ್ರೇಶ್ವರ ಗುಡಿ ಎನ್ನುವಂತಹದ್ದು ಹುಟ್ಟಿಕೊಂಡಿದೆ. ಹಿಂದೆ ಈಶ್ವರ ದೇವಸ್ಥಾನ ಇತ್ತು. ಅದರ ಮುಂದೆ ಬರುವಂತಹದ್ದು ಈ ಕೆರೆ. ಈ ಕೆರೆಯ ವಿಸ್ತೀರ್ಣ ಎಷ್ಟಿದೆ ಎಂದರೆ, ಸರ್ವೆ ನಂಬರ್: 61, 62 ಮತ್ತು 63 ರಲ್ಲಿ ಕೆರೆಯ ಅಂದಾಜು ವಿಸ್ತೀರ್ಣ 80 ರಿಂದ 100 ಎಕರೆ ಇದೆ. ಇವತ್ತು ಆ ಕೆರೆ ಒತ್ತುವರಿ ಮಾಡಿ ಮಾಡಿ, ಅಳತೆ ಮೀರಿ ಇವತ್ತು ತನ್ನ ಸೌಂದರ್ಯವನ್ನು ಕಳೆದುಕೊಂಡಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(399) 16.3.2026 1.10 ಪಿಕೆ:ಬಿಎನ್ಎಸ್ (ಉಪ ಸಭಾಪತಿಗಳ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್ (ಮುಂದು)**

ಹಿಂದಿನ ಕಾಲದಲ್ಲಿ ಹುಲಿಗಳು ಈ ಕೆರೆಗೆ ಬಂದು ನೀರು ಕುಡಿಯುತ್ತಿದ್ದುದರಿಂದ ಇದಕ್ಕೆ "ಹುಲಿಕೆರೆ" ಎನ್ನುವ ಹೆಸರು ಬಂದಿದೆ. ಆ ಪ್ರದೇಶ ಜನನಿಬಿಡವಾಗಿರುವಂಥದ್ದಲ್ಲ, ಸೌಂದರ್ಯಕ್ಕೆ ಹೆಸರು ವಾಸಿಯಾಗಿರುವಂಥದ್ದಾಗಿದೆ. ಒಬ್ಬ ಮನುಷ್ಯ ಆ ಜಾಗಕ್ಕೆ ಹೋಗಿ, ಅಲ್ಲಿ ಕುಳಿತುಕೊಂಡರೆ ನೆಮ್ಮದಿ ಪಡೆಯುತ್ತಾನೆ. ಶಿವರಾತ್ರಿಯ ಹಿಂದಿನ ದಿನ ಅಲ್ಲಿ ಚೆನ್ನಾಗಿ ನೀರು ತುಂಬಿಕೊಂಡಿತ್ತು. ಅದು ಜೀವನಾಡಿಯಾದ ಕೆರೆಯಾಗಿದೆ. ಒಂದು ಕಾಲದಲ್ಲಿ ಆ ಕೆರೆಯಿಂದ ಕೊಪ್ಪಳಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಎಂತಹ ಬೇಸಿಗೆ ಇದ್ದರೂ ಆ ಕೆರೆಯಲ್ಲಿ ನೀರು ಇರುತ್ತದೆ. ಇದರಿಂದ ಸುತ್ತಮುತ್ತಲಿನ ಪ್ರದೇಶದ ಬೋರ್‌ವೆಲ್‌ಗಳಲ್ಲಿ ನೀರು ಇರುತ್ತದೆ. ಆ ಕೆರೆ ಯಾವತ್ತೂ ಬರಿದಾಗಿರುವ ದೃಶ್ಯ ಕಂಡುಬಂದಿಲ್ಲ. ಅಂತಹ ಸಮೃದ್ಧವಾಗಿದ್ದಂಥ ಕೆರೆಯನ್ನು ಇದ್ದಕಿದ್ದ ಹಾಗೆ, ಓಲೈಕೆ ಮಾಡುವುದರ ಸಲುವಾಗಿ, 8 ಅಡಿ ಎತ್ತರದ ಆ ಕೆರೆಯನ್ನು ಒಡೆದು, ಅಲ್ಲಿರುವ ನೀರನ್ನು ಆಚೆ ಬಿಟ್ಟಿದ್ದಾರೆ. ಮಾನ್ಯ ಸಭಾಪತಿಗಳೇ, ಸರ್ಕಾರದ ಆದೇಶದ ಪ್ರಕಾರ, ಕೆರೆ 5 ಎಕರೆ ಇದ್ದರೆ ಬಫರ್ ಜೋನ್ ಶೂನ್ಯ ಆಗಿರುತ್ತದೆ, 10 ಎಕರೆಯಲ್ಲಿ ಕೆರೆ ಇದ್ದರೆ 5 ಮೀಟರ್ ಬಫರ್ ಜೋನ್ ಇರುತ್ತದೆ, 20 ಎಕರೆಯಲ್ಲಿ ಕೆರೆ ಇದ್ದರೆ ನಿರ್ದಿಷ್ಟವಾಗಿ ಇಂತಿಷ್ಟು ಎಂದು ಇರುತ್ತದೆ. ಅಂದಾಜು 100 ಎಕರೆ ವ್ಯಾಪ್ತಿಯನ್ನು ಹೊಂದಿರುವ ಈ ಕೆರೆಗೆ ಕನಿಷ್ಠ 25 ಮೀಟರ್ ಬಫರ್ ಜೋನ್ ಇರಬೇಕು. ಅಂಥದ್ದನ್ನು ಒಡೆದು ಹಾಕಿ, ಒಡ್ಡನ್ನು ಒಡೆದು ನೀರೆಲ್ಲವನ್ನೂ ಬಿಟ್ಟಿದ್ದಾರೆ. ಅಗಲ 40 ಅಡಿ ಮತ್ತು ಉದ್ದ 100 ಮೀಟರ್‌ನಷ್ಟು ರಸ್ತೆಯನ್ನು ಮಾಡಿ, ಹಿಂದೆ ಇರುವಂತಹ ಗುಲಾಬ್ ಷಾ ದರ್ಗಾಕ್ಕೆ ಅನಧಿಕೃತವಾಗಿ ರಸ್ತೆ ಮಾಡಿಕೊಡುತ್ತಿದ್ದಾರೆ. ನಾನು ಶ್ರೀ ಸುರೇಶ್ ಇಟ್ನಾಳ್, ಕಮಿಷನರ್ ಅವರನ್ನು ಈ ಕುರಿತು ಕೇಳಿದೆ. ಅವರು, ಅದು ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಪೌರಾಡಳಿತ ಇಲಾಖೆಯ ಕಮಿಷನರ್ ಅವರನ್ನು ಕೇಳಿದಾಗ ಅವರು, ನನಗೆ ಗೊತ್ತಿಲ್ಲ ಎಂದು ಹೇಳಿದರು. ಹಾಗಾದರೆ ಇದನ್ನು ರಸ್ತೆ ಮಾಡಲು ಬಿಟ್ಟು ಕೊಟ್ಟವರು ಯಾರು? ಆ ಕೆರೆಯನ್ನು ಒಡೆಸುವುದಕ್ಕೆ ಅನುಮತಿ ಕೊಟ್ಟವರು ಯಾರು? ಇವತ್ತು ಆ ಕೆರೆಯನ್ನು ಒಡೆದು ನೀರನ್ನು ಬಿಟ್ಟರು, ಆದರೆ ಇದರಿಂದ, ಬರುವಂತಹ ಬೇಸಿಗೆಯಲ್ಲಿ ತುಂಬಾ ಕಷ್ಟವಾಗುತ್ತದೆ. ಈಗಾಗಲೇ ತುಂಗಭದ್ರಾ ಜಲಾಶಯದಲ್ಲಿ ಕುಡಿಯುವ ನೀರಿನ ಪ್ರಮಾಣ ಕಡಿಮೆಯಾಗಿದೆ. ಈ ಕೆರೆಯೇ ಜೀವನಾಧಾರ. ಸದರಿ ಕೆರೆಯನ್ನು ತುಂಬಿಸಬೇಕಾದ ಸರ್ಕಾರ, ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ಯಾರನ್ನೋ ಓಲೈಕೆ ಮಾಡುವುದಕ್ಕೋಸ್ಕರ ಕೆರೆ ಒಡ್ಡನ್ನು ಒಡೆದು ನೀರು ಬಿಟ್ಟು, ರಸ್ತೆ ನಿರ್ಮಾಣ ಮಾಡುವುದರ ಸಲುವಾಗಿ ಹೀಗೆ ಮಾಡಿದ್ದಾರೆ. ಒಂದು ಟೆಂಡರ್ ಕರೆದಿಲ್ಲ; ಯಾವ ಅಧಿಕಾರಿಗಳಿಗೂ ಹೇಳಿಲ್ಲ. ನಾನೇ ಅಲ್ಲಿ ಭೇಟಿ ಕೊಟ್ಟು ನೋಡಿದಾಗ ಅಲ್ಲಿ ದೊಡ್ಡ ದೊಡ್ಡ ಟಿಪ್ಪರ್, ಜೆ.ಸಿ.ಬಿ. ನಿಂತುಕೊಂಡಿತ್ತು. ನಾನು ಪೊಲೀಸ್‌ರಿಗೆ ಈ ಮಾಹಿತಿ ಕೊಟ್ಟಾಗ ಅವರು ಕೀ ಪಡೆದುಕೊಂಡು ಡ್ರೈವರ್‌ಗಳನ್ನು ಬಿಟ್ಟುಬಿಟ್ಟರು. ಪುನಃ ಯಥಾ ಪ್ರಕಾರ ನಡೆಯಿತು. ನಾವು ಪ್ರತಿಭಟನೆ ಮಾಡಿದಾಗ ಆ ಜಾಗವನ್ನು ಹದ್ದುಬಸ್ತಿಗೆ ತೆಗೆದುಕೊಂಡರು. ಕೆರೆಯನ್ನು ರಸ್ತೆ ಮಾಡುವುದಕ್ಕೆ ಬಿಟ್ಟುಕೊಟ್ಟಿರುವುದು

ನಮಗೆ ಯಾರಿಗೂ ಗೊತ್ತಿಲ್ಲ. ಈ ಘಟನೆ ನಡೆದಿರುವುದು ನೋಡಿದರೆ ಬಹಳ ಬೇಸರ ಎನಿಸುತ್ತದೆ. ದಿನಾಂಕ 25.2.2026 ರಂದು ಅಲ್ಲಿಗೆ ಭೇಟಿ ಕೊಟ್ಟು, ಅಕ್ರಮ ಚಟುವಟಿಕೆಗಳನ್ನು ಪರಿಶೀಲಿಸಿ ನಗರಸಭೆಗೆ ಮಾಹಿತಿ ನೀಡಿದರೆ ಅವರಿಂದ ಒಂದೂ ಕೂಡ ಆ ಕುರಿತು ಉತ್ತರ ಬಂದಿಲ್ಲ. ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ, ಅವರೂ ಸಹ, ನಮ್ಮ ಹತ್ತಿರ ಈ ಕುರಿತು ಮಾಹಿತಿ ಇಲ್ಲ ಎಂದು ಹೇಳಿದರು. ಇದು ಏನು ತೋರಿಸಿ ಕೊಡುತ್ತದೆ? ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ, 2001ರ ಹಿಂಚ್‌ಲಾಲ್ ತಿವಾರಿ ಕೇಸ್, 2011ರ ಜಗಪಾಲ್ ಸಿಂಗ್, 2006ರ ಎಂ.ಸಿ. ಮಹೆತಾ Vs ಕಮಲನಾಥ್ ಪ್ರಕರಣಗಳಲ್ಲಿ ಕೆರೆ ಮತ್ತು ಜಲ ಸಂರಕ್ಷಣೆ ಕಡ್ಡಾಯ ಎಂದು ಸ್ಪಷ್ಟಪಡಿಸಲಾಗಿದೆ. ಪ್ರಕೃತಿ ಸಂಪನ್ಮೂಲಗಳನ್ನು ಸಾರ್ವಜನಿಕ ಹಿತಾಸಕ್ತಿಗೋಸ್ಕರ ಸರ್ಕಾರದ ಅಧೀನದಲ್ಲಿ ಉಳಿಸಲಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ರಾಜ್ಯಪಾಲರಿಗೆ ಮತ್ತು ನಮ್ಮ ಸಭಾನಾಯಕರಿಗೂ ಪತ್ರ ಬರೆದಿದ್ದೇನೆ. ಅವರಿಂದ ಯಾವುದೇ ಉತ್ತರಗಳು ಬಂದಿಲ್ಲ. ನನ್ನ ಹತ್ತಿರ ಈಗಿನ ಕೆರೆಯ ಸ್ಥಳದ ಫೋಟೋಗಳಿವೆ, ದಯವಿಟ್ಟು ನೋಡಿ. ಕೆರೆಯ ಒಡ್ಡನ್ನು ಒಡೆದು ನೀರನ್ನು ಬಿಟ್ಟಿರುವುದು ಗೊತ್ತಾಗುತ್ತದೆ. ಕೆರೆಯ ಮಧ್ಯಭಾಗದಿಂದ ರಸ್ತೆಯನ್ನು ನಿರ್ಮಾಣ ಮಾಡುತ್ತಿರುವುದರ ಫೋಟೋ ಕೂಡ ಇದೆ. ಈ ರಸ್ತೆಯನ್ನು ದರ್ಗಾಕ್ಕೆ ಹೋಗುವ ಸಲುವಾಗಿ ಮಾಡಿರುವಂಥದ್ದು. ಅನಧಿಕೃತವಾಗಿ ಇಂಥದ್ದನ್ನು ಏಕೆ ಮಾಡಬೇಕು? ಇದಕ್ಕೆ ಯಾರ ಅನುಮತಿಯೂ ಇಲ್ಲ; ಟೆಂಡರ್ ಕೂಡ ಮಾಡಿಲ್ಲ. ಯಾರಿಗೂ ಹೇಳಿಲ್ಲ; ಯಾರನ್ನೂ ಕೇಳಲಿಲ್ಲ. ಕೆರೆಯನ್ನು ಅನಾಥ ಆಸ್ತಿ ಎಂದು ತಿಳಿದುಕೊಳ್ಳುವುದು ತಪ್ಪು ಎಂಬುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸಚಿವರು ಇದಕ್ಕೆ ಸ್ಪಷ್ಟನೆ ಕೊಡಬೇಕು.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಈ ಕುರಿತು ಗಂಭೀರವಾಗಿ ಮಾತನಾಡಿದ್ದಾರೆ. ಕೆರೆಗಳ ಸಂರಕ್ಷಣೆ ಬಗ್ಗೆ ಸುಪ್ರಿಂ ಕೋರ್ಟ್‌ನ ಅನೇಕ ತೀರ್ಪುಗಳು ಇವೆ. ನಮ್ಮ ಸರ್ಕಾರದ ಆದೇಶ ಕೂಡ ಇದೆ. ಮಾನ್ಯ ಸದಸ್ಯರು ಏನು ಮಾಹಿತಿ ಕೊಟ್ಟಿದ್ದಾರೋ ಆ ಕುರಿತು ತಕ್ಷಣ ನಾನು ಡಿ.ಸಿ. ಅವರ ಜೊತೆ ಮಾತನಾಡಿ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತೇನೆ. ಈ ಜಾಗವನ್ನು ಸರ್ವೆ ಮಾಡಿಸಿ ಒಟ್ಟು ಆ ಜಾಗ ಎಷ್ಟಿದೆ ಎಂದು ಬೌಂಡರಿ ಫಿಕ್ಸ್ ಮಾಡಿಸಿ, ಈ ಐತಿಹಾಸಿಕ ಕೆರೆಯನ್ನು ಅಭಿವೃದ್ಧಿಪಡಿಸಿ, ಪ್ರವಾಸೋದ್ಯಮ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೆ ಮಾಡುತ್ತೇವೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಗಳೆ, ಇಲ್ಲಿಯವರೆಗೆ ಸರ್ವೆ ಮಾಡಿಸಿರುವಂತಹ ವರದಿಯನ್ನು ಕೊಟ್ಟಿಲ್ಲ. ಅಲ್ಲಿ ಎಷ್ಟು ಎಕರೆ ಜಾಗ ಇದೆಯೆಂದು ನಾನು ಸರ್ವೆ ನಂಬರ್ ಪ್ರಕಾರ ಹೇಳಿದ್ದೇನೆ. ಇವತ್ತು 81 ಎಕರೆ 29 ಗುಂಟೆ ಕೆರೆ ಇದೆ. ಈಗ ಸರ್ವೆ ಮಾಡಿಸಿರುವಂತಹ ವರದಿಯಲ್ಲಿ, 57 ಎಕರೆ ಜಾಗ ಮಾತ್ರ ಇದೆ ಎನ್ನುವ ಮಾಹಿತಿ ಬಂದಿದೆ. ಇವರು ಹೇಗೆ ಸರ್ವೆ ಮಾಡಿದ್ದಾರೆ? ಉಳಿದ ಭೂಮಿ ಎಲ್ಲಿ ಹೋಗಿದೆ? ಯಾವ ಮಾನದಂಡದ ಆಧಾರದ ಮೇಲೆ ಕೆರೆಯ ಜಾಗ 57 ಎಕರೆ ಇದೆ ಎಂದು ಹೇಳಿದ್ದಾರೆ? ಮಿಕ್ಕ ಜಾಗ ಎಲ್ಲಿಗೆ ಹೋಯಿತು? ಇನ್ನೂ ಸರ್ವೆ ಮಾಡುತ್ತಲೇ ಇದ್ದಾರೆ. ಆ ಕೆರೆಗೆ ಬಫರ್ ಜೋನ್ ಮಾಡಿಕೊಡಬೇಕು. ಆ ಕೆರೆಯಲ್ಲಿ ಕಲ್ಲು-ಮಣ್ಣುಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಕೆರೆ ನೀರು ಸಂಗ್ರಹ ಕಡಿಮೆಯಾದರೆ ಜನರಿಗೆ ಕಷ್ಟವಾಗುತ್ತದೆ. ಅಲ್ಲಿನ

ಪೌರಾಡಳಿತ ಅಧಿಕಾರಿಯವರು ಇದನ್ನು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಅಲ್ಲಿನ ಕೆರೆಯ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲ. ಕೆರೆಯ ಸುತ್ತಲು ಲಾರಿಗಳು, ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಿ ತೊಳೆಯುವುದರಿಂದ ಕೆರೆ ಮಲೀನವಾಗಿದೆ. ಇದರಿಂದ ಆ ನೀರು ಯಾವುದಕ್ಕೂ ಉಪಯೋಗವಾಗದೇ ಇರುವ ಹಾಗೆ ಆಗುತ್ತಿದೆ. ಇಷ್ಟೊಂದು ನಿರ್ಲಕ್ಷ್ಯ ಏಕೆ? ಸರ್ವೆ ಮಾಡಿಸಿದ ನಂತರ 57 ಎಕರೆ ಜಾಗ ಮಾತ್ರ ಅಲ್ಲಿದೆ ಎಂದು ಹೇಳುತ್ತಿದ್ದೀರಿ. ಉಳಿದ ಜಾಗ ಎಲ್ಲಿ ಹೋಯಿತು? ಯಾವ ಮಾನದಂಡದ ಆಧಾರದ ಮೇಲೆ ಇವರು ಕೆರೆಯನ್ನು ಸರ್ವೆ ಮಾಡಿದ್ದಾರೆ. ಮೂಲ ಕೆರೆ ಎಷ್ಟು ವ್ಯಾಪ್ತಿಯಲ್ಲಿತ್ತೋ ಅಷ್ಟೇ ಜಾಗದಲ್ಲಿ ಕೆರೆ ನಿರ್ಮಾಣ ಆಗಬೇಕು. ಅಲ್ಲಿರುವಂತಹ ಶಿವರಾತ್ರೇಶ್ವರ ದೇವಸ್ಥಾನ ಅತ್ಯಂತ ಪುರಾತನವಾದುದಾಗಿದೆ. ನೀವು ಇತಿಹಾಸ ತೆಗೆದು ನೋಡಿ. ಜಿ.ಪಿ.ಎಸ್.ಫೋಟೋ ತೆಗೆದು ನೋಡಿದರೆ ಗೊತ್ತಾಗುತ್ತದೆ. ಆ ಜಾಗವನ್ನು ಯಾರು ಅತಿಕ್ರಮಣ ಮಾಡಿದ್ದರೆಂದು ಅಲ್ಲಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಆದರೆ, ಜಿಲ್ಲಾಡಳಿತದ ವತಿಯಿಂದ ಸರಿಯಾದ ಕ್ರಮ ಕೈಗೊಳ್ಳುತ್ತಿಲ್ಲ. ಒಂದು ಸಣ್ಣ ಸ್ಟೋರ್ ಇಟ್ಟುಕೊಂಡರೂ ನಗರಾಯುಕ್ತರು ಬಂದು ಕಿತ್ತು ಹಾಕುತ್ತಾರೆ. ಹೀಗಿರುವಾಗ ಇಷ್ಟು ದೊಡ್ಡ ಕೆರೆಯನ್ನು ನುಂಗಿರುವಂಥ ಮಾಹಿತಿ ಇಲ್ಲ ಎಂದು ಅಧಿಕಾರಿಗಳು ಹೇಳಿದರೆ ಅವರು ತಮ್ಮ ಕೆಲಸ ಮಾಡಲು ಅಸಮರ್ಥರು ಎಂದು ಹೇಳಬೇಕಾಗುತ್ತದೆ. ಆ ಕೆರೆ ನೀರು ಉಳಿದರೆ ನಮ್ಮ ಭಾಗದ ಬೋರ್‌ವೆಲ್‌ಗಳಲ್ಲಿ ನೀರು ಇರುತ್ತದೆ. ಮಾನ್ಯ ಸಚಿವರು ಯಾವ ವರ್ಷದಿಂದ ಸರ್ವೆ ಮಾಡಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಅಲ್ಲಿರುವ ಸಾಹಿತಿಗಳು, ಇತರ ದೊಡ್ಡ ವ್ಯಕ್ತಿಗಳು, ನಮಗಂತೂ ಮಾತನಾಡುವುದಕ್ಕೆ ಆಗುವುದಿಲ್ಲ; ನೀವಾದರೂ ಇದರ ಬಗ್ಗೆ ಮಾತನಾಡಿ ಎಂದು ಹೇಳಿದ್ದಾರೆ. ಅಲ್ಲಿರುವ ಅಧಿಕಾರಿಗಳು ಒಂದು ಮಾತನ್ನೂ ಕೇಳುತ್ತಿಲ್ಲ. ಆ ಜಾಗದಲ್ಲೇನು ಜೆ.ಸಿ.ಬಿ.ಯವರು ಇದ್ದಾರೋ ಅವರು, ಇಲ್ಲಿನ ಮಣ್ಣನ್ನು ಆಕಡೆ ಹಾಕುವುದು, ಆಕಡೆಯ ಮಣ್ಣನ್ನು ಈಕಡೆ ಹಾಕಿ, ನಮ್ಮ ಕಣ್ಣ ಮುಂದೆಯೇ ನಾಟಕ ಆಡುತ್ತಾರೆ. ಜಾಗವನ್ನು ಅತಿಕ್ರಮಣ ಮಾಡಿರುವಂತಹ ವ್ಯಕ್ತಿಗಳು ಯಾರು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಅವರು, ನಾನೇ ಹಾಕಿಸಿದು; ನಾವೇ ಮಾಡಿದ್ದು ಎಂದು ಒಪ್ಪಿಕೊಳ್ಳುತ್ತಿದ್ದಾರೆ. ಅವರಿಗೆ ಯಾರು ಅನುಮತಿ ಕೊಟ್ಟರು? ಆ ಕೆರೆ ಸರ್ಕಾರದ್ದಾಗಿದೆ. ಕೆರೆ ಸಂರಕ್ಷಣೆ ಮಾಡಬೇಕಾದವರೂ ನಾವೇ ಇನ್ನೊಬ್ಬರನ್ನು ಓಲೈಕೆ ಮಾಡುವ ಸಲುವಾಗಿ ರಸ್ತೆ ಮಾಡಿಕೊಡುತ್ತೇವೆ ಎಂದು ಹೇಳುವುದು ಸರಿಯೇ? ತಮ್ಮ ಮನೆಯ ಅಂಗಳದ ಅರ್ಧ ಇಂಚು ಜಾಗವನ್ನು ಅಂತಹ ವ್ಯಕ್ತಿಗಳು ಬಿಟ್ಟು ಕೊಡುತ್ತಾರೆಯೇ? ಸರ್ಕಾರದ ದಾಖಲೆಯ ಪ್ರಕಾರ ಅಲ್ಲಿ ಎಷ್ಟು ಎಕರೆ, ಎಷ್ಟು ಗುಂಟೆ ಜಾಗ ಇದೆ ಎನ್ನುವ ಮಾಹಿತಿ ನಮಗೆ ಸಿಗಬೇಕು. ಆ ಜೆ.ಸಿ.ಬಿ.ಗಳನ್ನು ವಶಕ್ಕೆ ಪಡೆದುಕೊಂಡು, ಒಡ್ಡು ಒಡೆದಿರುವವರ ಮೇಲೆ ಸ್ವಯಂಪ್ರೇರಿತರಾಗಿ ಕೇಸ್ ಬುಕ್ ಮಾಡಬೇಕು. ಇನ್ನೊಮ್ಮೆ ಅವರು ಆ ಕೆರೆಯ ತಂಟೆಗೆ ಬರಲಾರದ ಹಾಗೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

(400) 16-3-2026 1.20 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆರೆಯ ಬಗ್ಗೆ ಬಹಳ ಗಂಭೀರವಾಗಿದ್ದಾರೆ. ಅದರ ಸಲುವಾಗಿ ನಾನು ನೇರವಾಗಿ ಜಿಲ್ಲಾಧಿಕಾರಿಯವರ ಜೊತೆ ಚರ್ಚೆ ಮಾಡಿದ್ದೇನೆ. ಮಾನ್ಯ ಸದಸ್ಯರು 100 ಎಕರೆ ಎಂದು ಹೇಳಿದ್ದಾರೆ. ನನಗೆ 65 ಎಕರೆ ಎನ್ನುವ ಮಾಹಿತಿ ಬಂದಿದೆ. ಆದರೂ ಮತ್ತೊಂದು ಸಲ ಸರ್ವೇ ಮಾಡಿ ಯಾರ್ಯಾರು ಒತ್ತುವರಿ ಮಾಡಿದ್ದಾರೆ ಅವರ ಮೇಲೆ ಗಂಭೀರವಾಗಿ ಕ್ರಿಮಿನಲ್ ಕೇಸ್ ದಾಖಲು ಮಾಡುವುದಕ್ಕೆ ಹೇಳುತ್ತೇನೆ. ಅದರ ಜೊತೆಗೆ ಅಲ್ಲಿ ಒಂದು ಐತಿಹಾಸಿಕ ದೇವಸ್ಥಾನ ಇದೆ ಎಂದು ಹೇಳಿದ್ದಾರೆ. ನನಗಿರುವ ಮಾಹಿತಿ ಪ್ರಕಾರ ಅಲ್ಲಿ ಒಂದು ದೇವಸ್ಥಾನ, ಒಂದು ದರ್ಗಾ ಇದೆ. ನಾನು ಇನ್ನೂ ವಿವರವಾದ ಮಾಹಿತಿಗಳನ್ನು ತಂದು ಮಾನ್ಯ ಸದಸ್ಯರ ಜೊತೆ ಮಾತನಾಡುತ್ತೇನೆ. ನಾವು ಕೆರೆಗಳನ್ನು ರಕ್ಷಣೆ ಮಾಡಬೇಕಾಗುತ್ತದೆ. ಇತ್ತೀಚಿನ ದಿವಸಗಳಲ್ಲಿ ನಮಗೆ ನೀರು ಬಹಳ ಮುಖ್ಯವಾಗಿದೆ. 15 ದಿವಸ ಅಥವಾ ಒಂದು ತಿಂಗಳನಲ್ಲಿ ಸರ್ವೇ ಮಾಡಿ ಮೊದಲು detailed ಮಾಹಿತಿಯನ್ನು ತರಿಸಿ ನಾನು ಮತ್ತೊಂದು ಸಲ ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆರೆ smash ಆಗಿ 15 ದಿನಗಳಾಯಿತು. ಇದುವರೆವಿಗೂ ಸರ್ವೇ ಕಾರ್ಯ ಕುಂಠಿತವಾಗಿತ್ತು. ಅವರು 57 ಎಕರೆ ಎಂದು ಯಾವ ಮಾನದಂಡದಿಂದ ಅಳತೆ ಮಾಡಿದ್ದಾರೆಯೋ ಗೊತ್ತಿಲ್ಲ. ಅಲ್ಲಿರತಕ್ಕಂಥವರಿಗೆ ಮೊದಲು ಕ್ರಮ ತೆಗೆದುಕೊಂಡಿಲ್ಲ. ಅವರು ಎಂತಹ ದೊಡ್ಡ ವ್ಯಕ್ತಿ ಆಗಿದ್ದರೂ ಚಿಂತೆಯಿಲ್ಲ, ಇವತ್ತು ಯಾರು ಅದನ್ನು ಮಾಡಿಸಿದ್ದಾರೆಯೋ ಅವರನ್ನು ಮೊದಲು ಹಿಡಿಯಬೇಕಾಗಿದೆ. ಅವರಿಗೆ ಸರಿಯಾದ ಮಾಹಿತಿ ಇಲ್ಲ. ಮಾನ್ಯ ಸಚಿವರಿಗೆ ಅದೇನು ಎಂಬುದು ಗೊತ್ತಿದೆ. ಆ ಕೆರೆಯ ಸಂಪೂರ್ಣ ಅಳತೆ ಇದೆ, ಸರ್ವೆ ನಂಬರ್ ಇದೆ, ಎಲ್ಲವೂ ನಮ್ಮ ಹತ್ತಿರ ಮಾಹಿತಿ ಇದೆ. ಮಾನ್ಯ ಸಚಿವರಿಗೆ ಮಾಹಿತಿ ಬೇಕು ಎಂದರೆ ನಾನು ಕೊಡುತ್ತೇನೆ. ಮಾನ್ಯ ಸಚಿವರು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. "ನಿಯಮ ಬಾಹಿರವಾಗಿ ಮಣ್ಣು ಸುರಿದು ನಿರ್ಮಿಸಲಾಗಿದ್ದ ಅನಧಿಕೃತ ರಸ್ತೆಯನ್ನು ಸಂಪೂರ್ಣವಾಗಿ ತೆರವುಗೊಳಿಸಿ" ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಮಣ್ಣು ಹಾಗೆಯೇ ಇದೆ. ನನ್ನ ಹತ್ತಿರ proof ಗಳಿವೆ. ಇತ್ತೀಚಿನದ್ದು ಬೆಳಗ್ಗೆ ಫೋಟೋ ಬಂದಿದೆ. ಹೇಗೆ ಇತ್ತೋ ಅದೇ ರೀತಿ ಇದೆ. ಸುಮ್ಮನೆ ತೆರವುಗೊಳಿಸಿದೆ ಎಂದು ಹೇಳುತ್ತಿದ್ದಾರೆ. ಸರ್ವೇ ಮಾಡಿದ್ದೇವೆ ಎಂದ ಮೇಲೆ ನನಗೆ ಏಕೆ ವರದಿಯನ್ನು ಕಳುಹಿಸಿ ಕೊಡಲಿಲ್ಲ? ಸರ್ವೆ ಮಾಡಿದ್ದೇವೆಂದು ಮಾನ್ಯ ಸಚಿವರಿಗೆ ಹೇಳಿದ್ದಾರಲ್ಲಾ, ಆದರೆ ಸರ್ವೆ ಮಾಡಿಲ್ಲ. ನನಗೆ ಬಂದ ಮಾಹಿತಿ ಪ್ರಕಾರ 57 ಎಕರೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನೂರು ಎಕರೆ ಇರುವಂಥದ್ದು. ಉಳಿದಿರುವುದನ್ನು ಇವರು ಬೇರೆಯದ್ದಕ್ಕೆ ಬಳಸುತ್ತಿದ್ದಾರೆಯೇ?

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, 15 ದಿವಸ ಅಥವಾ ಒಂದು ತಿಂಗಳನಲ್ಲಿ....

**ಶ್ರೀಮತಿ ಹೇಮಲತಾ ನಾಯಕ್:-** ಈಗಾಗಲೇ 15 ದಿನಗಳಾಗಿವೆ. ಇನ್ನೂ ಎಷ್ಟು ದಿನ ಬೇಕು? ಕೆರೆಯಲ್ಲಿ ಒಡ್ಡು ಹಾಕಬೇಕಾದರೆ 10 feet height ಹಾಗೂ 40x100 ಚದರ ಅಡಿ ಮೂರೇ ದಿನಗಳಲ್ಲಿ ಹಗಲು-ರಾತ್ರಿ ಜೆ.ಸಿ.ಬಿ., ಟಿಪ್ಪರ್‌ಗಳಲ್ಲಿ ಹೊಡೆದು ಹಾಕಿದ್ದಾರೆ. ಅದನ್ನು ತೆಗೆಯಬೇಕಾದರೆ ಏಕೆ ಈ ರೀತಿ ಮಾಡುತ್ತಿದ್ದಾರೆ? ಅವರು ಮಾಡಿರುವ ಅಕ್ರಮ ಕಣ್ಣಿಗೆ ಕಾಣುತ್ತಿದೆ. ತೆಗೆದು ಕ್ಲಿಯರ್ ಮಾಡಿಕೊಡುವುದಕ್ಕೆ ಏಕೆ ಇಷ್ಟು ತಡ ಮಾಡುತ್ತಿದ್ದಾರೆ? ಇವರು ಓಲೈಕೆ ಮಾಡುತ್ತಿದ್ದಾರೆ. ಅಲ್ಲಿ ನಡೆಯುತ್ತಿರುವುದು ಎಲ್ಲವೂ ಕೂಡ ಅಕ್ರಮವಾಗಿದೆ. ಅಲ್ಲಿ ಮಸೀದಿಯನ್ನು ಅಕ್ರಮವಾಗಿ ಕಟ್ಟಿದ್ದಾರೆ. ಅವರು ಕಾಂಪೌಂಡ್ ಕಟ್ಟಿರುವುದು ಅಕ್ರಮವಾಗಿದೆ. ಬೇಲಿ ಎದ್ದು ಹೊಲ ಮೇಯುತ್ತಿದೆ ಎನ್ನುವ ಹಾಗೆ ಇವರೇ ಈ ರೀತಿ ಸಪೋರ್ಟ್ ಮಾಡಿದರೆ ಹೇಗೆ? ಪುರಾತತ್ವ ಇಲಾಖೆಯಲ್ಲಿ ಈ ಕೆರೆ ಇರುವಂಥದ್ದು. ನನ್ನ ಆಸ್ತಿ, ನಿಮ್ಮ ಆಸ್ತಿಯನ್ನು ಮನಸ್ಸು ಒಪ್ಪಿಕೊಂಡು ಬಿಡಬಹುದು. ಆದರೆ, ಇದೇನು? ಒಂದು ತಿಂಗಳು ಬೇಡ, ಎಂಟು ದಿನ ಬೇಡ, ಈ ಸದನ ಮುಗಿಯುವುದರೊಳಗೆ ನನಗೆ ವರದಿಯನ್ನು ತರಿಸಿಕೊಡಿ. ಇಲ್ಲದಿದ್ದರೆ ನಾನು ಹೋರಾಟ ಮಾಡುವುದಕ್ಕೆ ಸದನದ ಬಾವಿಗೆ ಇಳಿಯಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ರಹೀಂ ಖಾನ್‌ರವರೇ, ಸದನ ಮುಗಿಯುವುದರೊಳಗೆ ಅವರೇನು ಹೇಳಿದ್ದಾರೆ ಆ ಮಾಹಿತಿ ಎಲ್ಲಾ ತರಿಸಿಕೊಡಿ. ಅವರು ಹೇಳಿರುವುದನ್ನು ನೀವು ತಿಳಿದುಕೊಳ್ಳಿ. ತಿಂಗಳು ಬೇಡ, ಸದನ ಮುಗಿಯುವುದರೊಳಗೆ ಮಾಹಿತಿಯನ್ನು ತರಿಸಿ ಕೊಡಬೇಕು.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರು handover ಮಾಡಿದ ವಸ್ತುಗಳನ್ನು ಪೊಲೀಸ್ ಇಲಾಖೆಯವರು ಅಲ್ಲಿಯೇ ಬಿಟ್ಟಿದ್ದಾರೆ. ಅವರ ಟಿಪ್ಪರ್, ಜೆ.ಸಿ.ಬಿ.ಗಳನ್ನು handover ಮಾಡಿಕೊಳ್ಳಬೇಕು. ಹೊಡೆದಿರುವಂತಹ ವ್ಯಕ್ತಿಯ ಮೇಲೆ suo-moto case book ಮಾಡಬೇಕು. ಅನಂತರ ಇದಕ್ಕೆ ಯಾರು ಕಾರಣರಾಗಿದ್ದಾರೆ ಅವರಿಗೆ ನೋಟಿಸ್ ಕೊಟ್ಟು, ನಮಗೆ ನ್ಯಾಯ ಒದಗಿಸಿ ಕೊಡಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಈ ಕೆರೆಯ ಬಗ್ಗೆ ಮಾನ್ಯ ಸದಸ್ಯರು ಬಹಳ serious ಆಗಿದ್ದಾರೆ. ಇದು ಒಬ್ಬರ seriousness ಅಲ್ಲ. ಕೆರೆ ಒತ್ತುವರಿ ಇಲ್ಲದೆ ಯಾವ ಕೆರೆಯೂ ಈ ರಾಜ್ಯದಲ್ಲಿ ಇಲ್ಲ. ಎಲ್ಲಾ ಕೆರೆಗಳ ಒತ್ತುವರಿಯಾಗುತ್ತಿದೆ. ಅದರಿಂದಾಗಿ serious ಆಗಿ ಸದಸ್ಯರು ಇರುವುದಕ್ಕಿಂತ ಹೆಚ್ಚಾಗಿ ಸರ್ಕಾರ ಇರಬೇಕು. ಕೆರೆ, ಜಮೀನು, ಗುಂಡು ತೋಪುಗಳಾಗಲಿ ಕಾನೂನಿನಲ್ಲಿ ಒತ್ತುವರಿ ಮಾಡುವಂಥದ್ದು ಇಲ್ಲ. ಇದೊಂದು ಅಲ್ಲ, ಇಡೀ ರಾಜ್ಯದ ಕೆರೆಗಳನ್ನು ಸರ್ವೆ ಮಾಡಿಸಿ, ಒತ್ತುವರಿಗಳನ್ನು ತೆರವುಗೊಳಿಸಿ. ಇಲ್ಲದಿದ್ದರೆ ಬೆಂಗಳೂರಿನಲ್ಲಿ ಇವತ್ತು ಕೆರೆಗಳ ಪರಿಸ್ಥಿತಿ ಏನಾಗಿದೆ, ಇವತ್ತು ನಮಗೆ ಕೆರೆಗಳೇ ಸಿಗುತ್ತಿಲ್ಲ. ಮಳೆ ಬಂದರೆ ಇವತ್ತು ನೀರು ಮನೆಗಳಿಗೆ ಹೋಗಿ ನಿಲ್ಲುತ್ತದೆ. ಅದು ಗ್ರಾಮೀಣ ಪ್ರದೇಶಕ್ಕೂ ತಲುಪುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ರೀತಿಯ ಒತ್ತುವರಿಗಳು ಪದೇ-ಪದೇ ಆಗುತ್ತಾ ಹೋದರೆ ಆಮೇಲೆ ನಮಗೆ ಜಮೀನುಗಳೇ ಸಿಗುವುದಿಲ್ಲ.

ಸರ್ಕಾರ ಇರುವ ಕೆರೆಗಳನ್ನು ಉಳಿಸಿಕೊಳ್ಳದಿದ್ದರೆ ಮತ್ತೆ ಇನ್ನೇನು ಮಾಡುವುದಕ್ಕಾಗುತ್ತದೆ? ಇವರು ಒಂದು ತೀರ್ಮಾನಕ್ಕೆ ಬರಬೇಕು. ಒಂದು ಕೆರೆ ಮಾತ್ರ ಅಲ್ಲ, ಯಾವುದೇ ಕೆರೆ ಒತ್ತುವರಿಯನ್ನು ಎಂಥ ಪ್ರಭಾವಿ ವ್ಯಕ್ತಿಯಾಗಿದ್ದರೂ ಸ್ಮಶಾನ, ಗುಂಡು ತೋಪು ಮತ್ತು ಕೆರೆಗಳನ್ನು ಯಾವುದೇ ಕಾರಣಕ್ಕೂ ನಾವು ಬಿಡುವುದಿಲ್ಲ ಎಂದು ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ ಮತ್ತು ಕಾರ್ಯೋನ್ಮುಖವಾಗಲಿ. ಗುಂಡು ತೋಪುಗಳನ್ನು, ಸ್ಮಶಾನಗಳನ್ನು ಮತ್ತು ಕೆರೆಗಳನ್ನು ಸರ್ವೇ ಮಾಡಿಸುತ್ತೇನೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಲಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕೆರೆಗಳ ಪ್ರಾಧಿಕಾರ ನನಗೆ ಸಂಬಂಧಪಟ್ಟಿರುವಂಥದ್ದು. ಏಕೆಂದರೆ, ಇದರ ಬಗ್ಗೆ ಮಾನ್ಯ ಸಚಿವರಿಗೆ ಗೊತ್ತಾಗುವುದಿಲ್ಲ. ಈ ಸರ್ಕಾರ ಬಂದ ನಂತರ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಕೆರೆಗಳ ಪ್ರಾಧಿಕಾರದ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಯವರು ಆಗಿರುತ್ತಾರೆ. ಒಟ್ಟು ಕೆರೆಗಳು ಎಷ್ಟಿವೆ, ಅದರ ಒತ್ತುವರಿ ಏನಿದೆ, ಇದರ ಪೂರ್ಣವಾದ ವಿವರ ಬೇಕೆಂದು ಕಂದಾಯ ಇಲಾಖೆಗೆ ಒಪ್ಪಿಸಿದ್ದೇವೆ. ಒಟ್ಟಾರೆ ಎಲ್ಲಾ ಕೆರೆಗಳನ್ನು ಸೇರಿಸಿ ಅದು Major Irrigation Department, Minor Irrigation Department and R.D.P.R. (Rural Development and Panchayat Raj) Department ಇರಬಹುದು ಮತ್ತು ಅರಣ್ಯ ಇಲಾಖೆ ಇರಬಹುದು. 41,849 ಅಂತಿಮ ಅಂಕಿ-ಅಂಶಗಳಾಗಿವೆ. ಜಿಲ್ಲಾಧಿಕಾರಿಗಳು, ಕೆಲವು ಅಂಕಿ-ಅಂಶಗಳು ಹೆಚ್ಚು ಕಡಿಮೆಯಾದರೆ within ಆರು ತಿಂಗಳುಗಳು... ಏಕೆಂದರೆ, ಕೆರೆಗಳ ಸಮಕ್ಷಮ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿಯವರೇ ಅಧ್ಯಕ್ಷರಾಗಿರುತ್ತಾರೆ. ರಾಜ್ಯ ಮಟ್ಟದಲ್ಲೂ ಒಂದು ಸಮಿತಿ ಇದೆ. ಎಲ್ಲಾ ಸೇರಿ ಒಟ್ಟಾರೆ 41,849 ಕೆರೆಗಳು ಅಂತಿಮವಾಗಿದೆ. ಕಳೆದ ಒಂದು ವರ್ಷದಿಂದ ಸತತವಾಗಿ ಮಾನ್ಯ ಮುಖ್ಯಮಂತ್ರಿಗಳು 3-4 ಸಭೆಗಳನ್ನು ಮಾಡಿ ಕಂದಾಯ ಇಲಾಖೆಯ ಸಚಿವರಿಗೆ ಜವಾಬ್ದಾರಿಯನ್ನು ವಹಿಸಿದ್ದಾರೆ. ಈಗಾಗಲೇ ಕಂದಾಯ ಸಚಿವರು ಸುಮಾರು 40,320 ಕೆರೆಗಳನ್ನು ಸರ್ವೇ ಮಾಡಿಸಿದ್ದಾರೆ. ಸುಮಾರು 15,525 ಕೆರೆಗಳು ಒತ್ತುವರಿಯಾಗಿವೆ ಎಂದು ಅವರು ಮ್ಯಾಪ್‌ಗಳೆಲ್ಲಾ ತಯಾರು ಮಾಡಿ, ರೆಡ್ ಮಾರ್ಕ್ ಮಾಡಿ ಯಾವ ಸ್ಥಳದಲ್ಲಿ ಒತ್ತುವರಿಯಾಗಿದೆ ಎಂದು ಮಾಡಿಕೊಂಡಿದ್ದಾರೆ. ಅದರಲ್ಲಿ ಈಗಾಗಲೇ ಸುಮಾರು 12,000 ಕೆರೆಗಳಷ್ಟು ತೆರವುಗೊಳಸುತ್ತಿದ್ದಾರೆ. ಮೊನ್ನೆ ಬಜೆಟ್‌ನಲ್ಲೂ ಕೆರೆಗಳ ಸಮಕ್ಷಮಕ್ಕಾಗಿ ಏನು ಮಾಡಬೇಕೆಂದು ಅರಣ್ಯ ಇಲಾಖೆಯವರನ್ನು ಜೊತೆಗೆ ಸೇರಿಸಿಕೊಂಡು ಅತಿಕ್ರಮಣ ತೆರವುಗೊಳಸಿರುವ ಕೆರೆಗಳ ಸುತ್ತ trench ತೊಡಿ ಗಿಡಗಳನ್ನು ಹಾಕಬೇಕೆನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಅವರು ಹೇಳದ ಹಾಗೆ ಅರ್ಬನ್ ಏರಿಯಾದವರು, ಮುನ್ಸಿಪಾಲಿಟಿಯವರು ಮತ್ತು ಕಾರ್ಪೋರೇಶನ್‌ರವರು ಅದನ್ನು ಸಂರಕ್ಷಣೆ ಮಾಡಬೇಕೆಂದು ಅವರ ಗಮನಕ್ಕೆ ತರಲಾಗಿದೆ. ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಹತ್ತಾರು ಬಾರಿ ಸಭೆಗಳನ್ನು ಮಾಡಿ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ಮಾಡಿದ್ದಾರೆ. ಈ ಮಾರ್ಚ್ 31 ರೊಳಗೆ ಪೂರ್ಣವಾದ ವಿವರಗಳನ್ನು ಕೊಡಬೇಕೆಂದು ಹೇಳದ್ದಾರೆ. ಈಗಾಗಲೇ ಮ್ಯಾಪ್‌ಗಳೆಲ್ಲಾ ಬಂದಿವೆ. ಒಂದು ದಿವಸ ಎಲ್ಲಾ ಮಾನ್ಯ

ಸದಸ್ಯರುಗಳನ್ನು ಕರೆದು presentation ಮಾಡುವುದಕ್ಕೆ ಮಾನ್ಯ ಕಂದಾಯ ಸಚಿವರು, ನಾವು ಮಾತನಾಡಿದ್ದೇವೆ. ಏಕೆಂದರೆ, 22,000 ಕೆರೆಗಳು ಅವರಿಗೆ ಸಂಬಂಧಪಟ್ಟಿವೆ. ಮಾನ್ಯ ಕಂದಾಯ ಸಚಿವರು, ನಾವು ಸೇರಿ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಗಂಭೀರವಾಗಿ ತೆಗೆದುಕೊಂಡು ಬರುವಂತಹ ದಿನಗಳಲ್ಲಿ ಯಾರು ಒತ್ತುವರಿ ಮಾಡದ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಹಾಗೆಯೇ, lakes ಜೊತೆಗೆ parks ಅನ್ನು ಸಹ include ಮಾಡಬೇಕು.

**ಸಭಾಪತಿಯವರು:-** ಮಾನ್ಯ ರಹೀಂ ಖಾನ್‌ರವರೇ, ನೀವು ತಕ್ಷಣವೇ ನಿಮ್ಮ ಅಧಿಕಾರಿಗಳನ್ನು ಕರೆದು ಸ್ಟೇ ಮಾಡಿ. ಈಗ ನೀವು ಹೋದ ನಂತರ ಫೋನ್ ಮಾಡಿ ಸ್ಟೇ ಮಾಡಿ, ಮುಂದಿನ ಚರ್ಚೆಯನ್ನು ಮಾಡೋಣ. ತಕ್ಷಣವೇ ಅದನ್ನು ಸ್ಟೇ ಮಾಡಿ.

**ಶ್ರೀ ರಹೀಂ ಖಾನ್:-** ಇವತ್ತೇ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ರಹೀಂ ಖಾನ್‌ರವರೇ, ಈ ವಿಷಯ ಗುರುವಾರ, ಶುಕ್ರವಾರವೇ ಬರಬೇಕಾಗಿತ್ತು. ನೀವು ಸದನಕ್ಕೆ ಬರಲಿಲ್ಲವೆಂದರೆ ನೀವು ನನ್ನ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿತ್ತಲ್ಲವೇ? ನೀವು ಬೇಕಾದ ಹಾಗೆ ಸೋಮವಾರ, ಮಂಗಳವಾರ ಬಂದರೆ ಹೇಗೆ?

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಪತ್ರವನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ನನಗೆ ಮಾಹಿತಿ ಬಂದಿಲ್ಲ. ಇನ್ನೊಮ್ಮೆ ಆ ರೀತಿ ಮಾಡಬೇಡಿ.

(ಮುಂದು)

(401) 16/03/2026 1:30 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಆ) ವಿಷಯ:- ರಾಜ್ಯ ಸರ್ಕಾರದ ವಿಶ್ವವಿದ್ಯಾಲಯಗಳು ಮೂಲಭೂತ ಸೌಕರ್ಯಗಳು ಹಾಗೂ ಪ್ರಾಧ್ಯಾಪಕರುಗಳ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶದ ಬಡ ಯುವಕ/ಯುವತಿಯರಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲವಾಗಿರುವ ಕುರಿತು.**

\- - - - - -

**ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ವಿಶ್ವವಿದ್ಯಾನಿಲಯಗಳು ಉನ್ನತ ಮಟ್ಟದಲ್ಲಿ ಮಕ್ಕಳ ಭವಿಷ್ಯವನ್ನು ನಿರ್ಮಾಣ ಮಾಡಬೇಕು ಮತ್ತು ಆರ್ಥಿಕ ಪ್ರಗತಿಗೆ ಪೂರಕವಾಗಿರಬೇಕು ಎನ್ನುವ ಉದ್ದೇಶದಿಂದ ನಾವು ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮಾಡಿದ್ದನ್ನು ಕಾಣುತ್ತೇವೆ. ಅಲ್ಲಿ ಸಾಮಾನ್ಯವಾಗಿ ಹಾಗೂ ಬಹುಮುಖ್ಯವಾಗಿ ಬೋಧನೆ ಮತ್ತು ಸಂಶೋಧನೆ ಈ ಎರಡೂ ಸರಿ ಸಮಾನವಾಗಿ ನಡೆಯಬೇಕು ಎನ್ನುವ ಉದ್ದೇಶದಿಂದ ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗಿವೆ. ಇವು ಪ್ರಾರಂಭವಾಗಿ ಹೆಚ್ಚು ಕಡಿಮೆ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇವು ಹುಟ್ಟಿವೆ. ಆದರೆ, ಬದಲಾದ ಆರ್ಥಿಕ ವ್ಯವಸ್ಥೆಯಲ್ಲಿ ಮತ್ತು ತಾಂತ್ರಿಕವಾಗಿ ಬದಲಾದ ವ್ಯವಸ್ಥೆಯಲ್ಲಿ ಮಧ್ಯಮ ವರ್ಗದವರು ಯಾರು ಇರುತ್ತಾರೆಯೋ, ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕಾದರೆ ಅವರು ಇಂಜಿನಿಯರಿಂಗ್ ಮತ್ತು ವೈದ್ಯಕೀಯಗಳಂತ ಪ್ರೋಫೆಷನಲ್ ಕೋರ್ಸ್‌ಗಳಿಗೆ ಕಳುಹಿಸುತ್ತಾರೆ. ಆದರೆ, ಶಿಕ್ಷಣ ಕೊಡಬೇಕು ಎಂಬ ಆಸೆಯಿಂದ ಇರುವ ಪಾಲಕರು ವಿಶೇಷವಾಗಿ ಗ್ರಾಮೀಣ ಭಾಗದಲ್ಲಿರುವ ಎಲ್ಲಾ ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂದು ಅಪೇಕ್ಷೆ ಪಟ್ಟಾಗ ಅವರು ವಿಶ್ವವಿದ್ಯಾನಿಲಯಗಳಲ್ಲಿ ಸಾಂಪ್ರದಾಯಿಕವಾಗಿ ಇರುವ ಕೋರ್ಸ್‌ಗಳಿಗೆ ಪ್ರಿಫರ್ ಮಾಡುತ್ತಾರೆ ಏಕೆಂದರೆ, ಅವರ ಸಾಮರ್ಥ್ಯವೂ ಅಷ್ಟೇ ಇರುತ್ತದೆ. ಇದರಲ್ಲಿ ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿನಿಯರು ಓದುವುದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ವಿದ್ಯಾರ್ಥಿನಿಯರು ಮುಂದೆ ಬರುತ್ತಿರಬೇಕಾದರೆ, ಅವರುಗಳನ್ನು ನಾವು ದೂರದ ಪ್ರದೇಶಗಳಿಗೆ ಕಳುಹಿಸುವುದಕ್ಕಾಗುವುದಿಲ್ಲ. ಹೀಗಾಗಿ ಹತ್ತಿರದಲ್ಲಿಯೇ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು ಎಂಬ ಅಪೇಕ್ಷೆಯಿಂದ ಇವತ್ತಿನ ದಿವಸ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯನ್ನು ಕಾಣುತ್ತೇವೆ. ಇದು ಒಂದು ಬದಲಾವಣೆಯಾಗಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಗ್ರಾಮೀಣ ಪ್ರದೇಶದಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಈ ಸಾಂಪ್ರದಾಯಿಕ ಕೋರ್ಸ್‌ಗಳ ಬೇಡಿಕೆ ಹೆಚ್ಚಾಗಿದೆ. ಹಾಗೂ ಅನಿವಾರ್ಯವಾಗಿ ಮುಂದಿನ ಉನ್ನತ ಶಿಕ್ಷಣ ಪಡೆಯಲು ವಿಶ್ವವಿದ್ಯಾನಿಲಯಗಳಿಗೆ ಅವರುಗಳು ಬರುತ್ತಿದ್ದಾರೆ. ಇಂತಹ ಅಪೇಕ್ಷೆಯಿಂದ ಬರತಕ್ಕ ಈ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಪಡೆಯಬೇಕೆಂದು ವಿಶ್ವವಿದ್ಯಾನಿಲಯಗಳಿಗೆ ಬಂದಾಗ ವಿಶ್ವವಿದ್ಯಾನಿಲಯಗಳ ಸ್ಥಿತಿಯನ್ನು ನೋಡಿದಾಗ, ಅವುಗಳು ಯಾವ ರೀತಿಯಲ್ಲಿ ಇವೆ ಎನ್ನುವುದು ನನ್ನ ಒಂದು ಮುಖ್ಯ ಪ್ರಶ್ನೆಯಾಗಿದೆ. ಏಕೆಂದರೆ, ನಾನು ಈ ಹಿಂದೆ ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಉತ್ತರಿಸಿದ ಮಾನ್ಯ ಸಚಿವರು 2,997 ಹುದ್ದೆಗಳು ಖಾಲಿ ಇವೆ ಎಂಬುದಾಗಿ ತಿಳಿಸಿದ್ದರು. ವಿಶ್ವವಿದ್ಯಾನಿಲಯಗಳಲ್ಲಿ 2,997 ಹುದ್ದೆಗಳು ಖಾಲಿ ಇವೆ ಎಂದರೆ, ಇದು ಸರಿ ಸುಮಾರು 66-70 ಪ್ರತಿಶತ ಹುದ್ದೆಗಳು ಖಾಲಿ ಇವೆ ಎಂದು ಸಚಿವರೇ ನಮಗೆ ಉತ್ತರಿಸಿದ್ದಾರೆ. ಅಂದರೆ ಇಷ್ಟೊಂದು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ವಿಶ್ವವಿದ್ಯಾನಿಲಯಗಳು ಯಾವ ರೀತಿಯಾಗಿ ನಡೆಯುತ್ತವೆ? ಅಲ್ಲಿ ಯಾವ ರೀತಿಯಾಗಿ ಬೋಧನೆಯನ್ನು ಮಾಡುತ್ತಾರೆ? ಇನ್ನು ಸಂಶೋಧನೆ ಎನ್ನುವುದು ನಂತರದ ಪ್ರಶ್ನೆಯಾಗಿದೆ. ಅಂದರೆ, ಈ ರೀತಿಯಾದ ವ್ಯವಸ್ಥೆಯು ಅಲ್ಲಿ ಇರಬೇಕಾದರೆ, ವಿಶ್ವವಿದ್ಯಾನಿಲಯಗಳ ಸ್ಥಿತಿ ಬಹಳ ದುಸ್ಥಿತಿಗೆ ಇದೆ ಮತ್ತು ಅದು ಬಹಳ ಅಧೋಗತಿಗೆ ಹೋಗಿದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವರಿಕೆ ಮಾಡಲು ನಾನು ಅಪೇಕ್ಷಿಸುತ್ತೇನೆ. ಏಕೆಂದರೆ, ಕರ್ನಾಟಕ ವಿಶ್ವವಿದ್ಯಾನಿಲಯವನ್ನು ತೆಗೆದುಕೊಂಡಾಗ, ಅಲ್ಲಿನ ನಿವೃತ್ತ ಸಿಬ್ಬಂದಿಗಳಿಗೆ ಪಿಂಚಣಿಯನ್ನು ಕೊಡುವುದಕ್ಕೆ ಅವರ ಬಳಿ ಹಣವಿಲ್ಲ. ಕಲಬುರಗಿ ವಿಶ್ವವಿದ್ಯಾನಿಲಯವನ್ನು ತೆಗೆದುಕೊಂಡಾಗ ಅಲ್ಲಿ ಸುಮಾರು 206 ಮಂಜೂರಾದ ಹುದ್ದೆಗಳಿವೆ. ಆದರೆ, ಈ ಪೈಕಿ ಅಲ್ಲಿ ಕೇವಲ 30 ಮಾತ್ರವೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಂದರೆ, ಇದು ಶೇಕಡಾ 10 ರಷ್ಟೂ ಸಹ ಇಲ್ಲಿ ಇಲ್ಲ. ಇಷ್ಟೊಂದು ಕಡಿಮೆ ಪ್ರಮಾಣದಲ್ಲಿರುವ ಪ್ರಾಧ್ಯಾಪಕರುಗಳನ್ನು ಇಟ್ಟುಕೊಂಡು ಅಂತಹ ದೊಡ್ಡ ಹಾಗೂ ಸುಮಾರು 40 ವರ್ಷಗಳಿಂದ ಇರುವ

ವಿಶ್ವವಿದ್ಯಾಲಯ ಇದು 1980 ನೇ ಇಸ್ವಿಯಲ್ಲಿ ಪ್ರಾರಂಭವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅವರು ಯಾವ ರೀತಿಯಾಗಿ ವಿಶ್ವವಿದ್ಯಾಲಯವನ್ನು ನಡೆಸಿಕೊಳ್ಳಬೇಕು? ಅದೇ ರೀತಿಯಾಗಿ ಜಾನಪದ ವಿಶ್ವವಿದ್ಯಾಲಯದಲ್ಲಿಯೂ ಸಹ ನೇಮಕಾತಿ ಇಲ್ಲ. ಅದೇ ರೀತಿಯಾಗಿ ಗದಗದಲ್ಲಿರುವ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದಲ್ಲಿ ವೈಸ್ ಚಾನ್ಸಲರ್ ಮತ್ತು ರಿಜಿಸ್ಟ್ರಾರ್ ಇವರುಗಳನ್ನು ಬಿಟ್ಟರೆ, ಖಾಯಂ ಹುದ್ದೆಗಳು ಯಾವುದೂ ಇಲ್ಲ. ಇನ್ನು ಹಂಪಿ ವಿಶ್ವವಿದ್ಯಾಲಯಕ್ಕೆ ಹೋದರೆ, ಇಲ್ಲಿ ಈಗಾಗಲೇ ನಿವೃತ್ತಿಯಾಗುವ 30 ಜನರಿದ್ದು, ನಿವೃತ್ತಿಯ ಅಂಚಿನಲ್ಲಿ 47 ಜನರಿದ್ದಾರೆ ಮತ್ತು ಕೇವಲ 30-40 ಜನರು ಮಾತ್ರವೇ ಅಲ್ಲಿ ಉಳಿಯುತ್ತಾರೆ. ಅಲ್ಲಿನ ಕರೆಂಟ್ ಬಿಲ್ ಅನ್ನು ಪಾವತಿಸುವುದಕ್ಕೂ ಸಹ ಇವರ ಬಳಿ ಹಣವಿಲ್ಲ ಎಂದರೆ, ಯಾವ ಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯಗಳು ಇವೆ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಪರಿಸ್ಥಿತಿಯಲ್ಲಿ ಇರುವ ವಿಶ್ವವಿದ್ಯಾಲಯಗಳಿಗೆ ಓದಲು ಹೋಗುವ ಮಕ್ಕಳ ಭವಿಷ್ಯ ಯಾವ ರೀತಿಯಾಗಿ ಸುಧಾರಣೆಯಾಗಲು ಸಾಧ್ಯವಾಗುತ್ತದೆ. ಅದಕ್ಕಾಗಿ ಇಂತಹ ಪರಿಸ್ಥಿತಿ ಸುಧಾರಣೆ ಆಗಬೇಕು ಎನ್ನುವ ವಿಷಯವನ್ನು ಇಟ್ಟುಕೊಂಡು ನಾನು ಮಾನ್ಯ ಸಚಿವರಲ್ಲಿ ಮನವರಿಕೆ ಮಾಡಲು ಇಷ್ಟಪಡುತ್ತೇನೆ.

ರಾಜ್ಯದಲ್ಲಿರುವ Visvesvaraya Technological University ಅನ್ನು ವಿ.ಟಿ.ಯು. ಎಂದು ನಾವು ಕರೆಯುತ್ತೇವೆ. ಅದು ಬೆಳಗಾವಿಯಲ್ಲಿದೆ. ಇದಕ್ಕೆ ಬರತಕ್ಕ ಆದಾಯ ಸರಿ ಸುಮಾರು 200 ಕೋಟಿ ರೂಪಾಯಿಗಳು. ಇದಕ್ಕೆ ಸ್ವತಂತ್ರವಾಗಿ ಆದಾಯ ಬರುತ್ತದೆ. ಅಂದರೆ, ಸರ್ಕಾರವು ಇದಕ್ಕೆ ಯಾವುದೇ ರೀತಿಯಾದ ಅನುದಾನವನ್ನು ಕೊಡುವುದಿಲ್ಲ. 200 ಕೋಟಿ ರೂಪಾಯಿಗಳ ಪೈಕಿ 197 ಕೋಟಿ ರೂಪಾಯಿಗಳು ಅಲ್ಲಿನ ವೇತನ ಮತ್ತು ಇನ್ನಿತರೆಗಳಿಗಾಗಿ ವ್ಯಯವಾಗುತ್ತದೆ. ಅಂದರೆ ಇವರಿಗೆ ಹಣವೇ ಉಳಿಯುವುದಿಲ್ಲ. ಅವರಿಗೆ ಬರತಕ್ಕ ಸಂಪನ್ಮೂಲ ಕೇವಲ ಅಲ್ಲಿ ವೇತನ ಪಾವತಿಸಲು ಹೋಗುತ್ತದೆ. ಇನ್ನು ಅಭಿವೃದ್ಧಿ ದೂರ ಉಳಿಯಿತು.

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಬಗ್ಗೆ ಹೇಳುವುದಾದರೆ, ಇದರಲ್ಲಿ ನಾನೂ ಸಹ ಕರ್ತವ್ಯ ನಿರ್ವಹಿಸಿದ್ದೇನೆ. ಇದು ತನಗೆ ಬರತಕ್ಕ ಶುಲ್ಕದಲ್ಲಿ 110 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟಿದೆ. ಈಗಾಗಲೇ ಅಲ್ಲಿ ಭೂಮಿ ಪೂಜೆ ಆಗಿ ನಾಲ್ಕು ವರ್ಷಗಳಾಗಿವೆ. ಅಲ್ಲಿ ಬರುವ ಶುಲ್ಕದಿಂದ 110 ಕೋಟಿ ರೂಪಾಯಿಗಳನ್ನು.... ಏಕೆಂದರೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸುಮಾರು 300-400 ಕಾಲೇಜುಗಳಿವೆ; ಹೀಗಾಗಿ ಇದಕ್ಕೆ ಚೆನ್ನಾಗಿ ಆದಾಯವಿತ್ತು. ಇಲ್ಲಿ ನಾನು ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ವಿಶೇಷ ಅಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ಅಲ್ಲಿ ಸುಮಾರು ಹಣ ಸಂಗ್ರಹವಾಗಿತ್ತು. ಇದೆಲ್ಲವನ್ನೂ ಸರ್ಕಾರಕ್ಕೆ ಕೊಟ್ಟಿದ್ದಾರೆ ಅಂದರೆ 110 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ನಾಲ್ಕು ವರ್ಷಗಳ ಹಿಂದೆಯೇ ಭೂಮಿ ಪೂಜೆ ಆಗಿತ್ತು. ಆದರೆ, ಇನ್ನೂ ಹೊಸ ಕ್ಯಾಂಪಸ್ ಹೋಗುವುದಕ್ಕೇ ಆಗುತ್ತಿಲ್ಲ. ಹೀಗಾಗಿ ಹೊಸ ಕ್ಯಾಂಪಸ್ ಹೋಗುವುದು ಯಾವಾಗ? ಏಕೆಂದರೆ, ಅಲ್ಲಿನ reserved forest ನವರು ಹಾಲಿ ಇರುವ ಕ್ಯಾಂಪಸ್ ಅನ್ನು ಖಾಲಿ ಮಾಡುವಂತೆ ಒತ್ತಡ ಹೇರುತ್ತಿದ್ದಾರೆ. ಅಲ್ಲಿ ಹೊಸ ಕ್ಯಾಂಪಸ್ ರೆಡಿಯಾಗುತ್ತಿಲ್ಲ. ನಾನು ಅಲ್ಲಿಗೆ ಹೋಗಿ ನೋಡಿದಾಗ... ಇದರ ಬಗ್ಗೆ ನಾನು ಬೆಳಗಾವಿಯ ಅಧಿವೇಶನದ

ಸಮಯದಲ್ಲಿ ಪ್ರಶ್ನೆಯನ್ನು ಕೇಳಿದ್ದೆನು. ಆಗಲೂ ಸಹ ನಾವು ಇದರ ಬಗ್ಗೆ ಚರ್ಚೆ ಮಾಡಿದಾಗ ಅಲ್ಲಿ ಕಳಪೆ ಕಾಮಗಾರಿ ಆಗುತ್ತಿದೆ ದಯಮಾಡಿ ಇದರ ಬಗ್ಗೆ ಗಮನ ಹರಿಸುವಂತೆ ಸಚಿವರಲ್ಲಿ ಕೇಳಿದಾಗ, ಸಚಿವರು ಇದರ ಬಗ್ಗೆ ಆಸಕ್ತಿಯನ್ನು ತೋರಿಸಿ, ಅಲ್ಲಿ ಗುಣಮಟ್ಟದ ಕಟ್ಟಡ ಬರುವುದಕ್ಕಾಗಿ ಪ್ರಯತ್ನ ಮಾಡಿದ್ದಾರೆ ಎಂದು ನಾನು ಇಲ್ಲಿ ನಂಬಿದ್ದೇನೆ. ಆ ವಿಶ್ವವಿದ್ಯಾಲಯದವರು ಹೊಸ ಕ್ಯಾಂಪಸ್ ಹೋಗುವುದು ಯಾವಾಗ? ಇದು ದೊಡ್ಡ ವಿಶ್ವವಿದ್ಯಾಲಯವಾಗಿದ್ದು, ಇದಕ್ಕೆ 400 affiliated ಕಾಲೇಜುಗಳಿವೆ. ಇಂತಹ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳಿಗೆ ನಾವು ಯಾವ ರೀತಿಯಾದ ನೆಲೆಗಟ್ಟನ್ನು ಕಟ್ಟಲು ಸಾಧ್ಯವಿದೆ ಎನ್ನುವುದೇ ನನ್ನ ಮೂಲ ಉದ್ದೇಶವಾಗಿದೆ.

ಇವತ್ತಿನ ದಿವಸ ಹಳೆಯ ವಿಶ್ವವಿದ್ಯಾಲಯಗಳಿಗೆ ಪಿಂಚಣಿ ಕೊಡಲು ಆಗುತ್ತಿಲ್ಲ; ಅಲ್ಲಿ ಖಾಲಿ ಇರುವ ಹುದ್ದೆಗಳು ಭರ್ತಿಯಾಗುತ್ತಿಲ್ಲ; ಅವುಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸರಿಯಾದ ಅನುದಾನ ಬರುತ್ತಿಲ್ಲ. ಅಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಬಂದ ಮಕ್ಕಳಿಗೆ ಯಾವ ರೀತಿಯಾದ ಭವಿಷ್ಯವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎನ್ನುವ ಅಂಶಗಳಿಗೆ ತಮ್ಮ ಮುಖಾಂತರ ಇದಕ್ಕೆ ಉತ್ತರವನ್ನು ಬಯಸಿ, ನಂತರದಲ್ಲಿ ಒಂದೆರೆಡು ನಿಮಿಷ ಮಾತನಾಡುತ್ತೇನೆ. ಸಂಶೋಧನೆಯ ಬಗ್ಗೆ ನಂತರದಲ್ಲಿ ಮಾತನಾಡುತ್ತೇನೆ.

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ,

(ಉತ್ತರವನ್ನು ಲಗತ್ತಿಸಿದೆ)

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ಹೇಳಿರುವ ವಿಚಾರದ ಬಗ್ಗೆ ನಾವು ಈಗಾಗಲೇ ಹಲವಾರು ಬಾರಿ ಚರ್ಚಿಸಿದ್ದೇವೆ. ಸದಸ್ಯರು ಮೂಲಭೂತವಾಗಿ ಸಾರ್ವಜನಿಕ ವಿಶ್ವವಿದ್ಯಾಲಯಗಳ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಮ್ಮಲ್ಲಿನ 32 ವಿಶ್ವವಿದ್ಯಾಲಯಗಳ ಪೈಕಿ ವಿಶೇಷ ವಿಶ್ವವಿದ್ಯಾಲಯಗಳಿವೆ. ಅವುಗಳು ಯಾವುವೆಂದರೆ, ಕನ್ನಡ ವಿಶ್ವವಿದ್ಯಾಲಯ, ಜನಪದ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯಗಳಾಗಿವೆ. ಇದರ ಜೊತೆಗೆ, U.V.C.E. (University of Visvesvaraya College of Engineering) ಇದೆ. ಇದು ಐ.ಐ.ಟಿ. (Indian Institute of Technology) ಮಾದರಿಯಲ್ಲಿ ಪ್ರತ್ಯೇಕವಾದ ವಿಶ್ವವಿದ್ಯಾಲಯವಾಗಿದೆ. ಈಗ ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಇದೂ ಸಹ ಒಂದು ವಿಶ್ವವಿದ್ಯಾಲಯವಾಗಿದೆ. ಹಾಲಿ ಇರುವ ವಿಶ್ವವಿದ್ಯಾಲಯಗಳ ವಿಚಾರಗಳು ಬಂದಾಗ, ಇದಕ್ಕೆ ಸ್ವಾಯತ್ತತೆ ಇರುತ್ತದೆ. ನೂರಾರು ವರ್ಷಗಳ ಇತಿಹಾಸವಿರುವ ಮೈಸೂರು ವಿಶ್ವವಿದ್ಯಾಲಯದಿಂದ ಹಿಡಿದು ಇತ್ತೀಚೆಗೆ ಆಗಿರುವ ವಿಶ್ವವಿದ್ಯಾಲಯಗಳನ್ನು ನೋಡಿದಾಗ, ಎಲ್ಲಾ ವಿಶ್ವವಿದ್ಯಾಲಯ ತನ್ನ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊಂಡು ಇವತ್ತಿನ ದಿವಸ ಅಲ್ಲಿನ ಚಟುವಟಿಕೆಗಳಾಗುತ್ತಿವೆ. ಈ ಹಿಂದೆ ಯು.ಜಿ.ಸಿ. ಯು ಸಂಶೋಧನೆಗೆ ಬಹಳಷ್ಟು ಪ್ರೋತ್ಸಾಹ ಕೊಡುವ ಪದ್ಧತಿ ಇತ್ತು. ಇದು ಕಳೆದ 10-12 ವರ್ಷಗಳಿಂದ ಬೇರೆ ರೀತಿಯಾಗಿ ಮಾರ್ಪಾಡಾಗಿದೆ. ಈಗ ಇಲ್ಲಿ ಮೂಲಭೂತವಾಗಿ ಇರುವುದು ಏನೆಂದರೆ, ವಿಶ್ವವಿದ್ಯಾಲಯಗಳ ಸಂಖ್ಯೆಗಳು ಜಾಸ್ತಿಯಾದ ಸಂದರ್ಭದಲ್ಲಿ ಮೂಲವಾಗಿ ಇರುವ ವಿಶ್ವವಿದ್ಯಾಲಯಗಳ ಆದಾಯ ಇವತ್ತಿನ ದಿವಸ ಕಡಿತಗೊಂಡಿವೆ.

(ಮುಂದು)

(402)16-03-2026/1-40/bkp-md (ಸಭಾಪತಿಯವರ ಉಪಸ್ಥಿತಿ)

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-**

ಏನಾಗಿದೆ, ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳ ಆ ಒಂದು ಪರಿಕಲ್ಪನೆ ಏನಿತ್ತು, 800 ಎಕರೆ, 1,200 ಎಕರೆಗಳಷ್ಟು ಜಾಗದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಇದೆ. ದೊಡ್ಡ ಮಟ್ಟದ ಕ್ಯಾಂಪಸ್‌ನ ವ್ಯವಸ್ಥೆ ಏನು ವಿದೇಶಗಳಲ್ಲಿ ಅ ಹಿಂದೆ ಕಂಡಂತಹ ವಿಶ್ವವಿದ್ಯಾನಿಲಯಗಳ ಮಾದರಿಯಲ್ಲಿ ಇಲ್ಲಿ ಪ್ರತಿಯೊಂದು ವಿಶ್ವವಿದ್ಯಾನಿಲಯ 800 ಎಕರೆ ಎಂದರೆ ನಮಗೆ ಗುಲ್ಬರ್ಗದಲ್ಲಿ 850 ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾನಿಲಯ ಇದೆ. ಈ ರೀತಿಯಲ್ಲಿ ಒಂದೊಂದು ವಿಶ್ವವಿದ್ಯಾನಿಲಯ ಒಂದೊಂದು ರೀತಿಯಲ್ಲಿ ಇರುತ್ತದೆ. ಈಗ ಏನಾಗಿದೆ ಎಂದರೆ ಅಲ್ಲಿ ಕಾಲಕ್ರಮೇಣ ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಿದ್ದವು. ಆದರೆ ಬೇಡಿಕೆಗಳು ಜಿಲ್ಲಾವಾರು ಮತ್ತು ಬೇರೆ ಬೇರೆ ರೀತಿಯಾದಂತಹ ಭಾವನಾತ್ಮಕ ಬೇಡಿಕೆಗಳಿಗೆ ಅನುಗುಣವಾಗಿ ಸರ್ಕಾರಗಳು ಭವಿಷ್ಯ ಒಂದು ಮುಂದಾಲೋಚನೆ ಅಥವಾ ಈ ವಿಶ್ವವಿದ್ಯಾಲಯಗಳು ಯಾವ ರೀತಿಯಲ್ಲಿ ಆಡಳಿತ ನಡೆಸಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಬಹುಶಃ ಆಳವಾಗಿ ಅಧ್ಯಯನ ಮಾಡದೇ ಆ ಒಂದು ಸಂದರ್ಭಕ್ಕೆ

ತೆಗೆದುಕೊಂಡ ತೀರ್ಮಾನಗಳ ಪರಿಣಾಮ ಇವತ್ತು ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ಆದಾಯದ ಕೊರತೆಯಾಗಿದೆ. ಪಿಂಚಣಿ ಕೊಡುವಂತಹ ಪರಿಸ್ಥಿತಿಯಲ್ಲಿ ಇಲ್ಲದ 4-5 ವಿಶ್ವವಿದ್ಯಾಲಯಗಳ ಪಿಂಚಣಿ ಸಮಸ್ಯೆಗೆ ಇಲ್ಲಿ 4-5 ಬಾರಿ ಚರ್ಚೆ ಮಾಡುತ್ತಿದ್ದೇವೆ. ಇದು ಒಂದು ಭಾಗವಾಗಿದೆ. ಈಗ ಅವರು ಹೇಳಿದ ಹಾಗೆ ನಮ್ಮ ಕನ್ನಡ ವಿಶ್ವವಿದ್ಯಾಲಯದ ವಿದ್ಯುತ್ ಬಿಲ್ ಕೊಡುವಂತಹದ್ದಕ್ಕೆ ಕೊರತೆ ಇದೆ ಎಂದು ಹೇಳಿ ಕಳೆದ ವರ್ಷ ಸುಮಾರು 7 ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೊಡುವಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ 2 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಕೊಡುವಂತಹ ಕೆಲಸ ಮಾಡಿದ್ದೇವೆ. ಮತ್ತೆ ಸಂಸ್ಕೃತ ವಿಶ್ವವಿದ್ಯಾಲಯಕ್ಕೂ ಸಹ 2 ಕೋಟಿ ರೂಪಾಯಿಗಳನ್ನು ಕೊಡುವಂತಹ ಕೆಲಸ ಮಾಡಿದ್ದೇವೆ. ಏಕೆಂದರೆ, ಅದಕ್ಕೆ ಬೇರೆ ಮೂಲಗಳಿಂದ ಅದಕ್ಕೆ ಸಂಯೋಜಿತ ಕಾಲೇಜುಗಳು ಲಭ್ಯವಿಲ್ಲದೆ ಇರುವಂತಹ ಸಂದರ್ಭದಲ್ಲಿ ಸರ್ಕಾರ ಅದಕ್ಕೆ ಕೈಹಿಡಿಯುವಂತಹ ಕೆಲಸವನ್ನು ಈ ವಿಶೇಷ ವಿಶ್ವವಿದ್ಯಾಲಯಗಳಿಗೆ ಮಾಡಬೇಕು. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಒಂದು ಕಡೆ ವಿಶೇಷ ವಿಶ್ವವಿದ್ಯಾಲಯಗಳ ಸಮಸ್ಯೆಗಳ ಒಂದು ಭಾಗವಾದರೆ, ನಮ್ಮ ಏನು ಸರ್ಕಾರಿ ವಿಶ್ವವಿದ್ಯಾಲಯಗಳು ಇವೆ, ಅವುಗಳ ಸಮಸ್ಯೆಗಳಲ್ಲಿ ಇರುವಂತಹ ಪರಿಸ್ಥಿತಿ ನಮ್ಮದಾಗಿದೆ. ಆದ್ದರಿಂದ, ಈ ವಿಚಾರವಾಗಿ ಸಮಗ್ರವಾಗಿ ಅಧ್ಯಯನ ಮಾಡಿ, ಈಗ ಅಂತಿಮ ವರದಿಕೊಡುವಂತಹ ಹಂತದಲ್ಲಿದೆ. ಈಗಾಗಲೇ ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆಯಲ್ಲಿ ಹಲವಾರು ಸುತ್ತಿನ...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ,

(ಗೊಂದಲ)

**ಡಾ|| ಎಂ.ಸಿ.ಸುಧಾಕರ್:-** ಈಗ ವಿಶ್ವವಿದ್ಯಾಲಯಗಳ ಸಮಗ್ರವಾದಂತಹ ಈ ಒಂದು ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕಂತಹ ನಿಟ್ಟಿನಲ್ಲಿ ಬಹಳಷ್ಟು ಚರ್ಚೆಗಳನ್ನು ಮಾಡಿದ್ದೇವೆ. ಇವತ್ತು ಏನು Faculty ಬಗ್ಗೆ ಮಾತನಾಡಿದರು, ಅದರ ಬಗ್ಗೆ ನಾವು ಕೊಟ್ಟಿರತಕ್ಕಂತಹ ಅಂಕಿ-ಅಂಶ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಮಂಡನೆ ಮಾಡಿದಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರತಕ್ಕಂತಹ ಹುದ್ದೆಗಳ ಪೈಕಿ ಈಗ 1000 ಹುದ್ದೆಗಳು ಈ ವರ್ಷದಲ್ಲಿ ತುಂಬುವುದಕ್ಕೆ ಅನುಮತಿಯನ್ನು ಕೊಡುವಂತಹ ಒಂದು ಘೋಷಣೆಯನ್ನು ಮಾಡಿದ್ದಾರೆ. ಈಗಾಗಲೇ ಕೆಲವು ವಿಶ್ವವಿದ್ಯಾಲಯಗಳಿಂದ ಕೆಲವು ಬೇಡಿಕೆಗಳು ಬಂದಿವೆ. ಸುಮಾರು 450 ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಕೆಲವರು ಕೇಳಿದ್ದಾರೆ. ಹೀಗಾಗಿ, 1000 ಹುದ್ದೆಗಳನ್ನು ಭರ್ತಿ ಮಾಡುವಂತಹದ್ದಕ್ಕೆ ಈಗ ತೀರ್ಮಾನವಾಗಿದೆ. ಮತ್ತೆ ಅವರು ಹೇಳಿದ ಹಾಗೆ ಬಹಳಷ್ಟು ಜನ ಬಡ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಕೆಲವು ವಿಷಯಗಳನ್ನು ಆಯ್ಕೆ ಮಾಡುವಂತಹದ್ದಕ್ಕೆ ವಿಳಂಬವಾಗಿದೆ. ಈಗ ಅಲ್ಲಿಯೂ ಕೂಡ ಇವತ್ತು emerging courses ಅನ್ನು ಪ್ರಾರಂಭ ಮಾಡುವಂತಹದ್ದನ್ನು ನಾವು ಮಾಡಿದ್ದೇವೆ. ಎಲ್ಲಾ ನಮ್ಮ affiliated ಸರ್ಕಾರಿ ಕಾಲೇಜುಗಳಲ್ಲಿ ಮಾಡಿದ್ದೇವೆ. 3 ವರ್ಷಗಳಿಂದ ಸುಮಾರು 40 ಸಾವಿರ ಹೊಸ ಕೋರ್ಸ್‌ಗಳಿಗೆ ನಾವು ಆದ್ಯತೆಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಮತ್ತೆ ಅದೇ

ರೀತಿಯಲ್ಲಿ ಅತಿಥಿ ಉಪನ್ಯಾಸಕರನ್ನು ಇಟ್ಟುಕೊಂಡು ಮಾಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇಲ್ಲವೆಂದು ನಾವು ಹೇಳುತ್ತಿಲ್ಲ. ಈಗ ಆ ಒಂದು ವಿಷಯಗಳಲ್ಲಿ ಕಾಯಂ ನೌಕರರನ್ನು, Faculties ತೆಗೆದುಕೊಳ್ಳಬೇಕೆನ್ನುವುದು ಕೂಡ ಆ rationalization ಮಾಡಬೇಕೆನ್ನುವುದರ ಬಗ್ಗೆ ಈಗಾಗಲೇ ಚರ್ಚೆಯಾಗಿ ನಾವು ವಿಶ್ವವಿದ್ಯಾನಿಲಯಗಳಿಂದ ನಮ್ಮ ಕುಲಪತಿಗಳಿಂದ ಮಾಹಿತಿಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈಗಾಗಲೇ Collegiate and Technical Education Department ಗೆ 2000 ಹುದ್ದೆಗಳನ್ನು ತುಂಬುವಂತಹದಕ್ಕೆ ಕಳೆದ ವರ್ಷವೇ ಅನುಮತಿಯನ್ನು ಕೊಟ್ಟಿದ್ದು, ಈಗ ಆ ವಿಚಾರ ಚರ್ಚೆಯಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಮೀಸಲಾತಿ ವಿಚಾರ ಇರುವ ಕಾರಣದಿಂದ ಅದರಲ್ಲೂ ಕೂಡ ಈಗ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡುವಂತಹ ಕೆಲಸ ಮಾಡಿದ್ದೇವೆ. A.I.C.T.E. (All India Council for Technical Education) ಯ ಒಂದು ನಿರ್ಣಯಗಳು ಏನಿರುತ್ತವೆ, ಅವುಗಳು ಬಹಳ ಸ್ಪಷ್ಟವಾಗಿದೆ. ಹಿಂದೆ ನಾವು Faculty position improve ಮಾಡುತ್ತೇವೆಂದು ಹೇಳಿ ನಾವು undertaking ಅನ್ನು ಕೊಟ್ಟಿದ್ದೆವು. ಆ ಕಾರಣದಿಂದ ತಾಂತ್ರಿಕ ಶಿಕ್ಷಣಕ್ಕೆ ಸುಮಾರು 941 ಹುದ್ದೆಗಳನ್ನು ತುಂಬಬೇಕು. ಇಂಜಿನೀಯರಿಂಗ್ ಕಾಲೇಜುಗಳಿಗೆ 187 ಹುದ್ದೆಗಳನ್ನು ಮಾಡಬೇಕು. ಮತ್ತೆ ಪದವಿಗೆ ಸುಮಾರು 800 ಚಿಲ್ಲರೆ ಹುದ್ದೆಗಳನ್ನು ತುಂಬಬೇಕೆನ್ನುವ ಬಗ್ಗೆ ಈಗಾಗಲೇ ಹಣಕಾಸು ಇಲಾಖೆ ತನ್ನ ಅನುಮತಿಯನ್ನು ಕೊಟ್ಟಿದೆ. ಆ ಪ್ರಕ್ರಿಯೆಗಳೊಂದಿಗೆ ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಒಂದು ಹಂತಕ್ಕೆ ಬಂದ ತಕ್ಷಣ ನಾವು ಪ್ರಾರಂಭ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಇದು ಖಂಡಿತವಾಗಿಯೂ ಸಹ ಬಹಳ ವರ್ಷಗಳಿಂದ ಬೋಧಕರ ನೇಮಕಾತಿ ಆಗದೇ ಇರತಕ್ಕಂತಹದ್ದು ಈ ರೀತಿಯಲ್ಲಿ ಸಮಸ್ಯೆಯಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸಂಶೋಧನೆಗೆ ಯಾವುದೇ ರೀತಿಯಲ್ಲಿ permanent Faculty ಇಲ್ಲವೆಂದರೆ ಸಂಶೋಧನೆ ಆಗಲಿಕ್ಕೆ ಸಾಧ್ಯವಿಲ್ಲ. ಅದರಲ್ಲಿ ಖಂಡಿತವಾಗಿಯೂ ಹಿನ್ನೆಡೆಯಾಗಿದೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡು ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ನೋಡಿಕೊಂಡು ಮಾಡುತ್ತಿದ್ದೇವೆ.

ಇನ್ನುಳಿದಂತೆ ಈಗ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬಗ್ಗೆ ಹೇಳಿದರು. ಅವರು ಹೇಳಿದ ನಂತರ ನಾವು ಈಗಾಗಲೇ ಅದಕ್ಕೆ ಅಂತಿಮವಾಗಿ finishing stage ನಲ್ಲಿ ಇದೆ. ಈಗಾಗಲೇ PM-USHA (Pradhan Manthri Uchchatar Shiksha Abhiyan) scheme ನಲ್ಲಿ 100 ಕೋಟಿ ರೂಪಾಯಿಗಳನ್ನು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಕ್ಕೆ ನಾವು ಕೊಡುವಂತಹದ್ದಾಗಿದೆ. ಅದರಲ್ಲಿ ಕೇಂದ್ರ ಸರ್ಕಾರದ 60% ಮತ್ತು ರಾಜ್ಯ ಸರ್ಕಾರದ 40% ಪಾಲನ್ನು ಹಾಕಿಕೊಳ್ಳುವುದರ ಜೊತೆಯಲ್ಲಿ ಅದರಲ್ಲೂ ಇನ್ನು ಸಹ ಎರಡು ಬ್ಲಾಕ್‌ಗಳನ್ನು ಕಟ್ಟುವಂತಹ ಕೆಲಸಕ್ಕೂ ಸಹ ಚಾಲನೆಯನ್ನು ಕೊಟ್ಟಿದ್ದೇವೆ. ಅದು ಪ್ರಾರಂಭವಾಗಿದೆ. ಅದಷ್ಟು ಬೇಗ ಈ ಕೆಲಸ ಮುಕ್ತಾಯ ಹಂತದಲ್ಲಿದೆ. ಕ್ಯಾಂಪಸ್ ಅನ್ನು ಅಲ್ಲಿಗೆ ಸ್ಥಳಾಂತರ ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. ಮತ್ತೆ ಅಲ್ಲಿಗೆ ರಸ್ತೆ ಸಂಪರ್ಕ ಇರಲಿಲ್ಲ. ಆ ಭಾಗದ ಗ್ರಾಮಸ್ಥರ ಸಮಸ್ಯೆಗಳಿತ್ತು. ಅಲ್ಲಿ ನಮಗೆ ಓಡಾಡಲಿಕ್ಕೆ ರಸ್ತೆಯನ್ನು

ಬಿಡಬೇಕೆಂದು ಹೇಳಿ ಬಹಳಷ್ಟು ಗೊಂದಲ ಇತ್ತು. ಆ ಸಮಸ್ಯೆಯನ್ನು ಸಹ ನಾವು ಪರಿಹಾರ ಮಾಡಬೇಕೆಂದು ಹೇಳಿ ಒಂಬತ್ತುವರೆ ಕೋಟಿ ರೂಪಾಯಿಗಳಲ್ಲಿ ಮುಖ್ಯ ರಸ್ತೆಯಿಂದ ಅಲ್ಲಿಗೆ ರಸ್ತೆ ಸಂಪರ್ಕ ಮಾಡುವಂತಹದ್ದಕ್ಕೂ ನಾವು ಲೋಕೋಪಯೋಗಿ ಇಲಾಖೆಯ ಮುಖಾಂತರ ಮಾಡಲಿಕ್ಕೆ ಮಾನ್ಯ ಲೋಕೋಪಯೋಗಿ ಸಚಿವರನ್ನು ವಿನಂತಿ ಮಾಡಿಕೊಂಡಾಗ ಅವರೂ ಸಹ ಸಹಾಯ ಮಾಡಿದ್ದಾರೆ. ಆ ಒಂದು ಕಾಮಗಾರಿ ಪ್ರಾರಂಭವಾಗಿದೆ. ಆದ್ದರಿಂದ, ಇವತ್ತು ಅಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವನ್ನು ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಎಂದು ಹೊಸ ಹೆಸರಾಗಿರುವಂತಹದ್ದನ್ನು ಈಗ ಮಾನ್ಯ ಸದಸ್ಯರು ಹೇಳಿದ ವಿಚಾರವಾಗಿ ಅಲ್ಲಿ ಆದಷ್ಟು ಬೇಗ ಮಾಡುತ್ತೇವೆ. ಮತ್ತೆ ಇನ್ನೊಂದು ಹಳೆಯ ಕ್ಯಾಂಪಸ್‌ನದ್ದು ಬಹುಶಃ ತಾವು ಅಲ್ಲಿ ಕೆಲಸ ಮಾಡಿದ್ದೇನೆಂದು, ಎಂದು ಹೇಳಿದಿರಿ. ಬಹುಶಃ ಯಾರು ಸಹ ಆಳವಾಗಿ ಇದರ ಬಗ್ಗೆ ಅಧ್ಯಯನ ಮಾಡಿರುವುದಿಲ್ಲ. ಹಳೆಯ ಕ್ಯಾಂಪಸ್ ಬಗ್ಗೆ ಅರಣ್ಯ ಇಲಾಖೆಯವರು ಬಹುಶಃ ನನ್ನ ಪ್ರಕಾರ ಅವರು ವಿನಾ ಕಾರಣ ನಮ್ಮನ್ನು ಅಲ್ಲಿಂದ ಸ್ಥಳಾಂತರ ಮಾಡುವಂತಹ ಕೆಲಸ ಮಾಡಿದ್ದಾರೆ. ಅಲ್ಲಿ Post Graduate Centre ಮತ್ತು ಕಚೇರಿ ಸಹ ಇದೆ. ಹಿಂದೆ ಆ ಜಾಗವನ್ನು ತೆಗೆದುಕೊಂಡಾಗ F.C. (Forest Clearance) ತೆಗೆದುಕೊಂಡು ಪರ್ಯಾಯವಾಗಿ ಅದಕ್ಕೆ ಜಾಗವನ್ನು ಕೊಟ್ಟು ಹಣ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದ ಮೇಲೆ ಎತಕ್ಕೆ ಇದು ನಮ್ಮ ಇಲಾಖೆಯ ಜಾಗವೆಂದು ಏತಕ್ಕೆ ಹೇಳುತ್ತಾರೆ? F.C. ಯಾದ ಮೇಲೆ ನಾನು ಒಂದು ಬಾರಿ ರಿವ್ಯೂ ಮಾಡುವಂತಹ ಸಂದರ್ಭದಲ್ಲಿ ನಾನು ವಿ.ಸಿ.ಯವರಿಗೆ ಹೇಳಿ, ಇಲ್ಲಾ, ಇದರಲ್ಲಿ ಏನೋ ಎಡವಟ್ಟು ಇದೆ. ಏನೋ error ಆಗಿದೆ. ಯಾರೋ ಸ್ವಲ್ಪ ಆಳವಾಗಿ ಇದರ ಬಗ್ಗೆ ಅಧ್ಯಯನ ಮಾಡದೇ ಮತ್ತೊಂದು ಕ್ಯಾಂಪಸ್ ಅನ್ನು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಅಲ್ಲಿ ಸುಮಾರು ಕಟ್ಟಡಗಳಾಗುವುದಕ್ಕೆ ವಿಶ್ವವಿದ್ಯಾಲಯದಿಂದ ಬಂಡವಾಳವನ್ನು ಹಾಕಿರುವುದಾಗಿದೆ. ಅದರ ಬಗ್ಗೆಯೂ ಸಹ ನಾನು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದ್ದು, ಆ ವಿಷಯ ಈಗ ಒಂದು ಹಂತದಲ್ಲಿದೆ. ನಾವು ಅಲ್ಲಿಯೇ 60 ಎಕರೆ ಜಾಗವನ್ನು ಉಳಿಸಿಕೊಳ್ಳುವಲ್ಲಿ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಅಲ್ಲಿಯೇ ಸ್ನಾತಕೋತ್ತರ ಪದವಿಯನ್ನು ಉಳಿಸುವಂತಹದ್ದಕ್ಕೂ ಆಲೋಚನೆ ಇದೆ. ಅದ್ದರಿಂದ, ಬಹುಶಃ ಇದೊಂದು ಗೊಂದಲವಾಗಿ ಮತ್ತೆ ಒಂದು ಹೊಸ ಜಾಗ ಹುಡುಕುವಂತಹ ಪರಿಸ್ಥಿತಿ ಮತ್ತು ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವಂತಹ ಒಂದು ಪರಿಸ್ಥಿತಿ ಉದ್ಭವವಾಗಿತ್ತು. ಆದ್ದರಿಂದ, ಇನ್ನುಳಿದ ಹಾಗೆ ನಾವು ಶಿಕ್ಷಣದ ಗುಣಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ನಾನು ಬಹಳ ವಿವರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ರಮೇಶ್ ಬಾಬು ರವರಿಗೆ ನಮ್ಮ ಇಲಾಖೆಯಲ್ಲಿ ನಾವು ತೆಗೆದುಕೊಂಡಿರತಕ್ಕಂತಹ ಹಲವಾರು ಸುಧಾರಣಾ ಕ್ರಮಗಳ ಬಗ್ಗೆ ಹೇಳಿದ್ದೇವೆ. ಉದಾಹರಣೆಗೆ Scout Programme ಎಂದು ಮಾಡಿದ್ದೇವೆ. 6 ವಿಶ್ವವಿದ್ಯಾಲಯಗಳಿಂದ ಒಂದೊಂದು ವಿಶ್ವವಿದ್ಯಾಲಯದಿಂದ 5 ಜನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ Scholars of Outstanding Under-Graduate Talent ಎಂದು ಹೇಳಿ ಅವರುಗಳನ್ನು United Kingdom ನಲ್ಲಿ University of East London ಗೆ ಅವರುಗಳಿಗೆ 15 ದಿವಸಗಳ

ಶೈಕ್ಷಣಿಕ ಅಧ್ಯಯನಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದು ಒಂದು ಬಹಳ ದೊಡ್ಡ ಕೆಲಸ. ಪ್ರತಿಯೊಂದು ವಿಶ್ವವಿದ್ಯಾಲಯದವರು ತಲಾ 5 ಲಕ್ಷ ರೂಪಾಯಿಗಳನ್ನು ಕೊಟ್ಟರು. ಒಂದೊಂದು ವಿದ್ಯಾರ್ಥಿಗೆ ಒಂದೊಂದು ಲಕ್ಷದಂತೆ ಕೊಟ್ಟರು. ಮತ್ತೆ ನಮ್ಮ British Council ಮುಖಾಂತರ ಅಲ್ಲಿನ ಕಾಲೇಜಿನವರು ಅವರ ಜೊತೆಗೆ ಸೇರಿ ಅವರುಗಳನ್ನು ವಿದೇಶಕ್ಕೆ ಕಳುಹಿಸುವಂತಹ ಕೆಲಸ ಮಾಡಿದ್ದಾರೆ.

ಎರಡನೆಯದಾಗಿ, ಒಂದು Scout Programme- 2.0 ಎಂದು ಮತ್ತೆ ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ 30 ಜನ ವಿದ್ಯಾರ್ಥಿಗಳನ್ನು ಕಳುಹಿಸುವಂತಹ ಕೆಲಸ ಮಾಡುತ್ತಿದ್ದೇವೆ. ಈಗಾಗಲೇ ನಮ್ಮ F.C.D.O. (Foreign Commonwealth Development Office) ಮುಖಾಂತರ ನಾವು Chevening Karnataka Masters Scholarship Programme ಎಂದು ಹೇಳಿ ಈಗಾಗಲೇ 3 ಜನ ನಮ್ಮ ವಿದ್ಯಾರ್ಥಿಗಳು United Kingdom ನಲ್ಲಿ ಉಚಿತವಾಗಿ ಸರ್ಕಾರದ 20 ಲಕ್ಷ ರೂಪಾಯಿಗಳನ್ನು ಒಬ್ಬೊಬ್ಬ ವಿದ್ಯಾರ್ಥಿಗೆ ಮತ್ತು ಅಲ್ಲಿ ಇರತಕ್ಕಂಥಹ F.C.D.O. ರವರು 20 ಲಕ್ಷ ರೂಪಾಯಿಗಳನ್ನು 3 ಜನ ವಿದ್ಯಾರ್ಥಿಗಳಿಗೆ ಒಂದು ವರ್ಷ ಕಾಲ ಅವರುಗಳು ಸ್ನಾತಕೋತ್ತರ ಪದವಿಯನ್ನು ಓದುವಂತಹ ಅವಕಾಶವನ್ನು ಮಾಡಿದ್ದೇವೆ. ಈಗ ಈ ವರ್ಷ ಕೂಡ ಆಯ್ಕೆ ಮಾಡುವಂಥ ಒಂದು ಕೆಲಸ ಆಗಿದೆ. ಈ ರೀತಿಯಲ್ಲಿ ಅವಕಾಶಗಳನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈಗ ಕೌಶಲ್ಯಾಭಿವೃದ್ಧಿ ಇಲಾಖೆ ಮುಖಾಂತರ ಕಲಿಕೆ ಜೊತೆಗೆ ಕೌಶಲ್ಯಾವನ್ನು 2023 ರಲ್ಲಿಯೇ ನಾವು ಪ್ರಾರಂಭ ಮಾಡಿದ್ದೇವೆ. ಇದರಲ್ಲಿ 28,000 ಜನರು ನಮ್ಮ ಸರ್ಕಾರದ ವ್ಯವಸ್ಥೆಯಲ್ಲಿ ಇರತಕ್ಕಂತಹ ಮಕ್ಕಳಿಗೆ ವಿವಿಧ ಭಾಗಗಳಲ್ಲಿ ಅಂದರೆ, ಗುಲ್ಬರ್ಗ ಇರಬಹುದು, ಈ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಅಂದರೆ, ಎಲ್ಲಿ ಅವರುಗಳ Skill Centres ಗಳು ಇವೆ, ಅಲ್ಲಿ ನಾವು ಕಲಿಕೆ ಜೊತೆಗೆ ಕೌಶಲ್ಯ ಕಾರ್ಯಕ್ರಮದ ಸಂಬಂಧ ನಾವು ಪ್ರಮಾಣ ಪತ್ರವನ್ನು ಕೊಟ್ಟಿದ್ದೇವೆ. ನಾನು ಮತ್ತು ನಮ್ಮ ಕೌಶಲ್ಯಾಭಿವೃದ್ಧಿ ಸಚಿವರು ಸೇರಿಕೊಂಡು ಆ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಪ್ರಾರಂಭದಲ್ಲಿ 28,000 ಇದ್ದುದ್ದು ಈಗ ಮತ್ತೆ 37,000 ಗಳಾಗಿದೆ. ಈ ವರ್ಷವೂ ಕೂಡ ಅದನ್ನು ಅನುಷ್ಠಾನ ಮಾಡಿದ್ದೇವೆ. ಆದ್ದರಿಂದ, ಈ ರೀತಿಯ ನಾನಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಮತ್ತೆ ಇತ್ತೀಚೆಗೆ ನಾವು Microsoft ನವರ ಜೊತೆಯಲ್ಲಿ English Skills for Youth ಎಂದು ಹೇಳಿ, ಅದನ್ನು ಆಂಗ್ಲ ಭಾಷೆಯ ಬಗ್ಗೆ ಹೆಚ್ಚು ಅವರು ಅಧ್ಯಯನ ಮಾಡುವುದಕ್ಕೆ ಮತ್ತು ಅದರಿಂದ ಉದ್ಯೋಗಾವಕಾಶಗಳು ಲಭಿಸುವುದಕ್ಕೆ ಅವಕಾಶಗಳನ್ನು ಕಲ್ಪಿಸೋಣ ಎಂದು ಹೇಳಿ ಆ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಮೊನ್ನೆ ನಾವು English Practice Club ಎಂದು ಹೇಳಿ S.K.S.J.T.I. (Sri Krishnarajendra Silver Jubilee Technological Institute) ನಲ್ಲಿ ನಮ್ಮ British Council ನವರು ಮತ್ತು ನಾವೆಲ್ಲರೂ ಕುಳಿತುಕೊಂಡು ಯಾವ ರೀತಿಯಲ್ಲಿ ಮಕ್ಕಳು ಆ ಒಂದು ತಯಾರಿಯನ್ನು ಮಾಡುತ್ತಿದ್ದಾರೆನ್ನುವುದರ ಬಗ್ಗೆ ಕೂಡ ನಾವು ಕೆಲಸ ಮಾಡಿದ್ದೇವೆ. ಇದೇ ರೀತಿಯಲ್ಲಿ Wadhwani Foundation, Infosys Foundation ಮತ್ತು ಈಗಾಗಲೇ

Kirloskar ನವರು ನಮ್ಮ ಟಯೋಟಾ ಕಂಪನಿಯವರು 11 Centres of Excellence ನ್ನು 11 ಇಂಜನೀಯರಿಂಗ್ ಕಾಲೇಜುಗಳಲ್ಲಿ establish ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಈಗಾಗಲೇ 7 ಕಡೆ establish ಮಾಡಿದ್ದಾರೆ.

(ಮುಂದು)

(403) 16.03.2026 01.50 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಡಾ: ಎಂ.ಸಿ.ಸುಧಾಕರ್ (ಮುಂದು):-**

ಈಗ Hewlett Packard Enterprises ಅವರು Artificial Intelligence and Gaming Hub ಎಂದು ಮಾಡಿದ್ದಾರೆ. ಈ ರೀತಿ ಹಲವಾರು Centre of Excellence ಗಳನ್ನು ಮಾಡಲಾಗಿದೆ. ನಾವು climate control ಬಗ್ಗೆ ಮೊನ್ನೆ ಒಂದು Centre of Excellence ನ್ನು ನಾವು S.K.S.J.T.I (Sri Krishnarajendra Silver Jubilee Technological Institute) ಯಲ್ಲಿ ಮಾಡಿದ್ದೇವೆ. ನಮ್ಮ ಸರ್ಕಾರಿ ವ್ಯವಸ್ಥೆಯಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಬಡ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅವರಿಗೆ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ದೊರೆಯುವ ಸೌಲಭ್ಯಗಳನ್ನು ಯಾವ ರೀತಿ ಕೊಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು A.D.B. loan ಅನ್ನು ಮಾಡಿದ್ದೇವೆ. ಅದರಿಂದ ಹಲವಾರು ಸುಧಾರಣಾ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಮುಖ್ಯವಾಗಿ ಅವರು ಬೋಧಕರ ನೇಮಕಾತಿಯ ಬಗ್ಗೆ ಹೇಳಿದ್ದು. ಅದಕ್ಕೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಅನುಮತಿಯನ್ನು ಕೊಟ್ಟಿದ್ದಾರೆ. ಆದಷ್ಟು ತ್ವರಿತವಾಗಿ ಅದನ್ನು ಪೂರೈಸುವ ಕೆಲಸವನ್ನು ನಾವು ಮಾಡುತ್ತೇವೆ. ವಿಶ್ವವಿದ್ಯಾಲಯಗಳಲ್ಲಿ ಪಿಂಚಣಿಗೆ ಸಂಬಂಧಪಟ್ಟಂತೆ ಈಗಾಗಲೇ ಒಂದು ತೀರ್ಮಾನವನ್ನು ಮಾಡಿದ್ದೇವೆ. ಹಳೆಯ ವಿಶ್ವವಿದ್ಯಾಲಯಗಳು ಪ್ರತ್ಯೇಕವಾಗಿ ಒಂದು Escrow Account ಮಾಡಬೇಕು. ಅದರಲ್ಲಿ ಅವರಿಗೆ ಬರುವಂಥ ಆದಾಯವನ್ನು ಪ್ರತ್ಯೇಕವಾಗಿ ಇಡಬೇಕು. ಸರ್ಕಾರ ಉಳಿದ ಹಣ ಕೊಡುವುದಕ್ಕೂ ಹಣಕಾಸು ಇಲಾಖೆಯೊಂದಿಗೆ ಚರ್ಚೆಯನ್ನು ಮಾಡಿದ್ದೇವೆ. ಹಿಂದೆ 50:50 ಇತ್ತು. ಅದನ್ನು ಸ್ವಲ್ಪ ಸಡಿಲ ಮಾಡುವಂಥ ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರವೇ ಕೈ ಹಿಡಿಯಬೇಕು. ಇಲ್ಲದಿದ್ದರೆ ಅವರೆಲ್ಲ ಬೀದಿಗೆ ಬರುತ್ತಾರೆ. ಇನ್ನು ಉಳಿದ ಹಾಗೆ ಯಾರು ಬೇರೆ ವಿಶ್ವವಿದ್ಯಾಲಯಗಳವರು ಇದ್ದಾರೆ. ಅವರಿಗೆ ಈಗಿನಿಂದಲೇ ಸೂಚನೆಯನ್ನು ಕೊಡುತ್ತಿದ್ದೇವೆ. ಕನಿಷ್ಠ 50% ಪ್ರತ್ಯೇಕವಾಗಿ ಪಿಂಚಣಿಗೆ ಮುಂದೆ ಉದ್ಭವವಾಗುವಂಥ ಪಿಂಚಣಿಯ liability ಏನು ಬರುತ್ತದೆ ಅದನ್ನು ಪ್ರತ್ಯೇಕ ಅಕೌಂಟ್‌ನಲ್ಲಿಡಬೇಕು. ಅದನ್ನು ಖರ್ಚು ಮಾಡಬಾರದು. ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಈ ರೀತಿಯ ಸೂಚನೆಗಳನ್ನು ನೀಡಿದೆ. ಹಲವಾರು ಸುಧಾರಣಾ ಕ್ರಮಗಳನ್ನು ಮಾಡಿದ್ದೇವೆ. ಬಹಳಷ್ಟು ಇವೆ. ತಾವು ಸಮಯ ಕೊಟ್ಟರೆ ನಾನು ಎಲ್ಲವನ್ನೂ ಹೇಳಲಿಕ್ಕೆ ತಯಾರಿದ್ದೇನೆ. ಮಾನ್ಯ ಸದಸ್ಯರು ಇನ್ನೂ ಏನಾದರೂ ಕೇಳುವುದಿದ್ದರೆ, ಅವರಿಗೆ ಸ್ಪಷ್ಟೀಕರಣವನ್ನು ಕೊಡುತ್ತೇನೆ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನೂ ಪತ್ರವನ್ನು ಕೊಟ್ಟಿದ್ದೆನು. ನನ್ನ ಹೆಸರನ್ನು ಸೇರಿಸಿರುವುದಿಲ್ಲ. ಏಕೆ ನನ್ನ ಹೆಸರನ್ನು ಕೈಬಿಡಲಾಗಿದೆ ಎಂದು ನನಗೆ ಗೊತ್ತಿಲ್ಲ.

ವಿಶ್ವವಿದ್ಯಾಲಯಗಳ ಬಗ್ಗೆ ಬಹಳ ವಿವರವಾಗಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದು ಎರಡು-ಮೂರು ದಿನಗಳು ಚರ್ಚೆಯಾಗುವ ವಿಷಯ. ತಾವೂ ಕೂಡ ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿದ್ದೀರಿ. ಇವತ್ತು ಎಲ್ಲಾ ವಿಶ್ವವಿದ್ಯಾಲಯಗಳು ಅಧೋಗತಿಗೆ ಹೊರಟುಹೋಗಿದೆ. ಎಲ್ಲಾ ವಿಶ್ವವಿದ್ಯಾಲಯಗಳು ಮುಳುಗುತ್ತಿರುವ ಹಡಗು. ಕಳೆದ 20 ವರ್ಷದಿಂದ ನಾವೂ-ನೀವೂ ನೋಡುತ್ತಿದ್ದೇವೆ. ಮುಳುಗಿ ಹೋಗಿದೆ ಎಂದರೆ ಮುಳುಗಿ ಹೋಗಿದೆ, ಅಷ್ಟೆ. ಇದು ಮಾನ್ಯ ಸಚಿವರ ಗಮನಕ್ಕೂ ಬಂದಿದೆ. ಒಂದೊಂದು ವಿಭಾಗಗಳಲ್ಲಿ ಒಬ್ಬರೂ ಇಲ್ಲ. Permanent faculty ನೇ ಇಲ್ಲ. ಅಲ್ಲಿ ಸಂಶೋಧನೆ ಏನು ಮಾಡುತ್ತಾರೆ? ವಿಶ್ವವಿದ್ಯಾಲಯದಲ್ಲಿ ಆ ಇಲಾಖೆ ಏಕಿರಬೇಕು? ಅದರ ಅಗತ್ಯವೇನು? ಬೇಡವೇ ಬೇಡ. ಆಮೇಲೆ ಒಂದರ ಹಿಂದೆ ಒಂದರಂತೆ ವಿಶ್ವವಿದ್ಯಾಲಯಗಳನ್ನು ಸುಮ್ಮನೆ ಮಾಡಿಕೊಂಡು ಹೋಗುತ್ತಿರುವುದು. ಅದು ಏಕೆ ಎಂದು ನನಗೆ ಗೊತ್ತಿಲ್ಲ. ಅಮೇಲೆ ಸಂಪೂರ್ಣ ಸ್ವಾಯತ್ತತೆ ಎಂದು ಹೇಳಿ ಕೆಲವು ಕಾಲೇಜುಗಳನ್ನು ವಿಶ್ವವಿದ್ಯಾಲಯಗಳನ್ನಾಗಿ ಮಾಡಿದ್ದಾರೆ. ಅದರಲ್ಲಿ 1,000-2,000 ಜನ ವಿದ್ಯಾರ್ಥಿಗಳಿದ್ದಾರೆ. ಅದಕ್ಕೆ ಒಬ್ಬ ಕುಲಪತಿಗಳು, ಒಬ್ಬ ರಿಜಿಸ್ಟ್ರಾರ್, ಒಬ್ಬ ರಿಜಿಸ್ಟ್ರಾರ್ (ಮೌಲ್ಯಮಾಪನ), ಒಬ್ಬ ಡೆಪ್ಯುಟಿ ರಿಜಿಸ್ಟ್ರಾರ್ ಇಷ್ಟು ಕೊಟ್ಟುಬಿಟ್ಟು ವಿಶ್ವವಿದ್ಯಾಲಯ ಮಾಡಬೇಕಾದರೆ ಷರತ್ತು ಏನು ಗೊತ್ತೇ? ನೀವು ಕಸ ಗುಡಿಸುವವರನ್ನೂ ತೆಗೆದುಕೊಳ್ಳಬಾರದು ಎಂದು. ಅಂದರೆ ನೀವೇ ಕಸ ಗುಡಿಸಬೇಕು ಎಂದರ್ಥ. ವಿಶ್ವವಿದ್ಯಾಲಯ ಮಾಡುವಾಗಲೇ ಆ ಪದ ಬಳಕೆಯಾಗಿದೆ. ಬೇಕಾದರೆ ಅದನ್ನು ತರಿಸಿ ನೋಡಿ. ನೀವು ಯಾವುದೇ ಕಾರಣಕ್ಕೂ ಕಸ ಗುಡಿಸುವವರನ್ನು ತೆಗೆದುಕೊಳ್ಳಬೇಡಿ. ಶೌಚಾಲಯ ತೊಳೆಯುವವರನ್ನು ತೆಗೆದುಕೊಳ್ಳಬೇಡಿ ಎನ್ನುವುದು ಕಂಡಿಷನ್. ನೀವು ಯಾರನ್ನೂ ತೆಗೆದುಕೊಳ್ಳಬೇಡಿ. ಅದನ್ನು ನೀವು ಅಭಿವೃದ್ಧಿ ಮಾಡಬೇಡಿ. ಮಾನ್ಯ ಸಚಿವರು ಬಂದ ಮೇಲೆ ವಿಶ್ವವಿದ್ಯಾಲಯಗಳನ್ನು ಮಾಡಲಿಲ್ಲ. ಆದರೆ ಇವರ ಜವಾಬ್ದಾರಿ ಏನು? ಇವರು ವಿಶ್ವವಿದ್ಯಾಲಯಗಳನ್ನು ಕೊಡದಿದ್ದರೂ ಇವರಿಗೇನು ಜವಾಬ್ದಾರಿ ಇಲ್ಲವೇ? ಅವರು ರಿವ್ಯೂ ಮಾಡಬೇಕಲ್ಲವೇ.. ವಿಶ್ವವಿದ್ಯಾಲಯಗಳು ಪ್ರಾರಂಭಗೊಂಡು ಕಾಲೇಜು ಶಿಕ್ಷಣ ಇಲಾಖೆಯಿಂದ ನೇಮಕಾತಿಯಾದರೂ, ಬೋಧಕರನ್ನು ಅಲ್ಲಿ ಇರುವುದಕ್ಕೂ ಬಿಡುತ್ತಿಲ್ಲ, ಹೊರಗಡೆ ಹೋಗುವುದಕ್ಕೂ ಬಿಡುತ್ತಿಲ್ಲ.

ಮಾನ್ಯ ಸಚಿವರು ಅಧಿಕಾರ ಸ್ವೀಕಾರ ಮಾಡಿ ಎರಡೂಮುಕ್ಕಾಲು ವರ್ಷ ಆಯಿತು. ಅವರು ವೈದ್ಯರು. ಅವರು ಯಾವಾಗಲೂಎ ಗಾಂಧಿನಗರದ ಉನ್ನತ ಶಿಕ್ಷಣ ಇಲಾಖೆಯಲ್ಲಿಯೇ ಇರುತ್ತಾರೆ. ಎಲ್ಲರನ್ನೂ ಕೂಡಿಸಿಕೊಂಡು ಕೇವಲ ಮೀಟಿಂಗ್‌ಗಳನ್ನೇ ಮಾಡುತ್ತಿರುತ್ತಾರೆ. ಆ ಮೀಟಿಂಗ್‌ಗಳಲ್ಲಿ ಏನು ಮಾಡುತ್ತಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. 28,000 ಜನರಿಗೆ ನಾವು ಕೌಶಲ್ಯಾಧಾರಿತವಾಗಿ ಶಿಕ್ಷಣ ಕೊಡುತ್ತಿದ್ದೇವೆ ಎಂದು ಹೇಳಿದರು. 28,000 ಸಾಕಾ? ಎಸ್. ಎಸ್. ಎಲ್. ಸಿ ಯಲ್ಲಿ ಎಷ್ಟು ಜನ ಮಕ್ಕಳು ತೇರ್ಗಡೆಯಾಗುತ್ತಿದ್ದಾರೆ? ಅಲ್ಲಿಂದ ಪಿ.ಯು.ಸಿ.ಯಲ್ಲಿ ಎಷ್ಟು ಜನ ತೇರ್ಗಡೆಯಾಗುತ್ತಿದ್ದಾರೆ? ಅಲ್ಲಿಂದ ಡಿಗ್ರಿಗೆ ಎಷ್ಟು ಜನ ಸೇರುತ್ತಿದ್ದಾರೆ? ಅಂಕಿ ಅಂಶವನ್ನು ನೀವು ಕೊಡಿ, ನೋಡೋಣ. ಅದಾದ ಮೇಲೆ ಡಿಗ್ರಿಯಾದವರು ಎಷ್ಟು ಜನ ಪಿ.ಜಿ. ಮಾಡುತ್ತಿದ್ದಾರೆ? ಎಷ್ಟು ಜನ ಪಿ.ಜಿ.ಗೆ ಸೇರುತ್ತಿದ್ದಾರೆ? ಅಂಕಿ ಅಂಶ ಕೊಡಿ. ಎಲ್ಲವನ್ನೂ ಸಭೆಯ ಮುಂದೆ ಇಡಿ. ಚರ್ಚೆಯಾಗಲಿ. ಅದರ ಬಗ್ಗೆ ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಏನೂ ಇಲ್ಲ. ದಿನಾಂಕ 01.04.2006ರ ನಂತರ ವಿಶ್ವವಿದ್ಯಾಲಯಗಳಲ್ಲಿ ಎಲ್ಲಾ ನೇಮಕಾತಿಯಾಯಿತು. ಇದು ತಮ್ಮ ಗಮನಕ್ಕೂ ಬಂದಿದೆ. Assistant Professor to Associate Professor, Associate Professor to Professor ಆದರಲ್ಲಾ, ಅವರು ಯಾರೂ ಕೂಡ ಹಳೆ ಪಿಂಚಣಿ ಯೋಜನೆಗೆ ಬರುವುದಕ್ಕಾಗಿಲ್ಲ. ಕೇಳಿದರೆ ಅದು ಸರ್ಕಾರ ಅಲ್ಲವಂತೆ. ವಿಶ್ವವಿದ್ಯಾಲಯ ಸರ್ಕಾರ ಅಲ್ಲವಂತೆ. ನೀವು ಯಾರನ್ನು ತಂದು Professor, Associate Professor ಮಾಡುತ್ತೀರಿ? ಯಾರು ಪಾಠ ಮಾಡಬೇಕು? ಯಾರು ಸಂಶೋಧನೆ ಮಾಡಬೇಕು? ಯು.ಜಿ.ಸಿ.ಯಿಂದ ಬರುವ ಪ್ರಾಜೆಕ್ಟ್‌ಗಳನ್ನು ಯಾರು ಮಾಡಬೇಕು? ನಿಮ್ಮ ರಾಜ್ಯ ಸರ್ಕಾರ ನೀಡುವ ಪ್ರಾಜೆಕ್ಟ್ ಅನ್ನು ಯಾರು ಮಾಡಬೇಕು? ಏನೂ ಇಲ್ಲ.

ಮಾನ್ಯ ಸಭಾಪತಿಯವರೆ, ಹೊರದೇಶಗಳಲ್ಲಿ ಸರ್ಕಾರ ಜನರಿಗೆ ಯಾವುದೇ ಒಂದು ಕಾರ್ಯಕ್ರಮ ತರಬೇಕಾದರೂ ಬೇರೆ ಬೇರೆ ವಿಶ್ವವಿದ್ಯಾಲಯಗಳ ಅಭಿಪ್ರಾಯವನ್ನು ಕೇಳುತ್ತಾರೆ. ಇದರ ಸಾದಕ-ಬಾದಕಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿ ಎಂದು ಹೇಳುತ್ತಾರೆ. ಇಲ್ಲಿ ಕೊಡುವುದಕ್ಕೆ ಅಲ್ಲಿ ಯಾರೂ ಇಲ್ಲ. ಇವರು ಕೇಳುವುದೂ ಇಲ್ಲ ಬಿಡಿ.

ಮಾನ್ಯ ಸಚಿವರೆ, ಈಗ ಕೊಡಗು ವಿಶ್ವವಿದ್ಯಾಲಯ ಮಾಡಿದ್ದೀರಿ, ಚಾಮರಾಜನಗರ ವಿಶ್ವವಿದ್ಯಾಲಯ ಮಾಡಿದ್ದೀರಿ, ಮಂಡ್ಯ ವಿಶ್ವವಿದ್ಯಾಲಯ ಮಾಡಿದ್ದೀರಿ. ಅಲ್ಲೆಲ್ಲಾ ಏನು ಕಥೆ? ವಿಶ್ವವಿದ್ಯಾಲಯಗಳನ್ನು ಮಾಡಿಬಿಟ್ಟು strengthen ಮಾಡಲಿಲ್ಲ ಎಂದರೆ ಕಥೆಯೇನು? ಅಲ್ಲಿ ಓದುತ್ತಿರುವ ಮಕ್ಕಳ ಕಥೆಯೇನು? ಅವರ ಭವಿಷ್ಯ ಏನು? ಹಿಂದಿನ ಸರ್ಕಾರವೇ ಮಾಡಿದ್ದರೂ, ನಿಮ್ಮ ಜವಾಬ್ದಾರಿ ಏನು? ಅದಕ್ಕೆ ಕಡಿವಾಣ ಹಾಕುವುದಕ್ಕೆ ನೀವು ಏನು ಮಾಡಿದ್ದೀರಿ? ಏನು ಕ್ರಮ ಕೈಗೊಂಡಿದ್ದೀರಿ? ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕಲ್ಲವೆ? ಮಕ್ಕಳ ಭವಿಷ್ಯ ಅಡಗಿದೆ. ಅವರು ಮಾಡಿದರು, ಇವರು ಮಾಡಿದರು ಎಂದು ಹೇಳುವ ಬದಲು progressive ಆಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಏನು ಮಾಡಬೇಕು, ಸಮಾಜದ ಹಿತದೃಷ್ಟಿಯಿಂದ ಏನು ಮಾಡಬೇಕು ಎಂಬುದು ಮುಖ್ಯವಲ್ಲವೆ? ಈಗ ಮಹಾರಾಣಿ ಕಾಲೇಜು ಕ್ಲಸ್ಟರ್ ವಿಶ್ವವಿದ್ಯಾಲಯವಾಯಿತು. ಮೊದಲು ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲಿತ್ತು. ಏಕೆ strength ಕಡಿಮೆಯಾಯಿತು? ಸರ್ಕಾರಿ ಕಲಾ ಕಾಲೇಜು – ನಾನು ಅಲ್ಲಿನ ವಿದ್ಯಾರ್ಥಿಯಾಗಿದ್ದವನು, ಮೆಟ್ರೋದವರು ಅದನ್ನು ತೆಗೆದುಕೊಳ್ಳುವುದಕ್ಕೆ ಹೊರಟುಬಿಟ್ಟಿದ್ದರು. ಆಮೇಲೆ Judiciary

ಯವರು ತೆಗೆದುಕೊಳ್ಳುವುದಕ್ಕೆ ಹೋಗಿದ್ದರು. ಇವೆಲ್ಲವೂ ಕೂಡ ವಿಧಾನಸೌಧದ ಹತ್ತಿರದಲ್ಲಿ ಮಹಾರಾಣೀಸ್, ಆರ್.ಸಿ.ಕಾಲೇಜು, ಆರ್ಟ್ಸ್ ಕಾಲೇಜು, ಸೈನ್ಸ್ ಕಾಲೇಜು ಇವೇ ಇರುವುದು. ಇವು ಹೋಗಿಬಿಟ್ಟರೆ ಬೇರೆ ಬೇರೆಯವರು ಹೊಡೆದುಕೊಳ್ಳುತ್ತಾರೆ. ಖಾಸಗಿ ಸಹಭಾಗಿತ್ವ ಎನ್ನುವುದು, 99 ವರ್ಷಗಳಿಗೆ ಲೀಸ್ ಕೊಟ್ಟು ಬಿಡುವುದು, 30 ವರ್ಷ ಲೀಸ್ ಕೊಟ್ಟುಬಿಡುವುದು, ಕೊನೆಗೆ ಅವರಿಗೆ ಕೊಟ್ಟು ಬಿಡುವುದು. ನಾನು ಆ ಸರ್ಕಾರ, ಈ ಸರ್ಕಾರ ಎಂದು ಹೇಳುತ್ತಿಲ್ಲ. ಈ ರೀತಿ ಯಾರೂ ವಿದ್ಯಾರ್ಥಿಗಳಲ್ಲ ಎಂದು ನಾವು ಅಸಡ್ಡೆ ಮಾಡಿದರೆ ಯಾವುದೋ ಸಮಯದಲ್ಲಿ ಏನೋ ಆಗಿಬಿಡುತ್ತದೆ.

ಮಾನ್ಯ ಸಭಾಪತಿಯವರೆ, ಇದನ್ನು ಚರ್ಚೆ ಮಾಡುವುದಕ್ಕೆ ಎರಡು ದಿನಗಳು ನಿಗದಿ ಮಾಡಿ. ಆ ಚರ್ಚೆಯಲ್ಲಿ ಎಲ್ಲಾ ಸದಸ್ಯರು ಕೂಡ ಭಾಗವಹಿಸಬೇಕು. ಉನ್ನತ ಶಿಕ್ಷಣದಲ್ಲಿರುವಂಥ ನ್ಯೂನತೆಗಳನ್ನು ಸರಿಪಡಿಸಲಿಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆ ನಾನು ಮಾತನಾಡಬೇಕು. ಪ್ರೊಫೆಸರ್ ಹುದ್ದೆಗಳಿಗೆ ಸಂದರ್ಶನವಾಗಿ ಒಂದು ವರ್ಷ ಕಳೆದಿದೆ. ಒತ್ತಡ ಮಾಡಿ ಮಂತ್ರಿಗಳು ಕೆಲವರಿಗೆ ಕೊಟ್ಟರು. ಅಲ್ಲಿ ಏನೇನು ನಡೆಯುತ್ತಿದೆ, ಆ ರೀತಿ ನಡೆಯಲಿಕ್ಕೆ ಕಾರಣವೇನು? ಇವೆಲ್ಲಾ ವಿಷಯಗಳು ಚರ್ಚೆಯಾಗಬೇಕು. ಉನ್ನತ ಶಿಕ್ಷಣ ಇಲಾಖೆಯ ಹಿತದೃಷ್ಟಿಯಿಂದ ಇವೆಲ್ಲವೂ ಚರ್ಚೆಯಾಗಬೇಕು.

ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಪತ್ರವನ್ನು ಕೊಟ್ಟಿದ್ದರೂ, ನನ್ನ ಹೆಸರು ಬಂದಿರುವುದಿಲ್ಲ. ನನ್ನ ಹೆಸರನ್ನು ಏಕೆ ಬಿಡಲಾಗಿದೆಯೆಂದು ನನಗೆ ಗೊತ್ತಿಲ್ಲ. ಆದರೂ ಕೂಡ ತಾವು ಅವಕಾಶ ಕೊಟ್ಟಿದ್ದೀರಿ. ನಿಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ದಯವಿಟ್ಟು ಇದನ್ನು ಮುಂದುವರೆಸಿ, ಒಂದು ದಿನ ಚರ್ಚೆ ಮಾಡಲು ಎಲ್ಲರಿಗೂ ಅವಕಾಶ ಮಾಡಿಕೊಡಬೇಕು. ನಾನು ಉನ್ನತ ಶಿಕ್ಷಣ ಇಲಾಖೆಯ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಮಾನ್ಯ ಮಂತ್ರಿಗಳ ಮೇಲೆ ಆರೋಪ ಮಾಡುತ್ತಿಲ್ಲ. ಉನ್ನತ ಶಿಕ್ಷಣ ಇಲಾಖೆಯಲ್ಲಿರುವಂಥ ನ್ಯೂನತೆಗಳ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಬೇಕು. ಉನ್ನತ ಶಿಕ್ಷಣ ಇಲಾಖೆ ಸರಿದಾರಿಗೆ ಬರಬೇಕು. ಉನ್ನತ ಶಿಕ್ಷಣ ಎನ್ನುವಂಥದ್ದು ಎಲ್ಲರಿಗೂ ಸರಿಯಾಗಿ ಸಿಗಬೇಕು. ಏನಾಗಿದೆಯೆಂದರೆ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಚೆನ್ನಾಗಿ ಸಿಗುತ್ತಿದೆ. ನಮ್ಮ ಸರ್ಕಾರದಿಂದ ನಡೆಯುತ್ತಿರುವ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಚೆನ್ನಾಗಿ ಸಿಗುತ್ತಿಲ್ಲ. ಕಳೆದ 20 ವರ್ಷಗಳಿಂದ ನಾವು ಬಹಳಷ್ಟು ಇದರ ಬಗ್ಗೆ ಮಾತನಾಡಿದ್ದೇವೆ. ತಾವೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ನಾವೂ ಮಾಡಿದ್ದೇವೆ. ಆದರೆ ಯಾವುದೂ ಸರಿ ಹೋಗಿಲ್ಲ. ಯಾವ Foreign University ಗಳೂ ಬೇಡ, ಈ ಯೂನಿವರ್ಸಿಟಿಗಳನ್ನು ಸರಿಯಾಗಿ ಮಾಡಿ. ಯಾವ Foreign University ಗಳಿಗಿಂತಲೂ ನಮ್ಮ ವಿಶ್ವವಿದ್ಯಾಲಯಗಳು ಬಹಳ ಚೆನ್ನಾಗಿ ನಡೆಯುತ್ತಿವೆ.

(ಮುಂದು)

(404) 16.03.2026/2.00/ಎಂವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು):-**

ಆದರೆ, ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಧಾರವಾಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯ...

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದನ್ನು ನಡೆಸುವಂತಹ ಜನರು ಇದ್ದಾರೆ. ಹಾಗಾದರೆ, ಮಾನ್ಯ ಸದಸ್ಯರು ಇಲ್ಲಿಯವರೆಗೆ ವಿಶ್ವವಿದ್ಯಾಲಯಗಳು ಚೆನ್ನಾಗಿವೆ ಎಂದು ಹೇಳಿದ್ದು ಏನು?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವುಗಳನ್ನು ಸರಿಯಾಗಿ ನಡೆಸಿದರೆ, ಅವರಿಗಿಂತ ನಮ್ಮ ವಿಶ್ವವಿದ್ಯಾಲಯಗಳೇ ಚೆನ್ನಾಗಿ ಇರುತ್ತವೆ ಎಂದು ಹೇಳುತ್ತಿದ್ದೇನೆ. ಆದರೆ, ಇಲ್ಲಿಗೆ ಯಾರನ್ನೂ ಸಹ ಕೊಡುತ್ತಿಲ್ಲ ಮತ್ತು ಏನೂ ಇಲ್ಲ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಮಾತನಾಡಿದ್ದು ಸಾಕು ಬಿಡಿ. ತಮಗೆ ಮಾತನಾಡಲು ಅವಕಾಶ ನೀಡಿ, ನಾನು ತಪ್ಪು ಮಾಡಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಮುಗಿಸುತ್ತೇನೆ. ತಾವು ಇದನ್ನು ಚರ್ಚೆಗೆ ಅವಕಾಶ ನೀಡುತ್ತೀರಾ? ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಏಕೆಂದರೆ, ನಾನು ಇನ್ನೂ ಮಾತನಾಡಬೇಕು.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ನಾನು ಸರ್ಕಾರದ ಜೊತೆ ಚರ್ಚೆ ಮಾಡಿ ತಮಗೆ ಹೇಳುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಿಲ್ಲ. ನಾವು ನಿಜವಾಗಿ ಖಂಡಿತವಾಗಿ ವಿಶ್ವವಿದ್ಯಾಲಯಗಳ ಬಗ್ಗೆ ಚರ್ಚೆ ಮಾಡಬೇಕು.

**ಸಭಾಪತಿಯವರು:-** ಆಯಿತು, ನಾನು ಮಾತನಾಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈಗ 500 ಮತ್ತು 1,000 ಜನರು ಇರುವುದಿಲ್ಲ. ಆದರೆ, ವಿಶ್ವವಿದ್ಯಾಲಯಗಳನ್ನು ಮಾಡಿದ್ದಾರೆ. ಈಗ ಅವು ಬಿಳಿ ಆನೆಗಳು, ಇದು ತಮಗೆ ಅರ್ಥವಾಯಿತು ಅಲ್ಲವೇ? ಈಗ ಯಾರೋ ದುಡ್ಡು ತೆಗೆದುಕೊಂಡು ವಿ.ಸಿ. ಮತ್ತು ರಿಜಿಸ್ಟ್ರಾರ್‌ಗಳನ್ನು ಮಾಡಿ, ಚಾಪೆ ಮಡಿಚಿಕೊಂಡು ಹೊರಟುಹೋಗಿದ್ದಾರೆ. ಈಗ ಅದರ ಬಗ್ಗೆ ಚರ್ಚೆಯಾಗುವುದು ಬೇಡವೇ? ಇದೆಲ್ಲದರ ಬಗ್ಗೆ ಚರ್ಚೆಯಾಗಬೇಕಲ್ಲವೇ? ಇದನ್ನು ಸರಿಪಡಿಸಬೇಕಲ್ಲವೇ? ನಾನು ಆ ದೃಷ್ಟಿಯಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಇದರ ಬಗ್ಗೆ ಕೂಲಂಕಷ ಮತ್ತು ವಿಸ್ತಾರವಾಗಿ ಚರ್ಚೆ ಆಗಬೇಕು. ಮತ್ತೆ ಇದು ಸರಿಯಾಗಬೇಕು. ಇದಕ್ಕೆ ಸರ್ಕಾರದಿಂದ ಸರಿಯಾದ ಉತ್ತರ ಬರಬೇಕು. Thank you.

*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಹೇಳಿದ ಪ್ರಕಾರ, ನಿಜವಾಗಿಯೂ ಇದು ಬಹಳ ವಿಸ್ತಾರವಾಗಿರುವಂತಹ ವಿಷಯವಾಗಿದೆ.

**ಸಭಾಪತಿಯವರು:-** ಇದರ ಬಗ್ಗೆ ಚರ್ಚೆ ಪ್ರಾರಂಭವಾಗಿ ಅರ್ಧ ಗಂಟೆಯಾಗಿದೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಎರಡು ದಿವಸ ಸಮಯ ಕೇಳಿದ್ದಾರೆ. ಅದರೆ, ನಾವು ಅರ್ಧ ಗಂಟೆಯಲ್ಲಿ ಮುಗಿಸುತ್ತಿದ್ದೇವೆ. ಇದು ಬಹಳ ವಿಸ್ತಾರವಾಗಿರುವಂತಹ ವಿಷಯ. ಆದರೂ ಸಹ ಗೌರವಾನ್ವಿತ ಸಚಿವರು ನನ್ನ ಹಾಗೆ ಪ್ರಾಧ್ಯಾಪಕರಾಗಿದ್ದಂತಹವರು. ನಾನು ಅವರಿಗೆ ಬಿಡುತ್ತಿಲ್ಲ, ಅವರು ನಮ್ಮನ್ನು ಬಿಡುತ್ತಿಲ್ಲ. ಹೀಗಾಗಿ, ಅವರು ಪ್ರಯತ್ನ ಮಾಡುತ್ತಿದ್ದಾರೆ. ಅವರು Cabinet Sub-Committee ಮಾಡಿದ್ದೇವೆಂದು ಹೇಳಿದ್ದಾರೆ. ಆ Cabinet Sub-Committee ಯ ವರದಿ ಯಾವಾಗ ಬರುತ್ತದೆಂದು ಕಾಯುತ್ತಿದ್ದೇವೆಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರ ಗಮನಕ್ಕೆ ಮತ್ತೊಂದು ಪಾಯಿಂಟ್ ಅನ್ನು ತರುವುದಕ್ಕೆ ಇಷ್ಟಪಡುತ್ತೇನೆ. ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಮಾಡಿಕೊಳ್ಳಬೇಕಾದಾಗ, ಅಲ್ಲಿರುವಂತಹ ರೋಸ್ಟರ್ ಪದ್ಧತಿ ಏನಿದೆ, ಅದು ಬಹಳ illogical and unscientific ಆಗಿ ಇದೆ. ಇಲ್ಲಿ ನೇಮಕಾತಿ ಮಾಡಿಕೊಳ್ಳುವಂತಹ ರೋಸ್ಟರ್ ಪದ್ಧತಿ ಏನಿದೆ, ಅದು ಬಹಳ ತಪ್ಪಿದೆ. ಏಕೆಂದರೆ, 'Department as a Unit' ಆಗಿ ತೆಗೆದುಕೊಳ್ಳುತ್ತೀರಿ. ಈಗ ಒಂದು department ಎಂದರೆ, ಒಬ್ಬ Professor, ಇಬ್ಬರು Associate Professors ಮತ್ತು ಮೂರು ಜನ Asst. Professors ಎಂದು ಸಾಮಾನ್ಯವಾಗಿ ಒಂದು pattern ಇದೆ. ನಾನು Professors and Associate Professors ಬಗ್ಗೆ ಮಾತನಾಡುತ್ತಿಲ್ಲ. ಈಗ Asst. Professor ಹುದ್ದೆಗಳನ್ನು ತುಂಬಬೇಕಾದರೆ, ಅಲ್ಲಿ ಮೂರು ಹುದ್ದೆಗಳಿರುತ್ತವೆ. ಆ ಮೂರು ಹುದ್ದೆಗಳನ್ನು ತುಂಬಬೇಕಾದರೆ, ಅದರಲ್ಲಿ ಒಂದು ಹುದ್ದೆ ಪರಿಶಿಷ್ಟ ಜಾತಿಗೆ ಬರುತ್ತದೆ. ಮತ್ತೊಂದು ಸಾಮಾನ್ಯ ವರ್ಗಕ್ಕೆ ಬರುತ್ತದೆ. ಇನ್ನೊಂದು ಪರಿಶಿಷ್ಟ ಪಂಗಡಕ್ಕೆ ಬರುತ್ತದೆ. ನಂತರ ಮುಂದಕ್ಕೆ Category-I ಕ್ಕೆ ಬರುವುದೇ ಇಲ್ಲ. ಇದು ಎಲ್ಲಾ department ಗಳಲ್ಲಿ ಇರುವಂತಹ ವಿಷಯ. ಇದನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ವಿಶ್ವವಿದ್ಯಾಲಯಗಳು ಎಂದರೆ, ದುರದೃಷ್ಟವಶಾತ್ ಹಗರಣಗಳ ಕೇಂದ್ರಗಳಾಗಿವೆ. ಅದರಲ್ಲಿ ಮೊದಲನೆಯದು, ಜಾತಿ ಕೇಂದ್ರಗಳಾಗಿವೆ. They are all centres of caste politics. ಎರಡನೆಯದು, ವಿ.ಸಿ. ವಿಷಯ ತೆಗೆದುಕೊಂಡರೆ, ಅದು ಹಗರಣ. ರಿಜಿಸ್ಟ್ರಾರ್‌ರವರ ವಿಷಯ ತೆಗೆದುಕೊಂಡರೆ, ಅದು ಹಗರಣ. ಅಂಕಪಟ್ಟಿಯ ವಿಷಯ ತೆಗೆದುಕೊಂಡರೆ, ಅದು ಹಗರಣ. ನೇಮಕಾತಿಯಲ್ಲಿ ಹಗರಣ. ಇವತ್ತು ಅದರ ಬಗ್ಗೆ comprehensive ಆಗಿ ಅಧ್ಯಯನ ಮಾಡಿ, ಮಾನ್ಯ ಸಚಿವರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಮತ್ತೆ ನನ್ನ ಮೂಲ ಜಿಲ್ಲೆಯಾದ ಕಲಬುರಗಿ ಜಿಲ್ಲೆಯ ಇಬ್ಬರು ಪ್ರಭಾವಿ ಸಚಿವರು ಸದನದಲ್ಲಿ ಕುಳಿತಿದ್ದಾರೆ. ಅದರಲ್ಲಿ ಒಬ್ಬರು ಉಸ್ತುವಾರಿ ಸಚಿವರು, ಮತ್ತೊಬ್ಬರು ಅದೇ ಜಿಲ್ಲೆಯವರು. ಈಗ 206 ಹುದ್ದೆಗಳಲ್ಲಿ 30 ಜನರು ಅಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ, ಅದು ಎಷ್ಟು ಕೆಟ್ಟದಾಗಿರುವಂಥದ್ದು. Sir, for your kind information, ಕೆಲವು department ನಲ್ಲಿ Clerks are heading the department and

they are temporary. The Clerks themselves are temporary but they are heading the departments. ಏಕೆಂದರೆ, ಅಲ್ಲಿ ಬೇರೆ ಯಾರೂ ಇಲ್ಲ. ಅದಕ್ಕಾಗಿ ದಯವಿಟ್ಟು ಅವರು ಈ ನೇಮಕಾತಿಗಳ ಬಗ್ಗೆ ಗಮನ ನೀಡಬೇಕೆಂದು ಹೇಳುತ್ತೇನೆ. ಇನ್ನು ನನ್ನ ಉದ್ದೇಶವೇನೆಂದರೆ, ಅಲ್ಲಿಗೆ ಗ್ರಾಮೀಣ ಪ್ರದೇಶದ ಮಕ್ಕಳು ಮತ್ತು ವಿದ್ಯಾರ್ಥಿನಿಯರು ಓದುವುದಕ್ಕೆ ಬರುತ್ತಿದ್ದಾರೆ. ಅವರು ಓದಿ ಭವಿಷ್ಯ ಕಟ್ಟಿಕೊಳ್ಳಬೇಕು ಎಂಬ ಆಪೇಕ್ಷೆಯಿಂದ ಬರುತ್ತಿದ್ದಾರೆ. ನಿನ್ನೆಯ ದಿವಸ traditional course ಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ ಎಂದು ಒಂದು ದಿನಪತ್ರಿಕೆಯಲ್ಲಿ ವಿಷಯ ಬಂದಿದೆ. ಅಂದರೆ, ಸಹಜವಾಗಿ ಬೇಡಿಕೆ ಕಡಿಮೆಯಾಗುತ್ತದೆ. ಏಕೆಂದರೆ, unproductive ಅಂದರೆ appointment ಇಲ್ಲ. ಹಾಗಾಗಿ, ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುವುದೇನೆಂದರೆ, ಇದೆಲ್ಲದಕ್ಕೂ ಕೂಡ ಮಾನ್ಯ ಸಚಿವರು ಮತ್ತು ಸರ್ಕಾರ ಗಮನ ಹರಿಸಬೇಕು. ಮತ್ತೆ ಉನ್ನತ ಶಿಕ್ಷಣ ಸುಧಾರಿಸಬೇಕು. ಈಗ ಉನ್ನತ ಶಿಕ್ಷಣ ಸುಧಾರಿಸಿದಾಗ ಮಾತ್ರ human capital ಹೆಚ್ಚಾಗುತ್ತದೆ. ಆಗ ನಮ್ಮ ದೇಶದ ಅಭಿವೃದ್ಧಿ ಹೆಚ್ಚಾಗುತ್ತದೆ. ಅದಕ್ಕೆ ಪೂರಕವಾದಂತಹ ಮೂಲಸೌಕರ್ಯ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವಿ ಮಾಡುತ್ತಾ, ಬಹುಮುಖ್ಯವಾದಂತಹ ವಿಷಯಕ್ಕೆ ಸಂಬಂಧಪಟ್ಟಂತ ಮಾತನಾಡಲು ತಾವು ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಕೈ ಮುಗಿದು ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಮಗೆ ನಮಸ್ಕಾರ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ವಿದ್ಯೆಗೆ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಅದು ಯಾವುದೇ ಸರ್ಕಾರವಿರಲಿ. ಈಗ ವೈದ್ಯಕೀಯದಲ್ಲೂ ಕೂಡ ಹೆಚ್ಚು ಹುದ್ದೆಗಳು ಖಾಲಿಯಿವೆ. ಹಾಗಾದರೆ, ಆರೋಗ್ಯ ಎಲ್ಲಿ ಸಿಗುತ್ತದೆ? ಹಾಗೆಯೇ ವಿಶ್ವವಿದ್ಯಾಲಯಗಳಲ್ಲಿ ಸುಮಾರು 14,677 ಹುದ್ದೆಗಳು ಖಾಲಿಯಿವೆ ಎಂದು ಅವರು ನೀಡಿರುವ ಪಟ್ಟಿಯಲ್ಲಿದೆ. ಇವುಗಳ ಕೊರತೆಗೆ ಕಾರಣವೇನು? ಮೊದಲನೆಯದು ಆರ್ಥಿಕ ಕೊರತೆ ಮತ್ತು ಸಿಬ್ಬಂದಿಯ ಕೊರತೆ. ಈ ಎರಡೂ ಎದುರಾದರೆ, ವಿಶ್ವವಿದ್ಯಾಲಯಗಳನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಈಗ ಎಷ್ಟು ಎಕರೆ ಜಾಗವಿದೆ? ಮತ್ತು ಕಟ್ಟಡ ಎಷ್ಟು ದೊಡ್ಡದಾಗಿದೆ ಎಂಬುದು ಮುಖ್ಯವಾದುದಲ್ಲ. ಅಲ್ಲಿಗೆ ಬರುವಂತಹ ವಿದ್ಯಾರ್ಥಿಗಳಿಗೆ ಸಿಗುವಂತಹ ವಸತಿ ಮತ್ತು ಮೂಲಭೂತ ಸೌಕರ್ಯಗಳು ಏನು? ಇದರ ಮೂಲಭೂತ ಸೌಕರ್ಯಗಳ ಕೊರತೆ ಎಂದರೆ, ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತು ತಾಂತ್ರಿಕ ಸೌಲಭ್ಯಗಳು ಸಿಗಲಿಲ್ಲವೆಂದರೆ, ವಿದ್ಯಾರ್ಥಿಗಳು ಹೇಗೆ ಓದುವುದಕ್ಕೆ ಆಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಬಹಳ ಚೆನ್ನಾಗಿ ಹೇಳಿದರು. ಈಗ ವಿಶ್ವವಿದ್ಯಾಲಯಗಳಿಗೆ ಹೆಸರನ್ನು ಕೊಡುತ್ತಾ ಹೋಗುವುದು ಮುಖ್ಯವಾದುದಲ್ಲ. ಈಗ 9 ವಿಶ್ವವಿದ್ಯಾಲಯಗಳನ್ನು ಕೊಟ್ಟು, ಮತ್ತೆ ಅವುಗಳನ್ನೆಲ್ಲಾ merge ಮಾಡಿದಂತೆ ಆಯಿತು. ಅದರ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಬಹಳ ಚರ್ಚೆಯಾಯಿತು. ಕೊನೆಯಲ್ಲಿ ಇದನ್ನು ಮಾಡುವುದಿಲ್ಲವೆಂದು ಸರ್ಕಾರ ಹೇಳಿದ ಮೇಲೆ ನಮಗೆ ಒಪ್ಪಿಗೆಯಾಯಿತು. ಅದಕ್ಕೆ okay. ಆದರೆ, ಮೂಲಭೂತ ಸೌಕರ್ಯ ಸಿಗಲಿಲ್ಲವೆಂದರೆ, ಅಲ್ಲಿಗೆ ವಿದ್ಯಾರ್ಥಿಗಳು ಏಕೆ ಬರುತ್ತಾರೆ? ಮತ್ತೊಂದಕ್ಕೆ ಎಂತಹ ಪರಿಸ್ಥಿತಿ ಇದೆ ಎಂದರೆ, ಓದಬೇಕಾದಂತಹವರಿಗೆ ಯಾವುದೇ subject ಓದುವುದಕ್ಕೆ ನಮ್ಮ

*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಏನು ಕೊರತೆ ಇದೆ? ಇಲ್ಲಿ ಕೊರತೆ ಇಲ್ಲ. ಆದರೆ, ಹೊರ ದೇಶಗಳಿಗೆ ಹೋಗುವಂತಹವರಿಗೆ scholarship ಕೊಡುತ್ತಿದ್ದಾರೆ. That means, we have not created that atmosphere here in Karnataka. ಅವರಿಗೆ ಅಂತಹ atmosphere ಇದ್ದರೆ, ವಿದ್ಯಾರ್ಥಿಗಳು ಹೊರ ದೇಶಗಳಿಗೆ ಹೋಗಬೇಕಾಗಿಲ್ಲ. ಈಗ ಸರ್ಕಾರ ಒಂದು ತೀರ್ಮಾನಕ್ಕೆ ಬಂದಿವೆ. ಈಗ ಕೆಲವು Deemed University ಗಳನ್ನು ಮಾಡಿದ್ದಾರೆ. ಆಯಿತು, ಅದನ್ನು ಸಹ ಒಂದು ಬಾರಿ ಪರಿಶೀಲನೆ ಮಾಡಿಕೊಳ್ಳಲಿ. ಈಗ Deemed University ಗಳು ಬಹುದೊಡ್ಡ ಬೃಹತ್ ಆಗಿ ಬೆಳೆಯುತ್ತಿರುವುದಕ್ಕೆ ಕಾರಣವೇನು? ನಮ್ಮ ವಿಶ್ವವಿದ್ಯಾಲಯಗಳು ಈ ರೀತಿಯ ತೊಂದರೆಗೆ ಬರುವಂಥದ್ದಕ್ಕೆ ಕಾರಣವೇನು? ನನಗೆ ಅನಿಸಿರುವಂಥದ್ದು ಏನೆಂದರೆ, ಮೊದಲನೆಯದಾಗಿ ಆರ್ಥಿಕ ಕೊರತೆ ಮತ್ತು ಸಿಬ್ಬಂದಿಯ ಕೊರತೆ. ಅದರ ಬಗ್ಗೆ ಹೆಚ್ಚು ಗಮನ ಕೊಡುತ್ತಿಲ್ಲ. ನಾವು ಇದನ್ನು ಸರಿಪಡಿಸಿದರೆ, ಆಗ ಇದು ಒಂದು ರೀತಿಯಲ್ಲಿ ಸರಿಯಾಗುತ್ತದೆ. ಈಗ ಅನುದಾನ ಕೊಡುವುದರಲ್ಲಿ ಮೀನಾಮೇಷ ಎಣಿಸಿದರೆ, ಅದನ್ನು ಬೆಳೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅದಾದಮೇಲೆ ಹಂಚಿಕೆ ಕೂಡ ಸಮರ್ಪಕವಾಗಿ ಇರುವುದಿಲ್ಲ. ಯಾವುದಕ್ಕೆ ಬೇಕು, ಅದಕ್ಕೆ ಹೆಚ್ಚಿಗೆ ಕೊಡುವುದು, ಇಲ್ಲವೇ ಕಡಿಮೆ ಕೊಡುವುದು. ಇಲ್ಲವೇ ಕೊಡದೇ ಇರುವುದು. ಈ ರೀತಿ ಅವರವರ ಜಿಲ್ಲೆಗಳನ್ನು ನೋಡಿಕೊಳ್ಳುವುದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು interest ತೆಗೆದುಕೊಳ್ಳಬೇಕು. ಅವರು ಮೊದಲು ಹುದ್ದೆಗಳನ್ನು ತುಂಬಲಿ. ಅದಾದ ನಂತರ ಸಿಬ್ಬಂದಿಯ ಕೊರತೆ ಕಡಿಮೆಯಾದರೆ ಮತ್ತು ಆರ್ಥಿಕವಾಗಿ ಅವರಿಗೆ ಸಹಾಯ ಸಿಕ್ಕಿದರೆ, ಖಂಡಿತವಾಗಿಯೂ ವಿಶ್ವವಿದ್ಯಾಲಯಗಳು ಒಳ್ಳೆಯ ಹೆಸರನ್ನು ಮಾಡುತ್ತವೆ. ಈಗಾಗಲೇ ಎಷ್ಟೆಷ್ಟು ಜಮೀನು ಇದೆ ಎಂದು ಹೇಳಿದ್ದಾರೆ. ಅದು ಬೇಕು. ಅದು ಇವತ್ತು ಅಲ್ಲ, ನಾಳೆಗಾದರೂ ನಮಗೆ ಬೇಕಾಗಿರುವುದು. ಈಗ ಒಂದು ವಿಶ್ವವಿದ್ಯಾಲಯವನ್ನು ತೆಗೆದುಕೊಂಡು ನಾಲ್ಕಕ್ಕೆ ಹಂಚುವುದಕ್ಕೆ ಆಗುವುದಿಲ್ಲ. ಈಗ ಬೆಂಗಳೂರು ವಿಶ್ವವಿದ್ಯಾಲಯ ಎಷ್ಟು ದೊಡ್ಡದಾಗಿದೆ ಎಂದರೆ, ಇವತ್ತು ಅಲ್ಲ ಇನ್ನು 50 ವರ್ಷಕ್ಕೂ ಕೂಡ ಅದು sustain ಆಗುತ್ತದೆ. ಈಗ ಎಷ್ಟೇ ಸಂಖ್ಯೆ ಬಂದರೂ ಕೂಡ ಅದು ಇನ್ನಷ್ಟು ಬೆಳೆದುಕೊಂಡು ಹೋದರೂ ಕೂಡ ಜಮೀನು ಸಿಗುತ್ತದೆ. ಅಂತಹವುದನ್ನು ಮಾಡಬೇಕು. ಆದುದರಿಂದ, ದಯವಿಟ್ಟು, ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಅವರು ಸರ್ಕಾರದ ಗಮನ ಸೆಳೆದು, ಈ ಹುದ್ದೆಗಳನ್ನು ತುಂಬುವಂಥದ್ದು ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಉತ್ತರ ಹೇಳಿ.

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ....

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದಾರೆ. ಈಗ ತಾವು ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈಗ ಯಾರು ಡಿಗ್ರಿ ಕಾಲೇಜುಗಳಲ್ಲಿ ಡಾಕ್ಟರೇಟ್ ಮಾಡಿದ್ದಾರೆ, ಅವರಿಗೆ ಗೈಡ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಇಲ್ಲ ಮತ್ತು Professor ಗಳು ಸಹ ಇಲ್ಲ.

(ಮುಂದು)

(405) 16.03.2026 02.10 LL-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ(ಮುಂದು):-**

ಹಾಗಾಗಿ, ಡಿಗ್ರಿ ಕಾಲೇಜುಗಳಿಂದ ಬಹುತೇಕ ಉಪನ್ಯಾಸಕರುಗಳು ಪಿಹೆಚ್.ಡಿ. ಮಾಡುವುದಕ್ಕಾಗಿ ಹೊರ ರಾಜ್ಯಕ್ಕೆ ಹೋಗುತ್ತಿದ್ದಾರೆ. ಆದುದರಿಂದ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಡಿಗ್ರಿ ಕಾಲೇಜುಗಳಲ್ಲಿ ಯಾರು ಪಿಹೆಚ್.ಡಿ. ಮಾಡಿರುತ್ತಾರೆ, ಅವರಿಗೆ ಗೈಡ್‌ಶಿಪ್ ಕೊಡಬೇಕು. ಅಂದರೆ, ನಮ್ಮ ಕರ್ನಾಟಕದ ಹುಡುಗರು ಪಿಹೆಚ್.ಡಿ. ಮಾಡುವುದಕ್ಕೆ ಗೈಡ್‌ಶಿಪ್‌ಗಳನ್ನು ಕೊಡುವುದನ್ನು ದಯಮಾಡಿ ಪರಿಗಣನೆ ಮಾಡಬೇಕು.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯೂನಿವರ್ಸಿಟಿಗಳೇ ಎಲಿಜಿಬಿಲಿಟಿ ಇಲ್ಲದೇ ಇದ್ದರೆ, ಹೇಗೆ ಕೊಡುತ್ತಾರೆ?

**ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಗೌರವಾನ್ವಿತ ಸದಸ್ಯರುಗಳು ಹಲವಾರು ವಿಚಾರಗಳನ್ನು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಸಹ ಬಹಳಷ್ಟು ವಿಚಾರಗಳನ್ನು ಸುಧೀರ್ಘವಾಗಿ ಮಾತನಾಡಿರುತ್ತಾರೆ. ಈ ಸದನದಲ್ಲಿ ನಿನ್ನೆ ಅಥವಾ ಮೊನ್ನೆ ಬಂದಂತಹವರು ಕೆಲವು ಸದಸ್ಯರಿದ್ದಾರೆ. ಆದರೆ, ಬಹಳ ಸುಧೀರ್ಘವಾಗಿ ಅಂದರೆ, ಸುಮಾರು 20-25 ವರ್ಷಗಳಿಂದ ಇದೇ ಸದನದಲ್ಲಿ ಇರುವಂತಹವರು ಬಹಳಷ್ಟು ಸದಸ್ಯರಿದ್ದಾರೆ. ಅವರೆಲ್ಲರೂ ಸಹ, ಅನೇಕ ಸರ್ಕಾರಗಳು, ವಿರೋಧ ಪಕ್ಷ ಮತ್ತು ಆಡಳಿತ ಪಕ್ಷವನ್ನು ನೋಡಿದ್ದಾರೆ. ಬಹುಶಃ ಆ ಸದಸ್ಯರುಗಳು ಆಗಿಂದಾಗ್ಗೆ ಈ ವಿಚಾರವನ್ನು ಇಷ್ಟು ಗಂಭೀರವಾಗಿ ತೆಗೆದುಕೊಂಡು ಬಹಳ ಗಟ್ಟಿಯಾಗಿ ಸರ್ಕಾರಕ್ಕೆ ಒತ್ತಡ ಮಾಡಿ, ಇದನ್ನು ಆಗಲೇ ಸರಿ ಮಾಡಿದ್ದರೆ, ಈಗ ಈ ವಿಷಯ ನನ್ನ ತಲೆ ಮೇಲೆ ಬರುತ್ತಿರಲಿಲ್ಲ ಎಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:-** ಆ ಸಂದರ್ಭದಲ್ಲಿ ಈ ರೀತಿಯ ಸಮಸ್ಯೆ ಇರಲಿಲ್ಲ.

**ಡಾ॥ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಬಹುಶಃ ಗಮನ ಕೊಡಲಿಲ್ಲ ಎಂದು ನಾನು ಭಾವಿಸುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮನ್ನು ಸೇರಿಸಿಯೇ ಈ ಮಾತನ್ನು ಹೇಳುತ್ತಿದ್ದಾರೆ. ಹಾಗಾಗಿ, ತಾವು ನಮ್ಮ ಪರವಾಗಿ ಮಾತನಾಡಬೇಕು.

**ಸಭಾಪತಿಯವರು:-** ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ.

**ಡಾ॥ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ಎರಡು ಉದಾಹರಣೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಇಲ್ಲಿಯೇ ಇದ್ದಾರೆ. ಮೈಸೂರು ವಿಶ್ವವಿದ್ಯಾಲಯವು 1916ರಲ್ಲಿ ಸ್ಥಾಪನೆಯಾಯಿತು. ತದನಂತರ, ಇದು ಕುವೆಂಪು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ ಆಯಿತು. ನಾನು ಅಲ್ಲಿಯವರೆಗೂ ಹೋಗುವುದಿಲ್ಲ. ಆದರೆ, ತದನಂತರದಲ್ಲಿ ಏನಾಯಿತು ಎಂದು ಹೇಳುತ್ತೇನೆ. ಹಾಸನ, ಮಂಡ್ಯ, ಚಾಮರಾಜನಗರ ಆಗುವುದಕ್ಕೆ ಮುಂಚಿತವಾಗಿ 235 Affiliated Colleges ಇತ್ತು. 1916ನೇ ಇಸವಿಯಲ್ಲಿ ಪ್ರಾರಂಭವಾದಂತಹ ಮೈಸೂರು ವಿಶ್ವವಿದ್ಯಾಲಯ ಎಲ್ಲಿಗೆ ಬಂದಿದೆಯೆಂದರೆ, ಕೇವಲ 100 Affiliated College ಗಳ ಮಟ್ಟಕ್ಕೆ ಬಂದಿರುತ್ತದೆ. ಇಷ್ಟು ಪ್ರತಿಷ್ಠಿತವಾದಂತಹ ಮೈಸೂರು ವಿಶ್ವವಿದ್ಯಾಲಯದ ಪರಿಸ್ಥಿತಿ ಎಲ್ಲಿಗೆ ಬಂದಿದೆ? ಈ ಹಿಂದೆ bifurcation ಆಗುವುದಕ್ಕೆ ಮೊದಲು ಮೈಸೂರು ವಿಶ್ವವಿದ್ಯಾಲಯದಲ್ಲಿ 644 ಮಂಜೂರಾದ ಹುದ್ದೆಗಳಿದ್ದವು. ಆಗ 244 ಹುದ್ದೆಗಳನ್ನು ಮಾತ್ರ ತುಂಬಲಾಗಿರುತ್ತದೆ. ಇನ್ನುಳಿದಂತೆ 420 ಹುದ್ದೆಗಳು ಬಾಕಿ ಇರುತ್ತವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಈಗ ಏನು ಮಾಡುತ್ತೀರೆಂಬುದನ್ನು ಮಾತ್ರ ತಿಳಿಸಿ.

**ಡಾ॥ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಮಾಹಿತಿ ಕೊಡುತ್ತಿರುವುದೇನೆಂದರೆ...

**ಸಭಾಪತಿಯವರು:-** ನಮಗೆ ಮಾಹಿತಿ ಬೇಡ. ಈ ವಿಚಾರದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಮಾತ್ರ ತಿಳಿಸಿ.

**ಡಾ॥ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, medical terms ನಲ್ಲಿ ನಾವು 'acute', 'chronic' ಎಂದು ಹೇಳುತ್ತೇವೆ. This is a chronic condition. ಇದು ಕ್ರಾನಿಕ್ ಕಂಡೀಷನ್‌ಗೆ ಬಂದಂತಹ ಸಂದರ್ಭದಲ್ಲಿ ಅದಕ್ಕೆ ಮುಲಾಮು ಹಚ್ಚಿದ ತಕ್ಷಣವೇ, ಏಕಾಏಕಿ ಆ ಹುಣ್ಣಿನ ಸಮಸ್ಯೆ ಹಾರಿಹೋಗುವುದಿಲ್ಲ. That is why, ನಾವು ಬಹಳ ಸಿಸ್ಟಮ್ಯಾಟಿಕ್ ಆಗಿ ಇದಕ್ಕೆ ಅಪ್ರೋಚ್ ಮಾಡುತ್ತಿದ್ದೇವೆ ಮತ್ತು ಇದನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಿರುತ್ತೇವೆ. ಯಾವ ರೀತಿ ಇದನ್ನು ಸುಧಾರಣೆ ಮಾಡಬೇಕು, ಇದಕ್ಕೆ ಸಮಸ್ಯೆಗಳೇನು? ಇಲ್ಲಿರತಕ್ಕಂತಹ ಗೌರವಾನ್ವಿತ ಸದಸ್ಯರು ಹಾಗೂ ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೆ, ಈ ವಿಷಯದ ಬಗ್ಗೆ 2 ಅಥವಾ 3 ದಿನ ಚರ್ಚೆ ಮಾಡೋಣ. ಏನೆಲ್ಲಾ ಸಮಸ್ಯೆಗಳಿವೆ, ಅದಕ್ಕೆ ನಾವು ಅಧಿಕಾರಕ್ಕೆ ಬಂದ ನಂತರ ನಾವು ಏನೆಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂಬುದನ್ನು ವಿವರವಾಗಿ ಸದನದ ಮುಂದೆ ಇಡುತ್ತೇವೆ. ತದನಂತರ, ಎಲ್ಲರೂ ಕಲೆಕ್ಟಿವ್ ಆಗಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳತಕ್ಕಂತಹದ್ದು ಹಾಗೂ ಪಕ್ಷಾತೀತವಾಗಿ ಯಾವುದೇ ಸಿದ್ಧಾಂತ ಅಥವಾ ಬೇರೆ ವಿಷಯಗಳನ್ನು ಬದಿಗೊತ್ತಿ ತೀರ್ಮಾನ ತೆಗೆದುಕೊಂಡರೆ, ನಾನು ಖಂಡಿತವಾಗಿಯೂ ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಇದು ಮೇಲ್ಮನೆ ಎನ್ನುವಂಥದ್ದು, ಇಲ್ಲಿ ಬಹಳಷ್ಟು ತಿಳುವಳಿಕೆ ಇರುವಂಥಹ ಮಾನ್ಯ ಸದಸ್ಯರಿರುತ್ತಾರೆ. ಹಾಗಾಗಿ, ಇಲ್ಲಿ ಚರ್ಚೆಗೆ ಬಹಳಷ್ಟು ಮಹತ್ವ ಇರುವಂಥದ್ದು ಹಾಗೂ ಬಹಳಷ್ಟು ಅಧ್ಯಯನ ಮಾಡಿ ಬರತಕ್ಕಂತಹವರ ಮನೆ ಇದು. ಇಲ್ಲಿ ನಾವೆಲ್ಲರೂ ಸೇರಿ, ನಿಜವಾಗಿಯೂ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕೆಂದು

ಇದ್ದರೆ, ಖಂಡಿತವಾಗಿಯೂ ತಾವು ಏನು ನಿರ್ಣಯ ಮಾಡುತ್ತೀರಿ, ಅದರ ಬಗ್ಗೆ ಸಮಗ್ರವಾಗಿ ಎಲ್ಲಾ ವಿಚಾರಗಳು ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಈಗ ನಾನು ಪೂರ್ಣ ಅಂಕಿ-ಅಂಶಗಳನ್ನು ಕೊಡುತ್ತೇನೆ. ಅಂದರೆ, 2023ರ ನಂತರ ನಾನು ಈ ಖಾತೆಯ ಅಧಿಕಾರವನ್ನು ವಹಿಸಿಕೊಂಡ ನಂತರ, Career Advancement Scheme ನಲ್ಲಿ ಯಾವ ರೀತಿ ಸುಧಾರಣೆ ತಂದಿದ್ದೇವೆ, ಎಷ್ಟು ಸಾವಿರಾರು ಜನರಿಗೆ ಪ್ರಮೋಷನ್ ಕೊಟ್ಟಿದ್ದೇವೆ. ಸುಮಾರು 20 ವರ್ಷಗಳಿಂದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಸಿ ಅಂಡ್ ಆರ್ ನಿಯಮಗಳು ಇರಲಿಲ್ಲ. ಇವೊತ್ತಿನ ದಿವಸ ಅದನ್ನು ಸಹ ಮಾಡುವಂತಹ ಕೆಲಸ ಮಾಡಿ, ಅಲ್ಲಿಯೂ ಸಹ ಪ್ರಮೋಷನ್‌ಗಳನ್ನು ಕೊಟ್ಟಿದ್ದೇವೆ. ಅತಿಥಿ ಉಪನ್ಯಾಸಕರ ವಿಚಾರದಲ್ಲಿ ನ್ಯಾಯ ಒದಗಿಸುವಂತಹ ಕೆಲಸ ಮಾಡಿದ್ದೇವೆ. ಇನ್ನು A.E.D.P. (*Apprenticeship Embedded Degree/Diploma Programmes)* ಅಂದರೆ ಬಡ ಮಕ್ಕಳಿಗೆ ಸಹಾಯ ಆಗುವಂತಹ ಕಾರ್ಯಕ್ರಮ. ಈ ರೀತಿ ದೊಡ್ಡ ಮಟ್ಟದಲ್ಲಿ ಹಲವಾರು ಬದಲಾವಣೆಗಳನ್ನು ತರುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಆದರೆ, ಈ chronic disease, ಇದಕ್ಕೆ ಒಮ್ಮೆಲೆ ನಾವು ಒಂದು ಚಿಕಿತ್ಸೆ ಕೊಡುವಂಥದ್ದು ಅಷ್ಟು ಸುಲಭವಲ್ಲ. It takes time. ಯಾವುದೇ ಒಂದು ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕಾದರೆ, ಇವೊತ್ತಿನ ದಿವಸ ನಾವು ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅದರ ಫಲಿತಾಂಶ ಬರುವುದಕ್ಕೆ 2-3 ವರ್ಷ ಆಗುತ್ತದೆ. ಆದುದರಿಂದ, ನಾನು ಹೇಳುವಂಥದ್ದು, ನಮ್ಮ ಗೌರವಾನ್ವಿತ ಸದಸ್ಯರು ಹೇಳುತ್ತಿರುವಂತಹ ಎಲ್ಲರಿಗೂ ಗೊತ್ತಿದೆ. ಎಲ್ಲರಿಗೂ ಎಲ್ಲಾ ಮಾಹಿತಿ ಇದೆ. ಆದುದರಿಂದ, ಈ ವಿಚಾರದಲ್ಲಿ ಕಲೆಕ್ಟಿವ್ ಆಗಿ ನಿರ್ಧಾರ ಆಗಬೇಕಾಗಿರುತ್ತದೆ. ಮಾನ್ಯ ಸದಸ್ಯರು ಹೇಳುವಂಥದ್ದನ್ನು ನಾನು ಒಪ್ಪುತ್ತೇನೆ. ಅದೇನೆಂದರೆ, 2000 ವಿದ್ಯಾರ್ಥಿಗಳು ಇರುವ ಕಡೆ ಯೂನಿವರ್ಸಿಟಿ ಮಾಡಿರುವುದು ಎಷ್ಟು ಸರಿ ಎನ್ನುವುದಾಗಿದೆ. ಏಕೆಂದರೆ, ಅಲ್ಲಿ ಬೇರೆ ಬೇರೆ ಭ್ರಷ್ಟಾಚಾರ ನಡೆಯುತ್ತದೆ. ಇವೊತ್ತಿನ ದಿವಸ ಅಂಕಪಟ್ಟಿಗಳನ್ನು ಮುದ್ರಣ ಮಾಡಲೇಬಾರದು ಎಂದು ಇದೆ. U.U.C.M.S. (Unified University and College Management System) ಮತ್ತು ಯು.ಜಿ.ಸಿ. ಯವರ ತೀರ್ಮಾನದ ಪ್ರಕಾರ ನ್ಯಾಷನಲ್ ಅಕಾಡೆಮಿಕ್ ಡಿಪಾಸಿಟರಿನಲ್ಲಿ ನಾವು ಅಂಕಪಟ್ಟಿಯನ್ನು ಅಪ್‌ಲೋಡ್ ಮಾಡುತ್ತೇವೆ. ಯಾರು ನಮ್ಮ ರಾಜ್ಯದ ಹೊರಗಡೆ ಅಥವಾ ಒಳಗಡೆ ಉದ್ಯೋಗ ಬಯಸುತ್ತಾರೆ, ಯಾರಿಗೆ ಕಡ್ಡಾಯವಾಗಿ ಅಂಕಪಟ್ಟಿ ಬೇಕು, ಲಿಮಿಟೆಡ್ ಸೆಕ್ಯೂರಿಟಿ ಫೀಚರ್ಸ್‌ನಲ್ಲಿ ಅವರಿಗೆ ಅಂಕಪಟ್ಟಿ ಕೊಡಬೇಕೆಂದು ಇದೆ ಅಥವಾ ಹೊರದೇಶಕ್ಕೆ ಹೋಗುವಂತವರರಿಗೆ ಮಾತ್ರ ಅಂಕಪಟ್ಟಿ ಕೊಡಬೇಕೆಂದು ಇದೆ. ಎಲ್ಲರಿಗೂ ಅಂಕಪಟ್ಟಿ ಕೊಡಬೇಕಾದಂತಹ ಅವಶ್ಯಕತೆ ಇಲ್ಲ. ಉದಾಹರಣೆಗೆ, ಕಲಬುರಗಿ ವಿಶ್ವವಿದ್ಯಾಲಯದಲ್ಲಿ ರೂ.11 ಕೋಟಿಗಳ ಹಣ ಖರ್ಚು ಮಾಡಿದ್ದಾರೆ. ಈಗ ನಾವು ನಿವೃತ್ತ ನ್ಯಾಯಾಧೀಶರ ಮುಖಾಂತರ ತನಿಖೆ ಮಾಡುವುದಕ್ಕೆ ಗೌರವಾನ್ವಿತ ರಾಜ್ಯಪಾಲರು ಆದೇಶ ಮಾಡಿರುತ್ತಾರೆ. ಅದರಂತೆ, ನಾವು ತನಿಖೆ ಮಾಡಿಸುತ್ತಿದ್ದೇವೆ. ಅದೇ ರೀತಿ, ತುಮಕೂರು ವಿಶ್ವವಿದ್ಯಾಲಯದಲ್ಲಿಯೂ ಸಹ ನಿವೃತ್ತ ನ್ಯಾಯಾಧೀಶರ ಮೂಲಕ ತನಿಖೆ ಮಾಡಿಸುತ್ತಿದ್ದೇವೆ. ಕುವೆಂಪು ವಿಶ್ವವಿದ್ಯಾಲಯದಲ್ಲಿಯೂ ತನಿಖೆ ಮಾಡಿಸುತ್ತಿದ್ದೇವೆ. ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಇರುವಂತಹ ಸಂದರ್ಭದಲ್ಲಿ ಪ್ರತಿಯೊಂದು ವಿಚಾರದಲ್ಲಿಯೂ ನಾವು ಮೂಗು

ತೂರಿಸುವಂಥದ್ದು. ಬಹಳ ಕಷ್ಟಕರವಾದಂತಹ ಕೆಲಸವಾಗಿರುತ್ತದೆ. ಏಕೆಂದರೆ, ಅಲ್ಲಿ ಸಿಂಡಿಕೇಟ್ ಇರುತ್ತದೆ. ಕೊನೆಯದಾಗಿ, ಏನಾಗಿದೆಯೆಂದರೆ, ಯೂನಿವರ್ಸಿಟಿಗಳಲ್ಲಿ ಮಾಡುತ್ತಿರುವಂತಹ ಆಡಳಿತ ದೋಷಗಳನ್ನು ನಾನು ಇಲ್ಲಿ ಎಲ್ಲರ ಮುಂದೆ ಅದಕ್ಕೆ ಸಮಜಾಯಿಷಿ ಕೊಡಬೇಕಾದಂತಹ ಪರಿಸ್ಥಿತಿಯಲ್ಲಿ ಹಾಗೂ ವ್ಯವಸ್ಥೆಯಲ್ಲಿ ನಾವಿದ್ದೇವೆ. ಆದುದರಿಂದ, ನಾನು ಹೇಳುತ್ತಿರುವೇನೆಂದರೆ, ನಾವೆಲ್ಲರೂ ಕಲೆಕ್ಟಿವ್ ಆಗಿ ಈ ವಿಶ್ವವಿದ್ಯಾಲಯಗಳನ್ನು ಮತ್ತು ಉನ್ನತ ಶಿಕ್ಷಣವನ್ನು ಸುಧಾರಣೆ ಮಾಡುವುದಕ್ಕೆ ತಾವೆಲ್ಲರೂ ಏನು ಸಲಹೆಗಳನ್ನು ಕೊಡುತ್ತೀರಿ ಮತ್ತು ನಂತರ ಅದಕ್ಕೆ ತರತಕ್ಕಂತಹ ಬದಲಾವಣೆಗಳಿಗೂ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ. ಏಕೆಂದರೆ, ನಾಳೆ ದಿವಸ ನಮ್ಮದು ಬೇರೆ ತೀರ್ಮಾನ, ಮತ್ತೊಂದು ತೀರ್ಮಾನ ಎಂದು ಹೋಗುವಂಥದ್ದಲ್ಲ. ಈ ವಿಷಯದಲ್ಲಿ ನಾಳೆಯ ದಿವಸ ಬದಲಾವಣೆ ತರುವುದಕ್ಕೆ ಈ ಮನೆಯಲ್ಲಿ ಏನೇ ತೀರ್ಮಾನ ಆಗುತ್ತದೆ, ಅದಕ್ಕೆ ತಮ್ಮೆಲ್ಲರ ಸಹಕಾರ ಕೋರುತ್ತಿದ್ದೇನೆ. ಆದುದರಿಂದ, ತಾವು ಇದಕ್ಕೆ ಏನು ಅವಕಾಶ ಮಾಡಿಕೊಡುತ್ತೀರಿ, ಅದಕ್ಕೆ ಸರ್ಕಾರ ತಯಾರಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಇ) ವಿಷಯ:- ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ರಾಮಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲ ಕುಸಿತ ಹಾಗೂ ನೀರಿನಲ್ಲಿ ಫ್ಲೋರೈಡ್ ಅಂಶವು ಮಿತಿಮೀರಿರುವುದರಿಂದ, ಸಾರ್ವಜನಿಕರ ಆರೋಗ್ಯದ ಮೇಲೆ ಉಂಟಾಗುತ್ತಿರುವ ಗಂಭೀರ ಪರಿಣಾಮಗಳ ಕುರಿತು.**

- - - - -

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವೊತ್ತಿನ ದಿವಸ ನಾನು, ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ರಾಮಾಪುರ ಹೋಬಳಿ ಹನೂರು ಭಾಗದಲ್ಲಿರುವಂತಹ ಒಂದು ಸಮಸ್ಯೆಯ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತಿದ್ದೇವೆ. ಇವೊತ್ತಿನ ದಿವಸ, ಹನೂರು ತಾಲ್ಲೂಕಿನಲ್ಲಿ ರಾಮಾಪುರ ಗ್ರಾಮ ಬಹಳ ಹಿಂದುಳಿದಿದ್ದು, ಮಳೆಯಾಶ್ರಿತ ಪ್ರದೇಶವಾಗಿರುತ್ತದೆ. ಹಾಗಾಗಿ, ಹನೂರು ತಾಲ್ಲೂಕು ಬಹುತೇಕ ಹಳ್ಳಿಗಾಡಿನ ಪ್ರದೇಶವಾಗಿರುತ್ತದೆ. ಆ ಟೋಪೋಗ್ರಫಿನೇ ಆ ರೀತಿ ಇದೆ. ಆದುದರಿಂದ, ಗ್ರಾಮೀಣ ಪ್ರದೇಶದ ಒಂದು ತಾಲ್ಲೂಕು ಅದು. ಅಲ್ಲಿ ಮಾರ್ಟಳ್ಳಿ, ನಾಲಾರೋಡ್, ಸುಳ್ವಾಡಿ ಎಂಬ ಗ್ರಾಮ ಸಹ ಇದೆ. ಈ ಗ್ರಾಮದ ಬಗ್ಗೆ ಎಲ್ಲರಿಗೂ ಗೊತ್ತಿದೆ. ಏಕೆಂದರೆ, 2018ರಲ್ಲಿ ಸುಳ್ವಾಡಿ ಗ್ರಾಮದ ದೇವಸ್ಥಾನದ ಪ್ರಸಾದದಲ್ಲಿ ವಿಷ ಬೆರಸಿ ಕೊಟ್ಟಂತಹ ಗ್ರಾಮವಾಗಿರುತ್ತದೆ. ತದನಂತರ, ಕೀರ್ತಿಪಥಿ, ಪಳ್ಳೀಮೇಡು ಎಂದು ಇದೆ. ಈ ರೀತಿ 12-13 ಹಳ್ಳಿಗಳು ಇವೆ. ಅಲ್ಲಿ ಇವೊತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ, ಅಷ್ಟೊಂದು ಜನಸಂಖ್ಯೆ ಇರುವಂತಹ ಗ್ರಾಮಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. 1,100 ಅಡಿಗಳಿಂದ 1,300 ಅಡಿ ಆಳದವರೆಗೆ ಬೋರ್‌ವೆಲ್ ಕೊರೆಸಲಾಗುತ್ತಿದೆ. ಕಳೆದ ಒಂದು ತಿಂಗಳಿನಿಂದ ಸರ್ಕಾರದಿಂದಲೇ ಸುಮಾರು 50 ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ. ಅವುಗಳಲ್ಲಿ ಒಂದೆರಡು ಬೋರ್‌ಗಳಲ್ಲಿ ಒಂದಿಂಚು ನೀರು ಬರುತ್ತಿದೆ. ಹೀಗಾಗಿ, ಇವೊತ್ತಿನ ದಿವಸ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ಏನಾಗಿದೆಯೆಂದರೆ, ಒಂದು ಕಡೆ ಟ್ಯಾಂಕರ್‌ಗಳಿಂದ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಅಂದರೆ, ಒಂದು ಮನೆಗೆ 10 ರಿಂದ 12 ಬಿಂದಿಗೆ ನೀರು ಕೊಡುತ್ತಿದ್ದಾರೆ. ಆದರೆ, ಆ ನೀರು ಸಾಕಾಗುತ್ತಿಲ್ಲ. ಎರಡನೆಯದಾಗಿ, ಬೋರ್‌ವೆಲ್‌ನಲ್ಲಿ ಏನು ನೀರು ಇದೆ, ಅದು ಕೆಳಗಡೆ ಹೋಗುತ್ತಾ, ಫ್ಲೋರೈಡ್ ಕಂಟೆಂಟ್ ಜಾಸ್ತಿಯಾಗಿರುತ್ತದೆ. ಬಹಳ ದಾರುಣ್ಯ ಪರಿಸ್ಥಿತಿ ಏನೆಂದರೆ, ಕಳೆದ 6 ತಿಂಗಳ ಹಿಂದೆ 5 ರಿಂದ 6 ಜನ ಕಿಡ್ನಿ ಸಮಸ್ಯೆಯಾಗಿ ಸಾವನ್ನಪ್ಪಿರುತ್ತಾರೆ. ಇವೊತ್ತಿನ ದಿವಸ ಸುಮಾರು 12 ರಿಂದ 15 ಜನ ಡಯಾಲಿಸೀಸ್ ಮಾಡಿಸಿಕೊಳ್ಳುತ್ತಿದ್ದಾರೆ. ಮಾರ್ಟಳ್ಳಿ ಗ್ರಾಮದಲ್ಲಿಯೇ 8 ಜನ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಮಾಪುರದಲ್ಲಿ ಒಂದು ಡಯಾಲಿಸೀಸ್ ಯೂನಿಟ್ ಅನ್ನು ತೆರೆದಿರುವುದರಿಂದ ಅವರಿಗೆ ಅನುಕೂಲವಾಗಿ, ಅವರು ಹೋಗಿ ಡಯಾಲಿಸೀಸ್ ಮಾಡಿಸಿಕೊಳ್ಳುತ್ತಿದ್ದಾರೆ. ಹನೂರು ತಾಲ್ಲೂಕಿನಲ್ಲಿ ಸುಮಾರು 64,000 ದನಕರುಗಳು ಇವೆ. ಅಲ್ಲಿ ಒಂದು ಪದ್ಧತಿ ಇದೆ. ಅದೇನೆಂದರೆ, ಸುಮಾರು 200

ರಿಂದ 300 ಹಸುಗಳನ್ನು ಒಟ್ಟಿಗೆ ಬೆಳಗ್ಗೆ ಕಾಡಿಗೆ ಕರೆದುಕೊಂಡು ಹೋಗಿ, ಅವುಗಳನ್ನು ಮೇಯಿಸಿಕೊಂಡು ನಂತರ ಸಂಜೆ ವಾಪಸ್ಸು ಮನೆಗೆ ಕರೆದುಕೊಂಡು ಬರುತ್ತಾರೆ. ಆ ಜಾನುವಾರುಗಳಿಂದ ಉತ್ಪತ್ತಿಯಾದ ಗೊಬ್ಬರವನ್ನು ಮಾರಿಕೊಳ್ಳುತ್ತಾರೆ. ಆ ರೀತಿ, ಅಲ್ಲಿ ಸಾವಿರಾರು ಜಾನುವಾರುಗಳು ಇರುತ್ತವೆ. ಆದರೆ, ಆ ಜಾನುವಾರಿಗಳಿಗೂ ಸಹ ಕುಡಿಯುವ ನೀರಿರುವುದಿಲ್ಲ. ಅಲ್ಲಿ ಎಂತಹ ಪರಿಸ್ಥಿತಿ ಬಂದಿದೆ ಎಂದರೆ, ಕುಡಿಯುವ ನೀರಿನಲ್ಲಿ ಫ್ಲೋರೈಡ್ ಕಂಟೆಂಟ್ ಜಾಸ್ತಿಯಾಗಿರುವ ಕಾರಣ ಸಣ್ಣ ಮಕ್ಕಳಲ್ಲಿ ದಂತದ ಸಮಸ್ಯೆ ಆಗಿರುತ್ತದೆ. ಅಲ್ಲದೇ, ಹಿರಿಯ ನಾಗರಿಕರಿಗೆ ಮಂಡಿ ನೋವು ಹಾಗೂ ಮೂಳೆ ಸವೆತ ಆಗುತ್ತಿರುತ್ತವೆ.

(ಮುಂದು)

(406) 16.03.2026 ವೈಎಲ್-ಆರ್ಎನ್ 2.20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಕುಮಾರ್ ಕೆ. (ಮುಂದು):-**

ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಕೂಡ ಇಡೀ ಮಾರತ್ತಳ್ಳಿಯಲ್ಲಿ ಒಂದೇ ಒಂದು R.O ಪ್ಲಾಂಟ್ ಕೆಲಸ ಮಾಡುತ್ತಿದೆ. ಒಂದೇ ಆರ್.ಒ.ಪ್ಲಾಂಟ್ ಕೆಲಸ ಮಾಡುತ್ತಿದ್ದು, coin booth ಗೆ ಹೋಗಿ 5 ರೂಪಾಯಿ ಹಾಕಿ, ಒಂದು-ಎರಡು ಮೂರು ಕ್ಯಾನ್ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಈ ಸಂಬಂಧ ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಹತ್ತಿರದಲ್ಲಿರತಕ್ಕಂಥ ಕಾವೇರಿ ನದಿ ಏನಿದೆ, ಆ ನದಿ ನೀರನ್ನು ಸ್ವಲ್ಪ ಕಾಡಿನಲ್ಲಿ ಒದಗಿಸಬೇಕಾಗಿದೆ. ಆದರೆ, ಜಲಜೀವನ್ ಮಿಷನ್ ಮೂಲಕ ನೀರನ್ನು ಒದಗಿಸುತ್ತೇವೆ ಎಂದು ಹೇಳುತ್ತಾರೆ. ಜಲಜೀವನ್ ಮಿಷನ್ ಬಂದರೆ, ಎಲ್ಲಿಂದ ನೀರನ್ನು ತಂದು ಕೊಡುತ್ತಾರೆ, ಅಲ್ಲಿ ಯಾವುದೇ ರೀತಿಯ source ಇರುವುದಿಲ್ಲ. ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹೆರತೊಳ್ಳಹಳ್ಳಿಗೆ ರೂ.490 ಕೋಟಿ ಕೊಟ್ಟಿದ್ದು, ಅದು ಜಾರಿಗೆ ಬರಲು ಸುಮಾರು ಒಂದೆರಡೂ ವರ್ಷಗಳಾಗಬಹುದು. ಆಮೇಲೆ ಸುಧಾರಣೆಯಾಗಬಹುದು, ಅದು ಬೇರೆ ಪ್ರಶ್ನೆ, ಸರ್ಕಾರ ಅದನ್ನು ಮಾಡಿದೆ. ಆದರೆ, ಇವತ್ತು 'ಜಲಜೀವನ್ ಮಿಷನ್' ಮೂಲಕ ಎಲ್ಲಿಂದ ನೀರನ್ನು ತರಲು ಆಗುತ್ತದೆ? ಅದಲ್ಲದೇ ಅಲ್ಲಿರುವಂಥ ಕಾಡನ್ನು ಅರಣ್ಯ ಇಲಾಖೆಯವರು ಬಿಡುತ್ತಿಲ್ಲ.

ಹಾಗಾಗಿ, ಹನೂರು ತಾಲ್ಲೂಕಿನ ರಾಮಾಪುರ, ಮಲೈ ಮಹದೇಶ್ವರ ಬೆಟ್ಟ, ಗೋಪಿನಾಥಂ, ಬೇರೆ ಬೇರೆ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು, ಅದೇ ರೀತಿ 3 ಪಂಚಾಯಿತಿಗಳಲ್ಲಿ ಮತ್ತು ಕೊಳ್ಳೇಗಾಲ, ಚಾಮರಾಜನಗರ ಇಡೀ ಭಾಗದಲ್ಲಿ ನೀರಿನ ಹಾಹಾಕಾರ ಮುಗಿಲು ಮುಟ್ಟುತ್ತಿದೆ. ನದಿ ಮೂಲದಿಂದ ಏನೂ ನೀರನ್ನು ತರಬೇಕಾಗಿದೆ. ಅದಕ್ಕಾಗಿ ತೆಲಂಗಾಣ ಸರ್ಕಾರವು 'ಮಿಷನ್ ಭಗೀರಥ' ಎನ್ನುವ ಯೋಜನೆಯನ್ನು ಜಾರಿಗೆ ತಂದಿದೆ. ನಮ್ಮ ರಾಜ್ಯದ ಮೈಸೂರಿನಲ್ಲಿ ಮತ್ತು ಬೇರೆ ಬೇರೆ ಭಾಗಗಳಲ್ಲಿ tap water ತೆಗೆದುಕೊಂಡು ಬಂದು ಫ್ಲೋರೈಡ್ ವಾಟರ್ ಎಲ್ಲಿ ಜಾಸ್ತಿ ಇತ್ತು, ಅಲ್ಲಿ 'ಮಿಷನ್ ಭಗೀರಥ' ಎನ್ನುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲಿ ಫ್ಲೋರೈಡ್ content ಅಷ್ಟೊಂದು ಇಲ್ಲ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿರುವುದನ್ನು ಓದಿದ್ದೇನೆ.

ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಫ್ಲೋರೈಡ್ ವಾಟರ್‌ಅನ್ನು ಟೆಸ್ಟ್ ಮಾಡಲು kits ಕೊಡುವುದರ ಮೂಲಕ ಎಲ್ಲರನ್ನೂ training ಮಾಡಿದ್ದಾರೆ. Regular intervals ನಲ್ಲಿ ಮಾಡುತ್ತಿಲ್ಲ. ಅದಕ್ಕಾಗಿ 15 ದಿವಸಗಳಿಗೊಮ್ಮೆ ಫ್ಲೋರೈಡ್ ವಾಟರ್‌ಅನ್ನು ಟೆಸ್ಟ್ ಮಾಡಬೇಕು ಮತ್ತು ಜಿಲ್ಲಾಧಿಕಾರಿಗಳು ತಿಂಗಳಿಗೊಮ್ಮೆ review ಮಾಡಬೇಕು. ಏಕೆಂದರೆ, ಫ್ಲೋರೈಡ್ ಜಾಸ್ತಿ ಇರುವ ಪ್ರಯುಕ್ತ ನೀರಿನ ಅಭಾವ ಹೆಚ್ಚಾಗಿದೆ. ಹಾಗಾಗಿ, ಫ್ಲೋರೈಡ್ ವಾಟರ್ ಅನ್ನು ಜಿಲ್ಲಾಧಿಕಾರಿಗಳು review ಮಾಡಲು authorize ಮಾಡಬೇಕು. ನೀರಿನಲ್ಲಿ ಇಷ್ಟೊಂದು fluoride content ಇದೆ ಎಂದು display ಮಾಡಬೇಕು. ತಮಿಳುನಾಡಿನಲ್ಲಿ ಸಹ ಇದೇ ರೀತಿ ಸಮಸ್ಯೆ ಇದೆ. ಅದು ಸಹ ಕರ್ನಾಟಕದ ಬಾರ್ಡರ್‌ನಲ್ಲಿರುವುದರಿಂದ ten wheel ಗಾಡಿಯಲ್ಲಿ 20,000 ಲೀಟರ್ tankers ಮೂಲಕ ನೀರನ್ನು ಒದಗಿಸಲಾಗುತ್ತಿದ್ದು, ಇವತ್ತು ತಮಿಳುನಾಡಿನ ಜನತೆಗೆ ಕುಡಿಯಲು ನೀರನ್ನು ಕೊಡುತ್ತಿದ್ದಾರೆ. ಆದರೆ, ಕರ್ನಾಟಕದಲ್ಲಿ ಇರುವಂಥ ಸಮಸ್ಯೆ ಏನೆಂದರೆ, 63,000 cattle ಗಳಿದ್ದು, ಆ ಪ್ರಾಣಿಗಳನ್ನು ಉಳಿಸಬೇಕಾಗಿದೆ. ಏಕೆಂದರೆ, ಈ ಹಿಂದೆ ಬರಗಾಲ ಸಮಸ್ಯೆ ಉದ್ಭವಿಸಿದ್ದಾಗ ಎಲ್ಲೆಂದರಲ್ಲಿ ದನಗಳು ಸತ್ತು ಹೋಗಿದ್ದು, ವಾಸನೆ ಬಂದಾಗ ಅಲ್ಲಿ ದನ ಸತ್ತಿರುವುದು ಗೊತ್ತಾಗುತ್ತಿತ್ತು. ಅದೊಂದು ದೊಡ್ಡ economy ಆಗಿದ್ದು, ಆ ಭಾಗದ ಜನರಿಗೆ ನೀರು ಸಹ ಜೀವನಾಂಶವಾಗಿರುವುದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಬಹಳ ಗಂಭೀರವಾಗಿ ಕೈಗೆತ್ತಿಕೊಳ್ಳಬೇಕು. ಆರೋಗ್ಯ ಇಲಾಖೆಯಿಂದ ಇರಬಹುದು ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಇರಬಹುದು, fluoride content ಜಾಸ್ತಿಯಾದ ಪ್ರಯುಕ್ತ dental problem ಜಾಸ್ತಿ ಆಗಿದೆ. ಆದ್ದರಿಂದ ದಂತ ಪರೀಕ್ಷೆ ನಿರಂತರವಾಗಿ ಅಲ್ಲಿನ ಮಕ್ಕಳಿಗೆ ಆಗಬೇಕು ಹಾಗೂ ಹಿರಿಯರಿಗೆ ಆರೋಗ್ಯ ತಪಾಸಣೆ ಮಾಡಬೇಕು. ಇದು ಸರ್ಕಾರದ ತಪ್ಪಾಗಿರುವುದರಿಂದ fluoride contents ಜಾಸ್ತಿಯಾಗಿದೆ. ದಯವಿಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು.

ಮಾನ್ಯ ಸಭಾಪತಿಯವರೇ, ಅಲ್ಲಿಯೇ ಪಕ್ಕದಲ್ಲಿ ಹೂಗ್ಯಂ ಎಂಬ ಗ್ರಾಮ ಇದ್ದು, ಕೆಲವು ತೋಟಗಳಿವೆ. ಅವರು ಉಚಿತವಾಗಿ ನೀರನ್ನು ಕೊಡಲು ತಯಾರಿದ್ದಾರೆ. ಆದರೆ, ಸರ್ಕಾರ ಕೊಡುತ್ತಿರುವುದು ಕೇವಲ 5000-6000 ಲೀಟರ್ ಸಾಮರ್ಥ್ಯದ Container ಟ್ಯಾಂಕರ್‌ಗಳು ಮಾತ್ರ. ಸದ್ಯಕ್ಕೆ 20,000 ಲೀಟರ್ ಸಾಮರ್ಥ್ಯದ Container ಟ್ಯಾಂಕರ್‌ಗಳನ್ನು ಸ್ವಂತಕ್ಕೆ ಅಥವಾ ಬಾಡಿಗೆಗೆ ತೆಗೆದುಕೊಳ್ಳುವುದರ ಮೂಲಕ ನಾಲ್ಕೈದು ತಿಂಗಳೊಳಗೆ ಸುಧಾರಣೆ ಮಾಡಲಿಲ್ಲವೆಂದರೆ, ಊರುಗಳು ಬಹಳ ಕೆಟ್ಟ ಪರಿಸ್ಥಿತಿಗೆ ಹೋಗುತ್ತವೆ. ಅದಲ್ಲದೇ ತೆಂಗಿನ ಮರಗಳು ಸೀಳಿವೆ, ಒಂದು ಕಡೆ ಕಾವು, ಇನ್ನೊಂದು ಕಡೆ ನಿಲ್ಲುವುದಕ್ಕೂ ಆಗದೇ ಇರುವಷ್ಟು ರಣ ಬಿಸಿಲು. ಅದರ ಮೇಲ್ಭಾಗದಲ್ಲಿ ಮಲೈ ಮಹದೇಶ್ವರ ಬೆಟ್ಟ ಇದೆ. ಮಲೈ ಮಹದೇಶ್ವರ ಬೆಟ್ಟಕ್ಕೆ ಲಕ್ಷಾಂತರ ಭಕ್ತಾದಿಗಳು ಬರುತ್ತಾರೆ ಎಂಬ ಕಾರಣಕ್ಕಾಗಿಯೇ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ.ಕೃಷ್ಣರವರು ಕಾವೇರಿ ನೀರನ್ನು ತಂದು ಕೊಟ್ಟರು. ಹಾಗಾಗಿ, ಭಕ್ತಾದಿಗಳ ಸುಧಾರಣೆಯಾಗುತ್ತಿದೆ. ಇಲ್ಲವೆಂದು ಹೇಳುತ್ತಿಲ್ಲ. ಹಾಗಾಗಿ, ಹತ್ತಿರದಲ್ಲಿರುವ ಅದೇ ಕಾವೇರಿ ನೀರನ್ನು ಟ್ಯಾಪ್ ಮಾಡಿ, ದಯವಿಟ್ಟು ಕುಡಿಯುವ ನೀರನ್ನು ಹನೂರು ಭಾಗದ ಜನರಿಗೆ ಕೊಟ್ಟರೆ

ಅನುಕೂಲವಾಗುತ್ತದೆ. ಅಲ್ಲಿಯ ಮಕ್ಕಳು ಬಹಳ ಕಷ್ಟದ ಪರಿಸ್ಥಿತಿಗೆ ಸಿಲುಕಿಕೊಂಡಿದ್ದು, ಹಿರಿಯರಿಗೂ ಕಷ್ಟವಾಗುತ್ತಿದೆ. ಈ ಸಂಬಂಧ ಮಾನ್ಯ ಸಚಿವರು ಗಮನಹರಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಶಿವಕುಮಾರ್‌ರವರು ಹನೂರು ತಾಲ್ಲೂಕಿನ ರಾಮಾಪುರ ಮತ್ತು ಸುತ್ತಮುತ್ತ ಗ್ರಾಮಗಳ ಸಮಸ್ಯೆಯ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಆದರೆ, ನಾನು ಉಲ್ಲೇಖ ಮಾಡಬಯಸುವುದೇನೆಂದರೆ, ಈ ರೀತಿಯ ಸಮಸ್ಯೆ ಈ ರಾಜ್ಯದ 18 ಜಿಲ್ಲೆಗಳಲ್ಲಿ ಇದೆ. 365 habitations ನಲ್ಲಿವೆ, 6 ಲಕ್ಷ ಜನರು affect ಆಗಿದ್ದಾರೆ. ವಿಶೇಷವಾಗಿ ಕೋಲಾರ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ಗದಗ, ಧಾರವಾಡ, ಹಾವೇರಿ, ಕಲಬುರ್ಗಿ, ರಾಯಚೂರು, ಚಿಕ್ಕಬಳ್ಳಾಪುರ, ಚಾಮರಾಜನಗರ ಮತ್ತು ಬೆಂಗಳೂರಿನ ಗ್ರಾಮೀಣ ಪ್ರದೇಶ ಒಳಗೊಂಡ ಹಾಗೆ ಈ ಸಮಸ್ಯೆ ಇದೆ. ಕೋಲಾರದಲ್ಲಿ ಸರ್ವೆ ಮಾಡಿದಾಗ 1,12,328 ಜನರನ್ನು ಸರ್ವೆ ಮಾಡಿದರೆ, 10,404 Dental fluorosis found out ಆಗಿದ್ದು, 251 Skeletal fluourosis ಕೂಡ ಬಂದಿದೆ. ಅದೇ ರೀತಿ ಹಾಸನ ಜಿಲ್ಲೆಯಲ್ಲಿ 45 ಹಳ್ಳಿಗಳನ್ನು ಸರ್ವೆ ಮಾಡಿದ್ದು, ಬೆಂಗಳೂರು ಗ್ರಾಮೀಣ ಭಾಗದಲ್ಲಿ 93 ಗ್ರಾಮಗಳಲ್ಲಿ ಎಫೆಕ್ಟ್ ಆಗಿವೆ ಎನ್ನುವಂಥ ಮಾಹಿತಿ ಇದೆ. 100 ಮೀಟರ್ ಗಿಂತ ಅಂದರೆ, 350 feet ಗಿಂತ ಕೆಳಭಾಗಕ್ಕೆ ಹೋದರೆ, 3 ರಿಂದ 5 mg/ppm ನಷ್ಟು ಫ್ಲೋರೈಡ್ affect ಆಗುತ್ತಿದೆ. ಮಾನ್ಯ ಕೆ.ಶಿವಕುಮಾರ್‌ರವರು ಈಗಾಗಲೇ ಹೇಳಿದ ಹಾಗೆ ಹಲ್ಲಿಗಿಂತ major affect, skeletal ಗೆ ಆಗುತ್ತದೆ. Skeletal ಜೊತೆಗೆ muscle affect, brain affect, memory affect ಆಗಿ, ಕಿಡ್ನಿ ಡ್ಯಾಮೇಜ್ ಆಗುವ ಸಾಧ್ಯತೆ ಇದೆ. ಹಾಗಾಗಿ, ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ಆ ಗ್ರಾಮದಲ್ಲಿ ಮಾತ್ರವಲ್ಲದೇ, ಬೇರೆ ಬೇರೆ ಗ್ರಾಮಗಳಲ್ಲಿಯೂ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ನಿಲುವು ಏನೆಂಬುದನ್ನು ಕೇಳಬಯಸುತ್ತೇನೆ. ಬಹಳ ಮುಖ್ಯವಾಗಿ ವಾಟರ್ ಟೆಸ್ಟಿಂಗ್ ಮಾಡಲು, ಪ್ರತಿ ಜಿಲ್ಲೆಗೊಂದು N.A.B.L accredited ಲ್ಯಾಬ್ ತೆರೆಯಬೇಕಾಗಿದ್ದು, ಅದು ಸಹ ಬಹಳ ಮುಖ್ಯವಾಗಿದೆ. ಏಕೆಂದರೆ, ಅದಕ್ಕೆ ಸುಮಾರು ರೂ.2 ಕೋಟಿಗಳಷ್ಟು ಖರ್ಚಾಗುತ್ತದೆ. N.A.B.L accredited ಲ್ಯಾಬ್ ಅನ್ನು ಪ್ರತಿ ಜಿಲ್ಲೆಗೊಂದು ಕಡ್ಡಾಯವಾಗಿ ತೆರೆದರೆ, ಎಷ್ಟೋ ಜನರ ಅನಾರೋಗ್ಯವನ್ನು ತಡೆಯಬಹುದು. ಏಕೆಂದರೆ, ಈ fluorosis, Magnesium dependent enzymes ಗಳನ್ನು affect ಮಾಡುವುದರಿಂದ ದೇಹದ ಎಲ್ಲಾ ಭಾಗಗಳಿಗೂ affect ಆಗುತ್ತದೆ. ಹಾಗಾಗಿ, ಮಾನ್ಯ ಸಚಿವರು ಇದರ ಕಡೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನನಗಿಂತ ಮಾನ್ಯ ಕೆ.ಶಿವಕುಮಾರ್‌ರವರಿಗೆ ಹನೂರು ತಾಲ್ಲೂಕಿನ ಬಗ್ಗೆ ಮಾಹಿತಿ ಇದ್ದು, ಈ ಹನೂರು ತಾಲ್ಲೂಕು rain shadow ಏರಿಯಾದಲ್ಲಿ ಬರುತ್ತದೆ. ಕಳೆದ ವರ್ಷ ಕೇವಲ 597mm. ಮಾತ್ರ ಮಳೆ ಬಿದ್ದಿದ್ದು, ಸರಾಸರಿ ಮಳೆಗಿಂತ ಸುಮಾರು ಶೇಕಡ 25 ರಷ್ಟು ಕಡಿಮೆ ಮಳೆಯಾಗಿದೆ. ಸದ್ಯಕ್ಕೆ ಗ್ರೌಂಡ್ ವಾಟರ್ ಗೆ ಸುಮಾರು 600 ರಿಂದ 800 feet ಭೂಮಿಯನ್ನು ಕೊರೆಯಬೇಕಾಗುತ್ತದೆ. ಜೊತೆಗೆ Ground Water Development ಇಲಾಖೆಯವರ ಮಾಹಿತಿ ಪ್ರಕಾರ ಕಳೆದ ವರ್ಷ ಗ್ರೌಂಡ್ ವಾಟರ್ ಲೆವೆಲ್ ಸುಮಾರು 25.4 feet ಕುಸಿತವಾಗಿದ್ದು, ಇನ್ನು 25 feet ನಷ್ಟು ನೀರು ಕೆಳ ಹಂತಕ್ಕೆ ಹೋಗಿದೆ.

ನಾವು ಸಹ ನಿರಂತರವಾಗಿ rain shadows area ಏನಿದೆ, ಅಲ್ಲಿ ಅರ್ಧ ಹಳ್ಳಿಗಳಿಗೆ ವಾಟರ್ ಸೆಕ್ಯೂರಿಟಿ ಹೇಗೆ ಒದಗಿಸಬಹುದೆಂಬುದರ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ. ಕಳೆದ ಸುಮಾರು ಒಂದು, ಒಂದೂವರೆ ವರ್ಷಗಳಿಂದ legacy issues ಇರುವಂಥ ಸಾವಿರ ಹಳ್ಳಿಗಳನ್ನು ಕೈಗೆತ್ತಿಕೊಂಡಿದು, ಅದರಲ್ಲಿ ವಾಟರ್ ಸೆಕ್ಯೂರಿಟಿ ಹೇಗೆ ಒದಗಿಸಬಹುದೆಂಬುದರ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ multi-village scheme, single village scheme ಚಾಲನೆಯಲ್ಲಿವೆ. JJM (Jal Jeevan Mission) ಅಡಿ forest permission ಗೆ ತೊಂದರೆಯಾಗುತ್ತಿದ್ದು, environment clearance ಗಾಗಿ ಕಡತ ಹೋಗಿದ್ದು. ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟ ನಂತರ ಅದನ್ನು ಸಹ ಮಾಡುತ್ತೇವೆ. ಸದ್ಯದ ಪರಿಸ್ಥಿತಿಯನ್ನು ನೀಗಿಸಲು ಸುಮಾರು ರೂ.8 ಕೋಟಿಗಳಲ್ಲಿ ಆಕ್ಷನ್ ಪ್ಲಾನ್‌ಗಾಗಿ Chief Executive Officer ರವರು ಕಡತವನ್ನು ಕಳುಹಿಸಿಕೊಟ್ಟಿದ್ದಾರೆ, ಸಮಗ್ರವಾಗಿ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾವು ಸಹ ಏನೆಂದು ಹೇಳಿದ್ದೇವೆ ಎಂದರೆ, ಸದ್ಯಕ್ಕೆ ಬೇಸಿಗೆ ಕಾಲದಲ್ಲಿ ಏನೂ ಬೇಕಾಗಿದೆ, ಅದಕ್ಕೆ ಆಕ್ಷನ್ ಪ್ಲಾನ್ ಮಾಡಿ ಕಳುಹಿಸಿಕೊಡಬೇಕೆಂದು ಹೇಳಿದ್ದು, ಒಂದೆರಡೂ ದಿವಸಗಳಲ್ಲಿ ಅದು ಸಹ ಬರುತ್ತದೆ. ಈಗಾಗಲೇ ಪ್ರೈವೆಟ್ ಬೋರ್‌ವೆಲ್ ಮತ್ತು ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹನೂರು ತಾಲ್ಲೂಕಿನ ಸುಮಾರು 10 ಜನವಸತಿ ಪ್ರದೇಶಗಳಲ್ಲಿ ಸ್ವಲ್ಪ ಕುಡಿಯುವ ನೀರಿನ ಸಮಸ್ಯೆಯಾಗುತ್ತಿದೆ. ಹಾಗೆಯೇ ಟೆಸ್ಟಿಂಗ್ ವಿಚಾರವಾಗಿ ಪ್ರಸ್ತಾಪ ಮಾಡಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಲ್ಯಾಬ್ ಟೆಸ್ಟಿಂಗ್‌ಗೆ ಬಹಳ ಆದ್ಯತೆಯನ್ನು ನೀಡಿದ್ದೇವೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಮತ್ತು ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರ ಕೈಗೊಂಡಿರುವ ಕ್ರಮದಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಪ್ರತಿ ತಿಂಗಳು ನಾನೇ ಕುಳಿತುಕೊಂಡು ರಿವ್ಯೂ ಮಾಡುತ್ತೇನೆ.

(ಮುಂದು)

(407) 16.03.2026/2.30/ ಎಸ್‌ಕೆ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು)**

ನಮ್ಮ testing parameters ನಲ್ಲಿ ಏನಿದೆ ಎಂದರೆ ಬಣ್ಣವನ್ನು ನೋಡುತ್ತೇವೆ. ಮಾನ್ಯ ಸದಸ್ಯರು ಹೇಳಿರುವಂತೆ ಅದರ odor ವಾಸನೆಯನ್ನು ಟೆಸ್ಟ್ ಮಾಡುತ್ತೇವೆ. ಅದರ taste ಕೂಡ ಮಾಡುತ್ತೇವೆ. Chemical contamination ಬಗ್ಗೆ ಡಾ॥ ಧನಂಜಯ ಸರ್ಜಿಯವರ ಹೇಳಿರುವಂತೆ TDS, Electrical Conductance, Nitrate, Sulphate, Fluoride, Iron, Turbidity, Alkalinity, Chloride, ಇರಬಹುದು, total hardness of the water, more importantly Calcium. ಇವೆಲ್ಲಾ parameters ಅನ್ನು ಇಟ್ಟುಕೊಂಡು ನಾವು testing ಮಾಡುತ್ತೇವೆ. ಇಡೀ ರಾಜ್ಯದ ಬಗ್ಗೆ ಮಾಹಿತಿಯನ್ನು ಕೇಳುತ್ತೀರೆಂಬ ಬಗ್ಗೆ ನನ್ನ ಗಮನದಲ್ಲಿ ಇರಲಿಲ್ಲ. ಇಲ್ಲವೆಂದರೆ, ಎಲ್ಲಾ ಮಾಹಿತಿಯನ್ನು ತೆಗೆದುಕೊಂಡು ಬರುತ್ತಿದ್ದೆ. ಎಲ್ಲಾ ಮಾಹಿತಿ ನನ್ನ ಬಳಿ ಇದೆ. ಹನೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ 2025-26ನೇ ಸಾಲಿನಲ್ಲಿ water source samples ಅನ್ನು ತೆಗೆದುಕೊಂಡು chemical parameters ಬಗ್ಗೆ ಸುಮಾರು 1,226 ಟೆಸ್ಟ್‌ಗಳನ್ನು ಮಾಡಿದ್ದೇವೆ. 1,226 ಟೆಸ್ಟ್‌ಗಳಲ್ಲಿ 37 chemical contamination ಇದೆ ಎಂದು ನಮಗೆ ಗೊತ್ತಾದ ತಕ್ಷಣವೇ 37 remedial measures ಕೂಡ ತೆಗೆದುಕೊಂಡಿದ್ದೇವೆ. ಅದರ taste problem, odor problem, chemical content ಸಮಸ್ಯೆ ಇದೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಚಿವರೆ, ಮಾಹಿತಿಯನ್ನು ಮತ್ತೊಮ್ಮೆ ಹೇಳುವಿರಾ?

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, 2025-26ನೇ ಸಾಲಿನಲ್ಲಿ ಹನೂರು ತಾಲ್ಲೂಕಿನಲ್ಲಿ chemical parameters ಮೇಲೆ water source samples 1,226 testing ಅನ್ನು ಮಾಡಿದ್ದೇವೆ. ಅದರಲ್ಲಿ 37 ಲೋಪಗಳು ಕಂಡು ಬಂದಾಗ ಅದಕ್ಕೂ ಕೂಡ ನಾವು ಪರಿಣಾಮಕಾರಿಯಾಗಿ remedial solutions ಅನ್ನು ಕೊಟ್ಟಿದ್ದೇವೆ. ನಾನು ನೀಡಿರುವ ಉತ್ತರದಲ್ಲಿ zero fluoride contamination cases ಎಂಬುದಾಗಿ ಬಂದಿದೆ. ಮಾನ್ಯ ಸದಸ್ಯರು ರಾಮಾಪುರ ಹಳ್ಳಿಯ ಬಗ್ಗೆ ನಿರ್ದಿಷ್ಟವಾಗಿ ಕೇಳಿದ್ದಾರೆ. 2025-26ನೇ ಸಾಲಿನಲ್ಲಿ 44 chemical parameters ನಲ್ಲಿ water source samples, test ಮಾಡಿದ್ದೇವೆ. ಅದರಲ್ಲಿ ಎರಡು chemical contamination ಸಿಕ್ಕಿದಾಗ, it was based on total hardness not on fluoride. ಅದಕ್ಕೂ ಕೂಡ remedial solutions ಅನ್ನು ನಾವು ಕೊಟ್ಟಿದ್ದೇವೆ. ಅದು ಇನ್ನೂ ಕೂಡ ಇದೆ

ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ testing ಅನ್ನು ಮಾಡುತ್ತೇವೆ. ಇನ್ನೂ ಹೆಚ್ಚು water source samples ಏನಿದೆಯೋ, ಅದನ್ನು ತೆಗೆದುಕೊಂಡು, ಕಡಿಮೆ ಅವಧಿಗಳಿಗೆ testing ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ನೆರೆ ರಾಜ್ಯದಲ್ಲಿ ಯಾವ ರೀತಿ ಮಾಡಿದ್ದಾರೆ ಎಂಬ ಬಗ್ಗೆ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. Test results ಅನ್ನು display ಮಾಡಬೇಕು. ನಾವು ಪಂಚಾಯಿತಿಗೆ ಮಾಹಿತಿಯನ್ನು ಕೊಡುತ್ತೇವೆ. ಸಾರ್ವಜನಿಕರಿಗೆ ಮಾಹಿತಿ ಇರಬೇಕೆಂದರೆ, ಅದನ್ನು ಕೂಡ display ಹಾಕಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಕೂಡ ನಾವು ಮಾಡುತ್ತೇವೆ. ಆರೋಗ್ಯ ಇಲಾಖೆಯಿಂದ ಹೆಚ್ಚಿನ ರೀತಿಯಲ್ಲಿ ತಪಾಸಣೆ ನಡೆಸಿ ಚಿಕಿತ್ಸೆ ಕೊಡಿಸಬೇಕು ಎಂದು ಹೇಳಿದ್ದಾರೆ. ಈ ಕುರಿತಾಗಿ ನಮ್ಮ ಇಲಾಖೆ ಮತ್ತು ಆರೋಗ್ಯ ಇಲಾಖೆಯವರ ಜಂಟಿಯಾಗಿ ರಾಮಾಪುರ ಗ್ರಾಮದಲ್ಲಿ ಹೆಲ್ತ್ ಕ್ಯಾಂಪ್‌ನ್ನು ಮಾಡುತ್ತೇವೆ. ಹನೂರು ತಾಲ್ಲೂಕಿನಲ್ಲಿ ಮಾಡುವುದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳ ಮತ್ತು ಮಾನ್ಯ ಸಚಿವರಿಗೂ ಕೂಡ ಮಾತನಾಡಿ, ನಾನು ಅದನ್ನು ಮಾಡಿಸುತ್ತೇನೆ

"Mission Bhagiratha" ಯೋಜನೆಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದು ಅಷ್ಟೊಂದು ಪರಿಣಾಮಕಾರಿಯಾಗಿಲ್ಲ ಎಂದು ನನ್ನ ಬಳಿ ಮಾಹಿತಿ ಇದೆ. ನಾನು ಎರಡೂವರೆ ವರ್ಷಗಳ ಹಿಂದೆ ಸಚಿವನಾದಾಗ ಇದರ ಬಗ್ಗೆ ಬಹಳಷ್ಟು ಜನರು ಮಾತನಾಡುತ್ತಿದ್ದರು. ನಮ್ಮ ಕ್ಷೇತ್ರದ ಪಕ್ಕ ಆಂಧ್ರ ಪ್ರದೇಶದ ಗಡಿಭಾಗದಲ್ಲಿ ಇದು ಬರುತ್ತದೆ. ನಾನು ಅಲ್ಲಿಗೆ ಹೋದಾಗ, ದೊಡ್ಡ ನೀಲಿ ಟ್ಯಾಂಕ್‌ಗಳು ಕೂಡ ಇರುವುದನ್ನು ನೋಡುತ್ತಿದ್ದೆ. ಇದು ಏನೆಂದು ನಾನು ಕೇಳಿದಾಗ, ಅದು 'Mission Bhagiratha' ಎಂಬ ಒಂದು ಯೋಜನೆ ಇದೆ ಎಂಬುದರ ಬಗ್ಗೆ ತಿಳಿದು ಬಂದಿತ್ತು. ನನ್ನ knowledge ಮತ್ತು ಸಂಶೋಧನೆಯ ಪ್ರಕಾರ ಅಷ್ಟೊಂದು ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ. ಅದಕ್ಕೆ ಕೆಲವೊಂದು testing ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಅದನ್ನು ಹೊರತುಪಡಿಸಿ, ಡಾ॥ ಧನಂಜಯ ಸರ್ಜಿಯವರು ಕೆಲವು ವಿಚಾರಗಳನ್ನು ಹೇಳಿದರು. ಇನ್ನೂ ಹೆಚ್ಚಿನ ಲ್ಯಾಬ್‌ಗಳನ್ನು ಮಾಡಿರಲಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುವುದೇನೆಂದರೆ, ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು bacterial contamination and chemical contamination ಗೆ ಲ್ಯಾಬ್‌ಗಳನ್ನು ಹೆಚ್ಚು ಮಾಡಿದ್ದೇವೆ. Everything is NABL certified. ಅದನ್ನು ಹೊರತುಪಡಿಸಿ field testing kits ಗೆ ತರಬೇತಿಯನ್ನು ಕೊಟ್ಟಿದ್ದೇವೆ. ಎಲ್ಲಿ ದೂರುಗಳು ಬರುತ್ತದೆಯೋ, ಆ field ಗೆ ಟೆಸ್ಟ್ ಮಾಡುವುದಕ್ಕೆ ಕೂಡ ಅನುಕೂಲವಾಗಿದೆ. ಮಾನ್ಯ ಸದಸ್ಯರು ಹೇಳಿರುವುದು ನಿಜವಿದೆ. ಇದು ಮಾಲಿನ್ಯದಿಂದಾಗಿ ಜಲ ಮೂಲಗಳು ಹಾಳಾಗುತ್ತಿದೆ. ಇವತ್ತು ಜಲ ಮೂಲಗಳು ಕೂಡ ಕುಸಿಯುತ್ತಿದೆ. ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ತಮಗೆ ಆಶ್ಚರ್ಯವಾಗುವುದೇನೆಂದರೆ, ಹೆಚ್ಚಿನ ಜಲ ಮೂಲಗಳನ್ನು ಮಲೆನಾಡು ಭಾಗ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಕಳೆದುಕೊಂಡಿರುವುದು ಈ ರೀತಿ ಆದರೆ ಜನ ಏನು ಅಂದುಕೊಳ್ಳುತ್ತಾರೆ? ಜಲ ಮೂಲಗಳನ್ನು ಬೀದರ್, ಕಲಬುರಗಿನಲ್ಲಿ ಕಳೆದುಕೊಳ್ಳುವ ಪರಿಸ್ಥಿತಿ ಇದೆ. ಕಳೆದ ನಾಲ್ಕೈದು ವರ್ಷಗಳ data ನೋಡಿದರೆ, highest

depletion highest rainfall ಆಗುವ ಕಡೆ ಆಗುತ್ತಿದೆ. ಅದರ ಬಗ್ಗೆ ಪರಿಶೀಲನೆ ಮತ್ತು ಸಂಶೋಧನೆ ಕೂಡ ಮಾಡುತ್ತಿದ್ದೇವೆ. ಇನ್ನೂ ಒಂದೆರಡು ತಿಂಗಳನಲ್ಲಿ ವಿಶೇಷವಾಗಿ ಜಲ ಮೂಲಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಅದಕ್ಕೂ ಕೂಡ ಒಂದು water secured villages ಮಾಡಬೇಕೆಂಬ ಒಂದು ಪ್ರಯತ್ನವನ್ನು ನಡೆಸಿದ್ದೇವೆ. ಅದನ್ನು ಕೂಡಲೇ ಮಾಡುತ್ತೇವೆ. ಮಾನ್ಯ ಶಿವಕುಮಾರ್‌ರವರ ಕೇಳರುವ ಪ್ರಶ್ನೆಗೆ ಮೊದಲನೆಯದಾಗಿ ರಾಮಾಪುರದಲ್ಲಿ ಹೆಚ್ಚಿನ ಟೆಸ್ಟಿಂಗ್ ಮಾಡಿಸುತ್ತೇವೆ. ಎರಡನೆಯದಾಗಿ ಆರೋಗ್ಯ ಇಲಾಖೆಯವರ ಜೊತೆ ನಮ್ಮ ಸಿಬ್ಬಂದಿಗಳ ಜಂಟಿಯಾಗಿ ಹೆಚ್ಚಿನ ರೀತಿಯಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸುತ್ತೇವೆ. ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಮಾಡಿ, ತಾಲ್ಲೂಕು ಮಟ್ಟದಲ್ಲಿ ಮಾಡಿಸುವ ಜವಾಬ್ದಾರಿಯನ್ನು ನಾನು ಕ್ರಮ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಶಿವಕುಮಾರ್ ಕೆ. :-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ ಒಂದು ನಿಮಿಷ. ಕೊನೆಯದಾಗಿ, ಮಾನ್ಯ ಎನ್. ರವಿಕುಮಾರ್‌ರವರೇ, ತಾವು ಮಾತನಾಡಿ. ತಾವು clarification ಬಗ್ಗೆ ಹೇಳ. ಆದರೆ ಭಾಷಣ ಮಾಡಬೇಡಿ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಎಲ್ಲಿ water contamination ನಲ್ಲಿ chemical contamination ಇರುವ ಬಗ್ಗೆ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಇದನ್ನು ಸರ್ವೆ ಮಾಡಿರುವಂತಹದ್ದು ಬಹಳ ಒಳ್ಳೆಯ ವಿಷಯ. ನಾವು ಮಾನ್ಯ ಸಚಿವರ ಬಳ ಮಾತನಾಡಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ವಿಪರೀತ chemical contamination ಇದೆ. ಅಲ್ಲಿನ ನೀರನ್ನು ಕುಡಿಯುವುದಕ್ಕೆ ಸಾಧ್ಯವಿಲ್ಲ. ಆದರೆ ಬೇರೆ ದಾರಿಯಿಲ್ಲದೇ ಅದೇ ನೀರನ್ನು ಕುಡಿಯುತ್ತಾರೆ. ಅವರ ಆರೋಗ್ಯ ಎಲ್ಲವೂ ಹಾಳಾಗುತ್ತದೆ. ಆ ತರಹದ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಸಚಿವರು ಗಂಭೀರವಾದ ಕ್ರಮವನ್ನು ತೆಗೆದುಕೊಂಡು, ಅವರಿಗೆ ಸಿಹಿ ನೀರನ್ನು ಕುಡಿಯುವುದಕ್ಕೆ, ಒದಗಿಸಬೇಕು. ವಯಸ್ಸಾದಂತಹವರ ಜೀವನ ಮುಗಿಯಿತು ಬಿಡಿ. ಆದರೆ ಮಕ್ಕಳು ಅವರ ಆಯಸ್ಸು ವೃದ್ಧಿಸುವುದಕ್ಕೆ ಆರೋಗ್ಯ ಮತ್ತು ಶಿಕ್ಷಣ ಚೆನ್ನಾಗಿ ಆಗುವುದಕ್ಕೆ ಅವರ ಮುಂದಿನ ಜೀವನದ ದೃಷ್ಟಿಯಿಂದ ನಿಖರವಾಗಿ ಮಾಡಿದರೆ, ಮಾನ್ಯ ಸಚಿವರನ್ನು ನಿಜವಾಗಲೂ ಜ್ಞಾಪಕ ಮಾಡಿಕೊಳ್ಳುತಾರೆ. Rain fall ಎಲ್ಲಿ ಕಡಿಮೆ ಇದೆ. ಉದಾಹರಣೆಗಾಗಿ ಹೇಳುವುದಾದರೆ, ಕೋಲಾರ, ಚಾಮರಾಜನಗರ ಮತ್ತು ಉತ್ತರ ಕರ್ನಾಟಕದ ಬಹಳಷ್ಟು ಜಿಲ್ಲೆಗಳಲ್ಲಿ rain fall ಬಹಳಷ್ಟು ಕಡಿಮೆ ಇದೆ. ಬೋರ್‌ವೆಲ್‌ಗಳನ್ನು ಆಶ್ರಯಿಸಿಕೊಂಡು ನೀರನ್ನು ಕುಡಿಯುತ್ತಿದ್ದಾರೆ. ಅನಿವಾರ್ಯವಾಗಿ ನಮಗೆ ಕುಡಿಯವುದಕ್ಕೆ ನೀರು ಇಲ್ಲ ಎಂದು ಬೋರ್‌ವೆಲ್‌ಅನ್ನು ತೆಗೆಸಿಕೊಡಿ ಎಂದು ಕೇಳುತ್ತಿದ್ದಾರೆ. ಕುಡಿಯುವ ನೀರಿಗಾಗಿ ಬೋರ್‌ವೆಲ್‌ಅನ್ನು ಕೇಳಲೇಬಾರದು. ಆದರೆ ದಾರಿ ಇಲ್ಲ. ಈ ವಿಷಯದ ಬಗ್ಗೆ ಅವರು ಏನು ಕ್ರಮ ಕೈಗೊಳ್ಳುತ್ತಾರೆ? ನಾವು ಸರ್ವೆ ಮಾಡಿಕೊಡಿ ಎಂದು ಹೇಳದರೆ, ಅಲ್ಲಿನ chemical contamination ಎಷ್ಟು ಪ್ರಮಾಣದಲ್ಲಿದೆ ಎಂಬುದರ ಬಗ್ಗೆ ಸರ್ವೆ ಮಾಡುವ ಬಗ್ಗೆ ಹೇಳದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಸರಿಯಾದ ಕ್ರಮವನ್ನು

ತೆಗೆದುಕೊಳ್ಳಬೇಕು. ಇದರ ಬಗ್ಗೆ ಮಾನ್ಯ ಸಚಿವರೇ ಹೇಳಬೇಕು. ಕೆಲವು ಜಿಲ್ಲೆಗಳಲ್ಲಿ ಇರುವುದು ಮಾನ್ಯ ಸಚಿವರ ಕಣ್ಣ್ಮುಂದೆಯೇ ಇದೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು ಟೆಸ್ಟಿಂಗ್ ಮಾಡುತ್ತೇವೆ. It is a random. ಆದರೆ ನಾವು ಪ್ರತಿ ಬಾರಿ ಒಂದು cycle ತರಹ ಜಲ ಮೂಲಗಳನ್ನು testing ಮಾಡುತ್ತಿರುತ್ತೇವೆ. ದೂರು ಬಂದಾಗ, ಅದಕ್ಕೆ ಆದ್ಯತೆಯ ಮೇರೆಗೆ ನಾವು ಮಾಡುತ್ತಿರುತ್ತೇವೆ. ಅದನ್ನು ಹೊರತುಪಡಿಸಿ, ಈಗ ಹೊಸ ತಂತ್ರಜ್ಞಾನಗಳು ಬಂದಿದೆ. ಇಡೀ ದೇಶದಲ್ಲಿ ಮೊದಲ ಬಾರಿಗೆ ಶೃಂಗಸಭೆಯನ್ನು ಮಾಡಿ, portability of water ಅಂದರೆ ನೀರಿನ ಶುದ್ಧತೆಗೆ ಏನೇನು ತಂತ್ರಜ್ಞಾನ ಪರಿಶೀಲನೆ ಮಾಡಬೇಕು. ಸುಮಾರು 100ಕ್ಕಿಂತ ಹೆಚ್ಚು ನವ ಉದ್ಯಮಗಳು ಬಂದಿದ್ದು, ಅವರವರ ತಂತ್ರಜ್ಞಾನಗಳನ್ನು ಹೇಳಿದರು. ಜಲ ಮೂಲ ಎಲ್ಲಿದೆ ಎಂಬ ಬಗ್ಗೆ ಕೆಲ ಜನರು ತಿಳಿಸಿದರು. ಅದನ್ನು ಹೇಗೆ track ಮಾಡುವುದು? Salinity ಹೇಗಿದೆ ಎಂಬ ಬಗ್ಗೆ ಹೇಳಿದರು. ಇನ್ನೊಬ್ಬರು chemical contamination ಅನ್ನು ಹೇಗೆ ದೂರು ಮಾಡುವುದು. Bacterial contamination ಹೇಗೆ ದೂರ ಮಾಡುವ ಬಗ್ಗೆ ಕೆಲವು ಜನರು ನಮಗೆ ಹೇಳಿದ್ದಾರೆ. ಅವರೆಲ್ಲರೂ ಕೂಡ ನಮ್ಮ Public Procurement Policy ಯೊಳಗೆ ಬರುವುದಿಲ್ಲ. ಆದರೂ ಕೂಡ ಕುಡಿಯುವ ನೀರಿಗೋಸ್ಕರ ಇದನ್ನು ಮಾಡಬೇಕೆಂದು ಮಾಹಿತಿ ತಂತ್ರಜ್ಞಾನ ಮತ್ತು ಸಣ್ಣ ನೀರಾವರಿ ಇಲಾಖೆಗಳಡಿಯಲ್ಲಿ ಇದನ್ನು ಸರಳೀಕರಣ ಮಾಡಿ, ಎಂಟು ನವ ಉದ್ಯಮಗಳನ್ನು ನಮ್ಮ ಇಲಾಖಾವತಿಯಿಂದ ಈಗ test ಮಾಡುತ್ತಿದ್ದೇವೆ. ಅವರು ನಮಗೆ ಸಹಕಾರ ಕೊಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ, chemical contamination, bacterial contamination, fungal ಸೇರಿದ್ದಾರೆ. ನಾನಾ ರೀತಿ ಇರಬಹುದು. ಸಂಶೋಧನೆ ಮುಖಾಂತರ ಇದನ್ನು ಸರಿಪಡಿಸಬಹುದು. ತಕ್ಷಣಕ್ಕೆ ನಮ್ಮಲ್ಲಿ ಏನೆಲ್ಲಾ ತಂತ್ರಜ್ಞಾನ ಇದೆಯೋ, ಅದನ್ನು ಬಳಸುತ್ತಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಹೇಗೆ ಮಾಡಬೇಕೆಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಯಾವ್ಯಾವ ಜಿಲ್ಲೆಗಳು ತಾಲ್ಲೂಕುಗಳು, ಹಳ್ಳಿಗಳ ಬಗ್ಗೆ ಮಾನ್ಯ ಸದಸ್ಯರಿಗೆ ಹೆಚ್ಚಿನ ಮಾಹಿತಿ ಇದ್ದರೆ, ಅದನ್ನು ನಾವು ಟೆಸ್ಟಿಂಗ್‌ಗೆ ಕಳುಹಿಸಿಕೊಡಬಹುದು. ಅದನ್ನು ಹೊರತುಪಡಿಸಿ ಜಂಟಿಯಾಗಿ ಒಂದು ಟಾಸ್ಕ್‌ಫೋರ್ಸ್‌ನ್ನು ಪ್ರಾಯೋಗಿಕವಾಗಿ ಕಳೆದ ಒಂದು ತಿಂಗಳಿನಲ್ಲಿ ಕಲಬುರಗಿಯಲ್ಲಿ ಮಾಡಿದ್ದೇವೆ.

**(ಮುಂದು)**

(408) 16.03.2026 2.40 ಟಿ.ಸಿ.ಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

Minor Irrigation Department, Urban Development Department, Irrigation Department and ಜಿಲ್ಲಾ ಪಂಚಾಯತ್ ರವರೆಲ್ಲಾ ಸೇರಿಕೊಂಡು ಒಂದು ಜಂಟಿ task force ಮಾಡಿ, ಮಾನ್ಯ ಸಭಾಪತಿಯವರೇ, ಒಂದೊಂದು ಬಾರಿ ಏನಾಗುತ್ತದೆಯೆಂದರೆ: ನೀರಿನ ಮೂಲ M.I. Tank ಇರುತ್ತದೆ.

ಒಂದೊಂದು ಬಾರಿ ಬೋರ್‌ವೆಲ್ ಇರುತ್ತದೆ, ಒಂದೊಂದು ಬಾರಿ Irrigation Surface Water ಇರುತ್ತದೆ. ಹೀಗೆಯೇ ಒಂದು ಜಂಟಿ ಟಾಸ್ಕ್‌ಫೋರ್ಸ್ ಮಾಡಿಕೊಂಡು ಎಲ್ಲಾ ಜಲಮೂಲಗಳನ್ನು ಈಗಾಗಲೇ M.I. Department ನಿಂದ ಮೊದಲನೇ ಬಾರಿಗೆ Water Atlas ಎಂದು ಮಾಡಿದ್ದಾರೆ. ಆ Water Atlas ಬರೀ ಅವರಿಗಷ್ಟೇ ಸೀಮಿತವಾಗಬಾರದು. ನಮ್ಮೆಲ್ಲಾ departments ಗೂ help ಆಗಬೇಕೆಂದು ಅವರ ಜೊತೆಗೆ ಕೈಜೋಡಿಸಿ, we are mapping, we are tracking and more importantly, ಮಾನ್ಯ ಸಭಾಪತಿಯವರೇ, ಅವರು ಹೇಳದಂತೆ, the quality of water ಕುಡಿಯುವುದಕ್ಕೆ ಯೋಗ್ಯ ಇದೆಯೋ ಅಥವಾ ಬರೀ distributionಗೆ ಇದೆಯೋ ಅಥವಾ treat ಮಾಡಬಹುದೋ ಅಂದರೆ tertiary treatment, secondary treatment ಅಥವಾ ಅದನ್ನು industryಗೆ ಕೊಡಬಹುದೋ ಎಂದು ನೋಡಬೇಕಾಗುತ್ತದೆ. ಮಾನ್ಯ ಸಚಿವರು ಕೂಡ livestock ಗೆ ಜಾನುವಾರುಗಳಿಗೆ ಕೊಡಬೇಕೆಂದು ಹೇಳುತ್ತಿದ್ದರು. All that is being done at a very basic level. ಅದರಲ್ಲಿ ಏನೇನು ನ್ಯೂನತೆಗಳೇನು ಬರುತ್ತದೆಯೋ ಅದನ್ನು ನೋಡಿಕೊಂಡು ಅದಾದನಂತರ, we will expand it to the entire State. Testing kits ಅನ್ನು ಕೊಟ್ಟಿದ್ದೇವೆ, higher labs setup ಮಾಡಿದ್ದೇವೆ. ಹೊಸ ತಂತ್ರಜ್ಞಾನವನ್ನು ಬಳಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮತ್ತೆ ನಾವು ಪ್ರಾಯೋಗಿಕವಾಗಿ ಜಂಟಿಯಾಗಿ ಒಂದು task force ಅನ್ನು ಕೂಡ ಮಾಡಿಕೊಂಡಿದ್ದೇವೆ. ಅದರ ಯಶಸ್ಸನ್ನು ನೋಡಿ we will put it across to the entire State.

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ತಾವು clarification ಕೇಳಿ.

**ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೋರ್‌ವೆಲ್ ನೀರು 600 ಅಡಿಗಳಿಗೆ ಹೋಗಿದೆ ಎಂದು ಹೇಳದರು. Mines and Geology Department ನವರು ಸರಿಯಾಗಿ ಮಾಹಿತಿ ಕೊಟ್ಟಿಲ್ಲ. ಪ್ರಸ್ತುತ ಅದು ಸುಮಾರು 1,200 ಅಡಿಗಳಿಂದ 1,600 ಅಡಿಗಳಷ್ಟು ಆಳಕ್ಕೆ ground water table ಹೋಗಿದೆ. ಹಾಗಾಗಿ, ಅದಕ್ಕಾಗಿಯೇ ಈ ರೀತಿಯ ಸಮಸ್ಯೆ ಆಗುತ್ತಿರುವುದು. ಎರಡನೆಯದಾಗಿ, ಇವತ್ತಿನ ದಿವಸ ಚೆಕ್ ಡ್ಯಾಮ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿಗೆ ಇವರು sanction ಮಾಡಿಕೊಡಬೇಕು. ಏಕೆಂದರೆ ಅಲ್ಲ ನೀರನ್ನು ನಾವು conservation ಮಾಡಬೇಕಾಗಿದೆ. Water recharge ಮಾಡಬೇಕಾದರೆ ಈ ರೀತಿಯ ಒಂದು ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ಮಾನ್ಯ ಸಚಿವರು ಸರ್ಕಾರದಿಂದ ಸಾಕಷ್ಟು ಕಡೆಗಳಲ್ಲಿ R.O.ಗಳನ್ನು ಹಾಕಿಸಿದ್ದಾರೆ. ಆದರೆ ಸಾಕಷ್ಟು ಹಳ್ಳಿಗಳಲ್ಲಿ ಅವುಗಳನ್ನು maintenance ಮಾಡುತ್ತಿಲ್ಲ. ಇವತ್ತಿನ ದಿವಸ ಏನಾಗಿದೆಯೆಂದರೆ ಒಂದು ಕಡೆ ಈ ನೀರಿನ ಸಮಸ್ಯೆ. ಇನ್ನೊಂದು ಕಡೆ maintenance ಇಲ್ಲ. ಮೊದಲ ಒಂದು ವರ್ಷ ಅಥವಾ ಎರಡು ವರ್ಷ ನಡೆಯುತ್ತದೆ. ಆಮೇಲೆ ಎಲ್ಲಾ ಕಡೆ ಮುಚ್ಚಿದ್ದಾರೆ. ಹಾಗಾಗಿ, ಇವತ್ತಿನ ದಿವಸ R.O.ಗಳನ್ನು ಮತ್ತೆ ಚಾಲನೆಗೆ ತೆಗೆದುಕೊಂಡು ಬಂದು ಎಲ್ಲರಿಗೂ clean drinking water ಸಿಗಬೇಕು. ಆಮೇಲೆ ನಾನು ಇನ್ನೊಂದು request ಮಾಡುತ್ತಿದ್ದೇನೆ. 10 wheel tankers

ಏನಿತ್ತೋ ಅದನ್ನು ಇವರು ಬಾಡಿಗೆಗಾದರೂ ತರಿಸಬೇಕು. ಆ ರೀತಿಯ ಐದಾರು ಟ್ಯಾಂಕರ್‌ಗಳನ್ನು ನೀವು press ಮಾಡಿದರೆ ಆ ಭಾಗದಲ್ಲಿ ನೀರಿನ ಬವಣೆಯನ್ನು ಇವರು ನಿಭಾಯಿಸಬಹುದು. ಆಮೇಲೆ ೬೩,೦೦೦ cattle is not a small number. ಹಾಗಾಗಿ, ಅದು ನನಗೆ ಗೊತ್ತು. ನೀವು ಮಾಡುವುದಕ್ಕೆ ಬಹಳ ಕಷ್ಟ. ಕೆರೆ-ಕುಂಟೆಗಳಿಗೆ ನೀರು ತುಂಬಿಸಬೇಕು. ಆಮೇಲೆ ಮಾನ್ಯ ಸಚಿವರೇನು ಗುಲಬರ್ಗಾದಲ್ಲಿ pilot project ಆಗಿ ನೀವೇನು Joint Task Force ಮಾಡಿದ್ದೀರಿ. ಅದನ್ನು ಚಾಮರಾಜನಗರ ಜಿಲ್ಲೆಗೂ ಕೂಡ ದಯಮಾಡಿ ಮಾಡಿಸಬೇಕು. ಏಕೆಂದರೆ ಈ ವಿಚಾರ ಬಹಳ serious ಆಗಿದೆ. ಬಹಳ ಸಂತೋಷವೇನೆಂದರೆ, ಇವತ್ತು ಮಾನ್ಯ ಸಚಿವರು ನಮ್ಮ ಕಡೆ health camps ಎಲ್ಲಾ organize ಮಾಡಿ ನಾವು ಕೂಡ ಜಂಟಿಯಾಗಿ ಮಾಡುತ್ತಿದ್ದೇವೆಂದು ಹೇಳಿದರು ಅದನ್ನು ನಾನು ಸ್ವಾಗತಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಶಿವಕುಮಾರ್ .ಕೆ ರವರೇ, ತಾವು clarification ಕೇಳಿ.

**ಶ್ರೀ ಶಿವಕುಮಾರ್.ಕೆ:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಡಾಕ್ಟರ್ ರವರು ಹೇಳಿದಂತೆ, ಇವತ್ತಿನ ದಿವಸ ಬಹಳಷ್ಟು ಕಡೆಗಳಲ್ಲಿ ಒಂದು ಕಡೆ ಮೂಳೆ, ಇನ್ನೊಂದು ಕಡೆ ಕಿಡ್ನಿ, ಮತ್ತೊಂದು ಕಡೆ dental fluorosis ಇದೆಲ್ಲಾ ಸಮಸ್ಯೆಗಳು ಅಲ್ಲಿ ಜಾಸ್ತಿ ಇರುವುದರಿಂದ ಈಗಾಗಲೇ dialysis ಮಾಡಿಕೊಳ್ಳುತ್ತಿದ್ದಾರೆ. ಅದರ ಪ್ರಮಾಣ ಜಾಸ್ತಿಯಾಗದಂತೆ ನೋಡಿಕೊಳ್ಳಬೇಕು. ಮತ್ತೆ ಜಿಲ್ಲಾಧಿಕಾರಿಯವರು serious ಆಗಿ ಆ water quality ಯನ್ನು ೧೫ ದಿನಗಳಿಗೊಮ್ಮೆ review ಮಾಡಬೇಕು ಎಂದು ಹೇಳುತ್ತಿದ್ದೇನೆ. ಸರ್ಕಾರ ಇದಕ್ಕೆ ಸ್ಪಂದಿಸಬೇಕೆಂದು ಮನವಿ ಮಾಡಿ ನನ್ನ ಮಾತು ಮುಗಿಸುತ್ತಿದ್ದೇನೆ.

**ಸಭಾಪತಿಯವರು:-** ಡಾ: ಧನಂಜಯ ಸರ್ಜಿಯವರೇ ತಾವು ಕೂಡ clarification ಕೇಳಿ.

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಕೇಳುವುದು ಇಷ್ಟೇ. ಅವರು ಪ್ರತಿ ಜಿಲ್ಲೆಯಲ್ಲಿ N.A.B.L. accredited labs ಇದೆಯೆಂದು ಹೇಳುತ್ತಿದ್ದರು. ಆದರೆ ಶಿವಮೊಗ್ಗದಲ್ಲಂತೂ ಖಂಡಿತ ಇಲ್ಲ. ನಾನು ಶಿವಮೊಗ್ಗದ Corporation Commissioner ರವರ ಹತ್ತಿರ ಕೂಡ discuss ಮಾಡಿದ್ದೇನೆ. ಅವರು ಹೇಳಿದ್ದು ಬಿಡಿ. ಆದರೆ ನಮ್ಮ ರಾಜ್ಯದಲ್ಲಿ ೬ ಜಿಲ್ಲೆಗಳಲ್ಲಿ N.A.B.L. accredited labs ಸರಿಯಾಗಿ ೬ run ಆಗುತ್ತಿರಬಹುದು. ಆದರೆ ಎಲ್ಲಾ ಜಿಲ್ಲೆಗಳಲ್ಲೂ ಇಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಅಷ್ಟೂ test ಗಳು ಸರಿಯಾಗಿ ಆಗುತ್ತಿಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಡಾ: ಧನಂಜಯ ಸರ್ಜಿಯವರೇ, ಕೆಲವೊಂದರಲ್ಲಿ chemical labs ಇರುತ್ತದೆ. ಇನ್ನೂ ಕೆಲವೊಂದರಲ್ಲಿ bacterial labs ಇರುತ್ತವೆ. ಆದರೆ ತಾವು ಹೇಳಿದಂತೆ Corporation ನಲ್ಲಿ ಏನಿದೆಯೋ ಅದು ನನಗೆ ಗೊತ್ತಿಲ್ಲ. ನಾನು ಚೆಕ್ ಮಾಡಿಕೊಂಡು ತಮಗೆ ಹೇಳುತ್ತೇನೆ. ಶಿವಮೊಗ್ಗದಲ್ಲಿ ಎಷ್ಟು F.T.K.'s ಮತ್ತು ಎಷ್ಟು labs ಇವೆಯೆಂದು ತಿಳಿದುಕೊಂಡು ನಿಮಗೆ ಹೇಳುತ್ತೇನೆ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ನನಗೆ ಮಾಹಿತಿ ಇರುವ ಪ್ರಕಾರ

. . .

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಸಂಪೂರ್ಣ ಮಾಹಿತಿ ಕೊಡುತ್ತೇನೆ. ಆ ಊರಿಗೆ ಇದು limited ಇರುವುದರಿಂದ ನನ್ನ ಹತ್ತಿರ ಆ ಊರಿನ ಮಾಹಿತಿ ಇದೆ. ಆದರೆ ಇಡೀ ರಾಜ್ಯದ್ದು ಮಾನ್ಯ ಸದಸ್ಯರಿಗೆ ತಲುಪಿಸುತ್ತೇನೆ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಅಲ್ಲಿ ಇರದಿದ್ದರೆ, ದಯವಿಟ್ಟು ಎಲ್ಲಾ ಕಡೆ ಮಾಡುವ ಹಾಗೆ ಮಾಡಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಖಂಡಿತ. ಆಮೇಲೆ ಮಾನ್ಯ ಶಿವಕುಮಾರ್.ಕೆ ರವರು ಹೇಳದಂತೆ ಯಾವುದೋ ಒಂದು 20,000 ಲೀಟರ್ಸ್ vehicle ನಿಂದ ಸಮರ್ಪಕವಾಗಿ ನಾವು ಮಾಡಬಹುದು ಎಂದು ಹೇಳದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಸಿ.ಇ.ಓ ರವರ ಜೊತೆ ಮಾತನಾಡಿ ಅದು ಯಾವ particular make ಎಂದು ತಿಳದುಕೊಂಡು ಅದರಿಂದ ಪರಿಹಾರ ಸಿಗುವುದಿದ್ದರೆ ಖಂಡಿತವಾಗಿಯು ನಾವು ಮಾಡಿಕೊಡುತ್ತೇವೆ.

## 6. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ:- ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ 2006ರ ಪೂರ್ವದಲ್ಲಿ ನೇಮಕಗೊಂಡು ನಂತರ ಅನುದಾನಕ್ಕೆ ಒಳಪಟ್ಟಿರುವ ಹಾಗೂ 2006ರ ನಂತರ ನೇಮಕಗೊಂಡ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ಸಿಗದೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.**

- - - - - -

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ 2006ರ ಪೂರ್ವದಲ್ಲಿ ನೇಮಕಗೊಂಡು ನಂತರ ಅನುದಾನಕ್ಕೆ ಒಳಪಟ್ಟಿರುವ ಹಾಗೂ 2006ರ ನಂತರ ನೇಮಕಗೊಂಡ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ಸಿಗದೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ,

(ಉತ್ತರವನ್ನು ಲಗತ್ತಿಸಿದೆ)

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರು ಏನಾದರೂ clarification ಇದ್ದರೆ, ಆ ಬಗ್ಗೆ ಕೇಳಿದರೆ ನಾನು ಉತ್ತರ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, actually ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ತಾವು ಓದಬೇಕು. ಉತ್ತರವನ್ನು ಒದಗಿಸಲಾಗಿದೆ ಎಂದು ಹೇಳುವುದಕ್ಕೆ ಇದು question hour ಅಲ್ಲ. ನೀವು ಓದಿದರೆ ಎಲ್ಲರಿಗೂ ಗೊತ್ತಾಗುತ್ತದೆ. ಈಗ ನೀವು ಅದನ್ನು ಓದಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಆಯಿತು ಓದುತ್ತೇನೆ. ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ (ಎಸ್.ಪಿ.ಎಲ್) 04 ಪಿ.ಇ.ಟಿ 2002, ದಿನಾಂಕ 31.03.2006 ರನ್ವಯ ದಿನಾಂಕ 01.04.2006 ರ ನಂತರ ನೇಮಕಗೊಂಡ ನೌಕರರಿಗೆ ದಿನಾಂಕ 01.04.2006 ರಿಂದ ಅನ್ವಯಿಸುವಂತೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಸದರಿ ಆದೇಶದ ಕ್ರಮ ಸಂಖ್ಯೆ.01ರಲ್ಲಿ ಸರ್ಕಾರಿ ನೌಕರರ ಮೂಲ ವೇತನದಲ್ಲಿ ಶೇ.10ರಷ್ಟನ್ನು ನೌಕರರ ವೇತನದಿಂದ ವಂತಿಕೆಯನ್ನು ಕಟಾಯಿಸಿ ಹಾಗೂ ನೌಕರನ ವಂತಿಕೆಯ ಅಷ್ಟೇ ಮೊತ್ತವನ್ನು ಮೂಲವೇತನದ ಶೇ.10ರಷ್ಟು ಸರ್ಕಾರದಿಂದ ವಂತಿಕೆ ರೂಪದಲ್ಲಿ ನೀಡಲಾಗುತ್ತಿದೆ. ಸದರಿ ಆದೇಶದ ಕ್ರಮ ಸಂಖ್ಯೆ. 08ರಲ್ಲಿ. . .

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಓದಿದ್ದೇನೆ. ತಾವು ಒಪ್ಪಿಗೆ ಕೊಟ್ಟರೆ ಪ್ರಶ್ನೆ ಕೇಳಿಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರವರೇ, ಎರಡೂ ನೀವೇ ಹೇಳುತ್ತೀರಿ. ಓದಿ ಎಂದು ಹೇಳುತ್ತೀರಿ ಮತ್ತೆ ನಾನು ಪ್ರಶ್ನೆ ಕೇಳುತ್ತೇನೆ ಎಂದು ಹೇಳುತ್ತೀರಿ. ಏನ್ರೀ ಇದು? ನಾನು ಇಲ್ಲಿ ನಿಯಮಗಳ ಪ್ರಕಾರವೇ ಸದನವನ್ನು ನಡೆಸಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆಯ ಉತ್ತರವನ್ನು ಓದಬೇಕು ಎಂದು ನಿಯಮದಲ್ಲಿ ಇದೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಂದರೆ ನಾನು ಓದಿದ್ದೇನೆಂದು ಹೇಳಿದೆನು. ಪ್ರಶ್ನೆ ಕೇಳುವುದಕ್ಕೆ ಅನುಮತಿ ಕೊಟ್ಟರೆ ನಾನು ಪ್ರಶ್ನೆ ಕೇಳುತ್ತೇನೆ. ಅವರು ಉತ್ತರವನ್ನು ಓದುವುದಾದರೆ ಓದಲಿ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರೇ, ಎರಡೂ ನೀವೇ ಹೇಳುತ್ತಿದ್ದೀರಿ. ಆಯಿತು ಪ್ರಶ್ನೆ ಕೇಳಿ. ಮಾನ್ಯ ಮಧು ಬಂಗಾರಪ್ಪನವರೇ, ತಾವು ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರತಕ್ಕಂಥ ಖಾಸಗಿ ಶಿಕ್ಷಣ ಸಂಸ್ಥೆಗಳು 01.04.2006ರ ಪೂರ್ವದಲ್ಲಿ ಯಾರ್ಯಾರು ನೇಮಕವಾಗಿದ್ದಾರೋ ಅವರಿಗೆ pension ಇಲ್ಲ. ಕೊನೆಪಕ್ಷ ಸರ್ಕಾರಿ ನೌಕರರಿಗೆ N.P.S ಇದೆ. ಆದರೆ ಇವರಿಗೆ N.P.S ಇಲ್ಲ ಮತ್ತು O.P.S ಕೂಡ ಇಲ್ಲ. ಹೀಗಾಗಿ, ಅವರಿಗೆ ಪಿಂಚಣಿ ಸೌಲಭ್ಯ ಕೊಡಬೇಕೆಂದು ಮನವಿ ಇತ್ತು. ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆಂದರೆ,

N.P.S ಜಾರಿ ಮಾಡಬೇಕಾದರೆ ಸರ್ಕಾರಿ ನೌಕರರು ಶೇ.10 ರಷ್ಟು ವಂತಿಗೆ ಕೊಡಬೇಕು. ಶೇ.10ರಷ್ಟೇ ಮೊತ್ತವನ್ನು employer ಕೊಡಬೇಕೆಂದು ಇದೆ. ಹಾಗೆಯೇ ಶಿಕ್ಷಣ ಸಂಸ್ಥೆಯವರು ಕೂಡ ಅದನ್ನು ಒಪ್ಪಿಕೊಂಡು ನಾವು ಅದನ್ನು ಜಾರಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ರಾಜ್ಯದೊಳಗೆ ಯಾವ ಖಾಸಗಿ ಶಿಕ್ಷಣ ಸಂಸ್ಥೆಗಳ employer ಇದ್ದಾರೋ ಅವರು ಯಾರೂ ಶೇ.10ರಷ್ಟು Management ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಇದು 2006ರಿಂದ ಜಾರಿಗೆ ಬಂದಿದೆ. ಆದರೆ ಕಳೆದ 20 ವರ್ಷವಾದರೂ ಕೂಡ ಯಾವ ಶಿಕ್ಷಣ ಸಂಸ್ಥೆಯವರು ಕೊಡಬೇಕಾದಂತಹ ಶೇ.10 contribution ಯಾರೂ ಕೊಟ್ಟಿಲ್ಲ, ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ನಾವು ನಿಮ್ಮ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, employee ಶೇ.10ರಷ್ಟು ಹಣವನ್ನು ಕೊಟ್ಟೇ ಕೊಡುತ್ತಾರೆ. ಆದರೆ ಮಾಲೀಕ ಅಂದರೆ employer ಯಾರಿದ್ದಾರೋ ಅವರು ಶೇ.10ರಷ್ಟು contribution ಕೊಡುವುದಕ್ಕೆ ಆಗುವುದಿಲ್ಲ. ಆ ಹಣವನ್ನು ಸರ್ಕಾರವೇ ಕೊಡಬೇಕೆಂದು ಕೇಳಿದ್ದೆವು. ಆದರೆ ಅವರ ಉತ್ತರ ಏನು ಕೊಟ್ಟಿದ್ದಾರೆಂದರೆ, "ನೇಮಕಾತಿ ಪ್ರಾಧಿಕಾರ ನಾವಲ್ಲ, ಅವರು ಸರ್ಕಾರಿ ನೌಕರರು ಅಲ್ಲ, ಹಾಗಾಗಿ ನಾವು ಕೊಡುವುದಕ್ಕೆ ಆಗುವುದಿಲ್ಲ ಮತ್ತು ಅದು ನಮ್ಮ ಜವಾಬ್ದಾರಿ ಅಲ್ಲವೆಂದು" ಹೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಅವರೇ, 2003ರ ಚುನಾವಣಾ ಪ್ರಣಾಳಿಕೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯವರಿಗೂ ಕೂಡ ಪಿಂಚಣಿ ಸೌಲಭ್ಯಗಳನ್ನು ಕೊಡುತ್ತೇವೆಂದು ಹಾಕಿದ್ದಾರೆ. ಹಾಗಾಗಿ, ಅವರು ಚುನಾವಣಾ ಪ್ರಣಾಳಿಕೆಯಲ್ಲಿ ಹಾಕಿದ್ದನ್ನು ನಂಬಿಕೊಂಡು, ಅವರ ಮೇಲೆ ವಿಶ್ವಾಸವಿಟ್ಟು ಮತ ಹಾಕಿದ್ದಾರೆ. ಇವತ್ತಿನ ದಿವಸ ಅವರನ್ನು ಅಧಿಕಾರಕ್ಕೆ ತಂದಿದ್ದಾರೆ. ಅಧಿಕಾರಕ್ಕೆ ಬಂದ ನಂತರ ಇವರು ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಅವರಿಗೆ ಮೋಸ ಮಾಡಿದಂತಾಗುತ್ತದೆ. ಇದು ತಪ್ಪಾಗುವುದಿಲ್ಲವೇ? ನೀವೇ ಉತ್ತರ ಕೊಟ್ಟಿದ್ದೀರಿ. ನೀವೇ ನಿಮ್ಮ ಆತ್ಮಾವಲೋಕನ ಮಾಡಿಕೊಳ್ಳಿ. ನೀವೆಲ್ಲಾ ವಚನ ಭ್ರಷ್ಟರಾಗುತ್ತೀರಿ. ಈ ರೀತಿ ಮೋಸ ಸರಿಯಲ್ಲ. ಇದು ಒಳ್ಳೆಯದಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಎಲ್ಲಾ ವೇದಿಕೆಗಳ ಮೇಲೆ 'ನುಡಿದಂತೆ ನಡೆಯುವ ಯಾವುದಾದರೂ ಸರ್ಕಾರ ಇದ್ದರೆ, ಅದು ನಮ್ಮ ಸರ್ಕಾರ' ಎಂದು ಹೇಳುತ್ತಾರೆ. ಮತ್ತೆ ಈಗ ಏನಾಯಿತು? ಅವರಿಗೆ ಮೋಸಮಾಡಿದಂತಾಗಲಿಲ್ಲವೇ? ಅವರು ನಿಮ್ಮ ಮೇಲೆ ವಿಶ್ವಾಸವಿಟ್ಟು ಓಟ್ ಹಾಕಿ ಅಧಿಕಾರಕ್ಕೆ ತಂದಿದ್ದಾರೆ. ಅಧಿಕಾರಕ್ಕೆ ಬಂದು ಕುರ್ಚಿ ಮೇಲೆ ಕುಳಿತುಕೊಂಡು ಈ ರೀತಿ ಉತ್ತರ ಕೊಟ್ಟರೆ ಹೇಗೆ? ಇದು ಸರಿಯಲ್ಲ. ಈ ಉತ್ತರವನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

**(ಮುಂದು)**

(409)16.3.2026/2.50/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು):-**

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಸಂವಿಧಾನವು ಪೆನ್ಷನ್ ಬಗ್ಗೆ ಏನು ಹೇಳುತ್ತದೆ ಎಂದು ಮಾಹಿತಿ ಸಂಗ್ರಹ ಮಾಡಿದ್ದೇನೆ. ಸಂವಿಧಾನದ The Directive Principles of State

Policy, Article 39, 41 and 43 ಏನು ಹೇಳುತ್ತದೆಂದರೆ *'The Constitution guide the state to ensure a decent standard of life, social security and economic justice for workers.."* ಇದು ಸರ್ಕಾರದ ಜವಾಬ್ದಾರಿ. ಇದನ್ನು ಸಂವಿಧಾನ ಹೇಳಿದೆ. ಎಲ್ಲದಕ್ಕೂ ನೀವು ಸಂವಿಧಾನ ರಕ್ಷಣೆ ಮಾಡುವವರು ನಮ್ಮ ಕಾಂಗ್ರೆಸ್ ಪಕ್ಷ ಎನ್ನುತ್ತೀರಿ. ಸಂವಿಧಾನದ ಪುಸ್ತಕವನ್ನು ಕಿಸೆಯಲ್ಲಿಟ್ಟುಕೊಂಡು ಹೋಗುತ್ತಿರುವುದನ್ನು ಟಿ.ವಿ.ಯಲ್ಲಿ ನೋಡಿದ್ದೇವೆ. ಸಂವಿಧಾನ ರಕ್ಷಣೆ ಮಾಡುವವರು ನಾವೇ ಎನ್ನುತ್ತೀರಿ. ಸಂವಿಧಾನವೇ social and economic justice ಕೊಡಬೇಕೆಂದು ಹೇಳುತ್ತದೆ. ಹೀಗಾಗಿ ಈ ರೀತಿಯ ಉತ್ತರ ಕೊಟ್ಟು ನುಸುಳಿಕೊಳ್ಳುವುದು ಸರಿಯಲ್ಲ. ಈ ಉತ್ತರವನ್ನು ವಾಪಸ್ ತೆಗೆದುಕೊಳ್ಳಿ. ಇನ್ನೊಂದು ವಿಷಯವನ್ನು ನಿಮ್ಮ ಗಮನಕ್ಕೆ ತರುವುದೇನೆಂದರೆ, ಎನ್.ಪಿ.ಎಸ್. ಅನ್ನು ಸರ್ಕಾರಿ ನೌಕರರಿಗೆ ಕೊಟ್ಟಿದ್ದಾರೆ. ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡಬೇಕೆಂದು ರಾಜ್ಯದಾದ್ಯಂತ ಬಹಳಷ್ಟು ಹೋರಾಟಗಳು ನಡೆದಿವೆ. ಅದಕ್ಕೆ ಇವರು ಕಮಿಟಿ ಒಂದನ್ನು ಮಾಡಿದ್ದಾರೆ. ಈ ವಿಷಯವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪೆನ್ಷನ್ ಕೊಡುತ್ತೀರೋ ಇಲ್ಲವೋ ಎಂದು ಬೆಳಗಾವಿ ಅಧಿವೇಶನದಲ್ಲಿ ನಾನು ಪ್ರಶ್ನೆ ಮಾಡಿದ್ದೆ. ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಆಗ ಸದನದಲ್ಲಿದ್ದರು. ಅವರೇ ಎದ್ದು ನಿಂತುಕೊಂಡು ಉತ್ತರ ಕೊಟ್ಟಿದ್ದಾರೆ. ಅದರ ದಾಖಲೆ ಇದೆ. ನನ್ನ ಪ್ರಶ್ನೆಯೇನೆಂದರೆ, ನಾನು ಪ್ರಶ್ನೆ ಕೇಳಿದಾಗ ಸಂಕನೂರರವರೆ, ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡಬೇಕೆಂದು ಒಂದು ಕಮಿಟಿ ಮಾಡಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಯವರಿಗೆ ಪೆನ್ಷನ್ ಕೊಡುವುದರ ಬಗ್ಗೆಯೂ ಕೂಡ ಅಧ್ಯಯನ ಮಾಡಿ ಅವರಿಗೆ ವರದಿ ಕೊಡುತ್ತೇವೆಂದು on the floor of the House ಹೇಳಿದ್ದಾರೆ. ಅದಕ್ಕೆ ನನ್ನ ಪ್ರಶ್ನೆಯೇನೆಂದರೆ, ಕಡೆಪಕ್ಷ ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡುವುದಕ್ಕೆ ಅಧ್ಯಯನ ಮಾಡಿ ವರದಿ ಕೊಡುವುದಕ್ಕೆ ಏನು ಕಮಿಟಿ ಮಾಡಿದ್ದಾರೆ, ಅವರಿಗೆ Terms of Reference ಒಳಗೆ ಖಾಸಗಿ ಶಿಕ್ಷಣ ಸಂಸ್ಥೆಯವರಿಗೆ ಅನುದಾನ ಕೊಟ್ಟರೆ ಸರ್ಕಾರಕ್ಕೆ ಎಷ್ಟು ಆರ್ಥಿಕ ಹೊರೆ ಬರುತ್ತದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಅವರಿಗೇನಾದರೂ ಹೇಳಿದ್ದಾರಾ? ಅದು ಬೇಕಲ್ಲವೇ? ನನ್ನ ಹತ್ತಿರ ದಾಖಲೆ ಇದೆ. ಆ ಕಮಿಟಿಯ Terms of Reference ನಲ್ಲಿ ಏನೂ ಇಲ್ಲ. ಇದು ಬಹಳ ದೊಡ್ಡ ಮೋಸ ಮಾಡಿದ ಹಾಗಾಗುತ್ತದೆ. ಇದು ಬಹಳ ಗಂಭೀರವಾದ ವಿಷಯವಾಗಿದೆ. ಶಿಕ್ಷಕರ ವಿಷಯ ಬಂದಾಗ ಶಿಕ್ಷಕರನ್ನು ದೇವರು ಎನ್ನುತ್ತಾರೆ, ಬ್ರಹ್ಮ, ವಿಷ್ಣು, ಮಹೇಶ್ವರ ಎನ್ನುತ್ತಾರೆ, ದೇಶದ ಭವಿಷ್ಯ ರೂಪಿಸುವವರು ಶಿಕ್ಷಕರು ಎನ್ನುತ್ತಾರೆ ಇಷ್ಟೆಲ್ಲಾ ಹೇಳಿ 60 ವರ್ಷ ಅವರು ಪ್ರಾಮಾಣಿಕವಾಗಿ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಕೊಟ್ಟು 60 ವರ್ಷದ ನಂತರ ಅವರಿಗೆ ಪೆನ್ಷನ್ ಇಲ್ಲದಿದ್ದರೆ ಅವರು ಯಾವ ರೀತಿ ಬದುಕಬೇಕು? ಈಗ ಸರ್ಕಾರಿ ನೌಕರರು 20ನೇ ತಾರೀಖು ಬಂತೆಂದರೆ 1ನೇ ತಾರೀಖು ಯಾವಾಗ ಬರುತ್ತದೆಂದು ಕಾಯ್ದುಕೊಂಡು ಕುಳಿತಿರುತ್ತಾರೆ. ನಿವೃತ್ತಿಯಾಗುವಾಗ ಒಂದು ಪೈಸೆಯೂ ಬರುವುದಿಲ್ಲ ಆಗ ಗಂಡ-ಹೆಂಡತಿ ಹೇಗೆ ಬದುಕಬೇಕು? ಅವರನ್ನು ಬೀದಿಗೆ ತಳ್ಳುತ್ತಾರಾ? ಅವಮಾನವಾಗುತ್ತದೆ. ಆ ದಿಸೆಯಲ್ಲಿ ದಯವಿಟ್ಟು ಈ ಉತ್ತರವನ್ನು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಸಭಾಪತಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಉತ್ತರದಲ್ಲಿ ವಿಧಾನ ಪರಿಷತ್ ಶಾಸಕರು ಬೆಳಗಾವಿ

ಅಧಿವೇಶನದಲ್ಲಿ ಬಹಳ ಒತ್ತಾಯ ಮಾಡಿದ್ದಾರೆ ಇದರ ಬಗ್ಗೆ ಮತ್ತೊಮ್ಮೆ ಆರ್ಥಿಕ ಇಲಾಖೆಯ ಜೊತೆ ಸಮಾಲೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ನನ್ನ ವಿನಂತಿಯೇನೆಂದರೆ, ಆರ್ಥಿಕ ಇಲಾಖೆಯವರನ್ನು ಸದನಕ್ಕೆ ಕರೆಸಿ. ಕೊಡುತ್ತಾರೋ ಇಲ್ಲವೋ ಅದನ್ನು ಸ್ಪಷ್ಟಪಡಿಸಲಿ. ಇದು 20 ವರ್ಷಗಳ ಬೇಡಿಕೆ. ನಾವು ಸದನದಲ್ಲಿ ಕೇಳುತ್ತಿದ್ದೇವೆ. ಕೊಡುತ್ತಾರೋ ಇಲ್ಲವೋ ಎಂಬುದು ಸ್ಪಷ್ಟತೆಯಾಗಿಬಿಡಲಿ. ಇವರು ಕೊಡುತ್ತೇವೆಂದು ವಚನ ಕೊಟ್ಟಿದ್ದರು. ನೀವು ಏನಾದರೂ ಹೇಳುತ್ತೀರಾ ಹೇಳಿ. ಇದು ಬಹಳ ಗಂಭೀರವಾದ ವಿಷಯವಾಗಿದೆ. ಏಕೆಂದರೆ 2020ರಲ್ಲಿ ನೇಮಕವಾದವರು ಮುಂದೆ ನಿವೃತ್ತರಾಗುತ್ತಾರೆ. ನಿವೃತ್ತರಾದ ಮೇಲೆ ಅವರು ಭಿಕ್ಷೆ ಬೇಡಬೇಕೇ? ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ನಾನು ಮಾತನಾಡಿದ್ದು ನಿಮಗೆ ನೋವಾಗಬಹುದು. ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಪರವಾಗಿ ನಿಮಗೆ ಮತ್ತು ಸರ್ಕಾರಕ್ಕೆ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ದಯವಿಟ್ಟು ಖಾಸಗಿ ಶಿಕ್ಷಣ ಸಂಸ್ಥೆಯವರಿಗೂ ಕೂಡ ಪೆನ್ಷನ್ ಕೊಡುವಂತಹದ್ದು ಸಂವಿಧಾನದ ಹಕ್ಕು. ಅವರಿಗೆ ಪೆನ್ಷನ್ ಕೊಡುವಂತಹ ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜವೇ. 2023ರ ಪ್ರಣಾಳಿಕೆಯಲ್ಲಿ ಉಪಾಧ್ಯಕ್ಷನಾಗಿ ನಾನಿದ್ದೆ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 2006ರಲ್ಲಿ ಯಾವಾಗ ಎನ್.ಪಿ.ಎಸ್ – ಓ.ಪಿ.ಎಸ್. ಸಮಸ್ಯೆ ಬಂದ ಮೇಲೆ ಕಮಿಟಿಯಲ್ಲಿಯೂ, ಕ್ಯಾಬಿನೆಟ್‌ನಲ್ಲಿಯೂ ನಾವೆಲ್ಲಾ ಚರ್ಚೆ ಮಾಡಿದ್ದೇವೆ. ಇಡೀ ಸರ್ಕಾರಿ ನೌಕರರು ಮತ್ತು

ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ನೌಕರರ both employee and employer contribution ಬಂದಾಗ ಯಾರು contribution ಮಾಡುವುದಿಲ್ಲ ಆಗ ಅದು ಬಿಟ್ಟು ಹೋಗುತ್ತದೆ. ಇದಕ್ಕೆ ಕಮಿಟಿಯನ್ನು ಕೂಡ ಮಾಡಲಾಗಿದೆ. ಇದನ್ನು ಆರ್ಥಿಕ ಇಲಾಖೆಗೆ ಕಳುಹಿಸಿದಾಗ ಅವರು ಇಲ್ಲ ಎಂದು ಹೇಳಿ ಕಳುಹಿಸುತ್ತಾರೆ ಅದು ನನಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ಅದು ಈಗಿರುವಂತಹ ಪರಿಸ್ಥಿತಿಯಾಗಿದೆ. ಆದರೆ ನಮ್ಮ ಸರ್ಕಾರ ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡುವುದಕ್ಕೆ ಬದ್ಧವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಕಮಿಟಿಗೆ ಅವರು ಹೇಳಿದಂತಹ ಗೈಡ್‌ಲೈನ್ಸ್ ಅನ್ನು ಹಾಗೂ ಈ ರೀತಿಯ ಸಮಸ್ಯೆಗಳು ಇಲ್ಲಿ ಚರ್ಚೆಯಾದುದನ್ನು ಕೂಡ Committee ಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ ನಾನೇ ಎಲ್ಲದಕ್ಕೂ ನಿರ್ಧಾರ ತೆಗೆದುಕೊಂಡು ಉತ್ತರ ಕೊಡುವುದಕ್ಕಾಗುವುದಿಲ್ಲ. ನಾವು ಪ್ರಣಾಳಿಕೆಯಲ್ಲಿ ಈ ತರಹ ಹಾಕಿರುವುದರಿಂದ ಅದನ್ನು ಯಾವ ರೀತಿ ಒಳಪಡಿಸುವುದಕ್ಕಾಗುತ್ತದೆ ಎಂದು ನಾನು ನನ್ನ ಇಲಾಖೆಯಿಂದ ಆ ಕಮಿಟಿಗೆ ಮಾಹಿತಿ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ. ಮಾಹಿತಿ ತೆಗೆದುಕೊಂಡು ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಕಮಿಟಿಯಿಂದ ಏನು ರಿಪೋರ್ಟ್ ಬರುತ್ತದೆ ಅದರ ಮೇಲೆ ಮುಂದುವರೆಸುವ ಕೆಲಸ ಮಾಡುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ಅತ್ಯಂತ ನೋವಿನ ಸಂಗತಿ ಏನೆಂದರೆ, ದಿನಾಂಕ 01.4.2006 ರಲ್ಲಿ ಕೇಂದ್ರ ಸರ್ಕಾರವು contribution ಪೆನ್ಷನ್ ನೀತಿಯನ್ನು ಜಾರಿಗೆ ತಂದಿತು. ಹೊಸ ಪೆನ್ಷನ್ ನೀತಿಯನ್ನು ತಂದ ಮೇಲೆ ಕೇಂದ್ರದವರು ಒಂದು solution ತಂದರು. They have provided a solution. ರಾಜ್ಯ ಸರ್ಕಾರವು ಅನುದಾನಿತ ಶಿಕ್ಷಣ ಸಂಸ್ಥೆಯವರಿಗೆ abruptly ಕೈ ಬಿಟ್ಟಿತು. Even they should have also come out with some solution. ಯಾವುದಾದರೂ ಒಂದು ಪರಿಹಾರವನ್ನು ತರಬೇಕಿತ್ತು. ಈಗ ಒಬ್ಬ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರ ಸರ್ಕಾರಿ ನೌಕರಿಯೂ ಸಿಗುತ್ತದೆ, ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿಯೂ ಪೆನ್ಷನ್ ಸಿಗುತ್ತದೆಂದು aided opt ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಪೆನ್ಷನ್ ಇಲ್ಲವೆಂದು ಅವರಿಗೆ ಕನಸಿನಲ್ಲಿಯೂ ಗೊತ್ತಿಲ್ಲ. ಅದಕ್ಕೇನಾದರೂ ಹೊಸದೊಂದು ನೀತಿಯನ್ನು ಮಾಡಬೇಕಲ್ಲವೇ? ಇವತ್ತು ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು they have come out with some solution. ಇಲ್ಲಿ contribution ಇದೆ. ಮಾಲೀಕರು ಇಷ್ಟು ಕೊಡುತ್ತಾರೆ, ನೀವು ಇಷ್ಟು ಕೊಡಿ ಎಂದು ಪ್ರಾರಂಭದಿಂದಲೇ ನೌಕರಿಗೆ ಸೇರಿದ ದಿನಾಂಕದಿಂದಲೇ deduction ಮಾಡುತ್ತಾರೆ. So that, 30 ವರ್ಷ, 33 ವರ್ಷವಾದ ಮೇಲೆ ಅವರಿಗೆ ಪೆನ್ಷನ್ ಸಿಗುವ ಒಂದು ಪದ್ಧತಿ ಇದೆ. Suddenly ಸರ್ಕಾರಕ್ಕೆ ಏನಾಗಿದೆ? One fine day ಇವರು ಇಲ್ಲ ಎಂದು ಹೇಳಬಿಟ್ಟರಲ್ಲಾ. ತಮಗೂ ಗೊತ್ತು, ನಮ್ಮ ಹೆಚ್.ಕೆ. ಸೊಸೈಟಿಯಲ್ಲಿ ಕನಿಷ್ಠ 20-25 Grant-in-aid Institutions ಇವೆ. ಒಂದು ಕಡೆಯೂ ನಾವು ಯಾರಿಗೂ contribution ಕೊಡುವುದಿಲ್ಲ. ಕೆ.ಎಲ್.ಇ., ತೆಗೆದುಕೊಳ್ಳಿ ಅಥವಾ ಬೇಕಾದಷ್ಟು ದೊಡ್ಡ ಸಂಸ್ಥೆಯನ್ನು ತೆಗೆದುಕೊಳ್ಳಿ ಒಬ್ಬರೂ ಕೊಡುವುದಿಲ್ಲ. Private Management ನವರು ಯಾರೂ contribution ಕೊಡುತ್ತಿಲ್ಲ. ಆ ಜನರ ಗತಿಯೇನು? ಅವರು ಒಂದು ಸ್ಟೇಟಸ್‌ಗೆ ಬಂದಿರುತ್ತಾರೆ, ಇಷ್ಟು ಸಂಬಳ ತೆಗೆದುಕೊಳ್ಳುತ್ತಿರುತ್ತಾರೆ. Suddenly no pension ಎಂದರೆ ಅವರು ಎಲ್ಲಿಗೆ ಹೋಗಬೇಕು? ಇದು ಏಕೋ Government has neglected. ಯಾರೇ ಇರಲಿ any Government for that matter, ಇದರ ಬಗ್ಗೆ ಮರೆತು ಬಿಟ್ಟಿದ್ದಾರೆ. ಅವರು ಇದನ್ನು ನೋಡುವಂತಹ ಜವಾಬ್ದಾರಿ ತಮ್ಮದಲ್ಲ ಎಂದು ತಿಳಿದು ಸೀದಾ ಕೈ ಎತ್ತಿ ಬಿಟ್ಟಿದ್ದಾರೆ. ಮಾನ್ಯ ಸಚಿವರು ಎನ್.ಪಿ.ಎಸ್., ಓ.ಪಿ.ಎಸ್., ಎಂದು ಹೇಳಿದರು. ಅದು ಮಾನ್ಯ ಸಂಕನೂರ್‌ರವರು ಹೇಳಿದ ಹಾಗೆ ಅವರು ಅಧಿಕಾರಕ್ಕೆ ಬಂದರು ಕುರ್ಚಿ ಮೇಲೆ ಕುಳಿತುಕೊಂಡರು ಎಲ್ಲವೂ ಆಯಿತು. Whether in your Terms of Reference, have you referred this? ಇದು ನನ್ನ ಪ್ರಶ್ನೆ. Unaided ದವರಿಗೆ ಪೆನ್ಷನ್ ಕೊಡುತ್ತಿಲ್ಲ ಇದರ ಬಗ್ಗೆ ಏನಾದರೂ solution ಅನ್ನು ಆ ಕಮಿಟಿಗೆ ರೆಫರ್ ಮಾಡಿದ್ದಾರಾ? ಇವರು ಸರ್ಕಾರಿ ನೌಕರರಿಗೆ ಓ.ಪಿ.ಎಸ್., ತಂದರೆ ಎಷ್ಟು ಖರ್ಚಾಗುತ್ತದೆ ಎಂದು ಹೇಳಿದರು. ಇದೂ ಒಂದು ಸಮಸ್ಯೆ ಅಲ್ಲವೇ? ಇದರ ಬಗ್ಗೆ have you referred that? No. ಬೇಕಾದರೆ ನಿಮ್ಮ Terms of Reference ತರಿಸಿ ನೋಡಿ ಇದರ ಬಗ್ಗೆ ಇವರು ಚಕಾರವನ್ನೂ ಎತ್ತಿಲ್ಲ ಎಂದಿಗೂ ಚರ್ಚೆ ಮಾಡಿಲ್ಲ. ಏಕೆ? Why suddenly aided ನವರು ತಮಗೆ ಸಂಬಂಧವೇ ಇಲ್ಲ ಎನ್ನುವ ರೀತಿ ಏತಕ್ಕೆ ಮಾಡಿದರು? ದಯವಿಟ್ಟು

ಇದರ ಬಗ್ಗೆ ತಾವು ಒಂದು ಪರಿಹಾರ ಕೊಡಬೇಕು. ನಮ್ಮನ್ನು ಕೇಳಿದರೆ ಶೇ.10ರಷ್ಟು ಕೊಡುವುದಕ್ಕೆ ತಯಾರಿದ್ದೇವೆ. ಅವರ ಪರವಾಗಿ ನಾವು ಮಾತನಾಡುತ್ತಿದ್ದೇವೆ. ಅವರು ಶೇ.10 ರಷ್ಟು ಕೊಡುಗೆ ಕೊಡುವುದಕ್ಕೆ ತಯಾರಿದ್ದಾರೆ. ಸರ್ಕಾರದ contribution ಇವರು ಕೊಡಲಿ. ಅದನ್ನು ನಾಳೆಯಿಂದಲೇ ಪ್ರಾರಂಭ ಮಾಡಬೇಕೆಂದು ನನ್ನ ವಿನಂತಿ.

**ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ನಮ್ಮ ಸ್ನೇಹಿತರಲ್ಲಿ ಕೇಳುವುದೇನೆಂದರೆ, ಕಳೆದ ವರ್ಷ ದೆಹಲಿ ಚುನಾವಣೆಗೆ ಮುಂಚೆ ಕೇಂದ್ರ ಸರ್ಕಾರದ Unified Pension Scheme ಎಂದು ಹೇಳಿದರು. ಅದು ಎಲ್ಲರಿಗೂ ಗೊತ್ತು. ನನಗೆ ಅದರ ಮಾಹಿತಿ ಇಲ್ಲ. ದಯವಿಟ್ಟು ಅದರ ಬಗ್ಗೆ ಬೆಳಕು ಚೆಲ್ಲಿದರೆ ನಾವು ಸ್ವಲ್ಪ ತಿಳಿದುಕೊಳ್ಳುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಏನಾದರೂ ಕೇಳುತ್ತೀರಾ? ಹಾಗಾದರೆ ಕೇಳಿ. ಮಾನ್ಯ ಸಂಕನೂರ್‌ರವರೇ, ಕುಳಿತುಕೊಳ್ಳಿ. ಅವರು ಕೇಳಲಿ, ಊಟ ಮಾಡಿ ಬಂದಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನಿದ್ದೆ ಮಾಡೋಣವೆಂದು ಬಂದೆ. ಆದರೆ ತಾವಿನ್ನೂ ಪೀಠದಲ್ಲಿಯೇ ಕುಳಿತಿದ್ದಿರಿ. ನಾವೇನು ಮಾಡೋಣ ಹೇಳಿ.

**ಸಭಾಪತಿಯವರು:-** ಸರಿ clarification ಕೇಳಿ.

(ಮುಂದು)

(410) 16-03-2026 3-00 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಉತ್ತರ ಕೊಟ್ಟಿರುವುದನ್ನು ನೋಡಿದರೆ ತಮಗೂ ಕೂಡ ಬಹಳ ಬೇಜಾರಾಗುತ್ತದೆ. ನನ್ನ ಮೊದಲನೇ ಅಂಶವೇನೆಂದರೆ, ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸರ್ಕಾರಿ ನೌಕರರು ಅಲ್ಲವೇ? ಅನುದಾನಿತ ಎಂದರೆ, ಸರ್ಕಾರ ಕೊಡುವಂತಹ ಅನುದಾನದಲ್ಲಿ ಅವರಿಗೆ ಸಂಬಳವನ್ನು ಕೊಡುವಂತಹದ್ದು. ಸರ್ಕಾರವೇ ಸಂಬಳವನ್ನು ಕೊಡುತ್ತಿರುವಂತಹ ಸಂದರ್ಭದಲ್ಲಿ ಅವರು ಸರ್ಕಾರಿ ನೌಕರರು ಅಲ್ಲ ಎಂದು ಹೇಗೆ ಹೇಳುತ್ತಾರೆ. ಸರ್ಕಾರಿ ನೌಕರರಾಗಿ ಕೆಲಸ ಮಾಡುವಂತಹವರಿಗೆ ಪಿಂಚಣಿ ಕೊಡುವ ಬಗ್ಗೆ it is a Constitutional right ಎಂದು ನಾನು ಹೇಳಲಿಲ್ಲ. ಈ ನಾಡಿನ ಮಾನ್ಯ ಸರ್ವೋಚ್ಚ ನ್ಯಾಯಾಲಯವು "pension is a right of everybody" ಎಂದು ಹೇಳಿದೆ. ಪಿಂಚಣಿ ಎಂದರೆ, ನಾವು ಕೊನೆಯ ಕಾಲದಲ್ಲಿ ನೆಮ್ಮದಿಯ ಬದುಕನ್ನು ಕಳೆಯುವುದಕ್ಕೆ ಇರುವುದು. ಅವರ ಜೀವನದ ಕಡೆಯ ದಿನಗಳನ್ನು ನೆಮ್ಮದಿಯಿಂದ ಕಳೆದು ಅವರ ಜೀವನವನ್ನು ಮುಕ್ತಾಯಗೊಳಿಸುವುದಕ್ಕೆ ಕೊಡುವಂತಹ ಆ ಒಂದು ಪಿಂಚಣಿಯ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ, "it is a matter of right of everybody" ಎಂದು ಹೇಳಿದೆ. ವಯಸ್ಸಾದವರಿಗೆ 2 ರಿಂದ 3 ಸಾವಿರಗಳ ಮಾಸಾಶನವನ್ನು

ಕೊಡುತ್ತೇವೆಯಲ್ಲವೇ? ಈ ಮಾಸಾಶನ ೫೦೦ ರೂಪಾಯಿಗಳಿಂದ ಪ್ರಾರಂಭವಾಗಿದ್ದು, ಸರ್ಕಾರವು ಇವತ್ತು 2 ಸಾವಿರ ರೂಪಾಯಿಗಳವರೆಗೆ ಮಾಸಾಶನವನ್ನು ಕೊಡುತ್ತಿದೆ. ಮಾಸಾಶನವನ್ನು ಕೊಡುವ ಉದ್ದೇಶವೇನೆಂದರೆ, ಅವರು ನೆಮ್ಮದಿಯ ಬದುಕನ್ನು ಕಳೆಯಲಿ ಎಂದು ಮಾಸಾಶನವನ್ನು ಕೊಡುತ್ತಾರೆ. ಸುದೀರ್ಘವಾಗಿ ೩೫ ರಿಂದ 40 ವರ್ಷಗಳ ಕಾಲ ಸೇವೆ ಮಾಡಿ, ಇವರು ಆಚೆ ಹೋಗುವಂತಹ ಸಂದರ್ಭದಲ್ಲಿ ಇವರು ಸರ್ಕಾರದ ಭಾಗ ಅಲ್ಲ. ಇವರು ಸರ್ಕಾರದವರು ಅಲ್ಲ ಎಂದು ಹೇಳುತ್ತಾರಲ್ಲವೇ? How far it is correct? ನನಗೆ ಈಗ ಪೆನ್ಷನ್ ಬರುವುದಿಲ್ಲ. ಆದರೆ ನನ್ನ retirement ನಂತರ ಪೆನ್ಷನ್ ಬರುತ್ತದೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಏನು ಮಾಡಿದ್ದೀರಿ ಎಂದು ನನಗೆ ಗೊತ್ತಿಲ್ಲ. ತಮಗೆ ಪೆನ್ಷನ್ ಬರುತ್ತದೋ, ಇಲ್ಲವೋ ಗೊತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾಜಿ ಆದ ಮೇಲೆ ಅದರ ವಿಷಯ ಗೊತ್ತಾಗುತ್ತದೆ. ನನಗೆ ಈಗ ಪೆನ್ಷನ್ ಬರುವುದಿಲ್ಲ. ಇಲ್ಲಿ ಕುಳಿತಿರುವಂತಹ ಯಾರಿಗೆ ಪೆನ್ಷನ್ ಬರುವುದಿಲ್ಲ ಹೇಳಿ. ಆ ದಿನಗಳು ಕಳೆದು ಮಾಜಿ ಆದರೆ ಪೆನ್ಷನ್ ಬರುತ್ತದೆ. ನಂತರ ಮಾಜಿ ತೀರಿ ಹೋದರೆ ಅವರ ಹೆಂಡತಿಗೆ ಫ್ಯಾಮಿಲಿ ಪೆನ್ಷನ್ ಬರುತ್ತದೆ. ಅವರ ಹೆಂಡತಿ ಎಂದರೆ, ಅವರ ಅವಲಂಬಿತರಿಗೆ ಬರುತ್ತದೆ. 2-೩ ಸಂಸಾರ ಇದ್ದರೆ ಗೊತ್ತಿಲ್ಲ. ಈ ನಾಡಿನ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ, after his retirement he will get the pension. ಹೈಕೋರ್ಟ್ ಜಡ್ಜ್‌ಗೆ ಪೆನ್ಷನ್ ಬರುತ್ತದೆ. ಈ ನಾಡಿನ ರಾಜ್ಯಸಭಾ ಸದಸ್ಯರಿರಬಹುದು, ಲೋಕಸಭಾ ಸದಸ್ಯರಿರಬಹುದು, ವಿಧಾನಸಭಾ ಸದಸ್ಯರಿರಬಹುದು, ವಿಧಾನ ಪರಿಷತ್ತಿನ ಸದಸ್ಯರಿರಬಹುದು. ಅವರು ಮಾಜಿ ಆದ ಮೇಲೆ ಅವರಿಗೆ ಪೆನ್ಷನ್ ಬರುತ್ತದೆ. ಆಡಳಿತವನ್ನು ನಡೆಸುವಂತಹ ಮತ್ತು ಕಾನೂನು ಮಾಡುವಂತಹ ವೇದಿಕೆಯಲ್ಲಿ ಇರುವಂತಹವರಿಗೆ ಪೆನ್ಷನ್ ಇರುವಂತಹದ್ದು ನ್ಯಾಯೋಚಿತವಾಗಿದೆ. ಇದರ ಬಗ್ಗೆ ನಾನು ಜಾಸ್ತಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಸ್ವಲ್ಪ ಕಣ್ಣು ತೆರೆದು ನೋಡಬೇಕಾಗುತ್ತದೆ. ನಾನು ಮತ್ತೆ ಪುನರುಚ್ಚಾರ ಮಾಡುತ್ತೇನೆ. ಮೊದಲನೆಯ ಅಂಶವೇನೆಂದರೆ, ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ನೌಕರರು ನಮ್ಮ ಸರ್ಕಾರಿ ನೌಕರರು ಅಲ್ಲ ಎನ್ನುವುದನ್ನು ದಯಮಾಡಿ ಎಲ್ಲಿಯೂ ಕೂಡ mention ಮಾಡಬೇಡಿ. They are also Government employees. ಸರ್ಕಾರಿ ಶಾಲೆಗಳಲ್ಲಿ ಯಾರು ಯಾರು ಕೆಲಸ ಮಾಡುತ್ತಿದ್ದಾರೆ .

**ಸಭಾಪತಿಯವರು:-** ಮಾನ್ಯ ಎಸ್.ಎಲ್. ಭೋಜೇಗೌಡರವರೇ, ಸಾಕು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಾಕೇ.

**ಸಭಾಪತಿಯವರು:-** ಮಾನ್ಯ ಎಸ್.ಎಲ್. ಭೋಜೇಗೌಡರವರೇ, ಸಾಕು. ಮಾನ್ಯ ಪುಟ್ಟಣ್ಣನವರು ಈಗ ಊಟ ಮಾಡಿ ಬಂದಿದ್ದಾರೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಶಾಲಾ ಶಿಕ್ಷಣ ಸಚಿವರನ್ನು ಮಾತ್ರ ಕೇಳಿದ್ದೇವೆ. ಇದರಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರುಗಳು ಸೇರಬೇಕಿತ್ತು. ಇವರದ್ದೇ ಜಾಸ್ತಿ ತೊಂದರೆ ಇರುವುದು. ಮಾನ್ಯ ಸಚಿವರಾದ ಮಧು ಬಂಗಾರಪ್ಪನವರು ಕಡಿಮೆ ಎಂದು ಹೇಳಬಹುದು. ಏಕೆಂದರೆ, ಈ ವಿಷಯದಲ್ಲಿ ಭಾರಿ ನುಣುಚಿಕೊಂಡು ಬಿಟ್ಟಿದ್ದಾರೆ. ದಿನಾಂಕ:01-04-2006 ರಲ್ಲಿ ಏನು ಆದೇಶ ಬಂದಿದೆ ಎಂದರೆ, ಒಂದು ದಿನ ಹೆಚ್ಚು ಕಡಿಮೆಯಾದವರಿಗೂ ಪೆನ್ಷನ್ ಇಲ್ಲ ಎಂದು ಬಂದಿದೆ. ನೇಮಕಾತಿ ಆದೇಶ ಒಂದೇ. ಆದರೆ, ಇದರಲ್ಲಿ ದಿನಾಂಕ:01-04-2006 ರಲ್ಲಿ ಯಾವ ಶಿಕ್ಷಣ ಸಂಸ್ಥೆಗಳು ಅನುದಾನಕ್ಕೆ ಒಳಪಟ್ಟವೋ, D.P.I. (Department of Public Instruction) or Commissioner ನಿಂದ ಸಹಿ ಆಗಿ ಒಂದು ದಿನ ನಿಧಾನವಾಗಿ ಬಂದಿರುವುದಕ್ಕೆ ಪೆನ್ಷನ್ ಇಲ್ಲ. ಆದರೆ, ಅನುದಾನಕ್ಕೆ ಒಳಪಡುವಂತಹ ದಿನಾಂಕವನ್ನು ಇಟ್ಟುಕೊಂಡು ಮಾಡಿದ್ದರಲ್ಲವೇ? ಅದರಿಂದ ಎಷ್ಟು ತೊಂದರೆಯಾಗಿದೆ ಎಂದರೆ, ಹಿಂದಿನ ದಿನಾಂಕದಲ್ಲಿ ನೇಮಕಾತಿ ಆದೇಶ ಆಗಿದ್ದು, ನನ್ನದು ಮತ್ತು ಮಾನ್ಯ ಎಸ್.ಎಲ್. ಭೋಜೇಗೌಡರವರದ್ದು ಆಯಿತು. ಒಂದು ದಿನ ಸರಿಯಾಗಿ ಅವರದ್ದು ಸಹಿಯಾಯಿತು. ನನ್ನದು ಆಗಲಿಲ್ಲ. ನೇಮಕಾತಿ ಪ್ರಾಧಿಕಾರದವರು ಒಂದೇ ದಿನಾಂಕದಲ್ಲಿ ನಮ್ಮೆಲ್ಲರಿಗೂ ಆದೇಶ ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ಅಪ್ರೂವಲ್ ಆಗಿ ಎಲ್ಲಾ ಆಗಿರುತ್ತದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ದಿನಾಂಕ:01-04-2006 ರ ಹಿಂದೆಯೇ ಅನುದಾನರಹಿತವಾಗಿ ಅನುಮೋದನೆಯಾಗಿತ್ತು. ಆದರೆ, ಅನುದಾನಸಹಿತವಾಗಿ ಆಯಿತಲ್ಲವೇ? ಇವರು ದಿನಾಂಕ: 01-04-2006 ಎಂದು ಇಟ್ಟುಕೊಂಡಿದ್ದಾರೆ. ಇದರಿಂದ ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಈಗ aided employees ಗೆ ಎನ್.ಪಿ.ಎಸ್., ಆಗಲಿ, ಓ.ಪಿ.ಎಸ್., ಆಗಲಿ, ಎರಡೂ ಇಲ್ಲ. ದಯವಿಟ್ಟು, ದಿನಾಂಕ:01-04-2006 ರ ಹಿಂದೆ ನೇಮಕಾತಿ ಪ್ರಾಧಿಕಾರಗಳು ಯಾವ ಯಾವ ಶಿಕ್ಷಣ ಸಂಸ್ಥೆಗಳನ್ನು ನೇಮಕಾತಿ ಮಾಡಿಕೊಂಡಿದ್ದರೋ, ಅವರನ್ನು ಓ.ಪಿ.ಎಸ್.,ಗೆ ತರಬೇಕು. ದಿನಾಂಕ:01-04-2006ರ ನಂತರ ಶಿಕ್ಷಣ ಸಂಸ್ಥೆಗಳಿಂದ ಏನು ನೇಮಕಾತಿ ಆಗಿದೆ ಅದಕ್ಕೆ ಕನಿಷ್ಠ ಪಕ್ಷವಾದರೂ ಎನ್.ಪಿ.ಎಸ್., ಅನ್ನು ಕೊಡಬೇಕು. ಸದನದಲ್ಲಿ ಉನ್ನತ ಶಿಕ್ಷಣ ಸಚಿವರು ಇದ್ದಾರೆ. ಇವರು ಇದು ಮಾಡುತ್ತಿದ್ದಾರೆ ಎಂದರೆ . . .

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ಇದು ಮಾಡುತ್ತಿದ್ದಾರೆ ಎಂದರೆ ಏನು?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಕೇಳಿ. ನಾನು ಅದನ್ನೇ ಹೇಳುತ್ತಿದ್ದೇನೆ. ಈಗ . . .

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಪುಟ್ಟಣ್ಣನವರೇ, ಇದು ಮಾಡುತ್ತಾರೆ ಎಂದರೆ ಏನು? ನಾವು ಅದು ಎಂದು ಹೇಳಬೇಕೇ? ಏನೆಂದು ಹೇಳಿ. ಇದರಲ್ಲಿ match fixing ಬೇಡ. ಸರಿಯಾಗಿ ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ:–** ಮಾನ್ಯ ಭೋಜೇಗೌಡರವರೇ, ನನ್ನದು match fixing ಇರುವುದೇ ಇಲ್ಲ. ತಮಗೂ ಗೊತ್ತು. ಆದರೆ, ಸಮಸ್ಯೆಯೇನೆಂದರೆ, ಈ ಉನ್ನತ ಶಿಕ್ಷಣ ಇಲಾಖೆಯಲ್ಲಿ ಏನಾಗಿದೆ ಎಂದರೆ, ವಿಶ್ವವಿದ್ಯಾಲಯಗಳು ಇವೆಯಲ್ಲವೇ?

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ತಾವು ಊಟಕ್ಕೆ ಹೋಗಲಿಲ್ಲವೇ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಊಟ ಮಾಡಿಕೊಂಡು ಬಂದೆ. ತಮಗೆ ಬಿ.ಪಿ., ಶುಗರ್ ಏನೂ ಇಲ್ಲ. ಪಾಪ, ಇವರೆಲ್ಲಾ ಮಾತನಾಡಿಕೊಳ್ಳುತ್ತಿದ್ದಾರೆ. ನಮ್ಮನ್ನು ಬಿಡುವುದೇ ಇಲ್ಲ ಎಂದು ಬೈಯ್ದುಕೊಳ್ಳುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಪುಟ್ಟಣ್ಣನವರೇ, ಒಂದು ನಿಮಿಷ. ನಾನು ಮಾನ್ಯ ಸಭಾಪತಿಯವರು ಎಷ್ಟು ಮುತುವರ್ಜಿ ವಹಿಸಿ, ಬಹಳ ಕಳಕಳಿಯಿಂದ ಪೀಠದಲ್ಲಿ ಬೆಳಗ್ಗೆಯಿಂದ ಕುಳಿತುಕೊಂಡು ಕೆಲಸ ಮಾಡುತ್ತಿದ್ದಾರೆ. ನಾನು ಇಲ್ಲಿಂದ ಆಚೆಗೆ ಹೋಗಬೇಕಾದರೆ ಮಾನ್ಯ ಸಭಾಪತಿಯವರನ್ನು ಕಥೆ ಏನು ಎಂದು ಕೇಳಿದೆ. ಅದಕ್ಕೆ ಅವರು "ಆಗಲೇ ಊಟ ಮನೆಯಿಂದ ಬಂದಿತ್ತು" ಎಂದರು. ಅವರು ಊಟ ಮಾಡಿ ಅಲ್ಲಿ ಬಂದು ಕುಳಿತಿದ್ದಾರೆ. ನಾನು ಊಟಕ್ಕೆ ಹೋಗಬೇಕು ಎಂದು ಚೀಟಿ ಬರೆದು ಕಳುಹಿಸಿದೆ. ಈಗಾಗಲೇ 2 ಗಂಟೆ 15 ನಿಮಿಷ ಆಯಿತು. ನಮ್ಮನ್ನು ಬಿಡುತ್ತಿಲ್ಲ ಏನು ಸಮಾಚಾರ ಎಂದು ಕೇಳಿದೆ. ನಮಗೇನು ಶುಗರ್ ಇಲ್ಲ. ಆದರೆ, ಸಮಯಕ್ಕೆ ಸರಿಯಾಗಿ ಊಟ ಮಾಡಬೇಕಲ್ಲವೇ? "ತಾವು ಊಟ ಮಾಡಿ ಬಂದು ನಮಗೆಲ್ಲಾ punishment ಮಾಡಿದರೆ ಹೇಗೆ?" ಎಂದು ಕೇಳಿದೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ನೀವು ಸತ್ಯವಾಗಿ ಮಾತನಾಡಿ. ನಾನು ಬೆಳಗ್ಗೆಯಿಂದ ಇನ್ನು ಊಟ ಮಾಡಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಬೆಳಗ್ಗೆಯಿಂದ ಊಟ ಮಾಡಿಲ್ಲ. ಈಗ ಮಧ್ಯಾಹ್ನದ ಊಟ ಆಯಿತು.

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ಸುಮ್ಮನೆ ಏಕೆ ಏಳುತ್ತೀರಿ?

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಮಧು ಬಂಗಾರಪ್ಪನವರೇ, ಮಾನ್ಯ ಭೋಜೇಗೌಡರವರು ಬಿಳಿ ನಾಯಿಯನ್ನು ಕರಿ ನಾಯಿ ಮಾಡುತ್ತಾರೆ, ಕರಿ ನಾಯಿಯನ್ನು ಬಿಳಿ ನಾಯಿ ಮಾಡುತ್ತಾರೆ. ಅವರ ಬಗ್ಗೆ ನಂಬಿಕೆ ಇಟ್ಟುಕೊಳ್ಳಬೇಡಿ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಎಸ್.ಎಲ್. ಭೋಜೇಗೌಡರವರೇ, ಬೇಗ ಮಾತನಾಡಿ ಮುಗಿಸಿ. ನಾನು ಹೋಗಿ ಊಟ ಮಾಡಬೇಕು. ಬೆಳಗ್ಗೆಯಿಂದ ನಮ್ಮನ್ನು ಕಾಡುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈಗ ಏನಾಗಿದೆಯೆಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳು ಏನಿವೆ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಎರಡು ಕಡೆ ಒಂದೇ ರೀತಿ ಇದೆ. ಆದರೆ, ವಿಭಿನ್ನವಾಗಿ ಉನ್ನತ ಶಿಕ್ಷಣ ಇಲಾಖೆಯಲ್ಲಿ ತೊಂದರೆಯೇನೆಂದರೆ, ವಿಶ್ವವಿದ್ಯಾಲಯಗಳಲ್ಲಿ ದಿನಾಂಕ:01-04-2006ರ ನಂತರ Assistant Professor ನಿಂದ Associate Professor ಗೆ, Associate Professor ನಿಂದ Professor ಗೆ ಅದೇ ವಿಶ್ವವಿದ್ಯಾನಿಲಯಗಳಲ್ಲಿ ಆಯ್ಕೆ ಆದವರಿಗೆ ನೇಮಕಾತಿ ಆದೇಶವನ್ನು ಕೊಟ್ಟಿದ್ದಾರೆ. ಒಂದು ದಿನದ ಗ್ಯಾಪ್ ಇಲ್ಲ. ಆದರೆ, ಇವರು ಸರ್ಕಾರಕ್ಕೂ, ವಿಶ್ವವಿದ್ಯಾಲಯಕ್ಕೂ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ನಮ್ಮ ಕಂಟ್ರೋಲ್‌ಗೆ ಸಿಗುತ್ತಿಲ್ಲ ಎಂದು ಆಗಲೇ ಹೇಳಿದರು. ನಾವೆಲ್ಲಾ enquiry ಗೆ order ಮಾಡಿದ್ದೇವೆ ಎಂದು ಇವರೇ ಹೇಳಿದರು. ಇಲ್ಲಿ ಏನಾಗಿದೆ ಎಂದರೆ, ಅವರೆಲ್ಲರನ್ನೂ ಕೂಡ ಎನ್.ಪಿ.ಎಸ್., ಮಾಡಿಬಿಟ್ಟಿದ್ದಾರೆ. ಯಾರು Assistant Professor ನಿಂದ Associate Professor ಆಗಿ ಆಯ್ಕೆಯಾದರು, Associate Professor ನಿಂದ Professor ಆಗಿ ಆಯ್ಕೆಯಾದರು, ಅವರನ್ನು ಕೂಡ Higher Education Department ನಲ್ಲಿ ಇದರಿಂದ ಹೊರಗಿಡಲಾಗಿದೆ. ಅದರ ಜೊತೆಗೆ ಇವರಿಬ್ಬರದ್ದೂ ಕೂಡ ಸೇರಿಕೊಂಡಿದೆ. ಸಂಪೂರ್ಣವಾಗಿ ಇವರಿಬ್ಬರು ಕೂಡ ನ್ಯಾಯ ಕೊಡಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಪುಟ್ಟಣ್ಣ:-** ಮಾನ್ಯ ಎನ್.ರವಿಕುಮಾರ್‌ರವರೇ, ಇದೇ ವಿಷಯ. ಇದು ವಿಭಿನ್ನವಾಗಿ ಇಲ್ಲವೇ? ವಿಶ್ವವಿದ್ಯಾಲಯಗಳು ಬೇರೆಯೇ?

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಪುಟ್ಟಣ್ಣನವರೇ, ಇದು ಎಂದು ಹೇಳಿರುವ ವಿಷಯ ಈಗ ಗೊತ್ತಾಯಿತು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳು ಬೇರೆಯೇ? ಅಲ್ಲಿ Professor ಗಳು ಹೇಗೆ ಬರಬೇಕು? ಇವರೇ ಯಾರು ಇಲ್ಲ ಎಂದು ಹೇಳುತ್ತಾರೆ. ನಾವು ಸಂಶೋಧನೆ ಮಾಡುವುದಕ್ಕೆ ಏನಾದರೂ ಮಾಡುತ್ತೇವೆ ಎಂದು ಹೇಳುತ್ತಾರೆ. ಇವರು ಏನು ಸಂಶೋಧನೆ ಮಾಡುತ್ತಾರೆ. ಇವರು ಉತ್ತೇಜನ ಕೊಡುವುದು ಇದೇನಾ? ಆದರೆ, Professor, Associate Professor ಆಗಿ ಯಾರು ಹೋಗುವುದೇ ಇಲ್ಲ? ಇದರಲ್ಲಿ ಇದೆಲ್ಲವೂ ಕೂಡ ಅಡಗಿದೆ. ದಯಮಾಡಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಮತ್ತು ಮನವಿಯನ್ನು ಮಾಡುತ್ತೇನೆ. ದಯವಿಟ್ಟು ದಿನಾಂಕ:01-04-2006ರ ಹಿಂದೆ ನೇಮಕಾತಿಯಾಗಿ, ಆ process ನಲ್ಲಿ ಏನಿತ್ತು, ಅವುಗಳೆಲ್ಲ ಒ.ಪಿ.ಎಸ್., ಕೊಡಬೇಕು. ಇದರ ಜೊತೆಗೆ ವಿಶ್ವವಿದ್ಯಾಲಯದಲ್ಲಿಯೂ ಕೂಡ ನಾನು ಹೇಳಿದ ರೀತಿಯಲ್ಲಿ ಒ.ಪಿ.ಎಸ್., ಕೊಡಬೇಕೆಂದು ನಾನು ಮಾನ್ಯ ಸಚಿವರುಗಳಲ್ಲಿ ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ವಿಶ್ವವಿದ್ಯಾಲಯಗಳಲ್ಲಿ ದಿನಾಂಕ:01-04-2006 ಕ್ಕಿಂತ ಮುಂಚೆ ಯಾರು ನೇಮಕಾತಿ ಹೊಂದಿರುತ್ತಾರೆ, ಅವರು ಅದೇ ವಿಶ್ವವಿದ್ಯಾಲಯದಲ್ಲಿ Professor, Associate Professor ಆದರೆ, ಅದಕ್ಕೆ ಯಾವುದೇ ಸಮಸ್ಯೆ ಇಲ್ಲ. ಈಗ ಅವರು confuse ಮಾಡಿಕೊಂಡಿದ್ದಾರೆ. ಒಂದು ವಿಶ್ವವಿದ್ಯಾಲಯವನ್ನು ಬಿಟ್ಟು, ಮತ್ತೊಂದು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ನೇಮಕಾತಿ ಆದಂತಹ ಸಂದರ್ಭದಲ್ಲಿ ಆ ತಾರೀಖಿನ ನಂತರ ಆದಂತಹವರಿಗೆ ಈ ಸಮಸ್ಯೆ ಇದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಹೀಗಾದರೆ ಅವರಿಗೆ ಸೀನಿಯಾರಿಟಿ ಹೋಗುತ್ತದೆ.

**ಡಾ. ಎಂ.ಸಿ.ಸುಧಾಕರ್:-** ಮಾನ್ಯ ಪುಟ್ಟಣ್ಣನವರೇ ಮತ್ತು ಮಾನ್ಯ ಭೋಜೇಗೌಡರವರೇ, ನಾನು ಹೇಳಿ ಬಿಡುತ್ತೇನೆ. ಅವರಿಗೆ ಸೀನಿಯಾರಿಟಿ ಬರಲ್ಲ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣ ರವರೇ ಮತ್ತು ಮಾನ್ಯ ಎಸ್.ಎಲ್. ಭೋಜೇಗೌಡರವರೇ, . . . ಮಾನ್ಯ ಸಚಿವರೇ, ಅವರು through proper channel ಹೋಗಿದ್ದರೆ . . .

**ಡಾ. ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, inter University shift ಆಗಿದ್ದರೆ, ಅದು ಏನು ಆಗುವುದಿಲ್ಲ. With post shift ಆಗುವುದು ಅಥವಾ transfer ಆಗುವಂತಹದ್ದು ಬೇರೆ ವಿಚಾರ.

(ಮುಂದು)

(411) 16.3.2026 3.10 ಪಿಕೆ:ಬಿಎನ್ಎಸ್ (ಸಭಾಪತಿಗಳ ಉಪಸ್ಥಿತಿ)

**ಡಾ: ಎಂ.ಸಿ.ಸುಧಾಕರ್ (ಮುಂದು)**

ಸಮಸ್ಯೆ ಇರುವುದೇನೆಂದರೆ, 1.4.2006ಕ್ಕೆ ಮುಂಚೆ ನೋಟಿಫಿಕೇಷನ್ ಆಗಿ, ನಂತರ appointment ಆಗಿರುವವರ ಸಂಬಂಧ ನಾವು ಹಣಕಾಸು ಇಲಾಖೆಯ ಜೊತೆ ಮಾತನಾಡಿದಾಗ, ಅವರು, University, Corporations, ಇವು ಯಾವುದಕ್ಕೂ ಕೊಡುವುದಿಲ್ಲ ಎಂದು ಸಮಜಾಯಿಷಿ ಕೊಟ್ಟಿದ್ದರು. ಅದನ್ನು ಬಹುಶಃ ಕೆಲವು ಸದಸ್ಯರು ನಮ್ಮ ಗಮನಕ್ಕೆ ತಂದಿದ್ದರು. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಂತಹ ಕೆಲವು ಕಡೆ ಕೊಟ್ಟಿದ್ದಾರೆ ಎಂದು ಹೇಳಿದಾಗ ನಾನು, ಅದರ ದಾಖಲೆ ಕೊಡಿ ಎಂದು ಕೇಳಿದೆ. ಬೋರ್ಡ್‌ಗಳನ್ನು ಮತ್ತು ಯುನಿವರ್ಸಿಟಿಗಳನ್ನು ಸ್ಥಳೀಯ ಸಂಸ್ಥೆ ರೂಪದಲ್ಲಿ ಪರಿಗಣಿಸುತ್ತಿದ್ದೇವೆ. ಕೇವಲ ಕೆ.ಸಿ.ಎಸ್.ಆರ್. ಪ್ರಕಾರ ಆಗಿರುವಂಥದ್ದಕ್ಕೆ ಸಂಬಂಧಪಟ್ಟಂತೆ ಮಾತ್ರ, ನೋಟಿಫಿಕೇಷನ್ ಮುಂಚೆ ಆಗಿದ್ದು ನೇಮಕಾತಿ ನಂತರ ಆಗಿದ್ದರೆ ಅದನ್ನು ಪರಿಗಣಿಸಿದ್ದೇವೆ ಎಂದು ಹೇಳಿದ್ದಾರೆ. ಅಂತಹವರನ್ನು O.P.S. ಅಡಿ ಬರಲು ಅವಕಾಶ ಕೊಟ್ಟಿದ್ದಾರೆ. ಆದರೆ ಇದನ್ನು ಈ ರೀತಿಯಾಗಿ ಮಾಡಿರುವುದಕ್ಕೆ ಗೊಂದಲ ಇದೆ. ಈ ಕುರಿತು ಇನ್ನೂ ನಾವು ಚರ್ಚೆ ಮಾಡುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, 1.4.2006ರಲ್ಲಿ ಆಗಿರುವಂತಹ ವಿಚಾರದಲ್ಲಿ ಈಗಾಗಲೇ ವಿಶ್ಲೇಷಣೆ ಮಾಡಿದ್ದಾರೆ. ಆದೇಶ ಆಗಿರುವಂಥದ್ದು ಒಂದೇ ಆಗಿದೆ. ಆದರೆ ಒಬ್ಬರಿಗೆ ವಿಭಿನ್ನ ದಿನಾಂಕದಲ್ಲಿ ಅಪಾಯಿಂಟ್‌ಮೆಂಟ್ ಆಗಿರುತ್ತದೆ. Division Bench of the High Court ನ ಮುಂದೆ ಬಂದಾಗ there is a clear order. ಈ ಸಮಸ್ಯೆ ಕ್ಲಿಯರ್ ಆಗಿದ್ದು ಈ ಕುರಿತು ಹೈಕೋರ್ಟ್ ಆದೇಶವನ್ನು ನಿಮ್ಮ ಅಧಿಕಾರಗಳು ನೋಡಿಲ್ಲವೇ? ಆ ಆದೇಶದ ಮೇಲೆ ಮುಂದಿನ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನೀವು ಅಪೀಲ್ ಹೋಗಿ ಅದಕ್ಕೆ ಸ್ಟೇ ಯನ್ನಾದರೂ ತನ್ನಿ. ಬೇಡ ಎಂದು ಹೇಳುವುದಿಲ್ಲ. ಆದರೆ ಅದನ್ನೂ ಮಾಡುವುದಿಲ್ಲ. ನಾವು ಹೈಕೋರ್ಟ್‌ನ ಆದೇಶದ ಪ್ರತಿಯನ್ನು ಕೊಟ್ಟಿದ್ದರೂ ಇವರು ಅದನ್ನು honour ಮಾಡುತ್ತಿಲ್ಲ ಎಂದರೆ ಏನರ್ಥ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಿಗೆ ಕರ್ನಾಟಕ ಯುನಿವರ್ಸಿಟಿಯ ಬಗ್ಗೆ ಗೊತ್ತಿದೆ. ಯಾರು ಆಯ್ಕೆಯಾದರೋ ಅವರಿಗೆ ಪಿಂಚಣಿ ಬರುತ್ತಿಲ್ಲ. 1.4.2006ರಲ್ಲೇ ಅವರು ಅಪಾಯಿಂಟ್ ಆಗಿದ್ದರು. ಅವರು ಯಾರೂ ಕೂಡ ಓ.ಪಿ.ಎಸ್. ಅಡಿ ಬರುತ್ತಿಲ್ಲ.

**ಸಭಾಪತಿಯವರು:-** ಅಲ್ಲಿ ತಪ್ಪಾಗಿದೆ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಭೋಜೇಗೌಡರು ಮಾತನಾಡುವಾಗ, ಅವರು ಸರ್ಕಾರಿ ನೌಕರರು ಅಲ್ಲವೇ ಎಂಬ ಮಾತನ್ನು ಹೇಳಿದರು. ಅವರಿಗೆ ಸರ್ಕಾರದಿಂದಲೇ ಸಂಬಳ ಕೊಡುತ್ತೇವೆ. ಅಲ್ಲಿ employee, employer, ಎಂದು ಬಂದಾಗ ಈ ವ್ಯತ್ಯಾಸಗಳು ಬಂದಿವೆ. ನಾನು, ನೀವು ಕಳುಹಿಸಿರುವ terms of references ಅನ್ನು Committee ಗೆ ಕಳುಹಿಸಿಲ್ಲ. ನಾವು ಯಾವಾಗಲೂ ಏನು ಮಾಡುತ್ತೇವೆ ಎಂದರೆ, ಆರ್ಥಿಕವಾಗಿ ಹೊರೆ ಬಂದಾಗ, ಅದನ್ನು ಆರ್ಥಿಕ ಇಲಾಖೆಗೆ ಕಳುಹಿಸುತ್ತೇವೆ. ಆರ್ಥಿಕ ಇಲಾಖೆಯವರು, ಇದು ಬರುವುದಿಲ್ಲ ಎಂದು ವಾಪಸ್ಸು ಕಳುಹಿಸಿದ್ದಾರೆ. ಈಗ Committee existing ಇದೆ. ಮಾನ್ಯ ಸುಧಾಕರ್ ಅವರ ಇಲಾಖೆಗೆ ಸಂಬಂಧಪಟ್ಟಂತೆ ಕೂಡ ಸಮಸ್ಯೆ ಇದೆ. ಈಗ ಈ ಕುರಿತು ಕೂಡ ಚರ್ಚೆ ಆಗುತ್ತಿದೆ. ಕಮಿಟಿಗೆ ರೆಫರೆನ್ಸ್ ಮಾಡುವಂಥದ್ದನ್ನು ನಾವು ಮಾಡುತ್ತೇವೆ. ಇದನ್ನು ಶುರು ಮಾಡುತ್ತೇವೆ. ಮಾನ್ಯ ಉಪ ಮುಖ್ಯಮಂತ್ರಿಗಳೂ ಕೂಡ ಮಾತನಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ನನಗೂ ಗೊತ್ತು. 2023ರ ಪ್ರಣಾಳಿಕೆಯಲ್ಲಿ ಏನಿತ್ತು ಎಂದು ಉಪಾಧ್ಯಕ್ಷನಾದ ನನಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡುತ್ತೇವೆ ಎಂದು ಹೇಳಿರುವುದರಿಂದ, ಈ ನಿರ್ದಿಷ್ಟವಾದ ವಿಚಾರವನ್ನು ಕಮಿಟಿಗೆ ರೆಫರ್ ಮಾಡಿ, ಅಲ್ಲಿಂದ ಉತ್ತರವನ್ನು ತೆಗೆದುಕೊಳ್ಳುತ್ತೇವೆ ಮತ್ತು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಏನೇ ಆದರೂ, ಫೈನಾನ್ಸ್ ಎಂದು ಬಂದಾಗ ಸ್ವಲ್ಪ ಅಡಚಣೆ ಆಗುತ್ತದೆ. ನನ್ನ ಇತಿಮಿತಿಯಲ್ಲಿದ್ದಿದ್ದರೆ ಇಷ್ಟೊತ್ತಿಗೆ ನಾನು ಮುಗಿಸಿಬಿಡುತ್ತಿದೆ. ನಾವು ಇಬ್ಬರೂ ಸೇರಿ, ಕಮಿಟಿಗೆ ರೆಫರ್ ಮಾಡಿ ಮುಂದಿನ ದಿನಗಳಲ್ಲಿ ಆದಷ್ಟು ಬೇಗ ಉತ್ತರವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:-** ಸದನವನ್ನು ಸಂಜೆ 4.15 ಗಂಟೆಯವರೆಗೆ ಮುಂದೂಡಲಾಗಿದೆ.

(412) 16/03/2026 4:30 ಎಸ್‌ಪಿಆರ್/ಕೆಎಸ್

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 14 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**7. ಸದನಕ್ಕೆ ಮಾಹಿತಿ ನೀಡದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ವಿರೋಧ ಪಕ್ಷಗಳ ಮಾನ್ಯ ಸದಸ್ಯರಿಂದ ಒತ್ತಾಯ**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ವಿಚಾರದಲ್ಲಿ ಸ್ವಲ್ಪ ಗದ್ದಲವಾಗಿ ವಿಧಾನ ಸಭೆಯ ಸಭಾಧ್ಯಕ್ಷರು ಬಹಳ ಅಸಮಾಧಾನಗೊಂಡು, ಪೀಠದಿಂದ ಕೆಳಗೆ ಇಳಿದು, ಅಧಿಕಾರಿಗಳು ಈ ರೀತಿಯಾಗಿ ಉತ್ತರ ನೀಡಿದರೆ, ಸಭೆಯನ್ನು ಯಾವ ರೀತಿಯಾಗಿ ನಡೆಸುವುದು ಎಂಬುದಾಗಿ ಪ್ರಶ್ನಿಸಿದರು. ಮುಖ್ಯಮಂತ್ರಿಗಳಿಗೆ ಸಿಟ್ಟುಬಂದು ಮೂರು ಅಧಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಇವತ್ತಿನ ದಿವಸ ಬೆಳಗ್ಗೆ ಇಲ್ಲಿ 140 ಪ್ರಶ್ನೆಗಳ ಪೈಕಿ ಕೇವಲ 40 ಪ್ರಶ್ನೆಗಳಿಗೆ ಮಾತ್ರವೇ ಉತ್ತರ ಬಂದಿದೆ. ಇನ್ನುಳಿದ 100 ಪ್ರಶ್ನೆಗಳಿಗೆ ಉತ್ತರ ಬಂದಿರುವುದಿಲ್ಲ. ಈ ಪರಿಸ್ಥಿತಿಯೊಳಗೆ ಹಳೆಯ 203 ಪ್ರಶ್ನೆಗಳು ಬಾಕಿ ಉಳಿದುಕೊಂಡಿವೆ. ಆ ಸದನದಲ್ಲಿಯೂ ಸಹ ಮಂತ್ರಿಗಳು ಸದನಕ್ಕೆ ಬಂದಿಲ್ಲ ಎಂಬುದಾಗಿ ವಿಧಾನ ಸಭೆಯ ಸಭಾಧ್ಯಕ್ಷರು ಬಹಳ ಅಸಮಾಧಾನವಾಗಿದೆ.

**ಸಭಾಪತಿಯವರು:-** ಇದರ ಬಗ್ಗೆ ನಾನು ದಿನಾಲೂ ಹೇಳುತ್ತೇನೆ. ಇದರ ಬಗ್ಗೆ ಸರ್ಕಾರವು ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ನಾನು ಪ್ರಶ್ನೆಗೆ ಉತ್ತರ ಬಂದಿಲ್ಲ ಎಂದು ಹೇಳುತ್ತೇನೆ, ಆದರೆ, ಇದರ ಬಗ್ಗೆ ಸರ್ಕಾರವು ಕ್ರಮವನ್ನು ತೆಗೆದುಕೊಳ್ಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಪೀಠವು ಇದನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡರೂ ಸಹ...., ಸಭಾನಾಯಕರು ಈ ವಿಚಾರದಲ್ಲಿ ನೋಟಿಸ್ ನೀಡಿರುವ ಬಗ್ಗೆ ಹೇಳಿದ್ದಾರೆ. ಆದರೂ ಸಹ ಆಗಲಿಲ್ಲ. ಹಾಗಾದರೆ, ಅಧಿಕಾರಿಗಳು ಇಷ್ಟೊಂದು ಜಿಡ್ಡು ಹಿಡಿದಿದ್ದಾರೆಯೇ? ಹಾಗಾದರೆ ಇವರುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲವೇ? ಸದನ ನಡೆಯಬೇಕಾದರೆ, ಅವರು ಉತ್ತರ ಕೊಡುವುದಿಲ್ಲ ಎಂದರೆ, ಇನ್ನು ಯಾವಾಗ ಕೊಡುತ್ತಾರೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಬೆಳಗ್ಗೆ ಈ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದು, ಇದನ್ನು ಗಂಭೀರವಾಗಿ ತೆಗೆದುಕೊಂಡಿದೆ. ಈಗಾಗಲೇ ಮುಖ್ಯಮಂತ್ರಿಗಳು ಎಲ್ಲರಿಗೂ ಪತ್ರವನ್ನು ಬರೆದಿದ್ದಾರೆ. ಇವತ್ತಿನ ದಿವಸ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ಮಾಹಿತಿಯು ನನಗೆ ಬಂದಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿ, ನಿರ್ದೇಶನವನ್ನು ನೀಡಿದ್ದಾರೆಯೇ?.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಉಪ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದಾರೆ, ಈ ವಿಷಯವನ್ನು ಪ್ರಸ್ತಾಪಿಸಿದರು. ಆಗ ತಕ್ಷಣವೇ ಎಲ್ಲಾ ಮಂತ್ರಿಗಳಿಗೆ ಈ ಬಗ್ಗೆ detail ಮಾಡಿದ್ದೇನೆ. ಇದರಲ್ಲಿ ಕೆಲವು ತಪ್ಪುಗಳು ಕಾಣುತ್ತಿವೆ. ಏಕೆಂದರೆ, ನಾನು ಉತ್ತರಿಸುವ ಪ್ರಶ್ನೆಗಳು 4 ಎಂದು ಹಾಕಿದ್ದರು. ನಾನು ಯಾವತ್ತಿಗೂ ಸಹ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಪೆಂಡಿಂಗ್ ಇಡುವುದಿಲ್ಲ. ನನ್ನ ಹತ್ತಿರ ಇವರು 4 ಸ್ವೀಕರಿಸಿರುವ ಕಾಪಿ ಇದೆ. ಆದರೂ ಸಹ ನನ್ನ ಇಲಾಖೆಗೆ ಸಂಬಂಧಿಸಿದಂತೆ, ಅವುಗಳು ಬಾಕಿ ಇವೆ ಎಂದು ಬರೆದು ಕಳಿಸಿರುತ್ತಾರೆ. ಮೊನ್ನೆಯ ದಿನ ಶ್ರೀ ಪಿ.ಹೆಚ್.ಪೂಜಾರ್‌ರವರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ನೀಡಿದ್ದೇನೆ. ಇಲ್ಲಿ 89 ಹಳೆಯದ್ದು ಇದೆ ಎಂದು ಇದೆ ಮತ್ತು 161 ಬಾಕಿ ಇದೆ ಎಂಬುದಾಗಿ ಇದೆ. ಇದರಲ್ಲಿ ನನ್ನದೂ 4 ಸೇರಿಸಿದ್ದಾರೆ. 4 ಕ್ಕೆ ಸ್ವೀಕರಿಸಿದೆ ಎಂಬ ಕಾಪಿಯನ್ನು ನೀಡಿದ್ದಾರೆ. ಹೀಗಾಗಿ ಇದನ್ನು ಪರಿಶೀಲಿಸುವಂತೆ ಸಚಿವಾಲಯದ ಕಾರ್ಯದರ್ಶಿಯವರಿಗೆ ತಿಳಿಸಿದ್ದೇನೆ. ಶ್ರೀ ಪಿ.ಹೆಚ್.ಪೂಜಾರ್ ರವರು ಪ್ರಸ್ತುತ ಸದನದಲ್ಲಿ ಉಪಸ್ಥಿತಿರಿದ್ದಾರೆ. ಮೊನ್ನೆಯ ದಿನ ಅವರು ಕೇಳಿರುವ ಪ್ರಶ್ನೆಗೂ ಸಹ ಅಂದಿನ ದಿನವೇ ನಾನು ಉತ್ತರಿಸಿದ್ದೇನೆ ಹಾಗೂ ಅದರ ಕಾಪಿಯನ್ನೂ ಸಹ ನೀಡಿದ್ದೇನೆ. ನನ್ನ ಬಳಿ ಯಾವುದೂ ಸಹ ಬಾಕಿ ಇಲ್ಲ. ಆ ರೀತಿಯಾಗಿ ನಾನು ಮಾಡಿದ್ದು, ಇದನ್ನು ಪರಿಶೀಲಿಸಬೇಕಾಗಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಪೀಠಕ್ಕೆ ಅರಿಕೆ ಮಾಡಿಕೊಳ್ಳುವುದು ಏನೆಂದರೆ, 140 ಪ್ರಶ್ನೆಗಳಿಗೆ ಕೇವಲ 40 ಪ್ರಶ್ನೆಗಳಿಗೆ ಮಾತ್ರವೇ ಉತ್ತರ ಬರುತ್ತದೆ ಎಂದರೆ, ಅದಕ್ಕೆ ಸಭಾನಾಯಕರಿಗೆ ಸಮಾಧಾನವಿದೆಯೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಅದು ಎಷ್ಟಿದೆ ಎಂದು ಇವತ್ತಿನ ದಿವಸ ನಾನು ಅದನ್ನು ಸೆಟ್‌ರೈಟ್ ಮಾಡಿಸುತ್ತೇನೆ.

**ಶ್ರೀ ಎಸ್.ಎಲ್.ಬೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾವು ಹೇಳಿರುವ ವಿಚಾರದ ಬಗ್ಗೆ ಸಭಾನಾಯಕರ ಮನಸ್ಸಿಗೆ ಸಮಾಧಾನವಿದೆಯೇ ಎನ್ನುವುದನ್ನು ಹೇಳಬೇಕು. ಅಧಿಕಾರಿಗಳಿಂದ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳದಿರುವಷ್ಟು ನಾವು ಅಸಮರ್ಥರೇ? ಇವರಿಗೆ ಇರುವ ಕೆಲಸವಾದರೂ ಏನು? ಅವರಿಗೆ ಕೈಗೊಬ್ಬರು ಮತ್ತು ಕಾಲಿಗೆ ಒಬ್ಬರು ಇರುತ್ತಾರೆ. ಅವರಿಗೆ ಎಲ್ಲವೂ ಅವರ ಬೆರಳ ತುದಿಯಲ್ಲಿಯೇ ಸಿಗುತ್ತದೆ. ಹೀಗಿದ್ದಾಗ ಕೇಳಿದ ಪ್ರಶ್ನೆಗೆ

ಉತ್ತರ ಕೊಡುವ ಸೌಜನ್ಯವಾದರೂ ಅವರಿಗೆ ಇಲ್ಲವೇ? ಅವರುಗಳು taken for granted ಎಂದು ಭಾವಿಸಿದರೆ ಹೇಗೆ?

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ನಾನು ಹೇಳುವುದನ್ನು ಕೇಳಿ. ಇಬ್ಬರು ಮೂರು ಮಂತ್ರಿಗಳು ನನಗೆ ಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ ಒಂದು ತಿಂಗಳು ಸಮಯಾವಕಾಶವನ್ನು ಕೋರಿದ್ದಾರೆ. ಅಧಿವೇಶನ ನಡೆಯುತ್ತಿದೆ ಎಂದು ಮಂತ್ರಿಗಳಾದರೂ ತಿಳಿದುಕೊಳ್ಳಬೇಕಲ್ಲವೇ? ಒಂದು ತಿಂಗಳ ಸಮಯಾವಕಾಶ ಏಕೆ ಎಂದು ನಾನು ಕೇಳಿದ್ದೇನೆ. ಈ ರೀತಿಯಾಗಿ ಇಬ್ಬರು-ಮೂವರು ಮಂತ್ರಿಗಳು ಮಾಡಿದ್ದಾರೆ. ಅಧಿಕಾರಿಗಳು ಏನು ಕಳುಹಿಸುತ್ತಾರೆಯೋ, ಅದನ್ನೇ ಇವರೂ ಸಹ ಕಳುಹಿಸುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಅವರಿಗೆ ಒಂದು ತಿಂಗಳ ರಜೆಯನ್ನು ಕೊಟ್ಟು ಕಳುಹಿಸಿ.

**ಸಭಾಪತಿಯವರು:-** ನಾವು ಹಾಗೆಯೇ ಮಾಡಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರಿಗೆ ಒಂದು ತಿಂಗಳು ಕಾಲ ರಜೆಯನ್ನು ಹಾಕುವುದಕ್ಕೆ ಹೇಳಿ. ಅವರುಗಳೆಲ್ಲರೂ ಕಡ್ಡಾಯ ರಜೆಯ ಮೇಲೆ ತೆರಳಲಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಈಗ ಟೆಕ್ನಾಲಜಿ ಇದೆ. ಇವರೇನೂ ಪತ್ರ ಬರೆದು ಮಾಹಿತಿಗಳನ್ನು ತರಿಸಿಕೊಳ್ಳಬೇಕೇ? ಇವುಗಳನ್ನು ಆನ್‌ಲೈನ್ ಮುಖಾಂತರವೂ ತರಿಸಿಕೊಳ್ಳಬಹುದು.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ. ಈ ವಿಷಯವು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೂ ಸಹ ಹೋಗಿದೆ. ಮುಖ್ಯ ಕಾರ್ಯದರ್ಶಿಗಳು ಈಗಾಗಲೇ ಈ ಸಂಬಂಧ ಒಂದು ಸಭೆಯನ್ನೂ ಸಹ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಈ ವಿಚಾರದಲ್ಲಿ ಎಲ್ಲಾ ಸಚಿವರಿಗೆ ಪತ್ರ ಬರೆದಿದ್ದಾರೆ. ನಾವು ಸಹ ಎಲ್ಲಾ ಸಚಿವರಿಗೆ ತಿಳಿಸಿದ್ದೇವೆ.

**ಸಭಾಪತಿಯವರು:-** ನೀವು ಸಹ ಪತ್ರ ಬರೆಯಿರಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ನಮ್ಮ ಪರಿಷತ್ತಿನ ಅಧಿಕಾರಿಗಳೂ ಸಹ ಇದನ್ನು ಸ್ಟ್ರೈಟ್ ಮಾಡಬೇಕು.

**ಸಭಾಪತಿಯವರು:-** ಸಭಾನಾಯಕರೇ, ಅವರ ಗಂಭೀರತೆಯನ್ನು ನೀವು ಅರ್ಥೈಸಿಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ನಾಳೆಯಿಂದ ಹೀಗೆ ಆಗಬಾರದು. ತಕ್ಷಣವೇ ನೀವೂ ಸಹ ನಿಮ್ಮ ಕಛೇರಿಯಿಂದ ಪತ್ರ ಬರೆಯಿರಿ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಕರೆಯಿರಿ. ಯಾವ ಯಾವ ಅಧಿಕಾರಿಗಳು ಮಾಹಿತಿಯನ್ನು ಕೊಡುವುದಿಲ್ಲವೋ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ. ಅವರು ಕಾರ್ಯದರ್ಶಿ ಅಥವಾ ಯಾರು ಬೇಕಾದರೂ ಇರಲಿ; ಕೇವಲ ಕೆ.ಎ.ಎಸ್. ಮತ್ತು ಐ.ಎ.ಎಸ್. ಅಂತಲ್ಲ. ಅವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿ. ಹೀಗಾಗಿ ಅವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ. ಇದರ ಬಗ್ಗೆ ನಾವು ಹೇಳಿ, ಹೇಳಿ ಇದಕ್ಕೆ ಕಿಮ್ಮತ್ತು ಇಲ್ಲದಂತಾಗಿದೆ.

ಸಭಾನಾಯಕರೇ, ಕಡೆಯಪಕ್ಷ ಪೀಠಕ್ಕಾದರೂ ಗೌರವವಿರಬೇಕಲ್ಲವೇ? ಈ ವಿಚಾರದಲ್ಲಿ ನಾನು ಹತ್ತು ಸಲ ಹೇಳಿದ್ದೇನೆ. ಅಧಿಕಾರಿಗಳು ಮಾಡಬೇಕು; ಇದನ್ನು ಬಿಟ್ಟು ಅವರಿಗೆ ಬೇರೆ ಏನು ಕೆಲಸವಿದೆ ಹೇಳಿ ನೋಡೋಣ. ಈ ವಿಚಾರದಲ್ಲಿ ಸಭಾನಾಯಕರು ದಯಮಾಡಿ ಕ್ರಮ ತೆಗೆದುಕೊಳ್ಳಿ.

**ಸಭಾಪತಿಯವರು:–** ಈಗ ಆಯವ್ಯಯದ ಮೇಲೆ ಮುಂದುವರೆದ ಚರ್ಚೆ ಶ್ರೀ ಎಸ್.ಎಲ್.ಭೋಜೇಗೌಡ ರವರಿಂದ.

**ಶ್ರೀ ಎಸ್.ಎಲ್.ಭೋಜೇಗೌಡ:–** ನಾನು ನಾಳೆಯ ದಿನ ಮಾತನಾಡುತ್ತೇನೆ.

**ಸಭಾಪತಿಯವರು:–** ನಾನು ಪಾಳಿಯ ಪ್ರಕಾರ ಮಾತನಾಡಲು ಅವಕಾಶ ನೀಡುತ್ತಿದ್ದೇನೆ. ಶ್ರೀ ಸಿ.ಟಿ.ರವಿಯವರೇ, ನೀವು ಮಾತನಾಡಿ. ಈಗ ನೀವು ಗಡಿಯಾರವನ್ನು ನೋಡಿ. ನಾನು ಅರ್ಧಗಂಟೆಗಿಂತ ಹೆಚ್ಚು ಸಮಯಾವಕಾಶವನ್ನು ಯಾರಿಗೂ ಕೊಡುವುದಿಲ್ಲ. ಮಾತನಾಡುವವರು ಬಹಳಷ್ಟು ಮಂದಿ ಇದ್ದಾರೆ. ಸಮಯ ಮುಗಿಯುವ ಮುನ್ನ ನಾನು ಬೆಲ್ ಅನ್ನು ಮಾಡುತ್ತೇನೆ; ನೀವು ನಿಮ್ಮ ಭಾಷಣವನ್ನು ಮುಗಿಸಬೇಕು.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಆಯವ್ಯಯದ ಮೇಲೆ ನಾನು ಮಾತನಾಡುವುದು ಇನ್ನು ಪೂರ್ಣಗೊಂಡಿಲ್ಲ; ಅವತ್ತಿನ ದಿನ ನಾನು ಅರ್ಧ ಮಾತನಾಡಿದ್ದೇನೆ. ಮೊನ್ನೆಯ ದಿನ ನಾನು ಮಾತನಾಡುತ್ತಿದ್ದೆನು; ಆಗ ಸದನವನ್ನು ಮುಂದೂಡಲಾಯಿತು.

**ಸಭಾಪತಿಯವರು:–** ಶ್ರೀ ಸಿ.ಟಿ.ರವಿ ಅವರದ್ದು ಮುಗಿಯಲಿ, ನಂತರದಲ್ಲಿ ನಿಮಗೆ ಅವಕಾಶವನ್ನು ನೀಡುತ್ತೇನೆ. ಶ್ರೀ ಸಿ.ಟಿ.ರವಿಯವರೇ, ಈಗ ಸಮಯ ಸಂಜೆ 4:40 ಆಗಿದ್ದು, ಸಂಜೆ 5:00 ಗಂಟೆಯವರೆಗೆ ನೀವು ಮಾತನಾಡಿ.

## ೮. ವಿತ್ತೀಯ ಕಾರ್ಯಕಲಾಪ

## 2026-27ನೇ ಸಾಲಿನ ಅಯವ್ಯಯದ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವುದು 17 ನೇ ಆಯವ್ಯಯವಾಗಿದೆ. ಇದು ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಒಂದು ದಾಖಲೆ ಆಗಿದೆ. ನನ್ನ observation ಪ್ರಕಾರ, ಇದರಲ್ಲಿ ಅವರು ಒಂದು ರೀತಿಯಾಗಿ ಅಂಕಿ-ಅಂಶಗಳ ಜುಗಲ್‌ಬಂದಿಯನ್ನು ನಡೆಸಿದ್ದಾರೆ. ಬಹುಶಃ ಖಾಲಿ ಚೆಂಬು ಹಿಡಿದುಕೊಂಡು, ಆಯವ್ಯಯದ ನಂತರ ಪ್ರತಿಪಕ್ಷಗಳು ಯಾಕೆ protest ಮಾಡಿದರು ಎನ್ನುವುದನ್ನು ಅರ್ಥಮಾಡಿಕೊಂಡರೆ, ಮಾನ್ಯ Treasury Bench ನವರಿಗೂ ಸಹ ಆಯವ್ಯಯದ ಸತ್ಯಾಸತ್ಯತೆ ಏನು ಎನ್ನುವುದು ಅರ್ಥವಾಗುತ್ತದೆ. ಇದು ಸಾಲದಲ್ಲಿ ಒಂದು ವಿಶೇಷವಾಗಿರುವ ದಾಖಲೆಯಾಗಿದೆ. ಆಯವ್ಯಯದ ಬಗ್ಗೆ ಒಬ್ಬರು ಕವನವೊಂದನ್ನು ಬರೆದಿದ್ದು, ಅದು ಈ ರೀತಿ ಇದೆ:

"ಸಾಲವೊಂದೆ ಸಿದ್ಧಿಯೇ; ಏನಿದು ಬಜೆಟ್ ಎಲವೋ ಮನುಜರೇ
ಸಾಲದ ಹೊರೆಯಲ್ಲಿ ಮುಳುಗಿದ ರಾಜ್ಯವಿದು
ಅಭಿವೃದ್ಧಿ ಶೂನ್ಯವಾಯಿತು ಈ ನಾಡಿನಲ್ಲಿ
ಸಮಸ್ಯೆಗಳ ಸಾಗರವೇ ನೋಡಬನ್ನಿರೋ

ಎತ್ತನೋಡಿದರತ್ತ ಬರೀ ಸಾಲದ ಮಾತು
ಹತ್ತಾರು ಯೋಜನೆಗೆ ಹಣವಿಲ್ಲದಂತಾಯಿತು
ಹಳೆಯ ಸಾಲ ತೀರಿಸಲು ಹೊಸ ಸಾಲ ಮಾಡುತ್ತಾ
ಜನರ ಬೆನ್ನಮೂಳೆ ಮುರಿಯುವಂತಾಯಿತು

ರಸ್ತೆ ಗುಂಡಿಗಳ ಹಬ್ಬ ಕುಡಿಯುವ ನೀರಿಗೆ ಹಾಹಾಕಾರ
ಬಡವರ ಬದುಕಿಗೆ ಇಲ್ಲವೋ ಇವರ ಬಳಿ ಆಧಾರ
ರೈತರ ಕಣ್ಣೀರು ಸುರಿಸುತ್ತಿದೆ ಈ ಬಜೆಟ್
ಖಜಾನೆಯ ಖಾಲಿ ಮಾಡಿ ಮೆರೆವ ಅಧಿಕಾರವ ನೋಡಿ

ಭರವಸೆಯ ಮಾತುಗಳು ಬರೀ ಗಾಳಿಯಲ್ಲಿ ಗೋಪುರ
ಪ್ರಗತಿಯ ಪಥ ಬಿಟ್ಟು ಹಿನ್ನೆಡೆಯ ಹಾದಿ ಇದು
ಜನರ ಹಿತವ ಮರೆತು ಸ್ವಾರ್ಥವ ತುಂಬಿಕೊಂಡರೋ
ಸಾಲಗಾರರನ್ನಾಗಿ ಮಾಡಿತು ಈ ಸರ್ಕಾರವು"

(ಮುಂದು)

(413)16-03-2026/4-40/bkp-md (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ(ಮುಂದು)**

ಯಾರೋ ಒಬ್ಬ ಸಾಮಾನ್ಯ ವ್ಯಕ್ತಿ ಈ ಒಂದು ಬಜೆಟ್‌ನ ನಂತರ ಅದರ ಬಗ್ಗೆ ತನ್ನ ಅಭಿಪ್ರಾಯವನ್ನು ವಾಚಕರವಾಣಿಯಲ್ಲಿ ಈ ಕವನದ ಮೂಲಕ ವ್ಯಕ್ತ ಮಾಡಿದ್ದಾರೆ. ಅವರು ಒಂದು ರಾಜಕೀಯ ಪಕ್ಷದವರು ಆಗಿರುವುದಿಲ್ಲ. ಅವರು ಪ್ರತಿಪಕ್ಷದವರೂ ಸಹ ಆಗಿರುವುದಿಲ್ಲ. ಅವರು ಒಬ್ಬ ಸಾಮಾನ್ಯ ಪ್ರಜೆಯಾಗಿದ್ದು, ತಮ್ಮ ಅಭಿಪ್ರಾಯವನ್ನು ಈ ರೀತಿಯಲ್ಲಿ ವ್ಯಕ್ತಪಡಿಸಿರುವುದನ್ನು ನಾವು ಗಮನಿಸಬಹುದಾಗಿದೆ. ಇನ್ನು ನಾವು ಹಿಂದಿನ ವರ್ಷದ ಬಜೆಟ್ ಅನ್ನು ಅವಲೋಕನ ಮಾಡಿದರೆ ಅದು ಆಗಿ ಸುಮಾರು 11 ತಿಂಗಳು ಆಗಿದೆ. ಇನ್ನು ಕಡೆಯ ಕೆಲವು ದಿನಗಳನ್ನು ಕಳೆದರೆ 12 ತಿಂಗಳು ಪೂರ್ಣವಾಗುತ್ತದೆ. ಈ ವರ್ಷದ ಹಣಕಾಸು ವರ್ಷವನ್ನು ಪೂರ್ಣಗೊಳಸುವಲ್ಲಿ ಕೆಲವೇ ದಿನಗಳು ಇರುವ ಸಂದರ್ಭದಲ್ಲಿ ಕಳೆದ ವರ್ಷದ ಬಜೆಟ್‌ನ ಅನುದಾನದ ಬಳಕೆಯಾಗಿರುವುದು ಶೇಕಡ 59.43 ರಷ್ಟು ಮಾತ್ರ. ಅಂದರೆ ಹತ್ತಿರ-ಹತ್ತಿರ 60% ಮಾತ್ರ. ಇನ್ನು 40% ನಷ್ಟು ಹಣ ವೆಚ್ಚವಾಗಿಲ್ಲ. ಕಳೆದ ವರ್ಷದ ಈ ಸಮಯಕ್ಕೆ ಹೋಲಿಸಿದರೆ ಸುಮಾರು ಶೇಕಡ ಮೂರುವರೆಯಷ್ಟು ಕಡಿಮೆ ವೆಚ್ಚ ಮಾಡಲಾಗಿದೆ. ಹಾಗೆಯೇ ನಾವು ಇನ್ನೂ ಹೆಚ್ಚಿನದಾಗಿ ನೋಡಿದರೆ ಇನ್ನು ಸಹ 1,31,272 ಕೋಟಿ ರೂಪಾಯಿಗಳನ್ನು ಕಳೆದ ವರ್ಷ ಬಜೆಟ್‌ನಲ್ಲಿ ಮೀಸಲಿಟ್ಟ ಹಣವನ್ನು ಖರ್ಚು ಮಾಡಬೇಕಾಗಿದೆ. ಇದು ಸಾಧ್ಯವೇ? ಇನ್ನು ಏನಾದರೂ ಕಳ್ಳ ಬಿಲ್ಲನ್ನು ಬರೆಯಬೇಕಷ್ಟೆ. ಸುಳ್ಳು ಲೆಕ್ಕವನ್ನು ಬರೆದು ತೋರಿಸಬೇಕಷ್ಟೆ. ವಾಸ್ತವಿಕ ನೆಲೆಯಲ್ಲಿ ಇನ್ನು ಕೆಲವೇ ದಿನಗಳು ಇರಬೇಕಾದರೆ ಕಳೆದ ವರ್ಷ ಮೀಸಲಿಟ್ಟ ಬಜೆಟ್ ಅಂದರೆ, ಇನ್ನು ಸಹ 1,31,272 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿಕ್ಕೆ ಇವರಿಗೆ ಸಾಧ್ಯವಿದೆಯೇ ಎಂದು ಹೇಳಿದರೆ, ಅದು ಸಾಧ್ಯವಿಲ್ಲದ ಮಾತು ಎಂದು ಅನಿಸುತ್ತದೆ. ಈ ವರ್ಷ ಒದಗಿಸಿದಂತಹ ವೆಚ್ಚದಲ್ಲಿ 3,39,227 ಕೋಟಿ ರೂಪಾಯಿಗಳಲ್ಲಿ ಜನವರಿ ಅಂತ್ಯಕ್ಕೆ 2,44,465 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಸಹ 94,761 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿದೆ. ಇನ್ನು ಬಿಡುಗಡೆಯಾದ ಹಣದಲ್ಲಿ 2,44,465 ಕೋಟಿ ರೂಪಾಯಿಗಳಲ್ಲಿ 2,07,954 ಕೋಟಿ ರೂಪಾಯಿಗಳನ್ನು ಮಾತ್ರ ವಿವಿಧ ಇಲಾಖೆಗಳು ಖರ್ಚು ಮಾಡಿವೆ. ಇನ್ನು ಬಿಡುಗಡೆಯಾದ ಹಣದಲ್ಲಿ 36,510 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿಲ್ಲವೆನ್ನುವುದು ನಮಗೆ ಸಿಕ್ಕಿರುವಂತಹ ಮಾಹಿತಿಯಾಗಿದೆ. ಅಂದರೆ, ಇನ್ನು ಇರುವಂತಹ 14-15 ದಿನಗಳಲ್ಲಿ ಬಜೆಟ್‌ನಲ್ಲಿ ಮೀಸಲಿಟ್ಟಂತಹ ಮೊತ್ತದಲ್ಲಿ ಶೇಕಡ 40 ರಷ್ಟು ಹಣವನ್ನು ವೆಚ್ಚ ಮಾಡುವುದಕ್ಕೆ ಸಾಧ್ಯವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇನ್ನು ಅನುದಾನ ಬಳಕೆಯಲ್ಲಿ ಹಿಂದೆ ಬಿದ್ದಿರುವಂತಹ ಇಲಾಖೆಗಳ ಬಗ್ಗೆ ಹೇಳುವುದಾದರೆ ಮಾಹಿತಿ ತಂತ್ರಜ್ಞಾನ ಇಲಾಖೆಗೆ ಹಂಚಿಕೆಯಾಗಿರುವ ಹಣ 1,074 ಕೋಟಿ ರೂಪಾಯಿಗಳು. ಅದರಲ್ಲಿ ವೆಚ್ಚವಾಗಿರುವುದು 326 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಶೇಕಡ 30 ರಷ್ಟು ಹಣವನ್ನು ಮಾತ್ರ ಬಳಕೆ ಮಾಡಿರುವುದಾಗಿದೆ. ಇನ್ನು 70% ರಷ್ಟು ಹಣದ ಬಳಕೆಯನ್ನು ಮಾಡಿಕೊಂಡಿರುವುದಿಲ್ಲ.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ಅನುದಾನ ಒದಗಿಸಿರುವುದು 26,728 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 8,893 ಕೋಟಿ ರೂಪಾಯಿಗಳು ಮಾತ್ರ.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ಅನುದಾನ ಒದಗಿಸಿರುವುದು 26,728 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಖರ್ಚಾಗಿರುವುದು 8,893 ಕೋಟಿ ರೂಪಾಯಿಗಳು ಮಾತ್ರ. ಅಂದರೆ, 33% ರಷ್ಟು ಮಾತ್ರ ವೆಚ್ಚ ಆಗಿರುವಂತಹದ್ದಾಗಿರುತ್ತದೆ.

ಮೀನುಗಾರಿಕೆ ಇಲಾಖೆಗೆ ಅನುದಾನ ಒದಗಿಸಿರುವುದು 441 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 187 ಕೋಟಿ ರೂಪಾಯಿಗಳು ಮಾತ್ರ. ಅಂದರೆ, 43% ರಷ್ಟು ಮಾತ್ರ ವೆಚ್ಚ ಆಗಿರುವಂತಹದ್ದಾಗಿರುತ್ತದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಅನುದಾನ ಒದಗಿಸಿರುವುದು 34,915 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 15,106 ಕೋಟಿ ರೂಪಾಯಿಗಳು ಮಾತ್ರ. ಅಂದರೆ, 43% ರಷ್ಟು ಮಾತ್ರ ವೆಚ್ಚ ಆಗಿರುವಂತಹದ್ದಾಗಿರುತ್ತದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಅನುದಾನ ಒದಗಿಸಿರುವುದು 4,327 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 1,907 ಕೋಟಿ ರೂಪಾಯಿಗಳು ಮಾತ್ರ. ಅಂದರೆ, 44% ರಷ್ಟು ಮಾತ್ರ ವೆಚ್ಚ ಆಗಿರುವಂತಹದ್ದಾಗಿರುತ್ತದೆ.

ಸಣ್ಣ ನೀರಾವರಿ ಇಲಾಖೆಗೆ ಅನುದಾನ ಒದಗಿಸಿರುವುದು 3,329 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 1,534 ಕೋಟಿ ರೂಪಾಯಿಗಳು ಮಾತ್ರ.

ಸಣ್ಣ ಕೈಗಾರಿಕೆಗಳ ಇಲಾಖೆಗೆ ಅನುದಾನ ಒದಗಿಸಿರುವುದು 1,422 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 662 ಕೋಟಿ ರೂಪಾಯಿಗಳು ಮಾತ್ರ. ಅಂದರೆ, 47% ರಷ್ಟು ಮಾತ್ರ ವೆಚ್ಚ ಆಗಿರುವಂತಹದ್ದಾಗಿರುತ್ತದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಅನುದಾನ ಒದಗಿಸಿರುವುದು 4,395 ಕೋಟಿ ರೂಪಾಯಿಗಳು. ಕಳೆದ ಜನವರಿ 2026 ರವರೆಗೆ ಅದರಲ್ಲಿ ಖರ್ಚಾಗಿರುವುದು 2,087 ಕೋಟಿ ರೂಪಾಯಿಗಳು ಮಾತ್ರ. ಅಂದರೆ, 47% ರಷ್ಟು ಮಾತ್ರ ವೆಚ್ಚ ಆಗಿರುವಂತಹದ್ದಾಗಿರುತ್ತದೆ.

ಪ್ರವಾಸೋದ್ಯಮ ಇಲಾಖೆಯಲ್ಲಿ 48% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಜಲಸಂಪನ್ಮೂಲ ಇಲಾಖೆಯಲ್ಲಿ 49% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಜಲಸಂಪನ್ಮೂಲ ಇಲಾಖೆಯಲ್ಲಿ 49% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಯುವಸಬಲೀಕರಣ ಇಲಾಖೆಯಲ್ಲಿ 51% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಲೋಕೋಪಯೋಗಿ ಇಲಾಖೆಯಲ್ಲಿ 54% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ 55% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಅರಣ್ಯ ಇಲಾಖೆಯಲ್ಲಿ 55% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ 57% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಪರಿಶಿಷ್ಟ ಪಂಗಡಗಳ ಇಲಾಖೆಯಲ್ಲಿ 58% ರಷ್ಟು ಹಣ ಕಳೆದ ಜನವರಿ 2026 ರವರೆಗೆ ಖರ್ಚಾಗಿರುತ್ತದೆ.

ಈ ರೀತಿ ಇದುವರೆವಿಗೂ ಖರ್ಚಾಗಿರುವ ಒಟ್ಟು ಹಣ 59%ರಷ್ಟು ಮಾತ್ರ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ಪೀಠದಲ್ಲಿ ಉಪಸ್ಥಿತರಾದರು)**

ಮತ್ತೆ, ಆದಾಯ ಸಂಗ್ರಹದಲ್ಲಿಯೂ ಕೂಡ ಈ ಒಂದು ಸರ್ಕಾರ ಹಿಂದೆ ಬಿದ್ದಿರುವುದನ್ನು ನೀವು ಗಮನಿಸಬಹುದಾಗಿದೆ. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 1,20,000 ಕೋಟಿ ರೂಪಾಯಿಗಳ ನಮ್ಮ ಗುರಿ ಇದ್ದುದು. ಆದರೆ, ಅಲ್ಲಿ ಇದುವರೆವಿಗೂ ಸ್ವೀಕೃತಿಯಾಗಿರುವುದು 1,00,462 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಇನ್ನು 19,538 ಕೋಟಿ ರೂಪಾಯಿಗಳ ಗುರಿಯ ಸಾಧನೆಯನ್ನು ಮಾಡಿರುವುದಿಲ್ಲ. ಆದರೆ, ಈ ವರ್ಷದ ಹೊಸ ಬಜೆಟ್‌ನಲ್ಲಿ ಗುರಿ ಇಟ್ಟುಕೊಂಡಿರುವುದು 1,25,000 ಕೋಟಿ ರೂಪಾಯಿಗಳು. How can it be possible? ಇದು ಸಾಧ್ಯವೇ ಇಲ್ಲ. ಏಕೆಂದರೆ, ಹಿಂದಿನ ಗುರಿಯನ್ನೇ ತಲುಪದೇ ಅದಕ್ಕಿಂತ 5 ಸಾವಿರ ಕೋಟಿ ರೂಪಾಯಿಗಳ ಹೆಚ್ಚಿನ ಗುರಿಯನ್ನು ಇಟ್ಟುಕೊಂಡರೆ ತಲುಪಲಿಕ್ಕೆ ಸಾಧ್ಯವೇ? ಅಲ್ಲಿ ಗುರಿ ಮೀರಿ ಸಾಧನೆ ಎನ್ನುವುದು ಯಾವ ಇಲಾಖೆಯಲ್ಲಿ ಇದೆ ಎನ್ನುವುದನ್ನು ನಾನು ಹುಡುಕಾಡುತ್ತಿದ್ದೇನೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಗುರಿ ಇದ್ದುದು 28,000 ಕೋಟಿ ರೂಪಾಯಿಗಳು. ಸ್ವೀಕೃತಿಯಾಗಿರುವುದು 22,629 ಕೋಟಿ ರೂಪಾಯಿಗಳು. ಇನ್ನು ಸಹ 5,371 ಕೋಟಿ ರೂಪಾಯಿಗಳ ಹಿಂದೆ ಇದ್ದೇವೆ. ಈ ವರ್ಷದ ಹೊಸ ಬಜೆಟ್‌ನಲ್ಲಿ ನಮ್ಮ ಗುರಿ 29,000 ಕೋಟಿ ರೂಪಾಯಿಗಳು.

ಮತ್ತೆ ಮೋಟಾರ್ ಮತ್ತು ವಾಹನ ತೆರಿಗೆ ಇಲಾಖೆಯಲ್ಲಿ 15,000 ಕೋಟಿ ರೂಪಾಯಿಗಳ ಗುರಿಯನ್ನು ಇಟ್ಟುಕೊಂಡಿದ್ದು, ಸ್ವೀಕೃತಿಯಾಗಿರುವ ಹಣ 11,630 ಕೋಟಿ ರೂಪಾಯಿಗಳು. 3,370 ಕೋಟಿ ರೂಪಾಯಿಗಳಷ್ಟು ಗುರಿಯಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಈ ರೀತಿಯಲ್ಲಿ ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆಯು ಸೇರಿದಂತೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಹಿಂದೆ ಬಿದ್ದಿದ್ದೇವೆ. ಇದರಲ್ಲಿ ನಾವು ಇದನ್ನು ಕಳೆದ ವರ್ಷದ ಬಜೆಟ್‌ಗೆ ಹೋಲಿಸಿದರೆ ನಮ್ಮ ಗುರಿ ಇದ್ದುದು, 2,12,000 ಕೋಟಿ ರೂಪಾಯಿಗಳ ಆದಾಯ ಸಂಗ್ರಹ ಮಾಡಬೇಕೆಂದು ಹೇಳಿದ್ದು, ಇದುವರೆವಿಗೂ ಸಾಧನೆಯಾಗಿರುವುದು 1,79,067 ಕೋಟಿ ರೂಪಾಯಿಗಳು. ಇನ್ನು ಸಹ 32,933 ಕೋಟಿ ರೂಪಾಯಿಗಳಷ್ಟು ಸಾಧನೆ ಮಾಡಲಿಕ್ಕೆ ಸಾಧ್ಯವಾಗಿರುವುದಿಲ್ಲ.

ಅಂದರೆ, ಇದನ್ನು ನೀವು ಸಾಧನೆ ಮಾಡಲಿಕ್ಕೆ ಆಗದೇ, ಈ ವರ್ಷದ ಬಜೆಟ್‌ನಲ್ಲಿ 2,12,000 ಕೋಟಿ ರೂಪಾಯಿಗಳಿಂದ 2,25,000 ಕೋಟಿ ರೂಪಾಯಿಗಳಿಗೆ ಸಂಗ್ರಹ ಮಾಡಲು ನಾವು ಗುರಿಯನ್ನು ನಿಗದಿ ಮಾಡಿಕೊಂಡರೆ ನಮಗೆ ಅದನ್ನು ಸಾಧಿಸಲಿಕ್ಕೆ ಸಾಧ್ಯವಾಗುತ್ತದೆಯೇ? ಇನ್ನು ಆಧ್ಯತಾ ವಲಯದಲ್ಲಿಯೂ ಕೂಡ ಈ ಸರ್ಕಾರ run out ಆಗಿದೆ. Gross value added ಹಿಂದಿನ ಬಿ.ಜೆ.ಪಿ.ಸರ್ಕಾರದ ಅವಧಿಯಲ್ಲಿ ಕೃಷಿ ವಲಯದಲ್ಲಿ 17% ನಷ್ಟು ಪ್ರಗತಿಯಾಗಿತ್ತು. ಅದರಲ್ಲಿ ನಿರಂತರವಾಗಿ ಹೂಡಿಕೆಯನ್ನು ಮಾಡಬೇಕಾಗುತ್ತದೆ. ನೀರಾವರಿಯನ್ನು ವಿಸ್ತರಣೆ ಮಾಡಬೇಕಾಗುತ್ತದೆ. ರೈತರಿಗೆ ಬೆಂಬಲ ಕೊಡತಕ್ಕಂತಹ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. "ಕಿಸಾನ್ ಸನ್ಮಾನ್" ಯೋಜನೆಯ ಸಂಬಂಧ ಕೇಂದ್ರ ಸರ್ಕಾರ ಕೊಡುತ್ತಿದ್ದ ಹಣಕ್ಕೆ ರಾಜ್ಯ ಸರ್ಕಾರ 4,000 ರೂ.ಗಳನ್ನು ಸೇರಿಸಿ ಕೊಡುತ್ತಿತ್ತು. ಆದರೆ, ಈಗ ಕೇಂದ್ರ ಸರ್ಕಾರ ಆ ಒಂದು "ಕಿಸಾನ್ ಸನ್ಮಾನ್" ಯೋಜನೆಗೆ ಕೇಂದ್ರ ಸರ್ಕಾರ ಮಾತ್ರ 6,000 ರೂಪಾಯಿಗಳನ್ನು ಕೊಡುತ್ತಿದೆ. ನಾವು ರಾಜ್ಯ ಸರ್ಕಾರದಿಂದ ಕೊಡುತ್ತಿದ್ದ 4,000 ರೂಪಾಯಿಗಳನ್ನು ಈ ಒಂದು ಸರ್ಕಾರ ಬಂದ ಮೇಲೆ ಕಟ್ ಮಾಡಿದೆ. ಅದರ ಪರಿಣಾಮ ಏನು ಎಂದರೆ ಇದರ ಬೆಳವಣಿಗೆ 17% ಇದ್ದುದು ಈಗ ಅದು 10.4%ಕ್ಕೆ ಬೆಳವಣಿಗೆಯ ದರ ಇಳಿದಿದೆ. ಇದು ತೀವ್ರ ಕುಸಿತ ಕಂಡಿರುವುದನ್ನು ನಾವು ಕಾಣಬಹುದಾಗಿದೆ. ಅಂದರೆ, ಈ ಸರ್ಕಾರ ಬಂದ ಮೇಲೆ 65%ರಷ್ಟು ಕಡಿತವಾಗಿದೆ.

ರೈತರ ಆತ್ಮಹತ್ಯೆಯಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ಮೊದಲನೆಯ ಸ್ಥಾನ ಮಹಾರಾಷ್ಟ್ರ ಸರ್ಕಾರವಾದರೆ, ಎರಡನೆಯ ಸ್ಥಾನ ಕರ್ನಾಟಕವಾಗಿದೆ. 3 ವರ್ಷಗಳ ಅವಧಿಯಲ್ಲಿ ಸರ್ಕಾರಿ ಅಂಕಿ-ಅಂಶಗಳ ಪ್ರಕಾರ 2,809 ರೈತರು ಆತ್ಮಹತ್ಯೆಗೆ ಶರಣಾಗತರಾಗಿದ್ದಾರೆ. ಅಂದರೆ, National Crime Record Bureau ವರದಿ ಪ್ರಕಾರ ನಾವು ಎರಡನೆಯ ಸ್ಥಾನದಲ್ಲಿದ್ದೇವೆ. ಈ ರೈತರ ಆತ್ಮಹತ್ಯೆಗೆ ಕಾರಣ ಹುಡುಕುವುದರೊಳಗೆ ಅಥವಾ ಅದಕ್ಕೆ ಸಾಮಾಜಿಕ ಕಾರಣವೋ ಅಥವಾ ಆರ್ಥಿಕ ಕಾರಣವೋ ಅಥವಾ ಕೌಟುಂಬಿಕ ಕಾರಣವೋ ಏನು ಕಾರಣವೆಂದು ಹೇಳಿ ಕಾರಣ ಹುಡುಕುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಮತ್ತೆ ರೈತರ ಅತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗಾದರೂ ಪೂರ್ಣ ಪರಿಹಾರ ಕೊಟ್ಟಿದ್ದಾರೆಯೇ ಎಂದು ಕೇಳಿದರೆ 2,809 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ ಇದುವರೆವಿಗೆ ಪರಿಹಾರ ಕೊಟ್ಟಿರುವುದು 2,179 ಜನರಿಗೆ ಮಾತ್ರ ಪರಿಹಾರವನ್ನು ಕೊಟ್ಟಿರುವುದಾಗಿದೆ. 2023-24 ರಲ್ಲಿ 1,254 ಜನ ರೈತರು ಆತ್ಮಹತ್ಯೆ ಮಾಡಿಕೊಂಡರೆ 2024-25 ರಲ್ಲಿ 1,178 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2025-26ರ ನವೆಂಬರ್‌ವರೆಗೆ ನಮ್ಮಲ್ಲಿ ಇರತಕ್ಕಂತಹ ದಾಖಲೆಗಳ ಪ್ರಕಾರ 300 ಕ್ಕೂ ಹೆಚ್ಚು ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಏತಕ್ಕೆ ಅನ್ನದಾತ ರೈತರು ಅತ್ಮಹತ್ಯೆ ಮಾಡಿಕೊಂಡಿದ್ದಾರೆ? ಅನ್ನದಾತ ಬದುಕಿನ ಭರವಸೆಯನ್ನು ಏತಕ್ಕೆ ಕಳೆದುಕೊಳ್ಳುತ್ತಿದ್ದಾನೆ. ಅದಕ್ಕೆ ಏನಾದರೂ ಕಾರಣ ಹುಡುಕುವಂತಹ ಕೆಲಸ ಈ ಸರ್ಕಾರದ ಕಡೆಯಿಂದ ನಡೆದಿದೆ ಎನ್ನುವುದಾದರೆ ರೈತರ ವಿಷಯದಲ್ಲಿ ಅಸಡ್ಡೆ ವಿಷಯ ಮಾತ್ರ ಕಾಣುತ್ತಿದೆ. ಆ ರೀತಿಯ ಯಾವುದೇ ಪ್ರಯತ್ನ ನಡೆದಿಲ್ಲ ಎನ್ನುವುದನ್ನು

ಬೇಸರದಿಂದ ಹೇಳಬೇಕಾಗುತ್ತದೆ. ಬಜೆಟ್‌ನಲ್ಲಿಯಾದರೂ ಕೂಡ ಇದಕ್ಕೆ ಪರಿಹಾರ ರೂಪಿಸುವಂತಹ ಯೋಜನೆಗಳನ್ನು ತಂದಿದ್ದಾರೆಯೇ ಎಂದು ಹೇಳಿದರೆ ಆ ರೀತಿಯ ಪರಿಹಾರ ರೂಪಿಸುವಂತಹ ಯಾವುದೇ ಯೋಜನೆಯನ್ನು ಬಜೆಟ್ನಲ್ಲಿಯೂ ತಾರದೇ ಇರುವುದನ್ನು ನಾವು ಕಾಣಬಹುದಾಗಿದೆ.

(ಮುಂದು)

(414) 16.03.2026 04.50 ಎಸ್‌ವಿ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-**

ಪ್ರಮುಖ ನೀರಾವರಿ ಯೋಜನೆಗಳಿಗೆ ಮೀಸಲಿಟ್ಟಿದ್ದ ಹಣವನ್ನು ಕೂಡ ಕಡಿತ ಮಾಡಿರುವುದನ್ನು ನಾವು ಗಮನಿಸಬಹುದು. ಅಂದರೆ ಸಣ್ಣ ನೀರಾವರಿ ಇಲಾಖೆಯ ಯೋಜನೆಗಳಿಗೆ ರೂ.598 ಕೋಟಿಗಳಿಂದ ರೂ.224 ಕೋಟಿಗಳಿಗೆ ಈಗ ಇಳಿಕೆ ಮಾಡಲಾಗಿದೆ. ಬಿ.ಜೆ.ಪಿ. ಸರ್ಕಾರವಿದ್ದಾಗ ಎಷ್ಟು ಇಟ್ಟಿತ್ತೋ ಅದರ 1/3 ರಷ್ಟು ಇಟ್ಟಿರುವುದನ್ನು ನಾವು ಗಮನಿಸಬಹುದು.

ಇನ್ನು ದಾಖಲೆಗಳ ಬಗ್ಗೆ ಹೇಳುವುದಾದರೆ ಎಷ್ಟು ವರ್ಷ ಇದ್ದೇವೆ ಎನ್ನುವುದು ಪ್ರಮುಖ ದಾಖಲೆಯಲ್ಲ. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಮ್ಮ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದರು. ಅವರ ಕಾಲಘಟ್ಟದಲ್ಲಿ ಮಾಡಿರುವ ಸಾಧನೆಗಳು ಇಂದಿಗೂ ಅಜರಾಮರವಾಗಿವೆ. ಎಷ್ಟೋ ಜನ ರಾಜ-ಮಹಾರಾಜರು ಆಳಿ ಹೋಗಿದ್ದಾರೆ. ಅವರು ಯಾರೂ ಕೂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರೀತಿ ಹೆಸರನ್ನು ಉಳಿಸಿಕೊಂಡಿಲ್ಲ. ನಾವು ಎಷ್ಟು ದಿನ ಇರುತ್ತೇವೆ ಎನ್ನುವುದು ಮುಖ್ಯವೋ, ಇದ್ದಾಗ ಏನು ಮಾಡುತ್ತೇವೆ ಎನ್ನುವುದು ಮುಖ್ಯವೋ? ಮುಖ್ಯಮಂತ್ರಿಗಳು 17 ಆಯವ್ಯಯಗಳನ್ನು ಮಂಡಿಸಿ ದಾಖಲೆ ಮಾಡಿದ್ದಾರೆ. ಆದರೆ ಆ 17 ಬಜೆಟ್‌ಗಳಲ್ಲಿ ಸಾರ್ಥಕ ಪಡುವಂಥ, ರಾಜ್ಯ ಹೆಮ್ಮೆ ಪಡುವಂಥ ಅಥವಾ ಇನ್ನು 50-100 ವರ್ಷಗಳ ನಂತರ ನೆನಪಿನಲ್ಲಿ ಉಳಿಯುವಂಥ ಶಾಶ್ವತವಾಗಿರುವಂಥ ಯಾವುದಾದರೂ ಯೋಜನೆಯನ್ನು ತಂದಿದ್ದಾರೆಯೇ? ಜನರ ಬದುಕನ್ನು ಹಸನು ಮಾಡುವಂಥ ಯಾವುದಾದರೂ ಯೋಜನೆಯನ್ನು ತಂದಿದ್ದಾರೆಯೇ ಎಂದರೆ ಅದು ಶೂನ್ಯ. ಆ ರೀತಿಯಾದ ಯಾವುದೇ ಯೋಜನೆಯನ್ನು ತರದೆ ಇರುವುದನ್ನು ನಾವು ಗಮನಿಸಬಹುದು.

ಇನ್ನು ರಾಜಕೀಯವಾಗಿ ಮರುಹುಟ್ಟನ್ನು ಪಡೆಯಬೇಕಾದರೆ ಅಥವಾ ರಾಜಕೀಯವಾಗಿ ತಮ್ಮ ಸಾಮರ್ಥ್ಯವನ್ನು ಗಳಿಸಿ ಕೊಳ್ಳಬೇಕಾದರೆ ಕರ್ನಾಟಕ ರಾಜ್ಯದ ರಾಜಕಾರಣದ ಇತಿಹಾಸದಲ್ಲಿ ಅಹಿಂದ ಎನ್ನುವಂಥ ಪದ ಪ್ರಯೋಗವನ್ನು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಿದರು. ಅಲ್ಪಸಂಖ್ಯಾತ, ಹಿಂದುಳಿದ, ದಲಿತ – ಇವರನ್ನು ಸಂಘಟಿಸಿ ನಾವು ರಾಜಕೀಯ ಧ್ರುವೀಕರಣ ಮಾಡುತ್ತೇವೆಂದು ಹೇಳಿದರು. ಪದವೂ ಒಂದು ರೀತಿ ಹೊಸದಿತ್ತು. ಅದರಲ್ಲಿ ಒಂದಷ್ಟು ಸಾಫಲ್ಯವನ್ನೂ ಕಂಡರು. ರಾಜಕೀಯ ಅಧಿಕಾರವೂ ದೊರೆಯಿತು. ಅವರ ಒಂದು ರಾಜಕೀಯ ಏಳಿಗೆಗೆ ಅಹಿಂದ ವರ್ಗ ಮೆಟ್ಟಿಲಾಯಿತು, ಏಣಿಯಾಯಿತು. ಅಹಿಂದ ವರ್ಗಕ್ಕೆ ಬಜೆಟ್‌ನಲ್ಲಿ ಏನಾದರೂ ಸಹಾಯ ಸಿಕ್ಕಿತೇ ಎಂದು ಕೇಳಿದರೆ ಇಲ್ಲ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ 2022-23ರಲ್ಲಿ ರೂ.190 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಳೆದ ವರ್ಷ ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.50 ಕೋಟಿ. ಶೇ.73 ಕಡಿತ. ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.100 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.25 ಕೋಟಿ. ಶೇ.75 ಕಡಿತ. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.100 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.30 ಕೋಟಿ. ಶೇ.70 ಕಡಿತ. ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.60 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.30 ಕೋಟಿ. ಶೇ.50 ಕಡಿತ. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.25 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ. 6.50 ಕೋಟಿ. ಶೇ.74 ಕಡಿತ.

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ.. ಮಾನ್ಯ ಸಭಾಪತಿಯವರೇ, ತಾವು ಯಾವಾಗಲೂ ಅಂಬಿಗರ ಚೌಡಯ್ಯನವರನ್ನು ನೆನಪಿಸಿಕೊಳ್ಳುತ್ತಿರುತ್ತೀರಿ. ಈಗ ತಾವು ಪೀಠದಲ್ಲಿದ್ದೀರಿ. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.15 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.5 ಕೋಟಿ. ಶೇ.66 ಕಡಿತ. ಸವಿತಾ ಸಮಾಜ, ಅತ್ಯಂತ ನೋವನ್ನುಂಡಂಥ ಹಿಂದುಳಿದ ಸಮಾಜ. ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.10 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.2 ಕೋಟಿ. ತಾವು ನ್ಯಾಯಪೀಠದಲ್ಲಿದ್ದೀರಿ. ನಾನು ಈ ಬಜೆಟ್‌ನಲ್ಲಿದ್ದಂಥ ವಾಸ್ತವಿಕ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆ. ಕರ್ನಾಟಕ ಅಲೆಮಾರಿ ಹಾಗೂ ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಬಿ.ಜೆ.ಪಿ. ಸರ್ಕಾರವಿದ್ದಾಗ ರೂ.10 ಕೋಟಿ ಅನುದಾನವನ್ನು ಕೊಟ್ಟಿತ್ತು. ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದು ರೂ.2.50 ಕೋಟಿ. ಈಗ ಹೇಳಿ. ಇದನ್ನು ಸಾಮಾಜಿಕ ನ್ಯಾಯ ಎಂದು ಕರೆಯಲಾಗುತ್ತದೆಯೇ? ಸಾಮಾಜಿಕ ಅನ್ಯಾಯ ಎಂದು ಕರೆಯಬೇಕೆ? ಸಭಾಪತಿ ಪೀಠದಲ್ಲಿ ಕುಳಿತಿರುವ ತಾವೇ ಹೇಳಬೇಕು. ಅಂದರೆ ಹಿಂದುಳಿದ ವರ್ಗಗಳ ವಿವಿಧ ನಿಗಮಗಳಿಗೆ 75ರಷ್ಟು ಅನುದಾನವನ್ನು ಕಡಿತಗೊಳಿಸಿ ನನ್ನದು ಸಾಮಾಜಿಕ ನ್ಯಾಯ ಎಂದು ಹೇಳಿದರೆ ಯಾರು ಮೆಚ್ಚುತ್ತಾರೆ? ಆತ್ಮವಂಚನೆಯಾಗುವುದಿಲ್ಲವೆ? ಸಾಮಾಜಿಕ ಅನ್ಯಾಯವಲ್ಲವೆ? ಹಿಂದುಳಿದ ವರ್ಗಗಳ ಮತ ಬ್ಯಾಂಕ್ ಅನ್ನು ಕ್ರೋಢೀಕರಿಸಿ ರಾಜಕೀಯ ಲಾಭ ಪಡೆದಂಥ ಮಾನ್ಯ ಮುಖ್ಯಮಂತ್ರಿಗಳು ಹಿಂದುಳಿದ ವರ್ಗದವರಿಗೆ ಅನ್ಯಾಯವನ್ನು ಮಾಡಿದ್ದಾರೆ. ಇದು ಸಾಮಾಜಿಕ ಅನ್ಯಾಯವೆಂದು ಹೇಳಬಯಸುತ್ತೇನೆ.

ಇನ್ನು ಮೀನುಗಾರಿಕೆ ಎನ್ನುವುದು ಸಾವಿರಾರು ಜನರಿಗೆ ಉದ್ಯೋಗ ಕೊಡುವ ವಲಯ. ಆ ಮೀನುಗಾರರಿಗೆ ರೂ.463 ಕೋಟಿಯಿಂದ ರೂ.425 ಕೋಟಿಗೆ ಇಳಿಕೆ ಮಾಡಲಾಗಿದೆ. ಇವರು 2025-26 ರಲ್ಲಿ ರೂ.463 ಕೋಟಿ ಕೊಟ್ಟರೆ ಹೊಸ ಬಜೆಟ್‌ನಲ್ಲಿ ರೂ.425 ಕೋಟಿಗೆ ಇಳಿಕೆ. ಹಣದುಬ್ಬರವಿದೆ. ಆದ್ದರಿಂದ ಕಡಿತಗೊಳಿಸುವಂಥ

ಕೆಲಸ ಮಾಡಿದ್ದಾರೆ. ಅಂದರೆ ಇದನ್ನು ಹೇಗೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಆಗುತ್ತದೆ ಹೇಳಿ. ಕೈಗಾರಿಕೆ ಬೆಳವಣಿಗೆ ದರ 2023-24ರಲ್ಲಿ ಶೇ.11 ಇದ್ದದ್ದು ಈಗ ಶೇ.8.1ಕ್ಕೆ ಇಳಿದಿದೆ. ಶೇ.11.4 ಇದ್ದದ್ದು, ಶೇ.8.1ಕ್ಕೆ ಕೈಗಾರಿಕಾ ಬೆಳವಣಿಗೆ ದರ ಇಳಿದಿದೆ. ಅಂದರೆ ಇದನ್ನು ನೀವು ಯಾವ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯ?

ಶಕ್ತಿ ಯೋಜನೆಯನ್ನು ತಂದಿದ್ದಾರೆ. ಆ ಶಕ್ತಿ ಯೋಜನೆ ಸಾರಿಗೆ ಇಲಾಖೆಯನ್ನು ನಿಶ್ಯಕ್ತಿಗೊಳಿಸಿ ಬಿಟ್ಟಿದೆ. ಶಕ್ತಿ ಯೋಜನೆ ಒಳ್ಳೆಯದು. ಆದರೆ ಸಾರಿಗೆ ಇಲಾಖೆಗೆ ಅದು ನಿಶ್ಯಕ್ತಿಯನ್ನು ತಂದು ಬಿಟ್ಟಿದೆ. ಸಾರಿಗೆ ಸಂಸ್ಥೆಗೆ ಅದು ನಿಶ್ಯಕ್ತಿಯ ಯೋಜನೆಯಾಗಿದೆ. ಏಕೆಂದರೆ ಕೆ.ಎಸ್.ಆರ್.ಟಿ.ಸಿ.ಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿ ರೂ.452 ಕೋಟಿ. ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿ ರೂ. 194 ಕೋಟಿ. ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿ ರೂ.275 ಕೋಟಿ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿ ರೂ.204 ಕೋಟಿ. ಹೀಗೆ ವಿವಿಧ ಸಾರಿಗೆ ಸಂಸ್ಥೆಗಳಿಗೆ ರೂ.4220 ಕೋಟಿಗಳನ್ನು ಸರ್ಕಾರ ಬಾಕಿ ಉಳಿಸಿಕೊಂಡಿದೆ. ಸಾರಿಗೆ ಸಂಸ್ಥೆಯೇ ನಿಶ್ಯಕ್ತಿಯಾದರೆ ಬಸ್ ದಾರಿಯಲ್ಲಿ ಕೆಟ್ಟು ನಿಲ್ಲದೆ ಇನ್ನೆಲ್ಲಿ ನಿಲ್ಲುತ್ತವೆ? ಹೋಗುತ್ತಿರುವಾಗಲೇ ಬೆಂಕಿ ಹೊತ್ತಿಕೊಳ್ಳುತ್ತದೆ. ಉಚಿತ ಬಸ್ ಪ್ರಯಾಣ ಎಂದು ಹೋಗುವವರೆಲ್ಲಾ ಕಚ್ಚೆಯ ಮಾದರಿಯಲ್ಲಿ ಸೀರೆಯನ್ನು ಕಟ್ಟಿ ಬಸ್‌ಗಳನ್ನು ತಳ್ಳುವ ಪರಿಸ್ಥಿತಿ ಬಂದುಬಿಟ್ಟಿದೆ. ಇದರಲ್ಲಿ ನಾವು ಗಮನಿಸಬಹುದಾಗಿರುವುದೇನೆಂದರೆ...

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ರವಿಯವರೆ, ಒಂದು ನಿಮಿಷ yield ಆಗುತ್ತೀರಾ? ಹಾಗಾದರೆ ಶಕ್ತಿ ಯೋಜನೆಯನ್ನು ನಿಲ್ಲಿಸಬೇಕೆ? ಅದು ಕೂಡ ಹೇಳಿಬಿಡಿ. ಶಕ್ತಿ ಯೋಜನೆಯನ್ನು ನಿಲ್ಲಿಸಿಬಿಡಿ ಎಂದು ಹೇಳಿಬಿಡಿ. ಅದನ್ನು ಹೇಳುವಂಥ ಧೈರ್ಯ ನಿಮಗಿದೆಯೇ? ಸಮಸ್ಯೆ ಇರಬಹುದು, ಆದರೆ ನೀವು ಮಾನಸಿಕವಾಗಿ ತಯಾರಾಗಿರಬೇಕು. ಇಷ್ಟೆಲ್ಲಾ ಟೀಕೆ ಮಾಡುವವರು ನೀವು, ಧೈರ್ಯವಿದ್ದರೆ ಆ ಕಾರ್ಯಕ್ರಮ ನಿಲ್ಲಿಸಿಬಿಡಿ ಎಂದು ಹೇಳಿಬಿಡಿ.

**ಶ್ರೀ ಎನ್. ರವಿಕುಮಾರ್:-** ಶಕ್ತಿ ಯೋಜನೆಯನ್ನು ನಿಲ್ಲಿಸಲು ನೀವು ರೆಡಿಯಿದ್ದೀರಿ ಎಂದು ಗೊತ್ತು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಲೀಂ ಅಹಮದ್ ಅವರೇ, ಈ ಸರ್ಕಾರದಲ್ಲಿ ಶಕ್ತಿ ತುಂಬಿದ್ದು ಕೇವಲ ಅಲ್ಪಸಂಖ್ಯಾತ ಇಲಾಖೆಗೆ ಮಾತ್ರ. ಇನ್ನೆಲ್ಲವಕ್ಕೂ ನಿಶ್ಯಕ್ತಿಯೇ. ಕೇವಲ ಅಲ್ಪಸಂಖ್ಯಾತರ ಇಲಾಖೆಗೆ ಮಾತ್ರ. ಅವರು ಪ್ರತಿ ವರ್ಷ ಬಜೆಟ್ ಅನ್ನು ಹೆಚ್ಚು ಮಾಡುತ್ತಲೇ ಹೋಗಿದ್ದಾರೆ. ಅದೊಂದಕ್ಕೇ ಶಕ್ತಿ ತುಂಬಿದ್ದಾರೆ. ಇನ್ನೆಲ್ಲವಕ್ಕೂ ನಿಶ್ಯಕ್ತಿಯೇ. ನಾನು ಹೇಳಿದ್ದೇನೆಂದರೆ ಯೋಜನೆ ಒಳ್ಳೆಯದು. ಸಂಸ್ಥೆಯೇ ನಿಶ್ಯಕ್ತಿಗೊಳಗಾದ ಮೇಲೆ ಏನು ಪ್ರಯೋಜನ? ಸಂಸ್ಥೆಯನ್ನು ಮುಳುಗಿಸಿದ ಮೇಲೆ ಯಾವ ಯೋಜನೆ ತಂದರೆ ಏನು ಪ್ರಯೋಜನ ಎಂದು ನಾನು ಹೇಳಿದ್ದು.

ಮಾನ್ಯ ಸಭಾಪತಿಯವರೆ, 2022-23ರಲ್ಲಿ ನಾವು ಒಟ್ಟು ಸಾಲಕ್ಕೆ ಕಟ್ಟುತ್ತಿದ್ದ ಬಡ್ಡಿ ರೂ.29,395 ಕೋಟಿ. 2025-26ರಲ್ಲಿ ಬಡ್ಡಿ ರೂ.45,600 ಕೋಟಿ. ಈ ವರ್ಷ ನಾವು ಬಡ್ಡಿಗೆ ತೆಗೆದಿಡಬೇಕಾದ ಹಣ ರೂ.53,332

ಕೋಟಿ. ಇದರಲ್ಲಿ ಸಾಲದ ಕಂತು ಸೇರಿಲ್ಲ. ಅಸಲಿನ ಕಂತು ಸೇರಿಲ್ಲ. ಕೇವಲ ಬಡ್ಡಿಗೆ ತೆಗೆದಿಡಬೇಕಾದ ಹಣ ರೂ.53,332 ಕೋಟಿ.

ಮಾನ್ಯ ಭೋಜೇಗೌಡರೇ, ಈಗ ಕರ್ನಾಟಕದ ಜನ ಬಡ್ಡಿಮಕ್ಕಳು ಹೌದೋ, ಅಲ್ಲವೋ? ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ರವಿಯವರೆ, ಹಾಗಾದರೆ ಈ ದೇಶದ ಮಕ್ಕಳು ಬಡ್ಡಿ ಮಕ್ಕಳೇ. ನಾವು ಒಂದು ರಾಜ್ಯಕ್ಕೆ ಸೀಮಿತ. ನಿಮ್ಮ ಸರ್ಕಾರ ಇಡೀ ದೇಶಕ್ಕೆ ಬಡ್ಡಿಮಕ್ಕಳನ್ನು ಮಾಡಿದೆ. ರೂ. 1,165 ಲಕ್ಷ ಕೋಟಿ ಸಾಲ ಇದೆ.

**ಶ್ರೀ ಸಿ.ಟಿ.ರವಿ:-** ನಾನು ಅದಕ್ಕೂ ಬರುತ್ತೇನೆ. ಅವರಿಗೆ ನಾನು yield ಆಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಐವನ್ ಡಿ'ಸೋಜ ಅವರೆ, ಬಡ್ಡಿ ಮಕ್ಕಳೋ, ಹೆಮ್ಮೆಯ ಮಕ್ಕಳೋ?

**ಶ್ರೀ ಐವನ್ ಡಿ'ಸೋಜ:-** ನನಗೆ ಗೊತ್ತಿಲ್ಲ, ನೀವೇ ಹೇಳಿ.

**ಶ್ರೀ ಎನ್. ರವಿಕುಮಾರ್:-** ಅದನ್ನು ಮಾನ್ಯ ರವಿಯವರು ಹೇಳುತ್ತಾರೆ, ತಡೆಯಿರಿ.

**ಶ್ರೀ ಸಿ.ಟಿ.ರವಿ:-** 2022-23ರಲ್ಲಿ ರೂ.41,278 ಕೋಟಿ ವೇತನಕ್ಕಾಗಿ ಖರ್ಚು ಮಾಡುತ್ತಿದ್ದರೆ ಈಗ ರೂ.85,860 ಕೋಟಿ ಇದೆ. ಪಿಂಚಣಿಗೆ ಆಗ ರೂ.24,016 ಕೋಟಿಯಾದರೆ, ಈಗ ರೂ.38,580 ಕೋಟಿ. ಇನ್ನು 2022-23ರಲ್ಲಿ ನಾವು ವಾರ್ಷಿಕವಾಗಿ ಸಾಲ ಮಾಡುತ್ತಿದ್ದದ್ದು, ರೂ.44,549 ಕೋಟಿ.

(ಮುಂದು)

(415) 16.03.2026/5.00/ಎಂವಿ-ಎಕೆ (ವೈಸ್ ಛೇರ್ಮನ್ ರವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-**

ಕಳೆದ ವರ್ಷ ಮಾಡಿದಂತಹ ಸಾಲ 1,16,000/- ಕೋಟಿ ರೂಪಾಯಿಗಳು. ಈ ವರ್ಷದ ವಾರ್ಷಿಕ ಸಾಲ 1,32,000/- ಕೋಟಿ ರೂಪಾಯಿಗಳು. ಅಷ್ಟಾದ ಮೇಲೆಯೂ 20,000/- ಕೋಟಿ ರೂಪಾಯಿಗಳನ್ನು deficit ಅಂದರೆ ಕೊರತೆ ಬಜೆಟ್. ಅಂದರೆ, 1,32,000/- ಕೋಟಿ ರೂಪಾಯಿ ಸಾಲ ಮಾಡಿಯೂ ಕೂಡ, 20,000/- ಕೋಟಿ ರೂಪಾಯಿಗಳಷ್ಟು ಕೊರತೆ ಬಜೆಟ್. ಆ ಲೆಕ್ಕಾಚಾರಕ್ಕೆ ಹೋದರೆ, ವಾಸ್ತವಿಕವಾಗಿ ನಮ್ಮ ಸಾಲದ ಪ್ರಮಾಣ 1,52,000/- ಕೋಟಿ ರೂಪಾಯಿಗಳನ್ನು ದಾಟುತ್ತದೆ. ನಾನು ಈ ವರ್ಷದ ಹೊಸ ಸಾಲದ ಬಗ್ಗೆ ಹೇಳುತ್ತಿದ್ದೇನೆ. ಆಮೇಲೆ 2022-23ರಲ್ಲಿ ಬಿ.ಜೆ.ಪಿ. ಸರ್ಕಾರದ ಸಮಗ್ರ ಸಾಲ ಇದ್ದದ್ದು 5,22,847/- ಕೋಟಿ ರೂಪಾಯಿಗಳು. ಕಳೆದ ವರ್ಷ ಸಮಗ್ರ ಸಾಲ 7,64,625/- ಕೋಟಿ ರೂಪಾಯಿಗಳು. ಈ ವರ್ಷದ ಸಮಗ್ರ ಸಾಲ 8,54,389/- ಕೋಟಿ ರೂಪಾಯಿಗಳು. ಈ ರೀತಿಯಲ್ಲಿ ರಾಜ್ಯ ಹಾಳು ಮಾಡುವ ಆರ್ಥಿಕ ನೀತಿಯನ್ನು ನಾವು ಆರ್ಥಿಕ ಚಿಂತನೆ ಎಂದು ಕರೆಯುವುದಕ್ಕೆ ಆಗುತ್ತದೆಯೇ? ಈಗ ಯಾರಾದರೂ ಮನೆಯಲ್ಲಿ ಮನೆ ಹಾಳು ಮಾಡುವಂತಹ ಕೆಲಸ ಮಾಡುತ್ತಿದ್ದರೆ, ಅವರನ್ನು ಮನೆಹಾಳಾ ಎಂದು ಕರೆಯುತ್ತಾರೆ. ಆ ರೀತಿ ರಾಜ್ಯ ಹಾಳು ಮಾಡುವಂತಹವರನ್ನು ನಾವು ಏನೆಂದು ಕರೆಯಬೇಕು?

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ದೇಶ ಹಾಳು ಮಾಡುವವರನ್ನು ಏನೆಂದು ಕರೆಯುತ್ತಾರೆ?

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ದೇಶಕ್ಕೆ 2,18,000/- ಕೋಟಿ ರೂಪಾಯಿ...

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾಲ ಮಾಡುವುದು ತಪ್ಪಲ್ಲ. ಈಗ ಸಾಲ ಮಾಡಿದ ಹಣವನ್ನು ಬಂಡವಾಳ ವೆಚ್ಚವಾಗಿ ಬಳಕೆ ಮಾಡಿಕೊಂಡರೆ ತಪ್ಪಲ್ಲ. ಈಗ ಆಸ್ತಿ ಖರೀದಿಗೆ ಸಾಲ ಮಾಡಿದರೆ, ಈಗ ಆಸ್ತಿಯ ಮೇಲೆ ಬಂಡವಾಳ ಹೂಡಿರುತ್ತಾರೆ. ಆಗ asset create ಆಗುತ್ತದೆ. ಆದರೆ, ಇಲ್ಲಿ ಯಾವ ರೀತಿಯ asset create ಆಗಿದೆ. ಈಗ 2022-23ರಲ್ಲಿ 60,599/- ಕೋಟಿ ರೂಪಾಯಿ ಬಂಡವಾಳ ವೆಚ್ಚ. ಕಳೆದ ವರ್ಷ 71,336/- ಕೋಟಿ ರೂಪಾಯಿ ಬಂಡವಾಳ ವೆಚ್ಚವಾಗಿದೆ. ಈ ವರ್ಷದ ಬಂಡವಾಳ ವೆಚ್ಚ 71,924/- ಕೋಟಿ ರೂಪಾಯಿಗಳು. ಈಗ ಸಾಲ 1,32,000/- ಕೋಟಿ ರೂಪಾಯಿಗಳು. ಬಂಡವಾಳ ವೆಚ್ಚ ಕೇವಲ 71,924/- ಕೋಟಿ ರೂಪಾಯಿಗಳು. ಅಂದರೆ, ಸಾಲ ಮಾಡಿ, ರಾಜಕೀಯ ಲಾಭ ಪಡೆಯುವ ಆರ್ಥಿಕ ನೀತಿಯಲ್ಲದೆ, ಸಾಲ ಮಾಡಿ ರಾಜ್ಯದ ಅಭಿವೃದ್ಧಿ ಮಾಡುವ ಆರ್ಥಿಕ ಅಭಿವೃದ್ಧಿ ನೀತಿಯಲ್ಲವೆಂದು ಇದು ತೋರಿಸುತ್ತದೆ. It shows. ಸರ್ಕಾರವೇ ಕೊಟ್ಟಿರುವಂತಹ ಅಂಕಿ-ಅಂಶಗಳು ಹೇಳುತ್ತವೆ. 71,924/- ಕೋಟಿ ರೂಪಾಯಿಗಳ ಬಂಡವಾಳ ವೆಚ್ಚವಾಗಿ ಹೂಡಿಕೆ ಮಾಡಿ, 1,32,000/- ಕೋಟಿ ರೂಪಾಯಿಗಳನ್ನು ಸಾಲ ಮಾಡಿದರೆ, ಏನನ್ನು ತೋರಿಸುತ್ತದೆಂದು ತಾವು ಹೇಳಿ. ಇಷ್ಟಾದ ಮೇಲೂ ಕೂಡ ವಿತ್ತೀಯ ಕೊರತೆ. ಈಗ ವಿತ್ತೀಯ ಕೊರತೆ ಎಷ್ಟಿದೆ ಎಂದು ಹೇಳಿದರೆ, 2022-23ರಲ್ಲಿ 46,626/- ಕೋಟಿ ರೂಪಾಯಿಗಳ ವಿತ್ತೀಯ ಕೊರತೆ ಇದ್ದರೆ, ಕಳೆದ ವರ್ಷ 2024-25ರಲ್ಲಿ 90,428/- ಕೋಟಿ ರೂಪಾಯಿಗಳ ವಿತ್ತೀಯ ಕೊರತೆ ಇತ್ತು. ಈ ವರ್ಷ 97,499/- ಕೋಟಿ ರೂಪಾಯಿ ವಿತ್ತೀಯ ಕೊರತೆ ಇದೆ. ಈಗ ಅನುಭವ ವಿತ್ತೀಯ ಕೊರತೆಯ ಅಂತರವನ್ನು ಕಡಿಮೆ ಮಾಡಬೇಕಾಗಿತ್ತು. ಈಗ ಸಾಲವನ್ನು ಹೆಚ್ಚಿಗೆ ಮಾಡುವುದು ಯಾವ ರೀತಿಯ ಅನುಭವ. ಇದು ಯಾವ ರೀತಿಯಲ್ಲಿ ದಾಖಲೆಯಾಗುತ್ತದೆ. ಇದರ ಪರಿಣಾಮ ಏನಾಗಬಹುದು? ಅವರು ಇದನ್ನೇನಾದರೂ ಯೋಚನೆ ಮಾಡಿದ್ದಾರೆಯೇ? ಈಗ ನಮ್ಮ ರಾಜ್ಯದ ಸ್ವಂತ ತೆರಿಗೆಯ ಬಗ್ಗೆ ಯೋಚನೆ ಮಾಡಿರುವುದು 2,20,000/- ಕೋಟಿ ರೂಪಾಯಿಗಳ ತೆರಿಗೆ ಬರಬಹುದು ಎಂದು. ಈಗ ಕೇಂದ್ರದಿಂದ 63,050/- ಕೋಟಿ ರೂಪಾಯಿಗಳ ತೆರಿಗೆ ಪಾಲು ಬರುತ್ತದೆಂದು ಹೇಳಿದ್ದಾರೆ. 2022ರಲ್ಲಿ ಕೇಂದ್ರದ ತೆರಿಗೆ ಪಾಲು ಸಿಕ್ಕಿದ್ದು 34,596/- ಕೋಟಿ ರೂಪಾಯಿಗಳು. ಈ ವರ್ಷದ ಕೇಂದ್ರದ ತೆರಿಗೆ ಪಾಲು ಸಿಗುತ್ತಿರುವುದು 63,050/- ಕೋಟಿ ರೂಪಾಯಿಗಳು. ಅಂದರೆ, almost double. ಈಗ ಕೇಂದ್ರದ

ತೆರಿಗೆಯ ಪಾಲು ರಾಜ್ಯಕ್ಕೆ ಸಿಗುತ್ತಿರುವುದು almost double. ಆದರೆ, ಅದರ ಪರಿಣಾಮವೇನೆಂದು ಯೋಚನೆ ಮಾಡಬೇಕಾದ ಅವಶ್ಯಕತೆ ಇದೆ. ನಾನು ಮೊದಲು ರೈತರ ಆತ್ಮಹತ್ಯೆಯ ಬಗ್ಗೆ ಪ್ರಸ್ತಾಪ ಮಾಡಿದ್ದೆ. ರೈತರ ಆತ್ಮಹತ್ಯೆಯಲ್ಲಿ top district ಯಾವುದು ಎಂದರೆ, ಅದು ಹಾವೇರಿ ಜಿಲ್ಲೆಯಾಗಿದೆ. ಎರಡನೆಯದು ಬೆಳಗಾವಿ ಜಿಲ್ಲೆ. ಮೂರನೆಯದು ಧಾರವಾಡ ಜಿಲ್ಲೆ. ನಾಲ್ಕನೆಯದು ಮೈಸೂರು ಜಿಲ್ಲೆ. ಐದನೆಯದು ಬೀದರ್ ಜಿಲ್ಲೆ. ಆರನೆಯದು ಚಿಕ್ಕಮಗಳೂರು ಜಿಲ್ಲೆ. ಏಳನೆಯದು ಶಿವಮೊಗ್ಗ ಜಿಲ್ಲೆ. ಎಂಟನೆಯದು ಯಾದಗಿರಿ ಜಿಲ್ಲೆ. ಒಂಬತ್ತನೆಯದು ವಿಜಯಪುರ ಮತ್ತು ಹತ್ತನೆಯದು ಕಲಬುರಗಿ ಜಿಲ್ಲೆ. ಈಗ ಸರ್ಕಾರ ಏನಾದರೂ ರೈತರ ಆತ್ಮಹತ್ಯೆಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಯಾವ ರೀತಿಯ ಸಮೀಕ್ಷೆ ನಡೆಸಿದೆ. ಅದು ಏನಾದರೂ ಕಾರಣ ಹುಡುಕುವಂತಹ ಕೆಲಸವನ್ನೇನಾದರೂ ಮಾಡಿದೆಯೇ? ನನಗೆ ಅನಿಸಿದಂತೆ ಸರ್ಕಾರದ ಸಾಲದ ನೀತಿಯೂ ಕೂಡ ಒಂದು ಕಾರಣ ಇರಬಹುದು ಎಂಬುದು ನನ್ನ ಅನುಮಾನ. ಈ ಬಗ್ಗೆಯೂ ಕೂಡ ಆಲೋಚಿಸಬೇಕಾದಂತಹ ಅವಶ್ಯಕತೆ ಇದೆ.

ಇನ್ನು ಎತ್ತಿನಹೊಳೆಗೆ ಸುಮಾರು 20,000/- ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ತುಮಕೂರು ಜಿಲ್ಲೆಗಳಿಗೆ ನೀರು ಕೊಡುತ್ತೇವೆಂದು ಹೇಳಿರುವುದು. ಚಿತ್ರದುರ್ಗ ಜಿಲ್ಲೆಗೆ ಭದ್ರ ಮೇಲ್ದಂಡೆ ಯೋಜನೆಯಿಂದ ಕೊಡುವುದು. ಈಗ ಕೋಲಾರ ಜಿಲ್ಲೆಗೆ ನೀರು ಬಂದಿದೆಯೇ? ರಾಮನಗರ ಜಿಲ್ಲೆಗೆ ನೀರು ಬಂದಿದೆಯೇ? ಅದು ತುಮಕೂರು ಜಿಲ್ಲೆಯನ್ನು ದಾಟಿದೆಯೇ? ಅಂದರೆ, ರಾಮನಗರ ಜಿಲ್ಲೆಗೆ ನೀರು ಇಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೀರು ಇಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಗೆ ನೀರು ಇಲ್ಲ. ಆದರೆ, ಈಗಾಗಲೇ ಸುಮಾರು 20,000/- ಕೋಟಿ ರೂಪಾಯಿಗಳಿಗೂ ಹೆಚ್ಚು ಖರ್ಚಾಗಿದೆ. ಆದರೆ, ಒಂದು ಹನಿ ನೀರು ಕೂಡ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ತಲುಪಿಲ್ಲ. ಇದು ನನಗೆ ಚೆನ್ನಾಗಿ ನೆನಪಿದೆ. ಮಾನ್ಯ ಮುಖ್ಯಮಂತ್ರಿಗಳು 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದರ ಶಂಕುಸ್ಥಾಪನೆಯನ್ನು ನೆರವೇರಿಸುತ್ತಾರೆ. ಅವರು ಆ ಶಂಕುಸ್ಥಾಪನೆಯನ್ನು ನೆರವೇರಿಸಿ ಇನ್ನು ಎರಡು ವರ್ಷದ ಒಳಗಡೆ ಚಿಕ್ಕಬಳ್ಳಾಪುರ ಜಿಲ್ಲೆಗೆ ನೀರನ್ನು ಹರಿಸಿಯೇ ತೀರುತ್ತೇನೆ ಎಂದು ಹೇಳುತ್ತಾರೆ. ಅವರ ಒಂದು style ಇದೆ. ಅದು ಕನೆಕ್ಟ್ ಆಗುವಂತಹ style. ಆ style ಏನಿದೆ, I like that style. ಅದು ಅವರಿಗೆ ಕನೆಕ್ಟ್ ಆಗುತ್ತದೆ. ಅವರು ಹೇಳಿದ್ದು ಏನೆಂದರೆ, ನಾನು ಶ್ರೀ ಸಿದ್ದರಾಮಯ್ಯ ಹೇಳುತ್ತಿದ್ದೇನೆ. ಇನ್ನು ಎರಡು ವರ್ಷದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ನೀರನ್ನು ಕೊಟ್ಟೇ ಕೊಡುತ್ತೇನೆ. ಈಗ ಅವರು ನೀರನ್ನು ಕೊಟ್ಟಿದ್ದಾರೆಯೇ? ಅವರು ಎರಡು ವರ್ಷದ ಒಳಗೆ ನೀರನ್ನು ಕೊಟ್ಟಿದ್ದರೆ ಅದು ದಾಖಲೆಯಾಗುತ್ತಿತ್ತು. ಈಗ ಚಿಕ್ಕಬಳ್ಳಾಪುರ ಜಿಲ್ಲೆಯವರಿಗೆ ಮೂರು ನಾಮ. ಕೋಲಾರ ಜಿಲ್ಲೆಯವರಿಗೆ ಮೂರು ನಾಮ. ರಾಮನಗರ ಜಿಲ್ಲೆಯವರಿಗೆ ಮೂರು ನಾಮ. ಬೆಂಗಳೂರು ಗ್ರಾಮಾಂತರ ಜಿಲ್ಲೆಯವರಿಗೆ ಮೂರು ನಾಮ. ಈ ಎತ್ತಿನಹೊಳೆಯ ಹೆಸರಿನಲ್ಲಿ ಎತ್ತಿಕೊಂಡಂತಹವರಿಗೆ ಲಾಭ. ಈಗ ಯಾರು ಎತ್ತಿನಹೊಳೆಯ ಹೆಸರಿನಲ್ಲಿ

ಎತ್ತಿಕೊಂಡಿದ್ದಾರೆ. ಅವರಿಗೆ ಮಾತ್ರ ಲಾಭ. ಉಳಿದಂತಹವರಿಗೆಲ್ಲಾ ನಷ್ಟ. ಇದರ ಬಗ್ಗೆ ಯೋಚನೆ ಮಾಡಬೇಕಾದಂತಹ ಅವಶ್ಯಕತೆ ಇದೆ.

ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, ೮೦೦ ಪಬ್ಲಿಕ್ ಶಾಲೆಗಳ ಪ್ರಾರಂಭ. ಅದು ಒಳ್ಳೆಯದು. ೩,೯೦೦/- ಕೋಟಿ ರೂಪಾಯಿಗಳ ವೆಚ್ಚದಲ್ಲಿ ೮೦೦ ಪಬ್ಲಿಕ್ ಶಾಲೆಗಳ ಪ್ರಾರಂಭ ಎಂದು ಹೇಳಿದ್ದಾರೆ. ಈಗ ಕಳೆದ 15 ವರ್ಷಗಳಲ್ಲಿ ಸರ್ಕಾರಿ ಶಾಲೆಗಳಿಗೆ ದಾಖಲಾಗುವಂತಹ ಮಕ್ಕಳ ಸಂಖ್ಯೆಯಲ್ಲಿ ಸುಮಾರು 17 ಲಕ್ಷದಷ್ಟು ಕಡಿಮೆಯಾಗಿದೆ. ಅಂದರೆ, ಶೇಕಡಾ ೩೦ರಷ್ಟು ಕಡಿಮೆಯಾಗಿದೆ. ಅಂದರೆ, ವಿಷಯದ ಗಂಭೀರತೆ ಇದೆ. ಈಗ ಇಂಗ್ಲಿಷ್ ಕಲಿಸಬೇಕು. ಅದನ್ನು ಚೆನ್ನಾಗಿಯೇ ಕಲಿಸೋಣ. ಈಗ ಇಂಗ್ಲಿಷ್‌ನವರನ್ನು ಮೀರಿಸಿ, ಅವರಿಗೆ ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿಸೋಣ. ಈಗ ಎಷ್ಟೇ ಚೆನ್ನಾಗಿ ಇಂಗ್ಲಿಷ್ ಕಲಿತರೂ ಸಹ ನಾವು ಇಂಗ್ಲಿಷ್‌ನವರು ಆಗುವುದಕ್ಕೆ ಆಗುತ್ತದೆಯೇ? ನಾವು ಇಂಗ್ಲಿಷ್ ನವರು ಆಗುವುದಕ್ಕೆ ಆಗುವುದಿಲ್ಲ. ನಮಗೆ ಒಂದು ಮಾತೃಭಾಷೆ ಮತ್ತು ಒಂದು ಸಂಸ್ಕೃತಿ ಇದೆ. ಈಗ ಮಾತೃಭಾಷೆಯನ್ನು ಮರೆಸುವ ಶಿಕ್ಷಣ ಕೊಡುವಂಥದ್ದು. ಅದು ನಮ್ಮ ಸಂಸ್ಕೃತಿ ಮತ್ತು ಪ್ರಾದೇಶಿಕ ಅಸ್ಮಿತೆಗೆ ಅಪಾಯಕಾರಿ. ನಾವು ಕನ್ನಡದ ಜೊತೆಗೆ ಇಂಗ್ಲಿಷ್ ಅನ್ನು ಕಲಿಸೋಣ. ಚೆನ್ನಾಗಿ ಕನ್ನಡವನ್ನು ಕಲಿಸಿ ಇಂಗ್ಲಿಷ್ ಕಲಿಸೋಣ. ಈಗ ಏನು ಮಾಡುತ್ತಿದ್ದಾರೆಂದರೆ, ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಿವೆ. ಅದರ ಜೊತೆಗೆ ಸರ್ಕಾರಿ ಶಾಲೆಗಳು ಸಹ ಮುಚ್ಚಿಹೋಗುತ್ತಿವೆ. ಇಂಗ್ಲಿಷ್ ಶಾಲೆಗಳನ್ನು ತೆರೆಯುತ್ತಿದ್ದೇವೆ. ಈಗ ಸುಮಾರು 17 ಲಕ್ಷ ಮಕ್ಕಳು ಸರ್ಕಾರಿ ಶಾಲೆಗಳನ್ನು ಬಿಟ್ಟಿದ್ದಾರೆಂದರೆ, ಅಲ್ಲಿಗೆ ಸರ್ಕಾರಿ ಶಾಲೆಗಳ ಬಗ್ಗೆ ನಂಬಿಕೆ ಹೋಗಿರಬೇಕು ಅಥವಾ ಗುಣಮಟ್ಟದ ಶಿಕ್ಷಣ ಕೊಡುತ್ತಿಲ್ಲವೆಂದು ಇನ್ಯಾವುದೋ ಕಾರಣಕ್ಕೆ ನಂಬಿಕೆ ಕಳೆದುಕೊಂಡಿರಬೇಕು. ಆ ನಂಬಿಕೆಯನ್ನು ಉಳಿಸಿಕೊಂಡು ಅದನ್ನು ಬೆಳೆಸಿಕೊಳ್ಳುವುದಕ್ಕೆ ಅವರ ಪ್ರಯತ್ನ ಏನು? ಅದಕ್ಕೆ ಬೇಕಾದಂತಹ ಬಜೆಟ್ ಏನು? ರಾಜ್ಯದಲ್ಲಿರುವಂತಹ 42,136 ಸರ್ಕಾರಿ ಪ್ರಾಥಮಿಕ ಶಾಲೆಗಳ ಪೈಕಿ 6,675 ಶಾಲೆಗಳಲ್ಲಿ ಏಕೋಪಾಧ್ಯಾರು. ಈಗ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯ. ಅಂದರೆ, ಶೇಕಡಾ ೮ರಷ್ಟು ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಾರೆ. ಸುಮಾರು 16,075 ಸರ್ಕಾರಿ ಶಾಲೆಗಳಲ್ಲಿ 1 ರಿಂದ ೩೦ ಮಕ್ಕಳು ಮಾತ್ರ ಇದ್ದಾರೆ. ಸರ್ಕಾರಿ ಶಾಲೆಗಳನ್ನು ಮುಚ್ಚುವುದಕ್ಕೆ ಸದ್ದಿಲ್ಲದೆ ಶಾಲೆಗಳನ್ನು ನಾವು ಮುಚ್ಚುತ್ತಿಲ್ಲ ಅವುಗಳನ್ನು ವಿಲೀನ ಮಾಡುತ್ತಿದ್ದೇವೆ ಅಂದರೆ, 'ಅಳಿಯ ಅಲ್ಲ ಮಗಳ ಗಂಡ.' ಅವುಗಳನ್ನು ಮುಚ್ಚುತ್ತಿಲ್ಲ. ವಿಲೀನ ಮಾಡುತ್ತಿದ್ದಾರೆ. ಅಂದರೆ, ಅದು ಏನು ಎಂದು ಹೇಳಿದರೆ, 'ಅಳಿಯ ಅಲ್ಲಪ್ಪ ಅವನು ನನ್ನ ಮಗಳ ಗಂಡ' ಎಂದು ಹೇಳಿದಂತೆ. ಈಗ ಮುಚ್ಚುವುದು ಎಂದರೆ ಏನು? ವಿಲೀನ ಮಾಡುವುದು ಎಂದರೆ ಏನು? ಅಳಿಯ ಅಲ್ಲ ಮಗಳ ಗಂಡ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಿ.ಟಿ.ರವಿಯವರಿಗೆ ಹೇಳಿ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆಂದು. ಏಕೆಂದರೆ, ಇಲ್ಲಿಂದ ತಪ್ಪು ಸಂದೇಶ ಹೋಗಬಾರದು. ನಾವು ಎಲ್ಲೂ ಕೂಡ ವಿಲೀನ ಮಾಡುತ್ತೇವೆಂದು ಹೇಳಿಲ್ಲ. ಏಕೆಂದರೆ, ಪದೇಪದೇ

ಇದರ ಬಗ್ಗೆ ಈ ರೀತಿಯ ಚರ್ಚೆಗಳಾಗುತ್ತಿವೆ. ನಾನು ಇದನ್ನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ಆಮೇಲೆ ಕನ್ನಡವನ್ನು ಕಲಿಸಬಾರದು ಎಂದು ಎಲ್ಲಿಯೂ ಇಲ್ಲವೇ ಇಲ್ಲ.

(ಮುಂದು)

(416) 16.03.2026 05.10 LL-AK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಸ್. ಮಧು ಬಂಗಾರಪ್ಪ (ಮುಂದು)**

ಇಂಗ್ಲಿಷ್ ಭಾಷೆಯನ್ನು ಕಲಿಸಬೇಕೆಂದು ಅವರೇ ಹೇಳಿರುತ್ತಾರೆ. ಆ ನಿಟ್ಟಿನಲ್ಲಿ ಇಂಗ್ಲಿಷ್ ಭಾಷೆ ಕಲಿಸುತ್ತಿರುವುದು ಬಿಟ್ಟರೆ, ಕನ್ನಡ ಭಾಷೆಯ ಶಾಲೆಗಳನ್ನು ಯಾವುದೇ ಕಾರಣಕ್ಕಾದರೂ ಕ್ಲೋಸ್ ಮಾಡುವುದಾಗಲಿ, ಕನ್ನಡ ಭಾಷೆಯನ್ನು ಬಿಡುವುದಾಗಲಿ ಮಾಡುವುದಿಲ್ಲ. ಇದು ಎಲ್ಲರಿಗೂ ಗೊತ್ತಿದೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಅವರು ಒಂದು ಕೆಲಸ ಮಾಡಲಿ. ಕನ್ನಡ ಭಾಷೆ ಕಡ್ಡಾಯವಾಗಿ ಇರುವಂತಹ ಎಲ್ಲಾ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸಲೇಬೇಕೆಂದು ಒಂದು ತಿದ್ದುಪಡಿ ವಿಧೇಯಕವನ್ನು ತರಲಿ, ಅದಕ್ಕೆ ನಾವು ಕೂಡ ಅವರ ಜೊತೆ ಇರುತ್ತೇವೆ. ಅದಕ್ಕಾಗಿ, ಅವರು ಸುತ್ತೋಲೆ ಹೊರಡಿಸಬಾರದು. ಬದಲಾಗಿ, ಸೂಕ್ತ ತಿದ್ದುಪಡಿ ವಿಧೇಯಕವನ್ನು ತನ್ನಿ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಭಾಷಾವಾರು ಇದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. In fact, ಪುರುಷೋತ್ತಮ ಬಿಳಿಮಲೆಯವರಿಗೆ ನಾನೇ ಈ ಬಗ್ಗೆ ಹೇಳಿರುತ್ತೇನೆ. ಅವರು ನಮ್ಮ ಬಳಿ ಬಂದು ಮಾತನಾಡಿದಂತಹ ಸಂದರ್ಭದಲ್ಲಿ, ಕನ್ನಡವನ್ನು ಎಷ್ಟು ಚೆಂದವಾಗಿ ಕಲಿಸಬಹುದು. ಏಕೆಂದರೆ, ತಮಗೆ ಈ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ಇದೆ. ಹಾಗಾಗಿ, ದಯಮಾಡಿ ಈ ವಿಚಾರದಲ್ಲಿ ಮಾರ್ಗದರ್ಶನ ಕೊಡಿ. ಅದನ್ನು ನಾವು ಜಾರಿಗೆ ತರೋಣ ಎಂದು ನಾನೇ ಹೇಳಿರುತ್ತೇನೆ. ಅದಕ್ಕಾಗಿ, ಈ ಸದನದ ಮುಖಾಂತರ ಬೇರೆ ರೀತಿಯ ವಿಚಾರಗಳು ಹೋಗಬಾರದು ಎನ್ನುವುದಕ್ಕೆ ನಾನು ಎದ್ದು ನಿಂತು ಮಾತನಾಡಿರುತ್ತೇನೆ. ಆ ವಿಚಾರದಲ್ಲಿ ನಾವು ಯಾವುದೇ ರಾಜಿ ಇರುವುದಿಲ್ಲ. ಇದರ ಜೊತೆಗೆ, ಸರ್ಕಾರಿ ಶಾಲೆಗಳ ಸಂಖ್ಯೆಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ, ಕಳೆದ 15 ವರ್ಷಗಳ ಅವಧಿಯಲ್ಲಿ ಎಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ ಎಂದು ಹೇಳಿರುತ್ತಾರೆ. ಅದರಲ್ಲಿ ಯಾರ್ಯಾರು ಪಾಲುದಾರರಿದ್ದಾರೆ ಎಂದು ಹೇಳುತ್ತಾ, ನಾನು ಇಲ್ಲಿ ಬಂದು ಕುಳಿತಿರುತ್ತೇನೆ. ಆದರೆ, ಸರ್ಕಾರಿ ಶಾಲೆಗಳನ್ನು ಇಂಪ್ರೂವ್ ಮಾಡಬೇಕು. ಸರ್ಕಾರಿ ಶಾಲೆಗಳಿಗೆ ದಾಖಲಾತಿ ಸಂಖ್ಯೆ ಹೆಚ್ಚಿಸಲು ಸ್ವತಃ ನಾನೇ ಈ ಸದನದಲ್ಲಿ ಮನವಿ ಮಾಡಿರುತ್ತೇನೆ. ದಯಮಾಡಿ, ತಾವೆಲ್ಲರೂ ಈ ವಿಷಯದಲ್ಲಿ ನಮ್ಮ ಜೊತೆ ಜವಾಬ್ದಾರಿಯನ್ನು ತೆಗೆದುಕೊಂಡರೆ ನಮಗೆ ಸ್ವಲ್ಪ ಅನುಕೂಲವಾಗುತ್ತದೆ. ಸಾಮಾನ್ಯವಾಗಿ ಸರ್ಕಾರಿ ಶಾಲೆಗಳಿಗೆ ಜೂನ್ ತಿಂಗಳಿನಲ್ಲಿ ದಾಖಲಾತಿ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆದರೆ, ನಾಳೆಯಿಂದಲೇ ಸರ್ಕಾರಿ ಶಾಲೆಗಳಿಗೆ ದಾಖಲಾತಿಯನ್ನು ಮಾಡಬಹುದಾಗಿರುತ್ತದೆ. ಆದಾಗ್ಯೂ, ಈ ವಿಚಾರದಲ್ಲಿ ಸಾಕಷ್ಟು ಕಷ್ಟ ಇದೆ. ನಮ್ಮ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರಿದ್ದಾರೆ, ಅವರು ಉತ್ತಮ ಶಿಕ್ಷಣವನ್ನು ಕೊಡುತ್ತಾರೆ. But they were

least used. ಅಂದರೆ, ಕಡಿಮೆ ಬಳಕೆ ಮಾಡುತ್ತಿದ್ದೇವೆ. ಅವರನ್ನು ಒಳ್ಳೆಯ ರೀತಿಯಲ್ಲಿ ಬಳಕೆ ಮಾಡಬೇಕೆಂದು ಚಿಂತಿಸಿದ್ದೇವೆ. ಅದನ್ನು ಬಿಟ್ಟು ಯಾವುದೇ ಶಾಲೆಗಳನ್ನು ವಿಲೀನ ಮಾಡುತ್ತೇವೆಂದು ಇಲ್ಲ. ಯಾವುದೇ ಕಾರಣಕ್ಕೂ, ಯಾವುದೇ ರೀತಿಯ ಆದೇಶವಾಗಲಿ ನಾವು ಮಾಡುವುದಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಅವರು ಹೊಸ ಕೆ.ಪಿ.ಎಸ್. ಶಾಲೆಗಳನ್ನು ತೆರೆಯಬೇಕೆಂದು ಹೇಳಿದ್ದು, ಅದಕ್ಕೆ ಸರ್ಕಾರದಲ್ಲಿ ಅನುದಾನ ಇದೆಯೇ?

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅದು ಹೊಸ ಕೆ.ಪಿ.ಎಸ್. ಶಾಲೆಗಳು ಅಲ್ಲ. ಇರುವಂತಹ ಶಾಲೆಗಳಲ್ಲಿ ಅದಕ್ಕೆಲ್ಲಾ ನಿರ್ಬಂಧನೆಗಳು ಇವೆ. 2 ಎಕರೆ, 3 ಎಕರೆ ಅಥವಾ 4 ಎಕರೆ ಇರುವಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇರಬೇಕು. ಆದರೆ, ಕೆ.ಪಿ.ಎಸ್. ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಬಹಳ ಬೇಡಿಕೆ ಇರುವುದರಿಂದ, ಅಲ್ಲಿ ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಮಾಧ್ಯಮ ಕೂಡ ಇರುತ್ತದೆ. ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, 17,000 ಸ್ನಾತಕೋತ್ತರ ಪದವಿ, ವೈದ್ಯಕೀಯ ಮತ್ತು ವಿವಿಧ ಕೋರ್ಸುಗಳ ವಿದ್ಯಾರ್ಥಿಗಳು ಸೇರಿದಂತೆ, 60,000 ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದರೂ ಸಹ, ಅವರಿಗೆ ವಿದ್ಯಾರ್ಥಿ ವೇತನ ನೀಡಿರುವುದಿಲ್ಲ. ವಿದ್ಯಾರ್ಥಿ ವೇತನದ ಮಹತ್ವ ಏನು? ಅವರಿಗೆ ಕೊಡಬೇಕಲ್ಲವೇ?

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ತಮ್ಮ ಸಮಯ ಮುಗಿದಿದೆ. ಈಗಾಗಲೇ ತಾವು ಉತ್ತಮ ಸಲಹೆಯನ್ನು ಕೊಟ್ಟಿರುತ್ತೀರಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನನಗೆ ನಮ್ಮ ಬಿ.ಜೆ.ಪಿ. ಪಕ್ಷದ ಸದಸ್ಯರುಗಳ ಸಮಯವನ್ನು ದಾನ ಮಾಡುತ್ತಾರೆ. ಆ ಸಮಯದಲ್ಲಿ ನಾನು ಮಾತನಾಡುತ್ತೇನೆ. ನಾನು ಇನ್ನೂ ಶೇಕಡ 10 ರಷ್ಟು ಭಾಷಣವನ್ನು ಸಹ ಮುಕ್ತಾಯ ಮಾಡಿರುವುದಿಲ್ಲ. ಇನ್ನು ಶೇಕಡ 90 ರಷ್ಟು ಭಾಷಣ ಮಾಡುವುದಿದೆ. ನಮ್ಮ ಸದಸ್ಯರು ಅವರ ಸಮಯವನ್ನು ನನಗೆ ದಾನ ಮಾಡುತ್ತಾರೆ. 60,000 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿರುವುದಿಲ್ಲ. ಅವರ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನದ ಹಣ ಏಕೆ ತುಂಬಿರುವುದಿಲ್ಲ? ಆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡದೇ ಇರುವಷ್ಟು ಈ ಸರ್ಕಾರ ಬರಗೆಟ್ಟು ಹೋಗಿದೆಯಾ? ಇಷ್ಟೆಲ್ಲಾ ಸಾಲ ಮಾಡಿಯೂ ಕೂಡ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿಲ್ಲವೆಂದರೆ, ಸರ್ಕಾರ ಅವರ ಪಾಲಿಗೆ ಇದ್ದರೂ ಇಲ್ಲದೇ ಇರುವ ರೀತಿ ಅಲ್ಲವೇ? ಈ ರಾಜ್ಯದ ಒಟ್ಟಾರೆ ಬಜೆಟ್, ನಾಲ್ಕೂವರೆ ಲಕ್ಷ ಕೋಟಿ ರೂಪಾಯಿಗಳಲ್ಲಿ 60,000 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವಂತಹ ಸ್ಥಿತಿ ಇಲ್ಲವೆಂದರೆ, ಅವರ ಪಾಲಿಗೆ ಈ ಸರ್ಕಾರ ಬದುಕಿದ್ದೂ, ಇಲ್ಲದಂತಹ ಪರಿಸ್ಥಿತಿ ಎಂದು ಹೇಳಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೇ, 2025-26ನೇ ಸಾಲಿನ ಶೈಕ್ಷಣಿಕ ಅವಧಿ ಮುಗಿಯುತ್ತಾ ಬಂತು. ಆದರೆ, ಮಕ್ಕಳ ಶೂ ಮತ್ತು ಸಾಕ್ಸ್ ಖರೀದಿಗೆ ಇನ್ನೂ ಪೂರ್ಣ ಅನುದಾನ ಬಿಡುಗಡೆಯಾಗಿರುವುದಿಲ್ಲ. 2025-26ನೇ ಸಾಲಿನ ಶೈಕ್ಷಣಿಕ ಅವಧಿ ಮುಗಿಯುತ್ತಾ ಬರುತ್ತಿದೆ. ಈಗಾಗಲೇ ಪರೀಕ್ಷೆಗಳು ಪ್ರಾರಂಭವಾಗಿ

ನಡೆಯುತ್ತಿವೆ. ಆದಾಗ್ಯೂ, ಶಾಲಾ ವಿದ್ಯಾರ್ಥಿಗಳ ಶೂ ಮತ್ತು ಸಾಕ್ಸ್‌ಗೆ ಇನ್ನೂ ಹಣ ಬಿಡುಗಡೆ ಆಗಿರುವುದಿಲ್ಲ. ಆದರೆ, ಖಜಾನೆ ಮಾತ್ರ ತುಂಬಿ ತುಳುಕುತ್ತಿದೆ. ಹಾಗಾದರೆ, ಖಜಾನೆಯಲ್ಲಿದ್ದಂತಹ ಹಣ ಎಲ್ಲಿಗೆ ಹೋಯಿತು? ಶಾಲಾ ಮಕ್ಕಳ ಶೂ ಮತ್ತು ಸಾಕ್ಸ್‌ಗೆ ಹಣ ಕೊಡುವುದಕ್ಕೆ ಆಗದೇ ಇರುವಂತಹ ಸ್ಥಿತಿ ಈ ಸರ್ಕಾರಕ್ಕೆ ಬಂದು ಬಿಡುತ್ತಲ್ಲಾ! ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುವಂತಹ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗುತ್ತಿದೆ. 2025-26ನೇ ಸಾಲಿನಲ್ಲಿ 2,47,534 ವಿದ್ಯಾರ್ಥಿಗಳಿದ್ದರೆ, ಅದರ ಹಿಂದಿನ ವರ್ಷ ಅದರ ಪ್ರಮಾಣ 4,50,000 ರಷ್ಟಿತ್ತು.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ಅಂದರೆ, ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಇದಕ್ಕೆ ಕಾರಣವೇನು? ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಶೇಕಡ 70 ರಷ್ಟು ಹುದ್ದೆಗಳು ಖಾಲಿ ಇವೆ. ಒಂದು ಕಾಲದಲ್ಲಿ ಮೈಸೂರು ವಿಶ್ವವಿದ್ಯಾಲಯ ಎಂದರೆ, ಒಂದು ಹೆಮ್ಮೆಯ ವಿಶ್ವವಿದ್ಯಾಲಯ ಆಗಿತ್ತು. ಆದರೆ, ಕಳೆದ 18 ವರ್ಷಗಳಿಂದ ಹೊಸ ನೇಮಕಾತಿ ನಡೆದಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ರವಿಯವರೇ, ತಾವು ಮಾತನಾಡಲು ಪ್ರಾರಂಭ ಮಾಡಿ 40 ನಿಮಿಷ ಆಗಿರುತ್ತದೆ. ಬಜೆಟ್ ಭಾಷಣದ ಮೇಲೆ ಮಾತನಾಡುವವರು ಇನ್ನೂ ಬಹಳ ಮಂದಿ ಇದ್ದಾರೆ. ಹಾಗಾಗಿ, ಯಾರಿಗೂ ಹೆಚ್ಚು ಸಮಯ ನೀಡುವುದಿಲ್ಲ. ಅಲ್ಲದೇ, ಈ ದಿನ ಸಂಜೆ 6-00 ಗಂಟೆಗೆ ಸದನವನ್ನು ಮುಂದೂಡಬೇಕು. ಈಗಾಗಲೇ ತಾವು 40 ನಿಮಿಷಗಳ ಕಾಲ ಮಾತನಾಡಿರುತ್ತೀರಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಮ್ಮ ವಿಪಕ್ಷ ನಾಯಕರು ತಮ್ಮ ಸಮಯವನ್ನು ನನಗೆ ಕೊಡುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರಿಗೆ ತಾವು ಇನ್ನು 10 ನಿಮಿಷಗಳ ಕಾಲಾವಕಾಶ ನೀಡಬೇಕು. ಬೇಕಾದರೆ, ನಮ್ಮ ಪಕ್ಷದ ಸದಸ್ಯರು ಅವರ ಸಮಯವನ್ನು ಮಾನ್ಯ ರವಿಯವರಿಗೆ ನೀಡುತ್ತಾರೆ.

**ಸಭಾಪತಿಯವರು:-** ಹಾಗಾದರೆ, ಯಾವ ಯಾವ ಸದಸ್ಯರು ಮಾತನಾಡುವುದಿಲ್ಲ ಎಂಬ ಪಟ್ಟಿ ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ಅವರಿಂದ ತಮಗೆ ಹೇಳಿಸುತ್ತೇನೆ.

**ಸಭಾಪತಿಯವರು:-** ಇಲ್ಲ, ತಾವು ನನಗೆ ಅವರುಗಳ ಹೆಸರನ್ನು ಬರೆದುಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಆಯಿತು, ಈಗ ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ, ಕಳೆದ 10 ವರ್ಷಗಳ ಅವಧಿಯಲ್ಲಿ ಯಾವ್ಯಾವ ಮುಖ್ಯಮಂತ್ರಿಗಳು ಎಷ್ಟೆಷ್ಟು ಸಾಲ ಮಾಡಿದ್ದಾರೆಂಬ ಬಗ್ಗೆ ನಾನು ಒಂದು ಮಾಹಿತಿಯನ್ನು ಇಟ್ಟುಕೊಂಡಿದ್ದೇನೆ.

ಅದರಂತೆ, 2016-17 ರಲ್ಲಿ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಮಾಡಿದಂತಹ ಸಾಲ ರೂ.2,08,00,000; 2017-18ರಲ್ಲಿ ರೂ.2,46,00,000; ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೂ.2,86,00,000 ಗಳಾಗಿದ್ದು, ಅಂದರೆ, ಸಾಲದ ಪ್ರಮಾಣ ಏರಿಕೆಯಾಗಿರುತ್ತದೆ. ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ರೂ.2,86,00,000 ದಿಂದ ರೂ.3,27,00,000 ಕ್ಕೆ ಹೋಗಿರುತ್ತದೆ. 2020-21ರಲ್ಲಿ ಅದು ರೂ.4,01,000 ಕೋಟಿಗೆ ಹೋಗಿರುತ್ತದೆ. ಶ್ರೀ ಬಸವರಾಜ ಬೊಮ್ಮಾಯಿಯವರ ಕಾಲದಲ್ಲಿ ರೂ.4,54,000 ಕೋಟಿಗೆ ಹೋಗಿರುತ್ತದೆ. ಅಂದರೆ, ಇದು ಸಾಲದ ಪ್ರಮಾಣದ ಏರಿಕೆ. 2022-23ರಲ್ಲಿ ರೂ.5,18,000 ಕೋಟಿಗೆ ಹೋಗಿರುತ್ತದೆ. 2023-24ರಲ್ಲಿ ಶ್ರೀ ಸಿದ್ದರಾಮಯ್ಯನವರು ಪುನಃ ಮುಖ್ಯಮಂತ್ರಿಯಾದರು. ರೂ.5,18,000 ಕೋಟಿಯಿಂದ ಮೊದಲ ವರ್ಷದಲ್ಲಿ ರೂ.5,81,000 ಕೋಟಿಗೆ ಹೋಗಿರುತ್ತದೆ. ಪರಿಷ್ಕೃತವಾಗಿ ಅದು ರೂ.6,88,000 ಕೋಟಿಗೆ ಹೋಗಿರುತ್ತದೆ. ಆದರೆ, ಈಗ ರೂ.8,14,000 ಕೋಟಿಗೆ ಬಂದು ತಲುಪಿರುತ್ತದೆ. ಅಂದರೆ, ಸಾಲದ ಪ್ರಮಾಣ ಏರಿಕೆಯಾಗಿರುವುದನ್ನು ನಾವು ಇದರಲ್ಲಿ ನೋಡಬಹುದಾಗಿದೆ. ಈ ರೀತಿ ಸಾಲದ ಪ್ರಮಾಣ ಏರಿಕೆ ಆಗುತ್ತಾ ಹೋಗುತ್ತಿರುವುದನ್ನು ನಾವು ಕಾಣಬಹುದು. ಇನ್ನು ರಾಜ್ಯ ಸರ್ಕಾರದವರು ಕೇಂದ್ರದಿಂದ ತೆರಿಗೆ ಹಣದಲ್ಲಿ ಅನ್ಯಾಯ ಎಂದು ಆಗಾಗ್ಗೆ ಹೇಳುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಸಿದ್ದರಾಮಯ್ಯನವರು ಚೊಚ್ಚಲ ಬಜೆಟ್ ಅನ್ನು ಮಂಡಿಸಿದಾಗ, ಬಜೆಟ್ ಭಾಷಣದಲ್ಲಿ ಅವರು ಮಾತನಾಡಿದ್ದೇನೆಂದರೆ, "ನಮಗೆ ಕೇವಲ 27 ಪ್ರತಿಶತ ತೆರಿಗೆ ಪಾಲು ಸಿಗುತ್ತಿದೆ. ನಮಗೆ ಕನಿಷ್ಠ ಪ್ರತಿಶತ 40 ಕ್ಕೆ ಏರಿಸಬೇಕು" ಎಂದು ಹೇಳಿರುತ್ತಾರೆ. ಅವೊತ್ತಿನ ದಿವಸ ಕೇಂದ್ರದಲ್ಲಿ ಶ್ರೀ ಪಿ.ವಿ. ನರಸಿಂಹರಾವ್‌ರವರು ಪ್ರಧಾನ ಮಂತ್ರಿಗಳಾಗಿದ್ದರು. ಶ್ರೀ ಮನಮೋಹನ್‌ಸಿಂಗ್‌ರವರು ಹಣಕಾಸು ಖಾತೆಯ ಸಚಿವರಾಗಿದ್ದರು. ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಆಗ ನಮ್ಮ ರಾಜ್ಯದಲ್ಲಿ ಹಣಕಾಸು ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು ಸಹ ಆಗಿದ್ದರು. ಆಗ ಅವರು ಹೇಳಿದ ಮಾತು ಏನೆಂದರೆ, "ನಮಗೆ ತೆರಿಗೆ ಪಾಲಿನಲ್ಲಿ ಪ್ರತಿಶತ 40 ಕೊಡಬೇಕೆಂದು" ಹೇಳಿದ್ದರು. ಆದರೆ, ಈಗ ಕೇಂದ್ರ ಸರ್ಕಾರ 41 ಪ್ರತಿಶತ ಕೊಡುತ್ತಿದೆ. ರಾಜ್ಯ ಸರ್ಕಾರದ ಬೇಡಿಕೆ ಇದ್ದದ್ದೇ, ಶೇಕಡ 40. ಆದರೆ, ಕೇಂದ್ರ ಸರ್ಕಾರ ಕೊಡುತ್ತಿರುವುದು ಶೇಕಡ 41. ನಮ್ಮ ತೆರಿಗೆ ಪಾಲಿನಲ್ಲಿ ಕನಿಷ್ಠ ಶೇಕಡ 40 ರಷ್ಟು ನಮಗೆ ನೀಡಬೇಕೆಂದು ರಾಜ್ಯ ಸರ್ಕಾರದ ಬೇಡಿಕೆಯಾಗಿತ್ತು. ಆದರೆ, ರಾಜ್ಯ ಸರ್ಕಾರ ಕೇಳಿದ್ದಕ್ಕಿಂತಲೂ ಶೇಕಡ 1 ರಷ್ಟು ಹೆಚ್ಚು ತೆರಿಗೆ ಪಾಲು ಕೇಂದ್ರ ಸರ್ಕಾರ ನಮಗೆ ಕೊಟ್ಟಿರುತ್ತದೆ. ಅದನ್ನು ಕೊಟ್ಟಿದ್ದು, ಶ್ರೀ ನರೇಂದ್ರ ಮೋದಿಯವರಾಗಿದ್ದು, ಅವರ ಬಗ್ಗೆ ಒಂದು ಮೆಚ್ಚುಗೆಯ ಮಾತು ಇದೆಯೇ? ಇವರ ನೀತಿ ಹೇಗಿದೆ ಎಂದರೆ, "ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಎನ್ನುವ ಗಾದೆ ಮಾತಿನಂತಿದೆ. ಅಂದರೆ, ಮೊಸರಿನಲ್ಲಿ ಕಲ್ಲು ಹುಡುಕುವ ನೀತಿ ಇವರದ್ದಾಗಿದೆ. ಶ್ರೀ ಮನಮೋಹನ್ ಸಿಂಗ್‌ರವರು 10 ವರ್ಷಗಳ ಕಾಲ ಪ್ರಧಾನ ಮಂತ್ರಿಯಾಗಿ ಕರ್ನಾಟಕ ರಾಜ್ಯಕ್ಕೆ ಕೊಟ್ಟಂತಹ ತೆರಿಗೆ ಪಾಲು ರೂ.81,795 ಕೋಟಿಗಳು ಮಾತ್ರ. 2004-05ರಲ್ಲಿ ರೂ.3,409

ಕೋಟಿಗಳ ತೆರಿಗೆ ಪಾಲು; 2005-06ರಲ್ಲಿ ರೂ.4,247 ಕೋಟಿಗಳ ತೆರಿಗೆ ಪಾಲು; 2006-07ರಲ್ಲಿ ರೂ.5,017 ಕೋಟಿಗಳ ತೆರಿಗೆ ಪಾಲು; ಈ ರೀತಿ ಮುಂದುವರೆದು 2013-14ರಲ್ಲಿ ರೂ.14,185 ಕೋಟಿಗಳ ತೆರಿಗೆ ಪಾಲು; ಇದೇ ಗರಿಷ್ಠ ತೆರಿಗೆ ಪಾಲಾಗಿರುತ್ತದೆ. ಒಟ್ಟಾರೆಯಾಗಿ, ರೂ.81,795 ಕೋಟಿಗಳ ತೆರಿಗೆ ಪಾಲನ್ನು ನಮ್ಮ ರಾಜ್ಯಕ್ಕೆ ನೀಡಲಾಗಿರುತ್ತದೆ. ಆದರೆ, ಶ್ರೀ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾದ ನಂತರ, 2014-2024ರವರೆಗೆ ರೂ.2,85,452 ಕೋಟಿಗಳ ತೆರಿಗೆ ಪಾಲನ್ನು ಕೊಟ್ಟಿದ್ದಾರೆ. ರೂ.81,795 ಕೋಟಿ ದೊಡ್ಡದೇ ಅಥವಾ ರೂ.2,85,452 ಕೋಟಿ ದೊಡ್ಡದೇ? ಸಾಮಾನ್ಯ ಕೂಡಿ ಕಳೆಯುವ ಲೆಕ್ಕ ಬರುವವನಿಗೂ ಸಹ ಯಾವುದು ದೊಡ್ಡದು ಎಂಬುದು ಗೊತ್ತಾಗುತ್ತದೆ. ಆದರೂ ಅನ್ಯಾಯ ಎನ್ನುವಂತಹ ಮಾತನ್ನು ನಮ್ಮ ರಾಜ್ಯದವರು ಹೇಳುತ್ತಾರೆ. ಈ ವರ್ಷ ಕೇಂದ್ರದಿಂದ ನಮ್ಮ ರಾಜ್ಯಕ್ಕೆ ತೆರಿಗೆ ಪಾಲು ಸಿಕ್ಕಿರುವುದು ರೂ.1,63,000 ಕೋಟಿಗಳು. ಆದರೆ, 2013-14ರಲ್ಲಿ ಕೇವಲ ಮೂರು ಸಾವಿರ ಚಿಲ್ಲರೆ ಕೋಟಿ ತೆರಿಗೆ ಪಾಲು ಸಿಗುತ್ತಿತ್ತು. ಆಗ ನಮ್ಮ ರಾಜ್ಯದವರು ಮೌನವಾಗಿದ್ದರು. ಈಗ ರೂ.1,63,000 ಕೋಟಿಗಳ ತೆರಿಗೆ ಪಾಲು ಕೊಟ್ಟರೂ ಸಹ, ಅನ್ಯಾಯ, ಅನ್ಯಾಯ ಎಂದು ಹೇಳುವುದನ್ನು ನೋಡಿದರೆ, "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಎನ್ನುವಂತಹ ನೀತಿಯನ್ನು ತೋರಿಸುವಂತಹ ಕೆಲಸ ಮಾಡುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ನಡೆಯುತ್ತಿರುವಂತಹ ಪ್ರತಿಭಟನೆಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಂತೆ, ಕಾಂಗ್ರೆಸ್ ಸರ್ಕಾರದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ, ಆಶಾ ಕಾರ್ಯಕರ್ತೆಯರಿಗೆ ಸಂಬಳ ಹೆಚ್ಚಿಸುವ ಭರವಸೆಯನ್ನು ಕೊಟ್ಟಿದ್ದರು. ಆದರೆ, ಅವರಿಗೆ ಸಂಬಳ ಇನ್ನೂ ಹೆಚ್ಚು ಮಾಡಿರುವುದಿಲ್ಲ. ಹಾಗಾಗಿ, ಆಶಾ ಕಾರ್ಯಕರ್ತೆಯರು ಪ್ರತಿಭಟನೆ ಮಾಡುತ್ತಿದ್ದಾರೆ. ಅದೇ ರೀತಿ, ಅತಿಥಿ ಉಪನ್ಯಾಸಕರ ಸಂಬಳ ಹೆಚ್ಚಿಸುವ ಭರವಸೆಯನ್ನು ಸಹ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿತ್ತು. ಅಲ್ಲದೇ, ಅತಿಥಿ ಉಪನ್ಯಾಸಕರ ಪರವಾಗಿ ಪ್ರತಿಪಕ್ಷದ ನಾಯಕರಾಗಿದ್ದಂತಹ ಶ್ರೀ ಸಿದ್ದರಾಮಯ್ಯನವರು ಅಂದು ಸದನದಲ್ಲಿ ಗರ್ಜನೆ ಮಾಡಿದ್ದು, ಇಂದು ಮೌನವಾಗಿದ್ದಾರೆ. ಅತಿಥಿ ಉಪನ್ಯಾಸಕರು ಇವೊತ್ತಿನ ದಿವಸ ನಗರ ಫ್ರೀಡಂ ಪಾರ್ಕ್‌ನಲ್ಲಿ ಚಳುವಳಿ ಮಾಡುತ್ತಿದ್ದಾರೆ. ಅದೇ ರೀತಿ, ಸಾರಿಗೆ ಇಲಾಖೆಯ ನೌಕರರ ಮುಷ್ಕರ; ಆರೋಗ್ಯ ಕ್ಷೇತ್ರಕ್ಕೆ ಕಾಂಗ್ರೆಸ್ ಸರ್ಕಾರದ ಎಡವಟ್ಟಿನಿಂದ ಬೇಸತ್ತು ಸರ್ಕಾರಿ ವೈದ್ಯರಿಂದ ಮುಷ್ಕರ; 108 ಅಂಬ್ಯುಲೆನ್ಸ್ ಕೆಟ್ಟು ಡ್ರೈವರ್‌ಗಳಿಗೆ ಸಂಬಳ ಕೊಡದೇ ಸತಾಯಿಸುತ್ತಿರುವ ಸರ್ಕಾರದ ನೀತಿಯ ವಿರುದ್ಧ 108 ಅಂಬ್ಯುಲೆನ್ಸ್ ನೌಕರರಿಂದ ಮುಷ್ಕರ; ರೂ.37,000 ಕೋಟಿ ರೂಪಾಯಿಗಳ ಗುತ್ತಿಗೆದಾರರ ಹಣವನ್ನು ಬಾಕಿ ಉಳಿಸಿಕೊಂಡಿದ್ದಾರೆಂದು, ಗುತ್ತಿಗೆದಾರರಿಂದ ಮುಷ್ಕರ;

(ಮುಂದು)

(417) 16.03.2026 ವೈಎಲ್-ಆರ್‌ಎನ್ 5.20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-**

ಉದ್ಯೋಗ ನೇಮಕಾತಿಯಿಂದ ಆಗುತ್ತಿರುವ ವಿಳಂಬ ನೀತಿಯನ್ನು ಪ್ರತಿಭಟಿಸಿ, ಯುವಕರ ಆಕ್ರೋಶ/ಹೋರಾಟ ನಡೆಯುತ್ತಿದೆ. ಹಾಗೆಯೇ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಅನುದಾನದಲ್ಲಿ ದಲಿತರಿಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ, 'ನಮ್ಮ ಹಣವನ್ನು ನಮಗೆ ಕೊಡಿ' ಎಂದು ದಲಿತರಿಂದ ಹೋರಾಟ ನಡೆಯುತ್ತಿದೆ. ಸಂಬಳ ಬಾರದೇ ಇರುವ ಪ್ರಯುಕ್ತ ಆತ್ಮಹತ್ಯೆ ಮಾಡಿಕೊಂಡಿರುವ ಸರ್ಕಾರಿ ನೌಕರರ ಆಕ್ರೋಶ, ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಹಾವಳ ವಿರುದ್ಧ ರೈತರಿಂದ ಚಳುವಳ, ಕ್ಯಾಬ್ ಡ್ರೈವರ್‌ಗಳ ಹೋರಾಟ, ಪೌರ ಕಾರ್ಮಿಕರಿಂದ ಪ್ರತಿಭಟನೆ, ರಾಜ್ಯ ಸರ್ಕಾರದ ವಿರುದ್ಧ ಕಬ್ಬು ಬೆಳೆಗಾರರಿಂದ ಹೋರಾಟ, ಇದು ಹೋರಾಟದ ಸ್ಯಾಂಪಲ್‌ಗಳಾಗಿದ್ದು, ಇದೇ ರೀತಿ ಆಶಾಕಾರ್ಯಕರ್ತೆಯರು, ವೈದ್ಯರು, ರೈತರು ಎಲ್ಲರನ್ನು ಒಳಗೊಂಡಂತೆ ಹೋರಾಟ ಮಾಡುತ್ತಿರುವುದನ್ನು ಗಮನಿಸಬಹುದು.

2023-24ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಯೋಜನೆ ಮೂಲಕ ಎಸ್.ಸಿ./ಎಸ್.ಟಿ. ಸಮುದಾಯದವರಿಗೆ ಹಂಚಿಕೆಯಾದ ಅನುದಾನದಲ್ಲಿ ಇದುವರೆವಿಗೂ ರೂ.50,000 ಕೋಟಿಗಿಂತ ಹೆಚ್ಚು ಅನುದಾನವನ್ನು ಗ್ಯಾರಂಟಿ ಯೋಜನೆಗಳ ಬಳಕೆಗೆ ಬಳಸಿಕೊಳ್ಳಲಾಗಿದ್ದು, 2023-24ನೇ ಸಾಲಿನಲ್ಲಿ ರೂ.11,144 ಕೋಟಿ; 2024-25ನೇ ಸಾಲಿನಲ್ಲಿ ರೂ.14,000 ಕೋಟಿ; 2025-26ನೇ ಸಾಲಿನಲ್ಲಿ ರೂ.13,000 ಕೋಟಿ; 2026-27ನೇ ಸಾಲಿನಲ್ಲಿ ರೂ.14,198 ಕೋಟಿಗಳಾಗಿವೆ.

ನೀರಾವರಿಗೆ ಪುಡಿ ಕಾಸು; ಯುವನಿಧಿಗೆ ಟಾಟಾ; ಚುನಾವಣಾ ಸಂದರ್ಭದಲ್ಲಿ ಯುವನಿಧಿಗೆ ಏನೆಂದು ಭರವಸೆ ನೀಡಿದ್ದರೂ, ಆ ಯುವನಿಧಿಗೆ ಟಾಟಾ ಹೇಳಲಾಗಿದೆ. ಕನ್ನಡಿಗರಿಗೆ ಸಾಲದ ಬರೆ; ಅಲ್ಪಸಂಖ್ಯಾತರಿಗೆ ಮಾತ್ರ ಬರಪೂರ ಅನುದಾನ. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ. ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಡೆಗಣನೆ; ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕಕ್ಕೆ ಮೂಗಿಗೆ, ಮೊಣಕೈಗೆ ತುಪ್ಪ ಹಚ್ಚಿದಂತೆ ಎನ್ನುವ ಹಾಗೆ ಬಾಯಿಗೆ ತುಪ್ಪ ಸವರದೇ 'ಮೂಗಿಗೆ, ಮೊಣಕೈಗೆ ತುಪ್ಪ' ಹಚ್ಚುವಂಥ ಕೆಲಸ ಮಾಡಿದ್ದಾರೆ. ಈ ವರದಿ ಒಂದು ಸ್ಯಾಂಪಲ್ ಆದರೆ, ಇದರ ಜೊತೆಗೆ ಇವತ್ತು ನನಗೆ ಆರ್.ಡಿ.ಪಿ.ಆರ್. ಇಲಾಖೆಯಿಂದ ದೊರೆತಿರುವ ಉತ್ತರದಲ್ಲಿ 2023-24ನೇ ಸಾಲಿನಲ್ಲಿ ರಸ್ತೆ ನಿರ್ಮಾಣ 1,277 ಕಿ.ಮೀ. ಆಗಿದ್ದು, ರಸ್ತೆ ದುರಸ್ತಿ 4,727 ಕಿ.ಮೀ. ಆಗಿದೆ. ಈ ವರ್ಷ ರಸ್ತೆ ನಿರ್ಮಾಣ 296 ಕಿ.ಮೀ. ಆಗಿದ್ದು, ರಸ್ತೆ ದುರಸ್ತಿ 1,966 ಕಿ.ಮೀ. ಆಗಿದೆ ಎನ್ನುವಂಥ ಮಾಹಿತಿ ಇದೆ. ನಾನು ಆದಷ್ಟು censor ಮಾಡಿ ವಿಚಾಗಳನ್ನು ಹೇಳುತ್ತಿದ್ದೇನೆ.

ವಿಧಾನ ಪರಿಷತ್ತು ಮತ್ತು ವಿಧಾನ ಸಭೆ ಆಪ್ತ ಸಹಾಯಕರಿಗೂ ಸಮಯಕ್ಕೆ ಸರಿಯಾಗಿ ವೇತನ ಪಾವತಿಯಾಗದೇ ಅವರು ಸಹ ಆರ್ಥಿಕ ಮುಗ್ಗಟ್ಟನ್ನು ಎದುರಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಲದ ಕಂತನ್ನು ಭರಿಸುವುದಕ್ಕಿಂತ ಬಡ್ಡಿ ಜಾಸ್ತಿಯಾಗಿದೆ. ಬಡ್ಡಿ ಏರಿಕೆ ಪ್ರಮಾಣ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ರಾಜಕೀಯದ

ಸಲುವಾಗಿ ಮಾತನಾಡುವುದಲ್ಲ. ಆರ್ಥಿಕ ತಜ್ಞರೇ 'ಸಾಲದ ಸುಳಿಯಲ್ಲಿ ಕರ್ನಾಟಕ ಸಿಕ್ಕಿದೆ' ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಅಧಿಕಾರವಧಿಯಲ್ಲಿಯೇ ರೂ.4,36,833 ಕೋಟಿ ಸಾಲವಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ರೂ.1,63,000 ಕೋಟಿ ಸಾಲ ಇದ್ದು; ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರದ ಅಸ್ತಿತ್ವದಲ್ಲಿದ್ದಾಗ ರೂ.1,000 ಕೋಟಿ ಸಾಲ ಇದ್ದು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರ ಒಟ್ಟು ಕಾಲಾವಧಿಯಲ್ಲಿ ರೂ.67,000 ಕೋಟಿ ಸಾಲ ಇದ್ದು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ.ಸದಾನಂದಗೌಡರವರ ಕಾಲಾವಧಿಯಲ್ಲಿ ರೂ.24,000 ಕೋಟಿ ಸಾಲ ಇದ್ದು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ನಾಲ್ಕೂವರೆ ವರ್ಷಗಳ ಕಾಲಾವಧಿಯಲ್ಲಿ ರೂ.20,000 ಕೋಟಿ ಸಾಲ ಇದ್ದು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎನ್.ಧರ್ಮಸಿಂಗ್‌ರವರ 20 ತಿಂಗಳ ಕಾಲಾವಧಿಯಲ್ಲಿ ರೂ.14,000 ಕೋಟಿ ಸಾಲ ಇದ್ದು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರ ಒಟ್ಟು ಕಾಲಾವಧಿಯಲ್ಲಿ ರೂ.5,664 ಕೋಟಿ ಸಾಲ ಇದ್ದು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಒಟ್ಟು ಕಾಲಾವಧಿಯಲ್ಲಿ ಆಗಿರುವಂಥ ಸಾಲ ರೂ.4,36,833 ಕೋಟಿಗಳಾಗಿದ್ದು, ಅವರು 'ಸಾಲದ ರಾಮಯ್ಯ' ಆಗಿದ್ದಾರೆ. ಬರೀ ಸಿದ್ದರಾಮಯ್ಯ ಆಗಿಲ್ಲ, ಸಾಲದ ರಾಮಯ್ಯ ಆಗಿದ್ದಾರೆ ಎನ್ನುವ ಮಾತನ್ನು ಈ ಅಂಕಿಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಹಿಂದಿನ ಸರ್ಕಾರ ಸಾಲ ಬಿಟ್ಟು ಹೋಗಿತ್ತು ಎಂದು ಹೇಳುತ್ತಾರೆ. ಹಾಗಾದರೆ, ಈ ಸಾಲವನ್ನು ಅವರು ತೀರಿಸಿ ಹೋಗುತ್ತಾರೆಯೇ? ನಾವೇ ಸಾಲವನ್ನು ತೀರಿಸುತ್ತೇವೆ ಎಂದು ನಮಗೆ ವಾಗ್ದಾನ ಕೊಡಲಿ. 2028ನೇ ಇಸವಿಯ ಚುನಾವಣೆ ಬರುವ ಮೊದಲೇ ನಾನು ಮಾಡಿರುವ ಅಷ್ಟು ಸಾಲವನ್ನು ತೀರಿಸಿ ಹೋಗುತ್ತೇನೆ ಎಂದು ವಾಗ್ದಾನ ಕೊಡಲಿ, ಆಗ ನಾವು ಕೂಡ 'ಗಂಡು ಮಗ ಕಣಯ್ಯ; ಇದ್ದರೆ ಸಿದ್ದರಾಮಯ್ಯನವರ ಹಾಗೆ' ಇರಬೇಕೆಂದು ಹೇಳುತ್ತೇವೆ. ಯಾರು ಇಷ್ಟು ದೊಡ್ಡ ಮೊತ್ತದ ಸಾಲವನ್ನು ತೀರಿಸುವುದು? ಈ ಸಾಲವನ್ನು ಮುಂದೆ ಅಧಿಕಾರಕ್ಕೆ ಬರುವಂಥ ಸರ್ಕಾರ ತೀರಿಸಬೇಕಾಗುತ್ತದೆ. ಸರ್ಕಾರ ಭರಿಸುವಂಥ ತೆರಿಗೆ ಹೊರೆಯನ್ನು ಜನರು ಹೊತ್ತಿಕೊಳ್ಳಬೇಕು. ಇನ್ನೊಂದು ಮಾತೇನೆಂದರೆ, 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂಥ ಹೆಗ್ಗಳಿಕೆ ಮಾತಿದೆ.

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಏರಿಕೆ ಮಾಡದೇ ಇರುವಂಥ ದರ ಏರಿಕೆಯೇ ಇಲ್ಲ. ಅಷ್ಟು ದರ ಏರಿಕೆ ಮಾಡಿರುವುದನ್ನು ನಾವು ಗಮನಿಸಬಹುದು. ಯಾವ್ಯಾವ ದರವನ್ನು ಏರಿಕೆ ಮಾಡಿದ್ದಾರೆ ಎಂದರೆ, ಹಾಲು, ವಿದ್ಯುತ್, ಬಸ್ಸು, ಮೆಟ್ರೋ, ದರ ಏರಿಸಿದ್ದಾರೆ ಮತ್ತು ಡೀಸೆಲ್, ಪೆಟ್ರೋಲ್ ಮೇಲೆ ಸೆಸ್ ವಿಧಿಸುವುದರ ಮೂಲಕ ಅದರ ದರವನ್ನೂ ಏರಿಕೆ ಮಾಡಿದರು. ಅದರ ಜೊತೆಗೆ ಆರ್.ಟಿ.ಸಿ. ಫಹಣಿಗೆ ರೂ.15 ಇರುವುದನ್ನು ರೂ.30 ಕ್ಕೆ ಏರಿಕೆ ಮಾಡಿದರು. ಹಾಗೆಯೇ ರೂ.20 ಇದ್ದ ಸ್ಟ್ಯಾಂಪ್ ಪೇಪರ್ ಮಾಯವಾಗಿ ರೂ.100 ಆಗಿದೆ. ರೂ.100 ಸ್ಟ್ಯಾಂಪ್ ಪೇಪರ್ ಜಾಗದಲ್ಲಿ ರೂ.500 ಸ್ಟ್ಯಾಂಪ್ ಪೇಪರ್ ಬಂದು ಕುಳಿತುಕೊಂಡಿತು. ಯಾವುದರ ದರವನ್ನು ಏರಿಕೆ ಮಾಡದೇ ಹಾಗೆಯೇ ಬಿಟ್ಟಿದ್ದಾರೆ ಎಂಬುದನ್ನು ಹೇಳಲಿ. 5 ರೂಪಾಯಿ ಇದ್ದ ಜನನ-ಮರಣ ಪ್ರಮಾಣಪತ್ರವು

50 ರೂಪಾಯಿ ಆಗಿತ್ತು. ಕಸದ ದರ, ನೀರಿನ ದರವನ್ನು ಏರಿಕೆ ಮಾಡಿದ್ದು, ಯಾವುದೇ ವಸ್ತುವಿನ ದರವನ್ನು ಏರಿಕೆ ಮಾಡುವುದನ್ನು ಬಿಟ್ಟಿಲ್ಲ. ಹಾಗಾಗಿ, ಸ್ಪಷ್ಟವಾದ ಗಾದೆ ಮಾತೇನೆಂದರೆ, 'ಹಾಡು ಮುಟ್ಟದ ಸೊಪ್ಪಿಲ್ಲ.' ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಏರಿಕೆ ಮಾಡದೇ ಇರುವಂಥ ದರ ಯಾವುದು ಇಲ್ಲ. ಎಲ್ಲಾ ವಸ್ತುವಿನ ದರವನ್ನು ಏರಿಕೆ ಮಾಡುವಂಥ ಕೆಲಸವನ್ನು ಮಾಡಿದ್ದಾರೆ. ಎಲ್ಲಾ ಅಗತ್ಯ ವಸ್ತುಗಳ ದರದಲ್ಲಿ ಏರಿಕೆಯಾಗಿದೆ. ವಿಜಯವಾಣಿ ಸಂಪಾದಕೀಯದಲ್ಲಿ 'ಬೆಲೆ ಏರಿಕೆ ಬಿಸಿ' ಎಂದು ವರದಿಯಾಗಿದೆ. ಈ ರೀತಿಯಾಗಿ 'ಚುನಾವಣೆ ಬೆನ್ನಲ್ಲೆ ಪೆಟ್ರೋಲ್, ಡೀಸೆಲ್ ಏರಿಕೆಯ ಶಾಕ್' ಕೊಟ್ಟಿದ್ದಾರೆ. ಕೇಂದ್ರ ಸರ್ಕಾರವು ದರವನ್ನು ಇಳಕೆ ಮಾಡಿದರೆ, ರಾಜ್ಯ ಸರ್ಕಾರವು ಸೆಸ್ ವಿಧಿಸುವುದರ ಮೂಲಕ ಅದರ ಲಾಭವು ಜನರಿಗೆ ಸಿಗದಂತೆ ಮಾಡಿದ್ದಾರೆ. ಬಜೆಟ್‌ನಲ್ಲಿ ಘೋಷಣೆ ಮಾಡಿ, take off ಆಗದೇ ಇರುವಂಥ ಯೋಜನೆಗಳ್ಯಾವುವು ಎಂದರೆ, ಬೆಂಗಳೂರಿನಲ್ಲಿ ರೂ.3,000 ಕೋಟಿ ವೆಚ್ಚದಲ್ಲಿ 300 ಕಿಲೋ ಮೀಟರ್ ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಾಣ, ರೂ.27,000 ಕೋಟಿ ವೆಚ್ಚದ ಪೆರಿಫೆರಲ್ ರಿಂಗ್ ರೋಡ್; Skydeck ನಿರ್ಮಾಣ ಇವೆಲ್ಲವೂ ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಅದ್ಯಾವುದೂ ಕೂಡ take off ಆಗಿಲ್ಲ. ಹೋಗಳಿಕೆಗಾಗಿ/ಜಾಹೀರಾತಿಗೆ ಮಾತ್ರ ಖರ್ಚಾಗಿದೆ. ಮೇಲ್ಸೆತುವೆ ಮತ್ತು grade separator ಇದ್ಯಾವುದೂ ಕೂಡ take off ಆಗಿಲ್ಲ. ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ 13 ಘೋಷಣೆಯಾಗಿದ್ದು, ಅದು ಸಹ take off ಆಗಿಲ್ಲ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿರವರೇ, ತಾವು ಮಾತನಾಡಿದ್ದು ಸಾಕು ಕುಳಿತುಕೊಳ್ಳಿ. ಈಗಾಗಲೇ ತಮ್ಮ ಮಾತನ್ನು ಪ್ರಾರಂಭಿಸಿ 50 ನಿಮಿಷಗಳಾಗಿವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನನಗೆ 5 ನಿಮಿಷ ಮಾತನಾಡಲು ಅವಕಾಶ ಕೊಡಿ, ನನ್ನ ಮಾತನ್ನು conclude ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿರವರೇ, ಆಗುವುದಿಲ್ಲ. ನಾನು ಬೆಲ್ ಹೊಡೆದ ಮೇಲೆ ಅದಕ್ಕೆ ಗೌರವ ಕೊಡಬೇಕು. ಈ ಸದನದಲ್ಲಿ ಮಾತನಾಡಲು ತಾವೊಬ್ಬರೆ ಇಲ್ಲ. ಎರಡು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಇದು ಬಾಕಿಗಳ ಸರ್ಕಾರವಾಗಿದ್ದು, ಗುತ್ತಿಗೆದಾರರಿಗೆ ರೂ. 38,000 ಕೋಟಿ, ಹೆಸ್ಕಾಂಗಳಿಗೆ 12,500 ಕೋಟಿ ಬಾಕಿ ಹಣ ಭರಿಸಬೇಕಾಗಿದೆ. ಹಾಗೆಯೇ ಗೃಹಲಕ್ಷ್ಮೀ ಯೋಜನೆ ಎರಡು ತಿಂಗಳ ಹಣವು ಎಲ್ಲಿಗೆ ಹೋಗಿದೆ ಎಂಬುದು ಗೊತ್ತೇ ಇಲ್ಲ, ಅದು ಕೂಡ ಹೈದರಾಲಿಯ ಲೆಕ್ಕ. ಶಕ್ತಿ ಯೋಜನೆಯ ರೂ.4,850 ಕೋಟಿ, ಬಿ.ಬಿ.ಎಂ.ಪಿ. ಗುತ್ತಿಗೆದಾರರಿಗೆ ರೂ.2,500 ಕೋಟಿ, ಸಾರಿಗೆ ಸಿಬ್ಬಂದಿಗಳಿಗೆ 38 ತಿಂಗಳ ವೇತನವಾದ ರೂ.2,000 ಕೋಟಿ ಬಾಕಿ ಹಣವನ್ನು ಸರ್ಕಾರ ಭರಿಸಬೇಕಾಗಿದೆ. ಸ್ಕ್ಯಾನಿಂಗ್ ಸೇವೆಯನ್ನು ನೀಡುತ್ತಿರುವ ಕಂಪನಿಗೆ....

**ಸಭಾಪತಿಯವರು:-** ಮಾನ್ಯ ಸಿ.ಟಿ. ರವಿಯವರೇ, ಸಭಾಪತಿಯವರ ಪೀಠಕ್ಕೆ ಕಿಮ್ಮತ್ತು ಕೊಡುವುದನ್ನು ಕಲಿಯಿರಿ. ತಾವು ಮಾತನಾಡಲು ಪ್ರಾರಂಭಿಸಿ, ಈಗಾಗಲೇ ಐವತ್ತು ನಿಮಿಷಗಳ ಸಮಯವನ್ನು ತೆಗೆದುಕೊಂಡಿದ್ದೀರಿ. ತಾವೊಬ್ಬರೆ ಈ ಸದನದಲ್ಲಿ ಮಾತನಾಡಲು ಇರುವುದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಇನ್ನೂ 5 ನಿಮಿಷ ಸಮಯ ಕೊಡಲು ಆಗುವುದಿಲ್ಲ, ಬೇಗ ಮಾತನ್ನು ಮುಗಿಸಿ.

(ಮುಂದು)

(418) 16.03.2026/5.30/ ಎಸ್‌ಕೆ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರೈತ ಅಸಹಾಯಕನಾಗಿ ತನ್ನ ತಿಥಿ ಕಾರ್ಡ್‌ನ್ನು ತಾನೇ ಪ್ರಿಂಟ್ ಮಾಡಿ ಹಂಚುವಂತಹ ಅಸಹಾಯಕ ಸ್ಥಿತಿ ಬಂದಿದೆ ಎಂದರೆ ಸರ್ಕಾರ ಗಂಭೀರವಾಗಿ ಆಲೋಚಿಸಬೇಕಾದಂತಹ ಸಂಗತಿ ಇದೆ. ಡಾ॥ ಡಿ.ಎಂ. ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ತಾಲ್ಲೂಕುಗಳು ಎಷ್ಟಿದ್ದವು, ಪ್ರೊ. ಎಂ. ಗೋವಿಂದ ರಾವ್ ವರದಿಯಲ್ಲಿ ಅದಕ್ಕಿಂತ ಜಾಸ್ತಿಯಾಗಿದ್ದಾವೆ. ಈಗ 177 ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳು.

**ಸಭಾಪತಿಯವರು:-** ಮಾನ್ಯ ತಿಮ್ಮಯ್ಯನವರೇ, ತಾವು ಮಾತನಾಡಿ.

**ಶ್ರೀ ಸಿ.ಟಿ. ರವಿ:-** ಅಭಿವೃದ್ಧಿಗೆ ಕೊಟ್ಟ ಹಣ ಎಲ್ಲಿ ಹೋಯಿತು ಎನ್ನುವುದನ್ನು

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಶುಕ್ರವಾರ ಸದನ ಮುಂದೂಡಲಾಯಿತು. ಮುಂದುವರೆದ ಭಾಗವನ್ನು ನನಗೆ ಇವತ್ತು ಮಾತನಾಡಿ ಎಂದು ಹೇಳಿದ್ದೀರಿ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಮಾನ್ಯ ತಿಮ್ಮಯ್ಯನವರು ಮಾತನಾಡಲಿ. ನಂತರ...

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಅವರು ಮುಂಚೆಯೇ ಮಾತನಾಡಬೇಕಾಗಿತ್ತು. ನಾನು ತಮ್ಮ ಬಳಿ submission ಮಾಡಿದೆ. ನನ್ನ ಮಾತು ಇನ್ನೂ conclude ಆಗಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈ ಬಜೆಟ್ ಎನ್ನುವುದು ಸಾಲದ ಬಜೆಟ್. ಜನರ ಮೇಲೆ ತೆರಿಗೆ ಹೊರೆಸಿದಂತಹ ಬಜೆಟ್. ಇದು ರೈತರ ಪಾಲಿಗೆ ಈ ಬಜೆಟ್‌ನಲ್ಲಿ ಯಾವುದೇ ಸಂಜೀವಿನಿ ಯೋಜನೆಗಳಿಲ್ಲ. ರೈತನನ್ನು ಆತ್ಮಹತ್ಯೆಗೆ ದೂಡಿರುವಂತಹ ಬಜೆಟ್. ಸರ್ಕಾರಿ ನೌಕರರನ್ನು ಆತ್ಮಹತ್ಯೆಗೆ ದೂಡಿರುವಂತಹ ಬಜೆಟ್. ಇದು ಯುವಕರಿಗೆ ವಿಶ್ವಾಸವನ್ನು ಹುಟ್ಟಿಸದೇ ಇರುವಂತಹ ಬಜೆಟ್. ಸಾಲದ ಸುಳಿಯಲ್ಲಿ ನಮ್ಮ ರಾಜ್ಯವನ್ನು ಸಿಲುಕಿಸಿರುವಂತಹ ಬಜೆಟ್. ಇವರು ಹದಿನೇಳು ಬಾರಿ ಬಜೆಟ್ ಮಂಡಿಸಿರುವುದು ಮಾತ್ರ ದಾಖಲೆ. ಇನ್ನೂ ಎಲ್ಲವೂ ಕೂಡ ಮುಳುಗಿಸಿದ್ದೇ ದಾಖಲೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-**ಮಾನ್ಯ ರಮೇಶ್ ಬಾಬುರವರೇ, ತಾವು ಅರ್ಧ ಗಂಟೆಗಳ ಕಾಲ ಮಾತನಾಡಿದ್ದೀರಿ. ಇನ್ನು ಹತ್ತು ನಿಮಿಷದಲ್ಲಿ ಮುಗಿಸಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಇಪ್ಪತ್ತು ನಿಮಿಷ ಮಾತ್ರ ಮಾತನಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ತಾವು ಅರ್ಧ ಗಂಟೆಗಳ ಕಾಲ ಮಾತನಾಡಿದ್ದೀರಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ನನ್ನದೊಂದು ಸಬ್‌ಮಿಷನ್ ಇದೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ತಾವು ಮಾತನಾಡಿರುವ ಬಗ್ಗೆ ನನ್ನ ಬಳಿ ರೆಕಾರ್ಡ್ ಇದೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಇಪ್ಪತ್ತು ನಿಮಿಷಗಳ ಕಾಲ ಮಾತನಾಡಿದೆ. ಆಗ ಮಾನ್ಯ ರವಿಕುಮಾರ್‌ರವರ ಚರ್ಚೆಗೆ ತೆಗೆದುಕೊಂಡರು. ಆಗ ಅದು ಬೇರೆ ಚರ್ಚೆಯಾಯಿತು.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ನನ್ನ ಬಳಿ ಮಾತನಾಡಿರುವ ರೆಕಾರ್ಡ್ ಇದೆ. ತಮಗೆ ಮಾತನಾಡಲು ಹತ್ತು ನಿಮಿಷ ಸಮಯವನ್ನು ಕೊಡುತ್ತೇನೆ. ತಮ್ಮ ಮಾತನ್ನು ಹತ್ತು ನಿಮಿಷದಲ್ಲಿ ಮುಗಿಸಿ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಮಾರ್ಚ್ ಆರನೇ ತಾರೀಖು ಸುಮಾರು 207 ಪುಟಗಳಷ್ಟು....

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ನೋಡಿ ಒಂದು ಗಂಟೆ ಹತ್ತು ನಿಮಿಷಗಳಿಂದ ಒಂದು ಗಂಟೆ ನಲವತ್ತು ನಿಮಿಷಗಳವರೆಗೆ ಸುಮಾರು ಮೂವತ್ತು ನಿಮಿಷಗಳ ಕಾಲ ಮಾತನಾಡಿದ್ದೀರಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಮಧ್ಯಪ್ರವೇಶಿಸಿ ಬೇರೆಯವರು ಮಾತನಾಡಿದರು.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ನನ್ನ ಬಳಿ ರೆಕಾರ್ಡ್ ಇದೆ. ಈ ಪೇಪರ್ ಸುಳ್ಳು ಹೇಳುತ್ತದೆಯಾ. ತಮಗೆ ಮಾತನಾಡಲು ಹತ್ತು ನಿಮಿಷಗಳಿಗಿಂತ ಹೆಚ್ಚು ಸಮಯ ಕೊಡುವುದಿಲ್ಲ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ತಾವು ಆ ರೀತಿ ಮಾಡಬೇಡಿ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ತಮಗೆ ಮಾತನಾಡಲು ಹತ್ತು ನಿಮಿಷಗಳಿಗಿಂತ ಹೆಚ್ಚು ಸಮಯ ಕೊಡುವುದಿಲ್ಲ. ಇಲ್ಲವೆಂದರೆ ಕುಳಿತುಕೊಳ್ಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ದಿನೇಶ್ ಗೂಳಿಗೌಡರವರ ಮಾತನಾಡುವ ಸಮಯ ಕೂಡ ನನಗೆ ಮಾತನಾಡಲು ಅನುಮತಿ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ತಮ್ಮ ಮಾತನ್ನು ಹಿಂತೆಗೆದುಕೊಳ್ಳುತ್ತೀರಾ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಒಬ್ಬರ ಬಗ್ಗೆ ಮತ್ತೊಬ್ಬರು ಮಾತನಾಡಬೇಡಿ. ನಾನು ಮಾತನಾಡಿ ಎಂದಾಗ ಮಾತನಾಡಿ. ಮಾನ್ಯ ರಮೇಶ್‌ಬಾಬುರವರೇ, ತಮಗೆ ಮಾತನಾಡಲು ಹತ್ತಿ ನಿಮಿಷಗಳ ಕಾಲ ಸಮಯವನ್ನು ಕೊಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಬಹುತೇಕ 207 ಪುಟಗಳ ಒಂದು ಅಯವ್ಯಯವನ್ನು ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಮೇಲೆ ಬಹಳ ಜನರು ನಾನಾ ಕಾರಣಗಳ ವ್ಯಾಖ್ಯಾನವನ್ನು ಮಾಡುತ್ತಿದ್ದಾರೆ. ನನಗೆ ಅನಿಸುವುದೇನೆಂದರೆ, ಈ ಬಜೆಟ್ ಮೇಲೆ ಯಾರು ವ್ಯಾಖ್ಯಾನ ಮಾಡುತ್ತಿದ್ದಾರೋ, ಅವರು ಇದನ್ನು ಓದಿದ್ದಾರೆಯೇ ಎಂಬ ಪ್ರಶ್ನೆ ನನಗಂತೂ ಬಂದಿದೆ. ನಾನು ಒಂದು ಗಾದೆ ಮಾತನ್ನು ಉಲ್ಲೇಖ ಮಾಡುತ್ತಾ, ನನ್ನ ಮಾತನ್ನು ಮುಂದುವರೆಸುತ್ತೇನೆ. ಒಂದು ಜನಪ್ರಿಯ ಒಗಟು ಏನೆಂದರೆ "ಮೇಲೆ ನೋಡಿದರೆ ನಾನಾ ಬಣ್ಣ, ಉಜ್ಜಿದರೆ ಒಂದೇ ಬಣ್ಣ" ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್‌ನ ಬಗ್ಗೆ ಯಾರು ಮಾತನಾಡುತ್ತಿದ್ದಾರೋ, ಅವರೆಲ್ಲರ ಮನಸ್ಥಿತಿ ಈ ಗಾದೆಯಲ್ಲಿ ಉತ್ತರ ಸಿಗುವಂತಹ ನಾಣ್ನುಡಿ ಇದು. ಈ ಒಗಟಿನಲ್ಲಿ "ಮೇಲೆ ನೋಡಿದರೆ ನಾನಾ ಬಣ್ಣ, ಉಜ್ಜಿದರೆ ಒಂದೇ ಬಣ್ಣ". ಹಾಗಾಗಿ ಪಾಪ ಅವರು

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿ, ತಮ್ಮ ಸ್ಥಾನದಿಂದ ಎದ್ದು ಹೋಗುತ್ತಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಸಾಲ ಮಾಡಿದ್ದಾರೆ ಎಂದು ಬಹಳ ಪ್ರಮುಖವಾಗಿ ಚರ್ಚೆ ಇಲ್ಲಿ ಆಗುತ್ತಿದೆ. ನಾನು ಒಂದು ಅಂಕಿ-ಅಂಶವನ್ನು ಈ ಸದನ ಮುಂದೆ ಹೇಳಬಯಸುತ್ತೇನೆ. ಇವತ್ತು ಯಾವುದೇ ಜನಪ್ರಿಯವಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇರಬಹುದು. ಸಾಲವನ್ನು ಹೊರತುಪಡಿಸಿ, ಬಜೆಟ್‌ನ್ನು ಕೊಡುವಂತಹ ಸ್ಥಿತಿಯಲ್ಲಿ ಯಾರು ಇಲ್ಲ. ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ನಿರಂತರವಾಗಿ 2014-15ನೇ ಸಾಲಿನಲ್ಲಿ 62 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2015-16ನೇ ಸಾಲಿನಲ್ಲಿ 68.08 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2016-17ನೇ ಸಾಲಿನಲ್ಲಿ 73.03 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2017-18ನೇ ಸಾಲಿನಲ್ಲಿ 81.03 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2018-19ನೇ ಸಾಲಿನಲ್ಲಿ 87.09 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2019-20ನೇ ಸಾಲಿನಲ್ಲಿ 97 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2020-21ನೇ ಸಾಲಿನಲ್ಲಿ 110 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2022-23ನೇ ಸಾಲಿನಲ್ಲಿ 134 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2023-24ನೇ ಸಾಲಿನಲ್ಲಿ 155 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. 2025-26ನೇ ಸಾಲಿನಲ್ಲಿ 185 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. ಈಗಿನ ಬಜೆಟ್‌ನಲ್ಲಿ 2026-27ನೇ ಸಾಲಿನಲ್ಲಿ 216 ಲಕ್ಷ

ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ಸಾಲದ ಬಗ್ಗೆ ಯಾರು ವ್ಯಾಖ್ಯಾನ ಮಾಡುತ್ತಾರೋ, ದಯಮಾಡಿ, ಅವರ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಇದನ್ನು ಆತ್ಮವಿಮರ್ಶೆ ಮಾಡಿಕೊಳ್ಳದೇ ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಏನಾದರೂ ಟೀಕೆ ಮಾಡುವುದಕ್ಕೆ ಬಂದರೆ ನಾನು ಒಂದೇ ಮಾತಿನಲ್ಲಿ ಹೇಳುವುದೇನೆಂದರೆ, ಮಾನ್ಯ ಸಿದ್ದರಾಮಯ್ಯನವರು ಯಾವತ್ತು ಕೂಡ ಅವರು ತುಂಬಿದ ಕೊಡ ಇದ್ದಹಾಗೆ. ಈ ರಾಜ್ಯದ ಸಾಮಾಜಿಕ ಬದ್ಧತೆ, ನ್ಯಾಯ, ಸಾಮಾಜಿಕ ಕಳಕಳಿಯ ಬಗ್ಗೆ not only for guarantees, ಬೇರೆ ಬೇರೆ ಕಾರ್ಯಕ್ರಮಗಳನ್ನು ಕೊಟ್ಟು ಇವತ್ತು ಈ ರಾಜ್ಯದಲ್ಲಿ ಅಭಿವೃದ್ಧಿಯ ಪಥವನ್ನು ಮುಂದಕ್ಕೆ ತೆಗೆದುಕೊಂಡಂತಹ ಏಕೈಕ ಮುಖ್ಯಮಂತ್ರಿ ಎಂದರೆ ಸನ್ಮಾನ್ಯ ಸಿದ್ದರಾಮಯ್ಯನವರು. ರಾಜ್ಯಸಭೆಯಲ್ಲಿ 20ನೇ ತಾರೀಖು ಡಿಸೆಂಬರ್ 2022ರಲ್ಲಿ ಆದಂತಹ ಹೇಳಿಕೆಯನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. Central Sponsored Schemes ನಲ್ಲಿ core of the core scheme no change in the erstwhile funding pattern. Core schemes ಇಲ್ಲಿ North-Eastern States ಗೆ Central government, funding ಮಾಡುತ್ತಿರುವಂತಹದ್ದು 90:10 ratio. Rest of the States 60:40 ratio. ಅಂದರೆ Central schemes ಏನೂ ಕೊಡುತ್ತಾರೆ ಹೆಸರಿಗೆ ಮಾತ್ರ Central Schemes. ರಾಜ್ಯ ಸರ್ಕಾರಗಳು ಶೇಕಡಾ 40 ರಷ್ಟು invest ಮಾಡಬೇಕು. ಇನ್ನೂ ಕೆಲವೊಂದು half-paying schemes ನಲ್ಲಿ ಮಾಡಿದ್ದಾರೆ. ಇದರಲ್ಲಿ 50:50 ratio. ಕೇಂದ್ರ ಸರ್ಕಾರದವರು ಶೇಕಡಾ 50 ರಷ್ಟು ನೀಡಿದರೆ ರಾಜ್ಯ ಸರ್ಕಾರ ಶೇಕಡಾ 50 ರಷ್ಟು ಕೊಡಬೇಕು. ನಮ್ಮ ದುರದೃಷ್ಟವೇನೆಂದರೆ, ರಾಜ್ಯಕ್ಕೆ ಈ ತರಹ schemes ಗಳನ್ನು ಕೊಟ್ಟುಬಿಟ್ಟು ಮತ್ತೆ ರಾಜ್ಯಕ್ಕೆ ಮೋಸ ಮಾಡುವಂತಹ ಕೇಂದ್ರದ ಪರಂಪರೆ ಇವತ್ತು ಸಹ ಮುಂದುವರೆಯುತ್ತಿದೆ. ಸನ್ಮಾನ್ಯ ಕೇಂದ್ರ ಸಚಿವರು ಪ್ರಶ್ನೆ ಸಂಖ್ಯೆ 1064 ಲೋಕಸಭಾ 5 ನೇ ಫೆಬ್ರವರಿ 2026 ಇಸವಿಯಲ್ಲಿ regarding IMPLEMENTATION OF SCHEMES IN KARNATAKA, ಕರ್ನಾಟಕದಲ್ಲಿ Central schemes ಅನ್ನು ಯಾವ ರೀತಿ ಅನುಷ್ಠಾನ ಮಾಡುತ್ತಿದ್ದೇವೆ ಮತ್ತು ಯಾವ ರೀತಿ ಅನುದಾನ ಕೊಟ್ಟಿದ್ದೇವೆ ಎಂಬ ಬಗ್ಗೆ ಹೇಳುತ್ತಾರೆ. ಅದರಲ್ಲಿ ಆರು item ನಲ್ಲಿ Name of the Scheme. ಎರಡನೇ ಯೋಜನೆಯಾದ 'ಜಲಜೀವನ್ ಮಿಷನ್' Financial Year-2024-25ನೇ ಸಾಲಿನಲ್ಲಿ ರೂ.3,804.41 ಕೋಟಿ sanction ಆಗಿದೆ. ಅಂದರೆ ರೂ. 3,804 ಕೋಟಿ ರೂಪಾಯಿಗಳು sanctioned. ಆದರೆ 570 ಕೋಟಿ ರೂಪಾಯಿಗಳು ಮಾತ್ರ ರಾಜ್ಯಕ್ಕೆ ಕೊಟ್ಟಿರುವಂತಹದ್ದು. ಅವರ ನಿಜವಾದ ಬಣ್ಣ ಏನೆಂದರೆ 'ಜಲಜೀವನ್ ಮಿಷನ್' ನಲ್ಲಿ ಏನು ಕೊಟ್ಟಿದ್ದಾರೆ ಎಂದರೆ ಎನ್ನುವುದನ್ನು ಫೆಬ್ರವರಿ ಲೋಕಸಭಾ ಅಧಿವೇಶನದಲ್ಲಿ ಕೇಂದ್ರ ಸಚಿವರು ಅಧಿಕೃತವಾಗಿ ಕೊಟ್ಟಂತಹ ಉತ್ತರದಲ್ಲಿ ಕಾಣಿಸುತ್ತಿದೆ. ಹಣಕಾಸಿನ ವರ್ಷ 2025-26ನೇ ಸಾಲಿನಲ್ಲಿ ಅದೇ ತರಹ "ಜಲಶಕ್ತಿ ಅಭಿಯಾನ ಯೋಜನೆ" ಯಲ್ಲಿ 2024-25ನೇ ಸಾಲಿನಲ್ಲಿ sanctioned 'zero and utilized zero and allotted 'zero' 2025-26ನೇ ಸಾಲಿನಲ್ಲಿ sanctioned ಮತ್ತು ಬಿಡುಗಡೆ ಇಲ್ಲ. ಕೇಂದ್ರ ಸರ್ಕಾರ ಯೋಜನೆಗಳಿಗೆ ಹಣ ನೀಡಿದ್ದೇವೆ ಎಂಬ ಬಗ್ಗೆ ನನ್ನ ಅನೇಕ ಮಿತ್ರರು

ಮಾತನಾಡುತ್ತಿದ್ದರು. ಕರ್ನಾಟಕ ರಾಜ್ಯ ಅದನ್ನು ಉಪಯೋಗಿಸಿಕೊಂಡಿಲ್ಲ. ಆ ಅನುದಾನವನ್ನು ವಾಪಸ್ಸು ಕಳುಹಿಸಿದ್ದಾರೆ. ಇವರು Utilization Certificate ಕೊಟ್ಟಿಲ್ಲ. ಕೇಂದ್ರ ಸರ್ಕಾರದಿಂದ ನೀಡಿರುವಂತಹ ಬಹಳಷ್ಟು ಅನುದಾನಗಳು ವಾಪಸ್ಸು ಹೋಗಿದೆ ಎಂಬ ಮಾತನ್ನು ಪದೇ ಪದೇ ಹೇಳುತ್ತಿದ್ದರು. ಸನ್ಮಾನ್ಯ ಪ್ರಿಯಾಂಕ್ ಖರ್ಗೆಯವರು ಇತ್ತೀಚೆಗೆ ಕೆಳಮನೆಯಲ್ಲಿ ಪ್ರಶ್ನೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ಕೊನೆಯದಾಗಿ ಐದು ನಿಮಿಷ ಮಾತ್ರ ಇದೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಯಾವ ಸಾಲಿನಲ್ಲಿ Utilization Certificate ಅನ್ನು ಕೊಟ್ಟಿದ್ದೇವೆ ಮತ್ತು ಇಷ್ಟಾದರೂ ಕೂಡ ಅನುದಾನ ಕೊಟ್ಟಿಲ್ಲ ಎಂಬ ಬಗ್ಗೆ ಕೆಳಮನೆಯಲ್ಲಿ ಮಾನ್ಯ ಪ್ರಿಯಾಂಕ್ ಖರ್ಗೆಯವರು ಸ್ಪಷ್ಟವಾಗಿ ಹೇಳಿದ್ದಾರೆ. 15ನೇ ಹಣಕಾಸಿನ ಆಯೋಗದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಆದಂತಹ ಹಣದ ಹಂಚಿಕೆಯಲ್ಲಿ ಸುಮಾರು 2,500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಬೇರೆ ಬೇರೆ ಯೋಜನೆಗಳಲ್ಲಿ 11,500 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಕೇಂದ್ರ ಸರ್ಕಾರದವರು ಮಾತಿನ ಪ್ರಕಾರ ನಡೆದುಕೊಳ್ಳುತ್ತಿಲ್ಲ ಎಂಬ ಮಾತನ್ನು ಬಹಳ clear-cut ಆಗಿ with statistics ಮಾಹಿತಿಯನ್ನು ಮಾನ್ಯ ಸಚಿವರು ನೀಡಿದ್ದಾರೆ. ಬಜೆಟ್‌ಗೆ ಸಂಬಂಧಪಟ್ಟಂತೆ ಇನ್ನೊಂದು ಮಾತನ್ನು ಹೇಳುವುದೇನೆಂದರೆ, 1,09,000 ಕೋಟಿ ರೂಪಾಯಿಗಳ ವಿವಿಧ ಯೋಜನೆಗಳು not only guarantees, free power, pension scheme, social commitment ಇರಬಹುದು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಕೊಡುತ್ತಿದೆ. ವಿರೋಧ ಪಕ್ಷದವರು ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದರೆ "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಆ ರೀತಿಯಲ್ಲಿ ಇಡೀ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಮಾನ್ಯ ಸಿದ್ದರಾಮಯ್ಯನವರು ಕೊಟ್ಟಿರುವಂತಹ ಬಜೆಟ್‌ನ್ನು ಟೀಕೆ ಮಾಡುವ ನಿಟ್ಟಿನಲ್ಲಿ ವಿರೋಧ ಪಕ್ಷದವರು ಮುಂದಾಗಿದ್ದಾರೆ. ಬಿ.ಜೆ.ಪಿ. ಯವರಿಗೆ ಅವಕಾಶ ಸಿಕ್ಕಿದಂತಹ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಬಹಿರಂಗವಾಗಿ ಹೇಳಿದರು. ಸದನದಲ್ಲಿ ಪ್ರಣಾಳಿಕೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿರಿ. ಆದರೆ ರೈತರ ಸಾಲ ಮನ್ನಾ ಮಾತ್ರ ಮಾಡಲಿಲ್ಲ ಎಂದರೆ ನಾನು ಮಿಷನ್‌ನಲ್ಲಿ ನೋಟ್ ಪ್ರಿಂಟ್ ಮಾಡುವುದಕ್ಕಾಗುತ್ತದೆಯೇ? ಎಂದು ಹೇಳಿದರು. ಅಂದಿನ ಬಿ.ಜೆ.ಪಿ., ಮುಖ್ಯಮಂತ್ರಿಯವರು ಕೆಳಮನೆಯಲ್ಲಿ ಕೊಟ್ಟಂತಹ ಹೇಳಿಕೆ. ಇವರು ಘೋಷಣೆಗೆ ಅಷ್ಟೆ ಸೀಮಿತವಾಗಿ "ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ" ಎಂದು ಹೇಳಿ ಆ ಗಾದೆಗೆ ಅನುಗುಣವಾಗಿ ಇವತ್ತು ವಿರೋಧ ಪಕ್ಷದವರು ನಡೆದುಕೊಳ್ಳುತ್ತಿದ್ದಾರೆ. ಯಾವತ್ತು ಸಹ ಕಾಂಗ್ರೆಸ್ ಪಕ್ಷ ತನ್ನ ಬದ್ಧತೆಗೆ ಅನುಗುಣವಾಗಿ ನಡೆದುಕೊಳ್ಳುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಕೊನೆಯದಾಗಿ, ಇನ್ನೊಂದು ಮಾತನ್ನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ. ತಾವು ಸಹ ಸಭಾಪತಿಗಳಾಗಿ ಬೇರೆ ಬೇರೆ ಸಂದರ್ಭದಲ್ಲಿ ಉಲ್ಲೇಖ ಮಾಡಿದ್ದೀರಾ. ಮಾನ್ಯ ಜೆ.ಹೆಚ್. ಪಟೇಲ್‌ರವರು ಅನೇಕ ಸಂದರ್ಭಗಳಲ್ಲಿ "ಹೋರಿ ಹೋಗಬೇಕಾದರೆ ಹಿಂದೆ ಏನೋ ಬೀಳುತ್ತದೆ ಎಂದು ನರಿ ಹೋಗುತ್ತಿತ್ತಂತೆ" ಒಂದು ಕಥೆಯನ್ನು ಹೇಳುತ್ತಿದ್ದರು. ಆ ಪರಿಸ್ಥಿತಿಗೆ ಇವತ್ತಿಗೆ

ವಿರೋಧ ಪಕ್ಷದವರು ಬಂದಿದ್ದಾರೆ. ಇವರು ಕನಸು ಕಾಣುವುದು ಬೇಡ. ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರ ನಾಯಕತ್ವದಲ್ಲಿ ನಮ್ಮ ಸರ್ಕಾರ ಸಾಮಾಜಿಕ ನ್ಯಾಯ ಮತ್ತು ಬದ್ಧತೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತದೆ. ಅದಕ್ಕೆ ಅನುಗುಣವಾಗಿ ಇವತ್ತು ಬಜೆಟ್‌ನ್ನು ಮಂಡಿಸಿದ್ದಾರೆ. ನಮ್ಮ ಬಜೆಟ್ ಸಾಮಾಜಿಕ ನ್ಯಾಯಕ್ಕೆ ಪೂರಕವಾಗಿದೆ ಎಂಬ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್ ಜೈ ಕರ್ನಾಟಕ.

(ಮುಂದು)

(419) 16.03.2026 5.40 ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**9. ಪ್ರಕಟಣೆಗಳು**

**ಅ) "ವಿಧಾನ ಸಭೆಯಿಂದ ಅಂಗೀಕೃತವಾಗಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು"**

- - - -

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಆದೇಶ ಬಂದಿರುತ್ತದೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 16.03.2026ರಂದು "ಕರ್ನಾಟಕ ಮುನ್ಸಿಪಾಲಿಟಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ" 2026 ಹಾಗೂ "ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ" 2026 ಅನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಆ) ಸಹಕಾರಿ ರಂಗದ ಭೀಷ್ಮ ಎಂದೇ ಖ್ಯಾತರಾದ ಶ್ರೀ ಕೆ.ಹೆಚ್.ಪಾಟೀಲ್‌ರವರ 101ನೇ ಜನ್ಮ ಶತಮಾನೋತ್ಸವದ ಆಚರಣೆ ಕುರಿತು**

- - - - -

**ಸಭಾಪತಿಯವರು:-** ನಾಡು ಮೆಚ್ಚಿದ ಜನನಾಯಕ, ಹಿರಿಯ ರಾಜಕಾರಣಿ, ಸಹಕಾರಿ ರಂಗದ ಭೀಷ್ಮ ಎಂದು ಖ್ಯಾತರಾದ ಶ್ರೀ ಕೆ.ಎಚ್.ಪಾಟೀಲರವರು ಸಹಕಾರಿ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅಸಾಮಾನ್ಯವಾದದ್ದು, ಸಹಕಾರಿ ಕ್ಷೇತ್ರವಲ್ಲದೇ ರಾಜಕೀಯದಲ್ಲಿಯೂ ವಿವಿಧ ಇಲಾಖೆಗಳ ಸಚಿವರಾಗಿ "ಜನರ ಸೇವೆಯೇ ಜನಾರ್ಧನ ಸೇವೆ" ಎಂದು ನಂಬಿದವರು. ಉತ್ತರ ಕರ್ನಾಟಕ ಭಾಗದ ಜನಪ್ರಿಯ ನಾಯಕರಾಗಿ ಗುರುತಿಸಿಕೊಂಡ ನಾಯಕರಾದ ಇವರು, ತಮ್ಮ ಜೀವಿತಾವಧಿಯಲ್ಲಿ ಜನ ಸೇವೆಯನ್ನೇ ತಮ್ಮ ಉಸಿರಾಗಿಸಿಕೊಂಡು ಬದುಕು ಕಂಡವರು.

ದಿನಾಂಕ 16.03.2026 ರಂದು ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಂಜೆ 6.00 ಗಂಟೆಗೆ ಶ್ರೀ ಕೆ.ಎಚ್.ಪಾಟೀಲರವರ 101ನೇ ಜನ್ಮ ಶತಮಾನೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿದ್ದು, ಮಾನ್ಯ ಶಾಸಕರುಗಳು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

10. ವಿತ್ತೀಯ ಕಾರ್ಯಕಲಾಪ

2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ.

**ಡಾ: ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. 2026-27ನೇ ಸಾಲಿನ ಆಯವ್ಯಯದ ಬಗ್ಗೆ ಮಾನ್ಯ ಸದಸ್ಯರುಗಳು ಈಗಾಗಲೇ ಸಾಕಷ್ಟು ಚರ್ಚೆ ಮಾಡಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಯವರಾದ ಸನ್ಮಾನ್ಯ ಸಿದ್ದರಾಮಯ್ಯನವರು 17ನೇ ಬಾರಿಗೆ ಈ ಒಂದು ಬಜೆಟ್ ಮಂಡನೆ ಮಾಡಿ ಇತಿಹಾಸ ನಿರ್ಮಾಣ ಮಾಡಿದ್ದಾರೆ. ಇದು ಸನ್ಮಾನ್ಯ ಸಿದ್ದರಾಮಯ್ಯನವರ ಇತಿಹಾಸದ ಬಜೆಟ್ ಮತ್ತು ಪ್ರಸಿದ್ಧ ಬಜೆಟ್ ಆಗಿದೆ. ಈ ಪ್ರಸಿದ್ಧ ಬಜೆಟ್‌ನಲ್ಲಿ ಬಹಳ ಮುಖ್ಯವಾಗಿ ಈಗಾಗಲೇ ಅನುದಾನ ಹಂಚಿಕೆ ಮಾಡಿರುವುದನ್ನು ನೋಡುವುದಾದರೆ, ಶಿಕ್ಷಣ ಇಲಾಖೆಗೆ ರೂ.47,224 ಕೋಟಿಗಳು, ಅದರಲ್ಲೂ ಕೂಡ ಮಹಿಳೆ ಮತ್ತು ಮಕ್ಕಳನ್ನು ಮನಸ್ಸಿನಲ್ಲಿಟ್ಟುಕೊಂಡು ರೂ.34,929 ಕೋಟಿ ಕೊಟ್ಟಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಕೂಡ ಗ್ರಾಮಾಂತರ ಪ್ರದೇಶದ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಅಲ್ಲಿರತಕ್ಕಂಥ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಆದ್ಯತೆ ನೀಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳೇ ಜಾಸ್ತಿ ನಡೆಯುತ್ತಿರುವುದು. ಸರ್ಕಾರಿ ಶಾಲೆಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಆದ್ಯತೆ ಮೇಲೆ ಈ ಒಂದು ಅನುದಾನ ಮೀಸಲಿಡಲಾಗಿದೆ. ಮಾನ್ಯ ಶಿಕ್ಷಣ ಮಂತ್ರಿಗಳು ಇದಕ್ಕೆ ಬಹಳ ಶ್ರಮ ಪಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಶಿಕ್ಷಣ ಸಂಸ್ಥೆಗಳ ಶಾಲಾ-ಕಾಲೇಜ್‌ಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಗೆ, ಅಲ್ಲಿ ಕಟ್ಟಡ ರಿಪೇರಿ ಮಾಡುವುದು ಇರಬಹುದು ಮತ್ತು ಸಾಮಗ್ರಿಗಳು ಇರಬಹುದು, ಇವುಗಳ ಕೊರತೆಯನ್ನು ಆದ್ಯತೆಯ ಮೇಲೆ ಕೊಟ್ಟಿರತಕ್ಕಂಥ priority ನಿಜವಾಗಲೂ ಕೂಡ ಶ್ಲಾಘನೀಯ. ನಾನು ಇದನ್ನು ಸ್ವಾಗತಿಸುತ್ತೇನೆ. ಅದೇ ರೀತಿ ಮಹಿಳೆ ಮತ್ತು ಮಕ್ಕಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ. ಈಗಾಗಲೇ ಮಹಿಳೆ ಮತ್ತು ಮಕ್ಕಳಿಗೆ ಸಾಕಷ್ಟು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಮಹಿಳಾ ಮತ್ತು ಮಕ್ಕಳಿಗೆ ಕೊಟ್ಟಿರುವ ಈ ಸ್ತ್ರೀಶಕ್ತಿ ಯೋಜನೆಯು ಇಡೀ ರಾಷ್ಟ್ರದಲ್ಲೇ ಅಲ್ಲದೇ, ಅಂತರ್‌ರಾಷ್ಟ್ರದಲ್ಲಿ ಯಾವುದೇ ಒಂದು ರಾಷ್ಟ್ರದಲ್ಲಿನ ಯಾವುದೇ ಒಂದು ರಾಜ್ಯದಲ್ಲಿ, ಸ್ತ್ರೀಶಕ್ತಿ ಯೋಜನೆ ಉಚಿತವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತಂದಿರುವುದು ನಿಜವಾಗಲೂ ಕೂಡ ಸ್ವಾಗತಾರ್ಹವಾದುದು. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಹೆಣ್ಣುಮಕ್ಕಳಿಗೆ ಗೃಹ ಲಕ್ಷ್ಮಿ ಯೋಜನೆಯಲ್ಲಿ ರೂ.2,000ಗಳು ಕೊಡುತ್ತಿರುವುದು ನಿಜವಾಗಲೂ ಕೂಡ ಸ್ವಾಗತಾರ್ಹವಾದುದು. ಬೇರೆ ರಾಜ್ಯದಲ್ಲಿ ಅದನ್ನು ಟೀಕೆ ಮಾಡಿದಂತಹ ಸರ್ಕಾರಗಳು, ಟೀಕೆ ಮಾಡಿದಂತಹ ಪಕ್ಷಗಳು ಅದನ್ನು follow

ಮಾಡುತ್ತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಹಾಗೆಯೇ, 5 ಗ್ಯಾರಂಟಿ ಯೋಜನೆಗಳು ಕೂಡ ಬಹಳ ಪ್ರಮುಖವಾಗಿರುತ್ತದೆ. ಇದರ ಜೊತೆಗೆ ಗ್ರಾಮೀಣಾಭಿವೃದ್ಧಿ, ನೀರಾವರಿ, ಲೋಕೋಪಯೋಗಿ ಇಲಾಖೆ ಹೀಗೆಯೇ ಎಲ್ಲಾ ಇಲಾಖೆಗಳಿಗೂ ಕೂಡ ಬಹಳ ಒಳ್ಳೆಯ ಬಜೆಟ್‌ಅನ್ನು ಮಂಡಿಸಿದ್ದಾರೆ. ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಅನುದಾನ ಹಂಚಿಕೆ ರೂ.44,632 ಕೋಟಿಗಳನ್ನು ಕೊಟ್ಟಿರುವುದು ಸ್ವಾಗತಾರ್ಹವಾದುದು. ಅದರಲ್ಲಿ ಎಸ್.ಸಿ.ಎಸ್.ಪಿಗೆ ರೂ.31,804 ಕೋಟಿಗಳು ಹಾಗೂ ಟಿ.ಎಸ್.ಪಿ.ಗೆ ರೂ.12,828 ಕೋಟಿಗಳು ಕೊಟ್ಟಿರುವುದು ಕೂಡ ದಾಖಲೆಯಾಗಿದೆ. ಈಗಾಗಲೇ ನಾನು ಹೇಳಿದಂತೆ ಮಹಿಳಾ ಆಯವ್ಯಯದ ಹಂಚಿಕೆ ರೂ. 94,663 ಕೋಟಿಗಳು ಮೀಸಲಿಡಲಾಗಿದೆ. ಇದರಲ್ಲಿ ಮುಖ್ಯವಾಗಿ ಸುಮಾರು 56,432 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಂಡಿದೆ.

ಮಾನ್ಯ ಸಭಾಪತಿಯವರೇ, ನಾನು ತನ್ಮೂಲಕ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬೇಡಿಕೊಳ್ಳುವುದೇನೆಂದರೆ, ಈ ಸುಮಾರು 56,432 ಹುದ್ದೆಗಳನ್ನು ಭರ್ತಿ ಮಾಡುವಾಗ ನ್ಯಾಯಮೂರ್ತಿ ನಾಗಮೋಹನ್ ದಾಸ್ ರವರು ಒಳಮೀಸಲಾತಿ ವರದಿ ಏನು ಕೊಟ್ಟಿದ್ದಾರೋ ಅದೇರೀತಿ ಆ ಒಂದು Guideline ನಲ್ಲಿ ಒಳಮೀಸಲಾತಿ ಜಾರಿಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಆದಷ್ಟು ಬೇಗ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಸರ್ಕಾರ ಇದೇ ತಿಂಗಳ 27ನೇ ತಾರೀಖಿನಂದು ಸಚಿವ ಸಂಪುಟದಲ್ಲಿ ಅದರ ಬಗ್ಗೆ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗನೇ ಒಳಮೀಸಲಾತಿ ಪ್ರಕಾರವೇ ಹುದ್ದೆಗಳನ್ನು ತುಂಬಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಸಹಕಾರ ಕ್ಷೇತ್ರದಲ್ಲಿ ಸುಮಾರು 38 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ರೂ.30,000 ಕೋಟಿ ಕೃಷಿ ಸಾಲ ವಿತರಣೆಗೆ ಮೀಸಲಿಟ್ಟಿರುವುದು ನಿಜವಾಗಲೂ ಕೂಡ ಸ್ವಾಗತಾರ್ಹ. ಇದೊಂದು ಇತಿಹಾಸದ ಬಜೆಟ್. ಜಲಸಂಪನ್ಮೂಲ ಇಲಾಖೆಯಲ್ಲಿ, ತುಂಗಭದ್ರ ಅಣೆಕಟ್ಟಿನಲ್ಲಿ ಶಿಥಿಲಗೊಂಡಿರುವ ಗೇಟುಗಳನ್ನು ಬದಲಾಯಿಸಿ 33 ಹೊಸ ಗೇಟುಗಳ ಅಳವಡಿಕೆಯನ್ನು ಮುಂಗಾರು ಪೂರ್ವದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ. 33 ಗೇಟ್‌ಗಳನ್ನು ಬದಲಾಯಿಸುವುದು ಮತ್ತು ಚಾಮರಾಜನಗರದ ಹನೂರು ತಾಲ್ಲೂಕಿನಲ್ಲಿ 12,000 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸುವ ಉಡುತೊರೆಹಳ್ಳ ಯೋಜನೆಗೆ ರೂ.490 ಕೋಟಿ ಮೀಸಲಿಟ್ಟಿರುವುದು ಬಹಳ ಸ್ವಾಗತಾರ್ಹ. ಸಣ್ಣ ನೀರಾವರಿ ಇಲಾಖೆಯಲ್ಲಿ ರೂ. 237 ಕೋಟಿಗಳ ಮೊತ್ತದಲ್ಲಿ ಹೆಬ್ಬಾಳ-ನಾಗವಾರ ಕಣಿವೆಯ 3ನೇ ಹಂತದ ಯೋಜನೆಯನ್ನು ಅನುಷ್ಠಾನಕ್ಕೆ ತೆಗೆದುಕೊಂಡಿದ್ದಾರೆ. ರೂ. 650 ಕೋಟಿ ಮೊತ್ತದಲ್ಲಿ ವೃಷಭಾವತಿ ವ್ಯಾಲಿಯಡಿ ದ್ವಿತೀಯ ಹಂತದ ಕೆರೆ ತುಂಬಿಸುವ ಯೋಜನೆ ಅನುಷ್ಠಾನ ಮಾಡುತ್ತಿರುವುದು ತುಂಬಾ ಅತ್ಯುತ್ತಮ ಕಾರ್ಯಕ್ರಮ. ಈಗಾಗಲೇ ನಾನು ಶಿಕ್ಷಣ ಕ್ಷೇತ್ರದ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್ ಬಳಕೆ ಮಾಡುವುದನ್ನು ನಿಷೇಧಿಸಿರುವುದು ನಿಜವಾಗಲೂ ಸ್ವಾಗತಾರ್ಹ. ಇಂದಿನ ದಿನಗಳಲ್ಲಿ ಅದು ಎಷ್ಟರಮಟ್ಟಿಗೆ ದುರುಪಯೋಗ ಆಗುತ್ತಿದೆಯೆಂದರೆ, ಸುಮಾರು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮೊಬೈಲ್ ತೆಗೆದುಕೊಂಡು ಸಾರ್ವಜನಿಕ

ಜಾಲತಾಣದಲ್ಲಿ ಉಪಯೋಗಿಸಿ, ಅದೇ ದುಶ್ಚಟವಾಗಿ ದುರಾಭ್ಯಾಸವಾಗುತ್ತಿತ್ತು. ಇದನ್ನು ನಿಷೇಧಿಸಿರುವುದರಿಂದ ಅಂತಹ ದುರ್ನಡತೆಯನ್ನು ತಡೆಯಬಹುದಾಗಿದೆ. ಸಾಕಷ್ಟು ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗಿ ಅವರ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದರು. ಅವರಿಗೆ ಮೊಬೈಲ್ ನಿಷೇಧಿಸಿರುವುದು ನಿಜವಾಗಲೂ ಕೂಡ ಸ್ವಾಗತ ಮಾಡತಕ್ಕಂಥ ಕಾರ್ಯಕ್ರಮವಾಗಿದೆ. ಶಿಕ್ಷಣ ಇಲಾಖೆಯಲ್ಲಿ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸನ್ಮಾನ್ಯ ಸಚಿವರು ತೀರ್ಮಾನ ಮಾಡಿದ್ದಾರೆ. ಅದು ಬಹಳ ಸ್ವಾಗತಾರ್ಹ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ, ಆರೋಗ್ಯ ಇಲಾಖೆಯ ಮೂಲಸೌಕರ್ಯ ಅಭಿವೃದ್ಧಿಗಾಗಿ ರೂ.900 ಕೋಟಿಗಳು ಮತ್ತು ಅಲ್ಲಿಯೂ ಕೂಡ ಸುಮಾರು 2,500 ಹುದ್ದೆಗಳನ್ನು ಭರ್ತಿ ಮಾಡುವುದು ಬಹಳ ಒಳ್ಳೆಯ ಕಾರ್ಯಕ್ರಮ. ಕಾರವಾರ ಮತ್ತು ಯಾದಗಿರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸ್ಥಾಪನೆಗೆ ತಲಾ ರೂ.100 ಕೋಟಿಗಳ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಮುನಿರಾಬಾದ್ ಟಿ.ಬಿ ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ ಮಾಡುತ್ತಿರುವುದು ಕೂಡ ಸ್ವಾಗತಾರ್ಹವಾದುದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸುಮಾರು 250 ಇಂಜಿನಿಯರಿಂಗ್ ಪದವೀಧರರಿಗೆ ಮಾನ್ಯ ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ವತಿಯಿಂದ N.I.T./I.I.T./I.I.M. ಗಳಲ್ಲಿ A.I. ತರಬೇತಿಯನ್ನು ಪಡೆಯಲು ತಲಾ ರೂ.2,00,000ಗಳ ಸಾಲವನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿರುವುದು ಕೂಡ ಬಹಳ ಉತ್ತಮವಾದಂತಹ ಕಾರ್ಯಕ್ರಮವೆಂದು ನಾನು ಹೇಳುತ್ತೇನೆ. ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ, 25 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರಾರಂಭ, C.B.S.E ಪಠ್ಯಕ್ರಮದಡಿ ರೂ.10 ಕೋಟಿಗಳ ಅನುದಾನದಲ್ಲಿ 10 ಹೊಸ ಸಂತ ಶಿಶುನಾಳ ಶರೀಫ ವಸತಿ ಶಾಲೆಗಳ ಆರಂಭ ಮಾಡುತ್ತಿರುವುದು ಕೂಡ ಸ್ವಾಗತಾರ್ಹವಾದುದು. ಇದರ ಜೊತೆಗೆ 100 ಮೌಲಾನಾ ಆಜಾದ್ ಮಾದರಿ ಶಾಲೆ ಹಾಗೂ ಉರ್ದು ಶಾಲೆಗಳನ್ನು ರೂ.400 ಕೋಟಿಗಳ ವೆಚ್ಚದಲ್ಲಿ ಕೆ.ಪಿ.ಎಸ್. ಮಾದರಿಯಲ್ಲಿ ಉನ್ನತೀಕರಣ ಮಾಡುತ್ತಿರುವುದು ಕೂಡ ಆ ಒಂದು ಹಿಂದುಳಿದ ಸಮಾಜಕ್ಕೆ ಇದೊಂದು ಉತ್ತಮವಾದಂತಹ ಕಾರ್ಯಕ್ರಮವೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ಜೈನ, ಬೌದ್ಧ ಮತ್ತು ಸಿಖ್ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ರೂ.100 ಕೋಟಿಗಳ ಅನುದಾನ ಕೊಟ್ಟಿದ್ದಾರೆ. ಸರ್ವರಿಗೂ ಸಮಬಾಳು ಮತ್ತು ಸಮಪಾಲು ಎಂದು ಏನು ಹೇಳುತ್ತೇವೋ, ಅದರಂತೆ ಸರ್ವಧರ್ಮಗಳಿಗೂ ಕೂಡ ಅನುದಾನ ಹಂಚಿರತಕ್ಕಂಥದ್ದು ಬಹಳ ಸ್ವಾಗತಾರ್ಹವಾದುದು. ಹಾಗೆಯೇ ಕೆ.ಹೆಚ್.ಬಿ ಸೂರ್ಯ ಕ್ರೀಡಾ ಗ್ರಾಮ ಎಂಬ ಹೆಸರಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅನೇಕಲ್ ತಾಲ್ಲೂಕಿನಲ್ಲಿ ಸುಮಾರು 80,000 ಆಸನವುಳ್ಳ ಕ್ರಿಕೆಟ್ ಕ್ರೀಡಾಂಗಣ ಮತ್ತು ಅಂತರ್‌ರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ ಮಾಡುತ್ತಿರುವುದು ಕೂಡ ಇತಿಹಾಸದಲ್ಲಿ ದಾಖಲೆಯಾಗುತ್ತದೆ. ಇಲ್ಲಿಯವರೆಗೂ ಯಾವ ಸರ್ಕಾರವೂ ಕೂಡ ಈ ದಿಕ್ಕಿನಲ್ಲಿ ಇದನ್ನು ಯೋಚನೆ ಮಾಡಿರಲಿಲ್ಲ. ಅದರಲ್ಲೂ ಕ್ರೀಡೆಗೆ ಉತ್ತೇಜನ ನೀಡಿ, ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡಾ ಗ್ರಾಮ ಮಾಡತಕ್ಕಂಥದ್ದು ಕೂಡ ಬಹಳ ಸ್ವಾಗತಾರ್ಹವಾದಂತಹ ಕಾರ್ಯಕ್ರಮ. ಅನ್ನಭಾಗ್ಯ ಯೋಜನೆಯಡಿ ತಮಗೆಲ್ಲಾ ಗೊತ್ತಿರುವ ಹಾಗೆ 5 ಕೆ.ಜಿ. ಅಕ್ಕಿಯ ಬದಲಾಗಿ 5 ಕೆ.ಜಿ. ಅಕ್ಕಿಯ ಜೊತೆಗೆ, ಇಂದಿರಾ ಆಹಾರ ಕಿಟ್ ವಿತರಣೆ ಮಾಡತಕ್ಕಂಥದ್ದು ಬಹಳ

ಸ್ವಾಗತಾರ್ಹವಾದುದು. ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ, 3 ವರ್ಷದಲ್ಲಿ ಯುವನಿಧಿ ಯೋಜನೆಯಡಿ ಒಟ್ಟು 3,08,267 ಅರ್ಹ ಫಲಾನುಭವಿಗಳಿಗೆ ರೂ.913 ಕೋಟಿಗಳ ಮೊತ್ತದ ನಿರುದ್ಯೋಗ ಭತ್ಯೆ ಪಾವತಿ ಮಾಡುವುದು ನಿಜವಾಗಲೂ ಕೂಡ ನಿರುದ್ಯೋಗಿಗಳಿಗೆ ಅವರ ಬಾಳಿಗೆ ಒಂದು ಬೆಳಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ, ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ರೂ. 69,488 ಕೋಟಿ ಕಾಮಗಾರಿ ಅನುಮೋದನೆ, ಕೇಂದ್ರದ ಪಾಲು ರೂ.30,888 ಕೋಟಿ ಮತ್ತು ರಾಜ್ಯದ ಪಾಲು ರೂ.38,600 ಕೋಟಿ. ಆದರೆ ಇದುವರೆಗೆ ಕೇಂದ್ರದಿಂದ ರೂ.11,786 ಕೋಟಿ ಮಾತ್ರ ಕೊಟ್ಟಿರುತ್ತಾರೆ. ಆದ್ದರಿಂದ ಯಾವುದೇ ಒಂದು ಯೋಜನೆಗಳನ್ನು ತೆಗೆದುಕೊಂಡರೂ ಕೂಡ, ಕೇಂದ್ರದ ಬಜೆಟ್ ಎಷ್ಟು allocation ಮಾಡಿದ್ದಾರೆಂದು ನಂತರ ನಾನು ಹೇಳುತ್ತೇನೆ.

(ಮುಂದು)

(420)16.3.2026/5.50/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಡಾ: ಡಿ. ತಿಮ್ಮಯ್ಯ (ಮುಂದು):-**

ಇಂಧನ ಇಲಾಖೆಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸಹಾಯಧನ ಯೋಜನೆ ಅಡಿಯಲ್ಲಿ 36 ಲಕ್ಷ ಪಂಪ್‌ಸೆಟ್‌ಗಳಿಗೆ 19,290 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಕೂಡ ಬಹಳ ಸ್ವಾಗತಾರ್ಹವಾದುದು. 'ಗೃಹಜ್ಯೋತಿ' ಯೋಜನೆಗೆ 10,578 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಕೂಡ ನಿಜವಾಗಿಯೂ ದಾಖಲೆಯಾದಂತಹ ಅನುದಾನ ಮತ್ತು ಕಾರ್ಯಕ್ರಮವಾಗಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ಮುಂದಿನ ಎರಡು ವರ್ಷಗಳಲ್ಲಿ 2,000 ಕೋಟಿ ರೂಪಾಯಿಗಳ ಮೊತ್ತದಲ್ಲಿ ಸೇತುವೆಗಳ ನಿರ್ಮಾಣ ಹೀಗೆ ಅನೇಕ ಕಾರ್ಯಕ್ರಮಗಳಿವೆ. ಮೂಲಸೌಕರ್ಯ ಇಲಾಖೆಯಲ್ಲಿ ರಾಜ್ಯದಲ್ಲಿ ಏಳು ದೇಶೀಯ ವಿಮಾನನಿಲ್ದಾಣಗಳ ಅಭಿವೃದ್ಧಿಗೆ 100 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿರುವುದು ಕೂಡ ಸ್ವಾಗತಾರ್ಹವಾದುದು. ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಎ.ಐ. ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು 'ಇಸ್ರೋ' ಮತ್ತು 'ಕಿಯೋನಿಕ್ಸ್' ಸಹಯೋಗದಲ್ಲಿ ಬೆಂಗಳೂರು ರೋಬೋಟಿಕ್ಸ್ ಮತ್ತು ಎಐ ಇನ್ನೊವೇಷನ್ ಝೋನ್ ಸ್ಥಾಪನೆ ಮತ್ತು ಐ.ಐ.ಐ.ಟಿ. ರಾಯಚೂರಿನಲ್ಲಿ ಎ.ಐ. ಶ್ರೇಷ್ಠತಾ ಕೇಂದ್ರ ಸ್ಥಾಪನೆ ಇವೆಲ್ಲವೂ ಕೂಡ ಬಹಳ ಸ್ವಾಗತಾರ್ಹವಾದ ಕಾರ್ಯಕ್ರಮವಾಗಿದೆ. ಕಿಯೋನಿಕ್ಸ್ ಮೂಲಕ ಮಂಗಳೂರಿನಲ್ಲಿ ಐ.ಟಿ. ಪಾರ್ಕನ್ನು ಅಭಿವೃದ್ಧಿಗೊಳಿಸುವುದು ಕೂಡ ತುಂಬಾ ಒಳ್ಳೆಯ ಕಾರ್ಯಕ್ರಮವಾಗಿರುತ್ತದೆ.

ಕಂದಾಯ ಇಲಾಖೆಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ 5,000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರವಾಹ ಪರಿಸ್ಥಿತಿ ನಿಯಂತ್ರಣ ಮತ್ತು ವಿಪತ್ತು ನಿರ್ವಹಣಾ ಯೋಜನೆಯ ಕಾಮಗಾರಿ ಕೂಡ ಒಳ್ಳೆಯ ಕಾರ್ಯಕ್ರಮವೆಂದು ಹೇಳಲು ಇಚ್ಛೆಪಡುತ್ತೇನೆ. ಗೃಹ ಇಲಾಖೆಯಲ್ಲಿ ಖಾಲಿ ಇರುವ 8,000 ಹುದ್ದೆಗಳ ನೇಮಕಾತಿ, ಪೊಲೀಸ್ ಗೃಹ-

2025 ಯೋಜನೆಯಡಿ 250 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಸಹ ಸ್ವಾಗತಾರ್ಹವಾದುದು.

ಇಷ್ಟು ಹೇಳಿ ನಾನು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಿಂದ ಬಂದಿರುವುದರಿಂದ ನಾನು ಮೈಸೂರಿಗೆ ಕೊಟ್ಟಿರುವಂತಹ ವಿಶೇಷ ಕಾರ್ಯಕ್ರಮಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮೈಸೂರಿನಲ್ಲಿ ಬಹಳ ವರ್ಷಗಳಿಂದ ಏರ್‌ಪೋರ್ಟ್ ಇದ್ದರೂ ಕೂಡ ಆ ಏರ್‌ಪೋರ್ಟ್ ಅಭಿವೃದ್ಧಿಯಾಗಿರಲಿಲ್ಲ. ಈ ಏರ್‌ಪೋರ್ಟ್ ಅಭಿವೃದ್ಧಿಗೆ 320 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥದ್ದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದುದು. ಮೈಸೂರು, ಚಾಮರಾಜನಗರ ಮತ್ತು ದಕ್ಷಿಣ ಮೈಸೂರಿಗೆ ಬಹಳಷ್ಟು ಉನ್ನತವಾದ ಕಾರ್ಯಕ್ರಮವಾಗಿರುತ್ತದೆ. ಉದ್ಯಮಿಗಳಿಗೆ incubation ಸೌಲಭ್ಯಕ್ಕಾಗಿ plug-and-play ಸೌಲಭ್ಯದ L.E.A.P. Labs ಸ್ಥಾಪನೆ ಕೂಡ ಬಹಳ ಸ್ವಾಗತಾರ್ಹವಾದುದು. ಎಲ್ಲದಕ್ಕಿಂತ ಹೆಚ್ಚಾಗಿ ಮೈಸೂರು ನಗರವನ್ನು ಎರಡನೇ ಐ.ಟಿ., ಬಿ.ಟಿ. ಸಿಟಿಯನ್ನಾಗಿ ಅಭಿವೃದ್ಧಿ ಪಡಿಸುತ್ತಿರುವುದು ತುಂಬಾ ಸ್ವಾಗತಾರ್ಹವಾದುದು. ಮೈಸೂರು ನಗರದ ರಂಗಮಂದಿರವನ್ನು ಕೂಡ ಅಭಿವೃದ್ಧಿಗೆ ಹಾಕಿಕೊಂಡಿದ್ದಾರೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ 10 ಕೋಟಿ ರೂಪಾಯಿಗಳು ಇದೆ ಮತ್ತು ಮೃಗಾಲಯದ ಅಭಿವೃದ್ಧಿಗೆ; ಅಂತರಾಷ್ಟ್ರೀಯ ಮಟ್ಟದ ಮೃಗಾಲಯವು ಮೈಸೂರಿನಲ್ಲಿದೆ. ಅದರ ಅಭಿವೃದ್ಧಿಗೆ ಕೂಡ ಹಾಕಿಕೊಂಡಿದ್ದಾರೆ.

ಚಾಮರಾಜನಗರದಲ್ಲಿ ಹನೂರು, ರಾಂಪುರ, ಪಾಲಾರ್ ರಸ್ತೆ ಅಭಿವೃದ್ಧಿಗೆ ಬಹಳ ಬೇಡಿಕೆ ಇಲ್ಲಿತ್ತು. ಅದು ತಮಿಳುನಾಡು ಗ್ರಾಮದಲ್ಲಿರುವ ರಸ್ತೆ. ಜೊತೆಗೆ 490 ಕೋಟಿ ರೂಪಾಯಿಗಳ 'ಉಡುತೊರೆಹಳ್ಳ' ನೀರಾವರಿ ಯೋಜನೆ ಇದು ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿ ಬರುತ್ತದೆ. ಇದು ಕೂಡ ಬಹಳ ಸ್ವಾಗತಾರ್ಹವಾದುದು. ಜೊತೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಬಹಳಷ್ಟು ಸಲ ಹೇಳುತ್ತಿರುತ್ತಾರೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಲ್ಲಿ ಬಹಳಷ್ಟು ಸಾಲವನ್ನು ಮಾಡಿದ್ದಾರೆ, ಇದು ಸಾಲವಂತ ರಾಜ್ಯ ಎಂದು ಹೇಳುತ್ತಿರುತ್ತಾರೆ. ಡಾ: ಮನಮೋಹನ್ ಸಿಂಗ್‌ರವರು ಪ್ರಧಾನಮಂತ್ರಿಯಾಗಿದ್ದಾಗ 53,11,000 ಕೋಟಿ ರೂಪಾಯಿಗಳಷ್ಟು ಸಾಲ ಆ ಕಾಲದಲ್ಲಿತ್ತು. ಈಗ ಸನ್ಮಾನ್ಯ ನರೇಂದ್ರ ಮೋದಿಯವರು ಬಂದ ಮೇಲೆ 212 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದ್ದಾರೆ. ಇದು ತಮ್ಮ ಕಣ್ಣಿಗೆ ಕಾಣುವುದಿಲ್ಲವೇ? ದಯವಿಟ್ಟು ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ಹಾಗೆಯೇ ಕರ್ನಾಟಕವು ಸಾಲ ಮಾಡಿ ದಿವಾಳಿಯಾಗಿದೆ ಎಂದು ಹೇಳುತ್ತಿರುತ್ತಾರೆ ಆದರೆ ಕರ್ನಾಟಕದ ಸಾಲ ಇತಿಮಿತಿಯಲ್ಲಿದೆ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಮ್ಮಯ್ಯನವರು ಆಗಿನಿಂದ ಸನ್ಮಾನ್ಯ ನರೇಂದ್ರ ಮೋದಿಯವರ 200 ಕೋಟಿ ರೂಪಾಯಿಗಳ ಸಾಲದ ಬಗ್ಗೆ ಹೇಳುತ್ತಿದ್ದಾರೆ.

**ಸಭಾಪತಿಯವರು:-** ಸುಮ್ಮನೆ ಕುಳಿತುಕೊಳ್ಳಿ. ಅವರು ಮಾತನಾಡಲಿ. ನಡುವೆ ಅಡ್ಡ ಬರಬಾರದು. ನಿಮಗೇತಕ್ಕೆ ಬೇಕದು?

**ಡಾ: ಡಿ. ತಿಮ್ಮಯ್ಯ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಸರ್ಕಾರ ಸಾಲವನ್ನೇ ಮಾಡಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಬಿ.ಜೆ.ಪಿ. ಸರ್ಕಾರ ಕೂಡ ಅವರು ಮುಖ್ಯಮಂತ್ರಿಗಳಿದ್ದಾಗ ಮಾನ್ಯ ರವಿಕುಮಾರ್‌ರವರು ಈಗ ತಾನೇ ಯಾರ್ಯಾರು ಯಾವ ಯಾವ ಕಾಲದಲ್ಲಿ ಎಷ್ಟು ಸಾಲ ಮಾಡಿದ್ದಾರೆಂದು ಹೇಳುತ್ತಿದ್ದರು. ಆದ್ದರಿಂದ ಕರ್ನಾಟಕ ಏನೂ ಅಂತಹ ಸಾಲ ಮಾಡಿಲ್ಲ. ಕರ್ನಾಟಕದ ಸಾಲವು ಕೂಡ ಇತಿಮಿತಿಯಲ್ಲಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ 17ನೇ ಬಜೆಟ್‌ನಲ್ಲಿ ವಿಶೇಷ ಕೊಡುಗೆ ಏನೂ ಇಲ್ಲ ಎಂದು ಹೇಳಿದರೂ ಕೂಡ ಸಾಕಷ್ಟು ಅವರು ಕೊಟ್ಟಿದ್ದಾರೆ. ಈ ಬಜೆಟ್ ಪುಸ್ತಕದಲ್ಲಿ ಮೊದಲನೆಯ ಪುಟದಲ್ಲಿ ಈ ರೀತಿ ಇದೆ. ''ಧನಶೀಲ ಮನಶೀಲ ತನುಶೀಲ ಸರ್ವಮಯ ದೃಕ್ಕಿಂಗೆ ಕಾಂಬುದೆಲ್ಲವು ಶೀಲ'' ಅಂದರೆ ನಮ್ಮ ದೃಷ್ಟಿಯಲ್ಲಿ ನಾವು ಶೀಲವಂತರಾಗಿದ್ದರೆ ಎಲ್ಲವೂ ಒಳ್ಳೆಯದಾಗಿ ಕಾಣುತ್ತದೆ positive energy ಎಂದರ್ಥ. ಆದರೆ ನಮ್ಮಲ್ಲಿ negative energy ಇದ್ದರೆ, ಕನ್ನಡದಲ್ಲಿ ಕಾಮಾಲೆ ರೋಗ ಇದ್ದವರಿಗೆ ಕಾಣುವುದೆಲ್ಲವೂ ಹಳದಿ ಎಂದು ಹೇಳುತ್ತೇವೆ. ಹಾಗೆ ನಮ್ಮ ದೃಷ್ಟಿ ಬಹಳ ಮುಖ್ಯ. ಸಕಾರಾತ್ಮಕವಾಗಿ ನೋಡಿದಾಗ ಎಲ್ಲವೂ ಕೂಡ ಕಾಣುತ್ತದೆ. ನಕಾರಾತ್ಮಕ ದೃಷ್ಟಿಯಲ್ಲಿ ನೋಡಿದಾಗ ಎಲ್ಲವೂ ಅಸ್ಪಷ್ಟವಾಗಿ ಕಾಣುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಚಾರವೆಂದರೆ ಐದು ಗ್ಯಾರಂಟಿಗಳನ್ನು ನೀಡಿರುವ ಸರ್ಕಾರ ಮುಳುಗಿ ಹೋಗುತ್ತದೆ ಎಂದು ಹೇಳುತ್ತಿದ್ದರು. ಐದು ಗ್ಯಾರಂಟಿಗಳನ್ನು ನೀಡಿದ್ದರೂ ಕೂಡ ಸರ್ಕಾರ ಸುಭದ್ರವಾಗಿದೆ. ನಮ್ಮ ಸರ್ಕಾರ ಒಳ್ಳೆಯ ಕೆಲಸಗಳನ್ನು ಮಾಡಿದೆ. ಇಷ್ಟು ಹೇಳಿ ಅತ್ಯಂತ ಉತ್ತಮ ಬಜೆಟ್ ಮಂಡಿಸಿರುವಂತಹ ಕರ್ನಾಟಕ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು ತಾವು ಆರ್ಥಿಕ ತಜ್ಞರಿಗಿಂತ ಕಡಿಮೆಯೇನಿಲ್ಲ ಎಂಬುದನ್ನು ಸಾಧಿಸಿ ಇತಿಹಾಸ ನಿರ್ಮಿಸಿದ್ದಾರೆ. ಈ 17ನೇ ಬಜೆಟ್‌ನಲ್ಲಿ ಕೂಡ ಬಹಳಷ್ಟು ಪ್ರಗತಿಪರ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರೊಬ್ಬರು ಯೋಗ ಮತ್ತು ಯೋಗ್ಯತೆ ಎಂದು ಹೇಳುತ್ತಿದ್ದರು. ತಪಸ್ಸಿನಿಂದ ಬರುವಂಥದ್ದು ಯೋಗ. ಅವರಿಗೆ ಯೋಗ್ಯತೆ ಇರುವುದರಿಂದಲೇ ಅವರು 17ನೇ ಸಲ ಈ ಬಜೆಟ್ ಮಂಡಿಸಿದ್ದಾರೆ ಮತ್ತು 7 ಸಲ ಗೆದ್ದು ಬಂದಿದ್ದಾರೆ. ಅವರು ಮುಖ್ಯಮಂತ್ರಿಗಳಾಗಬೇಕಾದರೆ ರಾಜ್ಯದ ಏಳು ಕೋಟಿ ಜನಗಳು ಅವರನ್ನು ಆರಿಸಿದ್ದಾರೆ. ಅವರು 7 ಸಲ ಜನಗಳ ಆಯ್ಕೆಯಿಂದ ಬಂದಿದ್ದು ಯೋಗದಿಂದಲ್ಲ. ಯೋಗ್ಯತೆ ಬಹಳ ಮುಖ್ಯ. ಆ ಯೋಗ್ಯತೆಯಿಂದ ಅವರು ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಇಷ್ಟೊಂದು ಸವಲತ್ತುಗಳನ್ನು ಕೊಟ್ಟಿದ್ದಾರೆ. ದಯಮಾಡಿ ಅಂತಹ ಪದಗಳನ್ನು ಉಪಯೋಗಿಸಬಾರದು ಎಂದು ಕೇಳಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಮಸ್ಕಾರ.

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 2026-27ನೇ ಸಾಲಿನಲ್ಲಿ ಮಂಡನೆಯಾಗಿರುವಂತಹ ರಾಜ್ಯದ ಮುಂಗಡ ಪತ್ರ ಹಲವು ಕಾರಣಗಳಿಂದ ಬಹಳ ವಿಶೇಷತೆಯಲ್ಲಿ ವಿಶೇಷವಾದ ಬಜೆಟ್ ಆಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾಗಿರುವ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವಂತಹ 2026-27ನೇ ಸಾಲಿನ ಬಜೆಟ್

ವೈಯಕ್ತಿಕವಾಗಿ ಮಾನ್ಯ ಸಿದ್ದರಾಮಯ್ಯನವರಿಗೂ ಮತ್ತು ರಾಜ್ಯ ಸರ್ಕಾರದ ಬಜೆಟ್ ಮಂಡನೆಯಲ್ಲಿ ಒಂದು ಇತಿಹಾಸ ಮತ್ತು ದಾಖಲೆ ಕೂಡ ಹೌದು. ಮಾನ್ಯ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ ರಾಜ್ಯದ ವಿತ್ತ ಖಾತೆಯನ್ನು ನಿಭಾಯಿಸಿ 17ನೇ ಬಾರಿಗೆ ರಾಜ್ಯದ ಬಜೆಟನ್ನು ಮಂಡಿಸಿರುವಂಥದ್ದು ದೊಡ್ಡ ಇತಿಹಾಸ. ಈ ಹಿಂದೆ ಮುಂದೆ ಕೂಡ ಯಾರೂ ಸರಿಗಟ್ಟಲಾಗದ ದಾಖಲೆಯನ್ನು ಮಾನ್ಯ ಹಣಕಾಸು ಸಚಿವರು ಮತ್ತು ಮುಖ್ಯಮಂತ್ರಿಗಳಾಗಿರುವಂತಹ ಸಿದ್ಧರಾಮಯ್ಯನವರು ವಿಶೇಷವಾಗಿ ಸೃಷ್ಟಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದ ಮಾನ್ಯ ಮುಖ್ಯಮಂತ್ರಿಗಳು ಸಿದ್ಧರಾಮಯ್ಯನವರಿಗೆ ರಾಜ್ಯದ ಜನತೆಯ ಪರವಾಗಿ, ಈ ಸದನದ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ.

(ಮುಂದು)

(421) 16-03-2026 6-00 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎ. ವಸಂತ ಕುಮಾರ್ (ಮುಂದು):-**

ಇನ್ನು 2026-27ನೇ ಸಾಲಿನ ಬಜೆಟ್‌ನ ಮುಖ್ಯ ಅಂಶಗಳ ಬಗ್ಗೆ ಹೇಳುವ ಮುನ್ನ ಈ ವರ್ಷ ಮತ್ತು ಕಳೆದ ವರ್ಷದ ಆರ್ಥಿಕ ಸ್ಥಿತಿಯ ಬಗ್ಗೆ ಮತ್ತು ಕೇಂದ್ರ ಸರ್ಕಾರದ ತಾರತಮ್ಯ ನೀತಿ, ಮಲತಾಯಿ ಧೋರಣೆ ಬಗ್ಗೆ ಸದನದ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ರಾಜ್ಯದಲ್ಲಿ 2025-26ನೇ ಸಾಲಿನಲ್ಲಿ ಶೇಕಡಾ 8.1 ರಷ್ಟು ಜಿ.ಡಿ.ಪಿ., ಬೆಳವಣಿಗೆಯನ್ನು ಹೊಂದಿತ್ತು. ದೇಶದ ಜಿ.ಡಿ.ಪಿ., ಬೆಳವಣಿಗೆ ಶೇಕಡಾ 7.4 ರಷ್ಟು ಇತ್ತು. ರಾಜ್ಯದ ಆರ್ಥಿಕ ಜಿ.ಡಿ.ಪಿ., ಬೆಳವಣಿಗೆಯು ದೇಶದ ಜಿ.ಡಿ.ಪಿ., ಬೆಳವಣಿಗೆಕ್ಕಿಂತ ಹೆಚ್ಚಾಗಿರುವುದನ್ನು ನಾವು ಗಮನಿಸಬೇಕಾಗಿರುವಂತಹ ಅಂಶವಾಗಿದೆ. ಇದು ಖಂಡಿತವಾಗಿಯೂ ಕೂಡ ರಾಜ್ಯದ ಆರ್ಥಿಕ ಬೆಳವಣಿಗೆಯು ಗಣನೀಯವಾಗಿ ಮತ್ತು ಸಮಗ್ರವಾಗಿ ಎಲ್ಲಾ ವಲಯಗಳಲ್ಲಿ ಬೆಳವಣಿಗೆಯನ್ನು ಸಾಧಿಸುವತ್ತ ಮುನ್ನಡೆದಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಕಂಡು ಬರುವಂತಹ ಅಂಶವಾಗಿದೆ.

ಇನ್ನು ರಾಜ್ಯದ ಬಂಡವಾಳ ಹೂಡಿಕೆಯ ಬಗ್ಗೆ ಹೇಳುವುದಾದರೆ, 2025-26ನೇ ಸಾಲಿನ ಮೊದಲಾರ್ಧದಲ್ಲಿ 9.4 ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟು ವಿದೇಶಿ ಬಂಡವಾಳ ಹೂಡಿಕೆಯಾಗಿರುವುದು ಇಲ್ಲಿ ಕಂಡು ಬರುತ್ತದೆ. ಇದು ದೇಶದ ಒಟ್ಟು ವಿದೇಶಿ ಬಂಡವಾಳ ಹೂಡಿಕೆಯ ಶೇಕಡಾ 26.7 ರಷ್ಟು ಇರುವುದನ್ನು ನಾವೆಲ್ಲರೂ ಗಮನಿಸಬೇಕಾದ ಅಂಶವಾಗಿದೆ. ಇದು ಕಳೆದ ವರ್ಷಕ್ಕಿಂತ ಈ ವರ್ಷ ಶೇಕಡಾ 2.6 ರಷ್ಟು ಹೆಚ್ಚಾಗಿರುವುದನ್ನು ಕೂಡ ವಿಶೇಷವಾಗಿ ಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ಪಕ್ಷದ ಮುಖಂಡರು ಗಮನಿಸಬೇಕಾಗಿರುವಂತಹ ಅಂಶವಾಗಿದೆ. ಇದು ರಾಜ್ಯದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವಂತಹ ಬೆಳವಣಿಗೆಯಾಗಿದೆ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ಸಂದರ್ಭದಲ್ಲಿ ಬಂಡವಾಳ ಹೂಡಿಕೆಯು ಈ ರಾಷ್ಟ್ರದ ಪ್ರಮುಖ

*ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ನಗರಗಳಾಗಿರುವಂತಹ ಮಹಾರಾಷ್ಟ್ರ, ದೆಹಲಿ ಮತ್ತು ಗುಜರಾತ್ ರಾಜ್ಯಗಳಲ್ಲಿ ವಿದೇಶಿ ಒಳಹರಿವು ಕಡಿಮೆಯಾಗಿರುವುದನ್ನು ಕೂಡ ಸದನದಲ್ಲಿರುವಂತಹ ವಿರೋಧಪಕ್ಷದ ಮುಖಂಡರು ಗಮನಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಜ್ಯದ ವಿವಿಧ ವಲಯಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಗಮನಿಸಿದಾಗ 2025-26ನೇ ಸಾಲಿನಲ್ಲಿ ಕೃಷಿ ಕ್ಷೇತ್ರದಲ್ಲಿ ಶೇಕಡಾ 9.1 ರಷ್ಟು, ಕೈಗಾರಿಕಾ ಕ್ಷೇತ್ರದಲ್ಲಿ ಶೇಕಡಾ 6.7 ರಷ್ಟು ಹಾಗೂ ಸೇವಾ ವಲಯದಲ್ಲಿ ಶೇಕಡಾ 8.1 ರಷ್ಟು ಬೆಳವಣಿಗೆ ಸಾಧಿಸಿರುವುದನ್ನು ನೋಡಿದರೆ ಆರ್ಥಿಕ ಬೆಳವಣಿಗೆಯು ಸದೃಢವಾಗಿ ಮುನ್ನಡೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ರಾಜ್ಯವು ಸದೃಢ ವಿತ್ತೀಯ ನಿರ್ವಹಣೆಯ ಜೊತೆಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಸದೃಢವಾದ ದಿಟ್ಟ ಹೆಜ್ಜೆಗಳನ್ನು ಇಡುತ್ತಾ, ಮುಂದೆ ಸಾಗುತ್ತಿರುವ ಪರಿಣಾಮವಾಗಿ 2025-26ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ರಾಜ್ಯದ ಸ್ವಂತ ರಾಜಸ್ವವು ಶೇಕಡಾ 8.3 ರಷ್ಟು ಬೆಳವಣಿಗೆಯನ್ನು ಸಾಧಿಸಿರುವುದು ಸ್ವಾಗತಾರ್ಹವಾಗಿದೆ.

ಸರಕು ಮತ್ತು ಸೇವಾ ತೆರಿಗೆಯ ಜಿ.ಎಸ್.ಟಿ., ರಾಜ್ಯದ ಸ್ವಂತ ತೆರಿಗೆಯ ಆದಾಯದ ಪ್ರಮುಖ ರಾಜಸ್ವವಾಗಿದ್ದು, ಜಿ.ಎಸ್.ಟಿ., ರಾಜಸ್ವ ಸಂಗ್ರಹಣೆಯಲ್ಲಿ ವಿಶೇಷವಾಗಿ ಕರ್ನಾಟಕವು ಇಡೀ ರಾಷ್ಟ್ರದಲ್ಲಿ ಎರಡನೇ ಸ್ಥಾನವನ್ನು ಪಡೆದಿರುವುದನ್ನು ಕೂಡ ನಾವು ಗಮನಿಸಬೇಕಾಗಿರುವಂತಹ ಅಂಶವಾಗಿದೆ.

2025-26ನೇ ಸಾಲಿನ ಆರ್ಥಿಕ ವರ್ಷದ ಮಧ್ಯ ಭಾಗದಲ್ಲಿ ಅನಿರೀಕ್ಷಿತವಾಗಿ ಜಿ.ಎಸ್.ಟಿ. ದರವನ್ನು ಪರಿಷ್ಕೃತಗೊಳಿಸಿರುವ ಕಾರಣದಿಂದ ರಾಜ್ಯದ ಜಿ.ಎಸ್.ಟಿ. ಸಂಗ್ರಹಣೆಯ ಮಾಸಿಕ ಬೆಳವಣಿಗೆಯು ಶೇಕಡಾ 4 ಕ್ಕೆ ಕಡಿಮೆಯಾಗಿತ್ತು. ಇದಕ್ಕೂ ಮುನ್ನ ರಾಜ್ಯದ ರಾಜಸ್ವ ಸಂಗ್ರಹಣೆಯು ಶೇಕಡಾ 10 ರಷ್ಟು ಬೆಳವಣಿಗೆ ಸಾಧಿಸಿತ್ತು ಎನ್ನುವುದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬೇಕಾಗಿರುವಂತಹ ಅಂಶವಾಗಿದೆ. ಈ ಕಾರಣದಿಂದ ಪ್ರಸ್ತುತ ಸಾಲಿನಲ್ಲಿ ಜಿ.ಎಸ್.ಟಿ. ಸಂಗ್ರಹಣೆಯ ಅಂದಾಜು 10 ಸಾವಿರ ಕೋಟಿ ರೂಪಾಯಿಗಳ ಕೊರತೆ ಉಂಟಾಗಿದ್ದು, ಮುಂದಿನ ವರ್ಷಕ್ಕೆ 15 ಸಾವಿರ ಕೋಟಿ ರೂಪಾಯಿಗಳು ಕಡಿಮೆಯಾಗುವಂತಹ ನಿರೀಕ್ಷೆಯನ್ನು ಇವತ್ತಿನ ಬಜೆಟ್‌ನಲ್ಲಿ ನೋಡಬಹುದು.

14ನೇ ಹಣಕಾಸು ಆಯೋಗವು ರಾಜ್ಯದ ತೆರಿಗೆ ಹಂಚಿಕೆ ಪಾಲನ್ನು ಶೇಕಡಾ 4.713 ಅನ್ನು ಏನು ಶಿಫಾರಸ್ಸು ಮಾಡಿದ್ದರು. ಆ ಶಿಫಾರಸ್ಸಿನಂತೆ 15ನೇ ಹಣಕಾಸಿನ ಆಯೋಗದ ಅವಧಿಯಲ್ಲಿ ರಾಜ್ಯದ ತೆರಿಗೆ ಪಾಲನ್ನು ಶೇಕಡಾ 3.647 ಕ್ಕೆ ಇಳಿಕೆ ಮಾಡಿದ್ದು, ಶೇಕಡಾ 0.23 ರಷ್ಟು ರಾಜ್ಯದ ತೆರಿಗೆ ಪಾಲು ಕಡಿಮೆ ಆಗಿರುವುದು ಬಹಳ ಆತಂಕಕಾರಿ ವಿಷಯವಾಗಿದೆ. ಇದರಿಂದ, 15ನೇ ಹಣಕಾಸು ಆಯೋಗದ 6 ವರ್ಷಗಳ ಅವಧಿಯಲ್ಲಿ ಸುಮಾರು 65,000 ಕೋಟಿ

ರೂಪಾಯಿಗಳು ರಾಜ್ಯಕ್ಕೆ ಬರಬೇಕಾದಂತಹ ತೆರಿಗೆ ಪಾಲು ನಷ್ಟವಾಗಿದೆ ಎನ್ನುವ ಅಂಶವನ್ನು ಇಲ್ಲಿ ಗಮನಿಸಬೇಕಾಗಿರುತ್ತದೆ ಹಾಗೂ ಇದು ಅತ್ಯಂತ ಶೋಚನೀಯ ವಿಷಯವಾಗಿದೆ. 15ನೇ ಹಣಕಾಸು ಆಯೋಗ ಶಿಫಾರಸ್ಸು ಮಾಡಿರುವ ವಿಶೇಷ ಅನುದಾನ 5,495 ಕೋಟಿ ರೂಪಾಯಿಗಳು ಮತ್ತು ರಾಜ್ಯ ಕೇಂದ್ರಿತ ಅನುದಾನಗಳು 6,000 ಕೋಟಿ ರೂಪಾಯಿಗಳನ್ನು ಕೂಡ ಕೇಂದ್ರ ಸರ್ಕಾರವು ಇದುವರೆಗೂ ಕೂಡ ಬಿಡುಗಡೆ ಮಾಡದೇ ಇರುವುದರಿಂದ, ರಾಜ್ಯ ಸರ್ಕಾರಕ್ಕೆ ಹಣಕಾಸಿನ ಕೊರತೆ ಉಂಟಾಗಿರುವುದನ್ನು ನಾವು ಇಲ್ಲಿ ಗಮನಿಸಬೇಕಾಗಿರುವಂತಹ ಅಂಶವಾಗಿದೆ. ರಾಜ್ಯ ಸರ್ಕಾರದ ಬಗ್ಗೆ ಕೇಂದ್ರ ಸರ್ಕಾರವು ತಾರತಮ್ಯ ನೀತಿ ಮತ್ತು ಮಲತಾಯಿ ಧೋರಣೆ ಹೊಂದಿದೆ ಎಂಬುದಕ್ಕೆ ಈ ಅಂಕಿ-ಅಂಶಗಳು ಸಾಕ್ಷಿಯಾಗಿವೆ.

ಕೇಂದ್ರದ ಬಿ.ಜೆ.ಪಿ. ಸರ್ಕಾರವು ದೇಶದಲ್ಲಿ ಬಿ.ಜೆ.ಪಿ.ಯೇತರ ಸರ್ಕಾರಗಳ ಬಗ್ಗೆ ತಾರತಮ್ಯ ನೀತಿ ಮತ್ತು ಮಲತಾಯಿ ಧೋರಣೆ ತೋರುತ್ತಿದ್ದು, ರಾಜ್ಯದ ಆರ್ಥಿಕ ಬೆಳವಣಿಗೆಗೆ, ರಾಜ್ಯಗಳ ಸರ್ವತೋಮುಖ ಅಭಿವೃದ್ಧಿ, ಬಡತನ ನಿವಾರಣೆ, ಮೂಲಭೂತ ಸೌಕರ್ಯ ಒದಗಿಸುವುದು, ಜನಪ್ರಿಯ ಯೋಜನೆಗಳು ಹಾಗೂ ದೇಶದ ಬಡ ಜನತೆ, ಮಧ್ಯಮ ವರ್ಗ, ರೈತ, ಕೂಲಿ ಕಾರ್ಮಿಕರು, ದುಡಿಯುವ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಹಿನ್ನೆಲೆಯಲ್ಲಿ ಹಿನ್ನಡೆಯಾಗಿರುವುದು ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ನೀತಿಯಿಂದ ಎಂದು ಇಲ್ಲಿ ಬಹಳ ಸ್ಪಷ್ಟವಾಗಿ ಕಂಡು ಬರುತ್ತಿದೆ. ಇಷ್ಟೆಲ್ಲಾ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಮತ್ತು ತಾರತಮ್ಯದಿಂದ ರಾಜ್ಯಕ್ಕೆ ಬರಬೇಕಾದಂತಹ ತೆರಿಗೆ ಪಾಲಿನಲ್ಲಿ ಕೊರತೆ, ವಿಶೇಷ ಅನುದಾನ ನೀಡದೇ ಇರುವುದು, ರಾಜ್ಯದ ರಾಜಸ್ವ ಸಂಗ್ರಹಣೆಯಲ್ಲಿ ಕೊರತೆಗೆ ಕಾರಣವಾಗಿದೆ.

ರಾಜ್ಯಕ್ಕೆ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನ ಒದಗಿಸದೇ ಇರುವುದು. ಇವೆಲ್ಲಾ ಕಾರಣಗಳಿಂದ ಕೇಂದ್ರ ಸರ್ಕಾರವು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಆರ್ಥಿಕ ಬೆಳವಣಿಗೆಗೆ ಅಡ್ಡಗಾಲು ಹಾಕಿರುವುದು ದೇಶದ ಸಂವಿಧಾನಾತ್ಮಕ ಒಕ್ಕೂಟದ ವ್ಯವಸ್ಥೆಗೆ ಧಕ್ಕೆ ತಂದಿರುವುದು ಮತ್ತು ಒಕ್ಕೂಟದ ವ್ಯವಸ್ಥೆಯನ್ನು ದುರ್ಬಲಗೊಳಿಸುವ ನಿಟ್ಟಿನಲ್ಲಿ ಇದು ಖಂಡನಾರ್ಹ ವಿಷಯವೆಂದು ಈ ಸಂದರ್ಭದಲ್ಲಿ ಸದನದ ಮುಖಾಂತರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಜ್ಯದ 2026-27ನೇ ಸಾಲಿನ ಬಜೆಟ್ ಅನ್ನು ಮಂಡಿಸುವ ಹಿನ್ನೆಲೆಯಲ್ಲಿ ಈ ಎಲ್ಲಾ ರೀತಿಯಿಂದ ವ್ಯತಿರಿಕ್ತವಾದ ಮತ್ತು ಅಷ್ಟೇ ನಕರಾತ್ಮಕವಾದಂತಹ ಕೇಂದ್ರ ಸರ್ಕಾರದ ಧೋರಣೆಯ ಮಧ್ಯೆಯು ಮಾನ್ಯ ಮುಖ್ಯಮಂತ್ರಿಗಳು ಮತ್ತು ಅರ್ಥ ಸಚಿವರಾಗಿರುವ ಮಾನ್ಯ ಸಿದ್ದರಾಮಯ್ಯನವರು ತಮ್ಮ ಅಪಾರವಾದ ರಾಜಕೀಯ ಅನುಭವ ಹಾಗೂ ಸುದೀರ್ಘವಾದ ಆಡಳಿತ ಅನುಭವವನ್ನು ಹೊಂದಿರುವಂತಹ ಅವರು ಅತ್ಯಂತ ಮುತುವರ್ಜಿ ವಹಿಸಿ, ಅಷ್ಟೇ ಜಾಣತನದಿಂದ ಧೃತಿಗೆಡದೆ, ಆತಂಕಕ್ಕೆ ಒಳಪಡದೇ ಬಹಳ ಆತ್ಮವಿಶ್ವಾಸದಿಂದ, ಧೈರ್ಯದಿಂದ,

ಸಮಚಿತ್ತತೆಯಿಂದ ಮುಂದುವರೆದು, ನ್ಯಾಯವು ನಮ್ಮ ಪರ ಇರುವಾಗ ಈ ಹೋರಾಟದಲ್ಲಿ ನಾವು ಸೋಲಲು ಸಾಧ್ಯವೇ ಇಲ್ಲ. ಈ ಹೋರಾಟವು ನನಗೆ ಹರ್ಷದಾಯಕ ಸಂಗತಿಯಾಗಿದೆ. ಇದು ಪರಿಪೂರ್ಣ ಅರ್ಥದಲ್ಲಿ ಆಧ್ಯಾತ್ಮಿಕ ಹೋರಾಟವಾಗಿದೆ ಎನ್ನುವ ಬಾಬಾ ಸಾಹೇಬ್ ಡಾ॥ ಬಿ.ಆರ್. ಅಂಬೇಡ್ಕರ್ ರವರ ವಿಚಾರಧಾರೆಯನ್ನು ವಿಶೇಷವಾಗಿ ಉಲ್ಲೇಖಿಸಿ, 2026-27ನೇ ಸಾಲಿನ ಬಜೆಟ್ ಅನ್ನು ಮಂಡಿಸುವ ಸಂದರ್ಭದಲ್ಲಿ ಎಲ್ಲಿಯೂ ಕೂಡ ರಾಜಿ ಮಾಡಿಕೊಳ್ಳದೇ ಅತ್ಯಂತ ಚಾಣಾಕ್ಷತನದಿಂದ ಈ ಬಜೆಟ್ ಅನ್ನು ಮಂಡಿಸಿರುವುದು ಶ್ಲಾಘನೀಯವಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇನ್ನು 5 ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಿ.

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನು ಸ್ವಲ್ಪ ಮಾತನಾಡುವುದು ಇದೆ. ವಿಶೇಷವಾಗಿ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಬಂದಿರುವುದು ಗಮನೀಯವಾದ ವಿಷಯವಾಗಿದೆ. ಇಷ್ಟೆಲ್ಲಾ ತೊಂದರೆಗಳ ಮಧ್ಯೆಯೂ ರಾಜ್ಯದ ಒಟ್ಟಾರೆ ಉತ್ಪಾದನೆಯು ಶೇಕಡಾ 8.1 ರಷ್ಟು ಬೆಳವಣಿಗೆಯಾಗಿರುವುದು ಸಂತೋಷದ ವಿಷಯವಾಗಿದೆ. ವಿತ್ತೀಯ ಕೊರತೆಯ ಹಿನ್ನೆಲೆಯಲ್ಲಿ 2026-27ನೇ ಸಾಲಿನ ಬಜೆಟ್‌ನಲ್ಲಿ ಆರ್ಥಿಕ ಶಿಸ್ತಿನ ನಿಯಮಗಳ ಅನುಸಾರ ವಿತ್ತೀಯ ಕೊರತೆಯ ಮಿತಿಯನ್ನು 3 ಕ್ಕೆ ಮೀರದಷ್ಟು ಆರ್ಥಿಕ ಶಿಸ್ತಿನ ನಿಯಮಗಳನ್ನು ಪಾಲನೆ ಮಾಡಿರುವುದು ಇಲ್ಲಿ ಬಹಳ ಉಲ್ಲೇಖನೀಯವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಹೇಳದಂತೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ, ತಾರತಮ್ಯ ನೀತಿ, ಅಭಿವೃದ್ಧಿ, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ಬಡವರಿಗೆ ಅನುಕೂಲವಾಗುವ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿ ಅನುಷ್ಠಾನಗೊಳಿಸುವುದು ಅನಿವಾರ್ಯವಾಗಿದೆ. ಸಾರ್ವಜನಿಕ ವ್ಯವಸ್ಥೆಯಲ್ಲಿ ರಾಜ್ಯದ ಜನತೆಯ ಬೇಡಿಕೆಗಳ ಹಿನ್ನೆಲೆಯಲ್ಲಿ ಅನಿವಾರ್ಯ ಮತ್ತು ಅವಶ್ಯಕತೆಗೆ ಅನುಗುಣವಾಗಿ ವಿತ್ತೀಯ ಸ್ವೀಕೃತಿಗಿಂತ ಖರ್ಚು ಹೆಚ್ಚಾಗುವುದು ಬಹಳ ಸ್ಪಷ್ಟವಾಗಿ ನಾವು ಇಲ್ಲಿ ಗಮನಿಸಬೇಕಾಗಿರುವಂತಹ ವಿಷಯವಾಗಿದೆ.

(ಮುಂದು)

(422) 16.3.2026 6.10 ಪಿಕೆ:ಬಿಎನ್‌ಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎ.ವಸಂತಕುಮಾರ್ (ಮುಂದು)**

ಯಾವುದೇ ಸರ್ಕಾರವಾಗಲಿ ಬೇಡಿಕೆಗೆ ಅನುಗುಣವಾಗಿ ಮತ್ತು ಬೆಳವಣಿಗೆಯ ಹಿನ್ನೆಲೆಯಲ್ಲಿ ಸಾಲದ ಮೊರೆ ಹೋಗುವುದು ಆರ್ಥಿಕ ನೀತಿಯ ಒಂದು ಭಾಗ. ಇದು ಸಹಜವಾದ ಆರ್ಥಿಕ ಪ್ರಕ್ರಿಯೆಯಾಗಿದೆ. ಈ ಕಾರಣದಿಂದ 2026-27ನೇ ಸಾಲಿನ ಆಯವ್ಯಯದಲ್ಲಿ ಸಾಲದ ಪ್ರಸ್ತಾವನೆಯನ್ನೂ ಕೂಡ ಮಂಡಿಸಿರುವುದು ಅನಿವಾರ್ಯ ಮತ್ತು ಅದರ ಅವಶ್ಯಕತೆ ಇದೆ ಎನ್ನುವುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಇಲ್ಲೂ ಕೂಡ ಯಾವ ಕಾರಣದಿಂದಲೂ

ಆರ್ಥಿಕ ಶಿಸ್ತಿನ ನಿಯಮವನ್ನು ಉಲ್ಲಂಘನೆ ಮಾಡದೆ, ಗಾಳಿಗೆ ತೂರದೆ, ಬಜೆಟ್ ಗಾತ್ರದ ಶೇಕಡ 25 ದಾಟದಂತೆ ಕಟ್ಟುನಿಟ್ಟಿನಿಂದ ಆರ್ಥಿಕ ಶಿಸ್ತನ್ನು ಪಾಲನೆ ಮಾಡಲಾಗಿದೆ. ಇಷ್ಟೆಲ್ಲಾ ಅನುದಾನದ ಕೊರತೆ, ಮಲತಾಯಿ ಧೋರಣೆ ಇದ್ದರೂ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ನೀಡಿರುವಂತಹ ಭರವಸೆಗಳನ್ನು ಈಡೇರಿಸಿದ್ದಾರೆ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಾರೆ. ಪಂಚ ಗ್ಯಾರಂಟಿಗಳಿಗೆ ಇಲ್ಲಿಯವರೆಗೆ ರೂ. 1,21,598 ಕೋಟಿ ಹಣವನ್ನು ಖರ್ಚು ಮಾಡಿರುವುದು, ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳ ಬದ್ಧತೆಯನ್ನು ಇದು ತೋರಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಮಂಡಿಸಿರುವಂತೆ, ಆಯಾ ವಲಯಗಳಿಗೆ ಹಣಕಾಸನ್ನು ಹಂಚಿಕೆ ಮಾಡಿರುವಂತೆ, ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ, ಕೃಷಿ ಬೆಳೆಗಳ ಮೌಲ್ಯವರ್ಧನೆ, ಕೃಷಿ ತ್ಯಾಜ್ಯಗಳ ಮರುಬಳಕೆ ಉತ್ತೇಜಿಸಲು ಮುಖ್ಯಮಂತ್ರಿಗಳು ಕೃಷಿ ಯೋಜನೆಗೆ ರೂ. 100 ಕೋಟಿ ಮೀಸಲಿಟ್ಟಿರುವುದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಇದರ ಜೊತೆಗೆ, ಕೃಷಿಗೆ ಬೆನ್ನೆಲುಬಾಗಿರುವಂತಹ ರೈತರಿಗೆ ಶಕ್ತಿ ಕೊಡುವುದಕ್ಕೆ 38 ಲಕ್ಷ ರೈತರಿಗೆ ರೂ. 30,000 ಕೋಟಿ ಕೃಷಿ ಸಾಲದ ಗುರಿಯನ್ನು ಬಜೆಟ್‌ನಲ್ಲಿ ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಮಂಡನೆ ಸಂದರ್ಭದಲ್ಲಿ, ಕಳೆದ ವರ್ಷಕ್ಕಿಂತ ಹೆಚ್ಚು ಎಸ್.ಸಿ.ಎಸ್‌ಪಿ/ಟಿ.ಎಸ್.ಪಿ ಗೆ ಅನುದಾನವನ್ನು ಇಟ್ಟಿದ್ದಾರೆ. ಅಂದರೆ, ರೂ. 44,637 ಕೋಟಿಗಳನ್ನು ಹಂಚಿಕೆ ಮಾಡಿದ್ದಾರೆ. ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ಕೊಟ್ಟು, ಎಲ್ಲಾ ಇಲಾಖೆಗಳಲ್ಲೂ ಸೇರಿದಂತೆ ಸುಮಾರು ರೂ. 94,663 ಕೋಟಿ ಇಟ್ಟಿದ್ದಾರೆ. ವಿಶೇಷವಾಗಿ ಬಜೆಟ್‌ನಲ್ಲಿ ಒಂದು ವಿಷಯದ ಬಗ್ಗೆ ಗಮನಕೊಟ್ಟಿದ್ದಾರೆ. ಬೆಳಗ್ಗೆ ಚರ್ಚೆ ಆಗಿರುವಂತೆ, ರಾಜ್ಯದಲ್ಲಿ ಶಿಕ್ಷಣ ಇಲಾಖೆ ಸೇರಿದಂತೆ ಬಹಳಷ್ಟು ಇಲಾಖೆಗಳಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ತುಂಬಬೇಕು ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಆಡಳಿತ ಪಕ್ಷದ ಸದಸ್ಯರು ಮುತುವರ್ಜಿ ವಹಿಸಿ ಮಾತನಾಡಿದರು. ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಂತ್ರಿಗಳು 56,432 ಹುದ್ದೆಗಳನ್ನು ಭರ್ತಿ ಮಾಡುವಂತಹ ಒಂದು ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ, ಬಜೆಟ್‌ನಲ್ಲಿ ಅದನ್ನು ಪ್ರಸ್ತಾಪ ಮಾಡಿರುವುದು ಅವರ ಬದ್ಧತೆ ಮತ್ತು ಅವರ ಚಿಂತನೆಗೆ ಸಾಕ್ಷಿಯಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ರಸ್ತೆ, ಮೂಲಸೌಕರ್ಯ ಅಭಿವೃದ್ಧಿಗೆ ರೂ. 4,000 ಕೋಟಿಗಳನ್ನು ಮೀಸಲಿಟ್ಟಿದ್ದಾರೆ. ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಜೀವನಾಡಿ ಆಗಿರುವಂತಹ ತುಂಗಭದ್ರಾ ಪಾಜೆಕ್ಟ್‌ನ ಕ್ರಸ್ಟ್‌ಗೇಟ್‌ಗಳ ಅಳವಡಿಕೆಯ ಕೆಲಸ ಕಳೆದ ವರ್ಷ ಪ್ರಾರಂಭವಾಗಿದ್ದು ಈ ವರ್ಷದ ಜೂನ್ ತಿಂಗಳ ಒಳಗೆ ಮುಗಿಸುವಂತಹ ಒಂದು ಪ್ರಕ್ರಿಯೆಗೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಪ್ರಸ್ತಾವನೆ ಮಾಡಿದ್ದಾರೆ. ಇದು ನೀರಾವರಿ ಯೋಜನೆಗೆ ಕೊಟ್ಟಿರುವಂತಹ ಆದ್ಯತೆಯನ್ನು ಎತ್ತಿ ತೋರಿಸುತ್ತದೆ. ಶಿಕ್ಷಣ ಇಲಾಖೆಗೆ ರೂ. 3,900 ಕೋಟಿ ಇಟ್ಟಿದ್ದಾರೆ. ಹೊಸ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭ ಮಾಡುವುದು, ಶಾಲಾ-ಕಾಲೇಜುಗಳಲ್ಲಿ ಖಾಲಿ ಇರುವಂತಹ 15,000 ಬೋಧಕ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ ಹೇಳಿದ್ದಾರೆ. ಬಹಳ ವಿಶೇಷವಾಗಿ, 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯ ನಿಷೇಧ ಮಾಡಿರುವುದು ಜನರ ಪ್ರಶಂಸೆಗೆ ಪಾತ್ರವಾಗಿದೆ.

ಕೆಲವು ಪತ್ರಿಕೆಗಳಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ, "ಜಾಲತಾಣದ ಬಳಕೆಯಿಂದ ಮಕ್ಕಳಲ್ಲಿ ಆತಂಕ, ಕೋಪ ಹೆಚ್ಚು" ಎನ್ನುವ ಒಂದು ಶೀರ್ಷಿಕೆ ಅಡಿ ಬಂದ ಒಂದು ಲೇಖನದಲ್ಲಿ ಈ ಕುರಿತು ಪ್ರಶಂಸೆ ವ್ಯಕ್ತಪಡಿಸಲಾಗಿದೆ. ಮಕ್ಕಳು ಯಾವರೀತಿ ತೊಂದರೆಗೆ ಈಡಾಗುತ್ತಾರೆ, ಅವರ ಬೌದ್ಧಿಕ ಬೆಳವಣಿಗೆ ಮೇಲೆ ಯಾವರೀತಿ ಪರಿಣಾಮ ಬೀಳುತ್ತದೆ, ಯಾವರೀತಿ ಖಿನ್ನತೆಗೆ ಒಳಗಾಗುತ್ತಿದ್ದಾರೆ, ಜಾಲತಾಣದ ಚಟಕ್ಕೆ ಹೇಗೆ ಬಲಿಯಾಗುತ್ತಿದ್ದಾರೆ ಎನ್ನುವುದರ ಬಗ್ಗೆ ಸರ್ವೆ ಮಾಡಿ ಲೇಖನ ಪ್ರಕಟಿಸಲಾಗಿದೆ. ಈ ವಿಷಯವನ್ನು ರಾಜ್ಯದ ಜನತೆ ಮುಕ್ತ ಕಂಠದಿಂದ ಮೆಚ್ಚುಗೆ ವ್ಯಕ್ತಪಡಿಸಿದೆ. ನಾನು ವೈಯಕ್ತಿಕವಾಗಿ ಮನವಿ ಮಾಡುವುದೇನೆಂದರೆ, ಈ ಒಂದು ಸಾಮಾಜಿಕ ಜಾಲತಾಣ ನಿಷೇಧವನ್ನು ಪರಿಣಾಕಾರಿಯಾಗಿ ಅನುಷ್ಠಾನಗೊಳಿಸಬೇಕು, ಕಟ್ಟುನಿಟ್ಟಿನ ಮಾನದಂಡಗಳನ್ನು ಅಳವಡಿಸಬೇಕು. ಅದರ ಜೊತೆ ಜವಾಬ್ದಾರಿಯನ್ನು ನಿಗದಿ ಮಾಡುವಂತಹ ಚಿಂತನೆ ಅಡಕವಾಗಿರಬೇಕು. ಮನೆಯಲ್ಲಿ ಪಾಲಕರು, ಶಾಲೆಯಲ್ಲಿ ಶಿಕ್ಷಕರ ಮೇಲೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕು ಎಂದು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ಉನ್ನತ ಶಿಕ್ಷಣದ ವಿಶ್ವವಿದ್ಯಾಲಯಗಳಲ್ಲಿ ಒಂದು ಸಾವಿರ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವುದು, ಕಲ್ಯಾಣ ಕರ್ನಾಟಕದ ಭಾಗದಲ್ಲಿ ವಿಶೇಷವಾಗಿ 75 ಸರ್ಕಾರಿ ಪದವಿ ಕಾಲೇಜು, 23 ಪಾಲಿಟಕ್ನಿಕ್‌ಗಳು ಹಾಗೂ 5 ಇಂಜಿನಿಯರ್ ಕಾಲೇಜುಗಳಿಗೆ ಮುಲಭೂತ ಸೌಕರ್ಯ ಒದಗಿಸುವ ವಿಷಯ ಈ ಬಜೆಟ್‌ನಲ್ಲಿ ಪ್ರಸ್ತಾಪವಾಗಿದೆ. ವಿಶೇಷವಾಗಿ, ರಾಯಚೂರು, ಬೀದರ್ ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮಾಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ ರೂ. 200 ಕೋಟಿಗಳ ಅನುದಾನವನ್ನು ಒದಗಿಸಿರುವುದನ್ನು ನೋಡಿದರೆ ನಗರ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿರುವುದು ಗೊತ್ತಾಗುತ್ತದೆ. ರೈತರಿಗೆ ಅನುಕೂಲವಾಗುವಂತೆ, 36 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಹಾಯ ಧನವನ್ನು ಒದಗಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ 875 ಕಿ.ಮೀ. ರಸ್ತೆ ನಿರ್ಮಾಣಕ್ಕೆ ರೂ. 5,700 ಕೋಟಿಗಳನ್ನು ಇಟ್ಟಿದ್ದಾರೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ರಾಯಚೂರಿನಲ್ಲಿರುವ ಐ.ಐ.ಐ.ಟಿ.ಯಲ್ಲಿ AI ಶ್ರೇಷ್ಠತಾ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಬಜೆಟ್‌ನಲ್ಲಿ ಮೊತ್ತವನ್ನು ತೆಗೆದಿಟ್ಟಿರುವುದನ್ನು ನಾವು ಸ್ವಾಗತ ಮಾಡಬೇಕು.

ಮಾನ್ಯ ಸಭಾಪತಿಗಳೇ, ಗ್ಯಾರಂಟಿ ಯೋಜನೆಗಳ ಹಿನ್ನೆಲೆಯಲ್ಲಿ ರೂ. 1,21,598 ಕೋಟಿ ಹಣ ಜನರಿಗೆ ನೇರವಾಗಿ ತಲುಪಿದೆ. ಈ ಯೋಜನೆಗಳು ಯಶಸ್ವಿಯಾಗಿ ರಾಜ್ಯದಲ್ಲಿ ನಡೆಯುತ್ತಿದೆ. ಅದರ ಹಿನ್ನೆಲೆಯಲ್ಲಿ "ಶಕ್ತಿ ಯೋಜನೆ" ಅಡಿ ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಪ್ರಯಾಣ ಮಾಡಿರುವಂಥದ್ದೂ ಕೂಡ ಒಂದು ದಾಖಲೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬಜೆಟ್‌ನಲ್ಲಿ ವಿಶೇಷವಾಗಿ, ಕಲ್ಯಾಣ ಕರ್ನಾಟಕ್ಕೆ ಸಂಬಂಧಪಟ್ಟಂತೆ ಜಿಲ್ಲಾವಾರು ಅನುದಾನವನ್ನು ಗಮನಿಸಿದಾಗ, ಕಲ್ಬುರ್ಗಿ ಜಿಲ್ಲೆಗೆ ರೂ. 900 ಕೋಟಿಗಳನ್ನು ಕೈಗಾರಿಕೆ, ಶಿಕ್ಷಣ ಮತ್ತು ರಸ್ತೆಗಳ ಅಭಿವೃದ್ಧಿಗೆ, ಬೀದರ್

ಜಿಲ್ಲೆಗೆ ರೂ. 600 ಕೋಟಿಗಳನ್ನು ಪ್ರವಾಸೋದ್ಯಮ ಮತ್ತು ನೀರಾವರಿಗೆ, ರಾಯಚೂರು ಜಿಲ್ಲೆಗೆ ರೂ. 700 ಕೋಟಿಗಳನ್ನು ಕೃಷಿ ಮತ್ತು ನಗರ, ಶಿಕ್ಷಣ ಕೇಂದ್ರಗಳಿಗೆ, ಕೊಪ್ಪಳ ಜಿಲ್ಲೆಗೆ ರೂ. 650 ಕೋಟಿ ಹಣವನ್ನು ಕುಡಿಯುವ ನೀರು ಮತ್ತು ಶಿಕ್ಷಣಕ್ಕೆ, ಬಳ್ಳಾರಿ ಜಿಲ್ಲೆಗೆ ರೂ. 750 ಕೋಟಿಗಳನ್ನು ಕೈಗಾರಿಕಾ ಎಸ್ಟೇಟ್ ನಿರ್ಮಾಣ ಮಾಡುವುದಕ್ಕೆ, ವಿಜಯನಗರ ಜಿಲ್ಲೆಗೆ ರೂ. 500 ಕೋಟಿಗಳನ್ನು ಪ್ರವಾಸೋದ್ಯಮ ಮತ್ತು ಕ್ರೀಡೆಗೆ, ಯಾದಗಿರಿ ಜಿಲ್ಲೆಗೆ ರೂ. 550 ಕೋಟಿಗಳನ್ನು ಕೃಷಿ, ಗ್ರಾಮೀಣ ಅಭಿವೃದ್ಧಿಗೆ ಹೀಗೆ ಒಟ್ಟು ಸುಮಾರು ರೂ. 4,550 ಕೋಟಿಗಳನ್ನು ಕಲ್ಯಾಣ ಕರ್ನಾಟಕದ ಭಾಗಕ್ಕೆ ಕೊಟ್ಟಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಕಲಬುರ್ಗಿ ಜಿಲ್ಲೆಯಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ, ಕೈಗಾರಿಕಾ ಕ್ಲಸ್ಟರ್ ಅಭಿವೃದ್ಧಿ, ಸರ್ಕಾರಿ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿ, ನಗರ ರಸ್ತೆ ಮತ್ತು ಡ್ರೈನೇಜ್ ಸುಧಾರಣೆ, ಆರೋಗ್ಯ ಸೇವೆಗಳ ವಿಸ್ತರಣೆ, ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹೇಳಿರುವಂತೆ ಕೆರೆಗಳ ಪುನಶ್ಚೇತನಕ್ಕೆ ಆದ್ಯತೆ ಕೊಡಲಾಗಿದೆ.

(ಮುಂದು)

(423) 16-3-2026 06.20 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎ. ವಸಂತಕುಮಾರ್ (ಮುಂದು):-**

ಪ್ರವಾಸೋದ್ಯಮ ಅಭಿವೃದ್ಧಿ, ಸಣ್ಣ ನೀರಾವರಿ, ಗ್ರಾಮೀಣ ರಸ್ತೆ, ಪಶುಸಂಗೋಪನಾ ಅಭಿವೃದ್ಧಿ, ರಾಯಚೂರು ಜಿಲ್ಲೆಗೆ I.I.I.T. (Indian Institute of Information Technology), ಕೃಷಿ ಸಂಸ್ಕರಣ ಘಟಕಗಳು, lift irrigation ಗಳು... ಈಗಾಗಲೇ ಬಹಳಷ್ಟು ಅನುದಾನವನ್ನು ನಮ್ಮ ಭಾಗಕ್ಕೆ ನೀಡಿರುವಂತಹದ್ದು ಬಹಳ ಸ್ವಾಗತಾರ್ಹವಾದಂತಹ ವಿಷಯವಾಗಿದೆ. ಹಾಗೆಯೇ, ನಮ್ಮ ಹಿರಿಯ ವಿರೋಧ ಪಕ್ಷದ ಕೆಲವು ಹಿರಿಯ ಮುಖಂಡರು ಗ್ಯಾರಂಟಿ ಯೋಜನೆಗಳ ಕಾರಣದಿಂದ ಇವತ್ತು ಅದೊಂದು ಅನುತ್ಪಾದಕ ಯೋಜನೆಯಾಗಿದೆ ಅದರಿಂದ ಯಾವುದೇ ಲಾಭವಿಲ್ಲ, ಸರ್ಕಾರಕ್ಕೆ ಅದು ಹೊರೆಯಾಗುತ್ತದೆ, ಸರ್ಕಾರದ ಖಜಾನೆ ಖಾಲಿಯಾಗುತ್ತದೆ ಎಂಬ ಮಾತನ್ನು ಕೆಲವು ಮುಖಂಡರು ಹೇಳಿರುತ್ತಾರೆ. ಇವತ್ತು ಖಂಡಿತವಾಗಿಯೂ ಕೂಡ ಈ ಗ್ಯಾರಂಟಿ ಯೋಜನೆಗಳ ಫಲವಾಗಿ ಈ ರಾಜ್ಯದ ಜನತೆಯ ತಲಾ ಆದಾಯ ಇಡೀ ದೇಶದ ತಲಾ ಆದಾಯಕ್ಕಿಂತ ಒಂದು ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದೆ ಎಂಬ ಮಾತನ್ನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಆ ಕಾರಣದಿಂದ ಇವೆಲ್ಲಾ ಅಂಶಗಳನ್ನು ಒಳಗೊಂಡು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿತ್ತ ಸಚಿವರಾಗಿರುವಂತಹ ಶ್ರೀ ಸಿದ್ದರಾಮಯ್ಯನವರು ತಮ್ಮ ಅಪಾರವಾದಂತಹ ರಾಜಕೀಯ ಅನುಭವ ಹಾಗೂ ಚಾಣಕ್ಷ್ಯತನದಿಂದ ಮತ್ತು ಅವರು ಆರ್ಥಿಕ ತಜ್ಞರಲ್ಲದ್ದಿದರು ಕೂಡ ತಮ್ಮ ವಿಶೇಷವಾದಂತಹ ಕಾಳಜಿಯ ಹಿನ್ನೆಲೆಯಲ್ಲಿ ಹಾಗೂ ಸಾಮಾಜಿಕ ನ್ಯಾಯದ ಅಡಿಯಲ್ಲಿ, ತಾವು ಅನುಭವಿಸಿದ ನೋವು, ಅನ್ಯಾಯಗಳನ್ನು ಇದರಲ್ಲಿ ತೊಡಗಿಸಿಕೊಂಡು ಒಂದು ಅತ್ಯುತ್ತಮವಾದಂತಹ ಬಜೆಟ್ ಅನ್ನು ಎಲ್ಲಾ ಜಾತಿ, ಸಮುದಾಯಗಳಿಗೆ, ಪಂಥಗಳಿಗೆ, ವಲಯಗಳಿಗೆ ಕೊಟ್ಟಿರುವಂತಹದ್ದು ಬಹಳ ವಿಶೇಷವಾದಂತಹ ಸಾಧನೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಚ್ಛಿಪಡುತ್ತೇನೆ. ಈ ಬಜೆಟ್ ಖಂಡಿತವಾಗಿಯು ಕೂಡ ಎಲ್ಲರಿಗೂ ಸಮಾನವಾದಂತಹ ಅವಕಾಶಗಳನ್ನು ಕಲ್ಪಿಸಿಕೊಡುವಂತಹದ್ದದಾಗಿದೆ. ರಾಜ್ಯದ ಆರ್ಥಿಕ ಬೆಳವಣಿಗೆ, ಕೃಷಿ ಬೆಳವಣಿಗೆ, G.D.P. (Gross Domestic Product) ಬೆಳವಣಿಗೆ ಮತ್ತು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿರುವಂತಹದ್ದಾಗಿದೆ. ಮಹಿಳಾ ಸಬಲೀಕರಣ ಹಾಗೂ ಇನ್ನಿತರೆ ಎಲ್ಲಾ ವಲಯಗಳಿಗೂ ಸಹ ಆದ್ಯತೆ ನೀಡಿ ಈ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಈ ಬಜೆಟ್ ಎಲ್ಲರಿಗೂ ಕೂಡ ಅನುಕೂಲವಾಗುವಂತಹ ಬಹಳ ಒಳ್ಳೆಯ ಬಜೆಟ್, ದಾಖಲೆಯ ಬಜೆಟ್ ಮತ್ತು ಇತಿಹಾಸ ನಿರ್ಮಿಸಿರುವ ಬಜೆಟ್ ಎಂದು ಹೇಳುತ್ತಾ ಈ ಸಂದರ್ಭದಲ್ಲಿ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ಮಾತನಾಡಲು ಅವಕಾಶ ನೀಡಿದಕ್ಕಾಗಿ ಮಾನ್ಯ ಸಭಾಪತಿಯವರಿಗೂ ಸಹ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 10:30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 17ನೇ ಮಾರ್ಚ್ ಮಾಹೆ 2026ರಂದು ಮಂಗಳವಾರ ಬೆಳಗ್ಗೆ 10:30 ಗಂಟೆಗೆ ಸೇರಲು ನಿಶ್ಚಯಿಸಿತು)**